ತಮಿಳುನಾಡಿನ
ಕನ್ನಡ ಶಾಸನಗಳು

ಡಾ. ಪಿ. ವಿ. ಕೃಷ್ಣಮೂರ್ತಿ

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

TAMILUNADINA KANNADA SHASANAGALU
by : Dr. P. V. Krishnamurthy
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 132+viii Price : Rs. 40=00 : 2004

ಮುದ್ರಣದ ವರ್ಷ : ೨೦೦೪
ಪ್ರತಿಗಳು : ೧೦೦೦
ಬೆಲೆ : ನಲವತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಸದಸ್ಯರು

ಶ್ರೀ ಪುಂಡಲೀಕ ಹಾಲಂಬಿ

ಡಾ. ನಲ್ಲೂರು ಪ್ರಸಾದ್

ಪ್ರೊ. ಎಲ್. ಎಸ್. ಶೇಷಗಿರಿರಾವ್

ಡಾ. ಬಿ. ಆರ್. ಹಿರೇಮಠ

ಶ್ರೀ ಅಜ್ಜಂಪುರ ಜಿ. ಸೂರಿ

ಸಮ್ಮೇಳನಾಧ್ಯಕ್ಷರು

೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮಗಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡು, ಭಾಷೆ, ಸಾಹಿತ್ಯ, ಸಂಸ್ಕೃತಿ ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆಯಾಗಿದೆ. ೮೯ ವರ್ಷಗಳ ದೀರ್ಘಕಾಲದ ಇತಿಹಾಸವನ್ನು ಪಡೆದಿರುವ ಪರಿಷತ್ತು ತನ್ನ ಕಾರ್ಯಕ್ಷೇತ್ರವನ್ನು ಅನೇಕ ರೀತಿಯಲ್ಲಿ ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಕನ್ನಡದ ಶ್ರೇಷ್ಠ ಸಾಹಿತ್ಯ ಗ್ರಂಥಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಒಂದು ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಪರಿಷತ್ತು ಹೊರತಂದಿದೆ. ಈ ಗ್ರಂಥಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸೇರಿವೆ. ಕನ್ನಡ ಜನತೆಗೆ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ನೀಡುವುದಕ್ಕೋಸ್ಕರ ಸುಲಭ ಬೆಲೆ ಇರಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮುಖಾಂತರ ಜ್ಞಾನ ಪ್ರಸಾರ ಮಾಡುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

'ತಮಿಳುನಾಡಿನ ಕನ್ನಡ ಶಾಸನಗಳು' ಎಂಬ ಈ ಕೃತಿಯನ್ನು ಸಿದ್ಧಪಡಿಸಿರುವ ಡಾ. ಪಿ. ವಿ. ಕೃಷ್ಣಮೂರ್ತಿ ಅವರಿಗೆ ವಂದನೆಗಳು. ಕನ್ನಡದ ಜನಪ್ರಿಯ ಪುಸ್ತಕಗಳಲ್ಲಿ ಒಂದಾಗಿರುವ ಈ ಕೃತಿಯನ್ನು ಸಹೃದಯ ಕನ್ನಡಾಭಿಮಾನಿಗಳು, ಸಂಶೋಧಕರು, ವಿದ್ಯಾರ್ಥಿಗಳು ವಿಶೇಷ ಆಸಕ್ತಿಯಿಂದ ಬರಮಾಡಿಕೊಳ್ಳುತ್ತಾರೆಂದು ಆಶಿಸಿದ್ದೇನೆ.

ಪುಸ್ತಕಗಳ ಪ್ರಕಟಣೆಗಾಗಿ ಕರ್ನಾಟಕ ಸರ್ಕಾರವು ವಿಶೇಷ ಅನುದಾನ ನೀಡಿ ಉಪಕರಿಸಿದೆ. ಸರ್ಕಾರದ ಆದೇಶ ಸಂಖ್ಯೆ ಸಂಕಇ ೧೭೨ ಕಸಧ ೨೦೦೩ ದಿನಾಂಕ ೧೬-೩-೨೦೦೪, ಈ ಸಹಾಯಕ್ಕಾಗಿ ಪರಿಷತ್ತು ಸರ್ಕಾರಕ್ಕೆ ಕೃತಜ್ಞವಾಗಿದೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೆ ಅಭಿನಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕನ ಮಾತು

ಪ್ರಾಚೀನ ಕರ್ನಾಟಕದ ಭೌಗೋಳಿಕ ವ್ಯಾಪ್ತಿ, ಸಾಂಸ್ಕೃತಿಕ ಪ್ರಭಾವ ವಲಯದ ವಿಸ್ತಾರ; ನೆಲೆ-ಬೆಲೆಗಳನ್ನು ಅರಿಯಲು ಶಾಸನಗಳೂ ಅಮೂಲ್ಯ ಆಕರಗಳಾಗಿರುತ್ತವೆ. ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಯ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಶಾಸನಗಳ ಅವಲೋಕನದಲ್ಲಿ ತೊಡಗಿಕೊಂಡಂತೆ, ಇಂದಿನ ಕರ್ನಾಟಕದ ಹೊರಗಿರುವ ಕನ್ನಡ ಶಾಸನಗಳು ನನ್ನನ್ನು ಆಕರ್ಷಿಸತೊಡಗಿದ್ದವು. ಆಗ ಸನ್ಮಾನ್ಯರಾದ ಶ್ರೀ ಲಕ್ಷ್ಮಣ್ ತೆಲಗಾವಿ, ಡಾ। ಎಚ್.ಎಸ್. ಗೋಪಾಲರಾವ್ ಹಾಗೂ ಶ್ರೀ ಬಿ. ರಾಜಶೇಖರಪ್ಪ ಅವರುಗಳು ತಮಿಳುನಾಡಿನ ಕನ್ನಡ ಶಾಸನಗಳನ್ನು ಕುರಿತು ಲೇಖನಗಳನ್ನು ಬರೆಯಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟರು, ತತ್ಪರಿಣಾಮವಾಗಿ ಆರಂಭಗೊಂಡ ಆಕರಶೋಧ, ಅಧ್ಯಯನ-ಬರಹಗಳ ಫಲವೇ ಈ ಕೃತಿ.

ತಮಿಳುನಾಡಿನಲ್ಲಿ ಲಭ್ಯವಿರುವ ಕನ್ನಡ ಶಾಸನಗಳ ಸ್ವರೂಪ ಹಾಗೂ ಅವುಗಳಲ್ಲಿ ದಾಖಲಾಗಿರುವ ವಿವರಗಳನ್ನು ನನ್ನ ಅರಿವಿಗೆ ತಿಳಿದಂತೆ ಒಂದು ಕ್ರಮದಲ್ಲಿ ವರ್ಗೀಕರಿಸಿ, ಪರಿಶೀಲಿಸಿ, ವಿಶ್ಲೇಷಿಸಿ ವಿವರಿಸುವ ನಮ್ರ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಇಂತಹ ಸಾಹಸಕ್ಕೆ ಕೈ ಹಾಕಲು ಮುಖ್ಯ ಪ್ರೇರಣೆ "ಯುವ ಸಂಶೋಧಕರು ತಮ್ಮ ಸಂಶೋಧನೆಗಳನ್ನು ಬೃಹತ್ ಕರ್ನಾಟಕಕ್ಕೆ ವಿಸ್ತರಿಸಿ ಜ್ಞಾನದ ಗುಣ ಮತ್ತು ಪ್ರಮಾಣವನ್ನು ವಿಸ್ತರಿಸುವುದರ ಮೂಲಕ 'ಸೀಮೋಲ್ಲಂಘನ' ಮಾಡಬೇಕು" ಎಂದು ನಾಡಿನ ಪ್ರಸಿದ್ಧ ಸಂಶೋಧಕರಾದ ಡಾ। ಎಂ. ಚಿದಾನಂದಮೂರ್ತಿ ಅವರು, ಚಿತ್ರದುರ್ಗದಲ್ಲಿ ಏರ್ಪಾಟಾಗಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ಐದನೇ ವಾರ್ಷಿಕ ಸಮ್ಮೇಳನದಲ್ಲಿ ನೀಡಿದ ಕರೆ ಎಂದರೆ ತಪ್ಪಾಗಲಾರದು.

ಇಂತಹ ಸಂಶೋಧನಾತ್ಮಕ ಬರಹಗಳನ್ನು 'ಅಹಂ ಕರೋಮಿ ಇತಿ' ಎನ್ನುವಂತೆಯೇ ಇಲ್ಲ. ಲೇಖಕ ನಿಮಿತ್ತ ಮಾತ್ರ, ಉಳಿದಂತೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಹಲವರ ನೆರವು, ಸಹಕಾರ, ಪ್ರೋತ್ಸಾಹ, ಅರಿಕೆ, ಹಾರೈಕೆಗಳು ಮುಖ್ಯವಾಗಿರುತ್ತವೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು. ಆತ್ಮೀಯ ಮಿತ್ರರಾದ ರಾ.ನಂ.ಚಂದ್ರು ಅವರ ಪ್ರೋತ್ಸಾಹ ಅತ್ಯಪೂರ್ವವಾದುದು. ಹಾಗೆ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಪ್ರೋತ್ಸಾಹಿಸಿದ ಗುರುಗಳಾದ ಡಾ। ಕೆ.ಆರ್. ಗಣೇಶ, ಡಾ। ದೇವರಕೊಂಡಾರೆಡ್ಡಿ, ಡಾ। ಆರ್. ಶೇಷಶಾಸ್ತ್ರಿ ಹಾಗೂ ಹಸ್ತಪ್ರತಿ ತಜ್ಞರಾದ ಶ್ರೀ ಎಸ್. ಶಿವಣ್ಣ, ಸಂಶೋಧಕಿ ಡಾ। ಕೋ. ವಸಂತಲಕ್ಷ್ಮಿ, ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕಿ ಶ್ರೀಮತಿ ಕೆ. ನಾಗವೇಣಿ – ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕೃತಿಯನ್ನು ಸಿದ್ಧಪಡಿಸುವಲ್ಲಿ ಅಗತ್ಯವಿದ್ದ ಆಕರ ಸಾಮಗ್ರಿಯ ಸಂಗ್ರಹಕ್ಕೆ ನೆರವಾದ

ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನ ವಿಭಾಗ, ಮಿಥಿಕ್ ಸೊಸೈಟಿ ಐ.ಸಿ.ಎಚ್.ಆರ್. ದಕ್ಷಿಣ ಪ್ರಾದೇಶಿಕ ಕೇಂದ್ರ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ–ಇವುಗಳ ಗ್ರಂಥ ಭಂಡಾರಗಳು ಮತ್ತು ಅಲ್ಲಿನ ಅಧಿಕಾರಿವರ್ಗದವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ. ಈ ಕೃತಿಯಲ್ಲಿ ಬಳಸಿರುವ ಹಲವು ಚಿತ್ರಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಪ್ರಕಟಣೆಗಳಿಂದ ಆಯ್ದುಕೊಳ್ಳಲಾಗಿದೆ.

ನನ್ನ ಸಂಶೋಧನ ಕಾರ್ಯಗಳಿಗೆ ಅನುವು ಮಾಡಿಕೊಡುತ್ತಿರುವ ನನ್ನ ಹೆಂಡತಿ ಶ್ರೀಮತಿ ಪದ್ಮಾಕೃಷ್ಣಮೂರ್ತಿ, ಮಕ್ಕಳಾದ ಮಧುಕರ, ವೀಣಾ ಇವರಿಗೆ, ನಾನು ಕೆಲಸ ಮಾಡುತ್ತಿರುವ ಕಾರ್ಖಾನೆಯ ಆಡಳಿತವರ್ಗದವರಿಗೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಗಳ ಎಲ್ಲ ವಿದ್ಯಾರ್ಥಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಈ ಪುಸ್ತಕದ ಅಕ್ಷರ ಜೋಡಣೆಯ ಕಾರ್ಯವನ್ನು ಬಹುಶ್ರದ್ಧೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿರುವ ದುರ್ಗಾ ಕಂಪ್ಯೂಟರ್ಸ್ ಮಾಲಿಕರಾದ ಶ್ರೀಮತಿ ನಿರ್ಮಲಾ ಗಣೇಶ್‌ರವರಿಗೂ, ಅಂದವಾಗಿ ಮುದ್ರಿಸಿರುವ ಪರಿಷತ್ತಿನ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗ ಅವರಿಗೂ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು.

ಬೆಂಗಳೂರು

ಪಿ.ವಿ. ಕೃಷ್ಣಮೂರ್ತಿ

ಸಂಕ್ಷೇಪಗಳು

ARIE	-	*Annual Reports on Indian Epigraphy*
EC	-	*Epigraphia Carnatica*
EI	-	*Epigraphia Indica*
IA	-	*Indian Antiquary*
JESI	-	*Journal of the Epigraphical Society of India*
SII	-	*South Indian Inscriptions*
TLIMP	-	*Topographical List of Inscriptions from Madras Presidency*
ಕ.ವಿ.ಶಾ.ಸಂ.	–	*ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – ೪*

ಪರಿವಿಡಿ

೧.೦. **ಪೀಠಿಕೆ /**

೨.೦. **ತಮಿಳುನಾಡಿನ ಕನ್ನಡ ಶಾಸನಗಳು** / ೩

೨.೧ ಆಕರ ಮತ್ತು ವಿತರಣೆ / ೩, ೨.೨ ಅಧ್ಯಯನದ ಆತಂಕಗಳು, ಮಿತಿವ್ಯಾಪ್ತಿ / ೪,
೨.೩ ವರ್ಗೀಕರಣ / ೫, ೨.೩.೧ ಸಹಜ ಕನ್ನಡ ಪ್ರದೇಶದ ಶಾಸನಗಳು / ೫,
೨.೩.೨. ಕನ್ನಡ ಅರಸುಮನೆತನಗಳ ರಾಜಭಾಷಾ ಶಾಸನಗಳು / ೭,
೨.೩.೩ ದಿಗ್ವಿಜಯದ ಸ್ಮಾರಕ ಶಾಸನಗಳು / ೮

೩.೦. **ಪ್ರಾದೇಶಿಕ ಆಡಳಿತ ವಿಭಾಗಗಳು ಮತ್ತು ಭೌಗೋಳಿಕ ವಿವರ** / ೯

೪.೦. **ರಾಜಕೀಯ ಮಹತ್ವ** / ೧೩

೪.೧ ಚಲುಕ್ಯರು / ೧೩, ೪.೨ ಗಂಗರು / ೧೪, ೪.೩ ಬಾಣರಸರು / ೧೪,
೪.೪ ರಾಷ್ಟ್ರಕೂಟರು / ೧೫, ೪.೫ ನೊಳಂಬರು / ೧೬, ೪.೬ ಚೋಳರು / ೧೭,
೪.೭ ಕಲ್ಯಾಣದ ಚಾಳುಕ್ಯರು / ೧೮, ೪.೮ ಹೊಯ್ಸಳರು / ೧೮,
೪.೯ ವಿಜಯನಗರದ ಅರಸರು / ೧೯, ೪.೧೦ ಮೈಸೂರು ದೊರೆಗಳು / ೨೨,
೪.೧೧ ಆಡಳಿತಾಧಿಕಾರಿಗಳು / ೨೪.

೫.೦. **ಧಾರ್ಮಿಕ ಮಹತ್ವ** / ೨೯

೫.೧ ಜೈನಧರ್ಮ / ೨೯, ೫.೨ ಶೈವಧರ್ಮ / ೩೦, ೫.೩ ವೀರಶೈವಧರ್ಮ / ೩೩,
೫.೪ ವೈಷ್ಣವಧರ್ಮ / ೩೮, ೫.೫ ವೈದಿಕಧರ್ಮ–ಅಗ್ರಹಾರ ಇತ್ಯಾದಿ / ೪೧,
೫.೬ ಇಸ್ಲಾಂ ಧರ್ಮ / ೪೨

೬.೦. **ದೇವಾಲಯ ರಚನೆ, ಜೀರ್ಣೋದ್ಧಾರ, ಪೂಜಾಕೈಂಕರ್ಯಗಳು** / ೪೩

೭.೦. **ಕೃಷಿ, ನೀರಾವರಿ** / ೪೯

೮.೦. **ವಾಣಿಜ್ಯ** / ೫೧

೯.೦. **ವೀರ ಪರಂಪರೆ** / ೫೩

೯.೧ ಯುದ್ಧ / ೫೩, ೯.೨ ತುರುಗಾಳೆಗ / ೫೩, ಪೆಣ್‌ಬುಯಲ್ / ೫೪,
೯.೪ ಕಳ್ಳರೊಡನೆ ಹೋರಾಟ / ೫೪, ೯.೫ ಇತರ ಸ್ಮಾರಕಗಳು / ೫೪

೧೦.೦. **ವ್ಯಕ್ತಿ – ಸ್ಥಳನಾಮಗಳು** / ೫೭

೧೦.೧ ವ್ಯಕ್ತಿ ನಾಮಗಳು / ೫೭, ೧೦.೨ ಸ್ಥಳ ನಾಮಗಳು / ೫೮

೧೧.೦ **ಸಾಹಿತ್ಯ, ಭಾಷೆ, ಲಿಪಿ** / ೬೧

೧೨.೦. **ಉಪಸಂಹಾರ** / ೬೪

ಅನುಬಂಧ – **ಶಾಸನ ಸೂಚಿ** – ತಮಿಳುನಾಡಿನ ಕನ್ನಡ ಶಾಸನಗಳು / ೬೭

ಆಧಾರ ಗ್ರಂಥಗಳು – ೧೩೧

೧.೦ ಪೀಠಿಕೆ

ನಮ್ಮ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಮಹತ್ವದ ಹಾಗೂ ಅನಿವಾರ್ಯ ಅಗತ್ಯ ಆಕರಗಳಾಗಿರುತ್ತವೆ. ನಮ್ಮ ದೇಶದಲ್ಲಿ ಶಾಸನಗಳ ಅನ್ವೇಷಣೆ, ಪ್ರಕಟಣಾಕಾರ್ಯ, ಇನ್ನೂ ಕ್ರಮವಾಗಿ ನಡೆದಿಲ್ಲ. ಸಮಗ್ರವಾದ ಮತ್ತು ಅಧಿಕೃತವೆನ್ನಬಹುದಾದ ಅಧ್ಯಯನಗಳು ನಡೆಯಬೇಕಾದರೆ ಎಲ್ಲ ಪ್ರದೇಶಗಳ, ಎಲ್ಲ ಐತಿಹಾಸಿಕ ಆಕರಗಳ ಸಂಕಲನ, ಅಧ್ಯಯನ ವಿಶ್ಲೇಷಣೆಗಳ ಬೆಳಕಿನಲ್ಲಿ ಸೂಕ್ಷ್ಮ ಅಧ್ಯಯನಗಳು ನಡೆಯಬೇಕಾಗಿವೆ. ಈ ನಿಟ್ಟಿನಲ್ಲಿ ಪ್ರಾದೇಶಿಕ ಅಧ್ಯಯನವು ಮೊದಲ ಹಂತವಾಗಿದೆ.

ಯಾವುದೇ ಒಂದು ಭಾಷೆಯ ಶಾಸನಗಳು ಇನ್ನೊಂದು ಭಾಷಾ ಪ್ರದೇಶದಲ್ಲಿ ದೊರೆಯುವುದು ಅಸಾಮಾನ್ಯವೇನಲ್ಲ. ಅದರಲ್ಲೂ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಅನೇಕ ಭಾಷೆಯ ಶಾಸನಗಳು ಲಭ್ಯವಿರುತ್ತವೆ. ಕಾಶಿ, ರಾಮೇಶ್ವರ, ಗಯಾ, ತಿರುಪತಿ, ಶ್ರೀರಂಗಂ, ಕಂಚಿ, ಕಾಳಹಸ್ತಿ, ತಿರುನ್ವೇಲಿ, ಶ್ರೀಶೈಲಂ, ಶ್ರವಣಬೆಳಗೊಳ ಮುಂತಾದ ಕ್ಷೇತ್ರಗಳಲ್ಲಿ ಅನೇಕ ಭಾಷೆಯ, ಲಿಪಿಯ ಶಾಸನಗಳನ್ನು ಕಾಣಬಹುದಾಗಿದೆ. ಆದರೆ ಒಂದು ಪ್ರದೇಶದ ಸಹಜ ಭಾಷೆಯ ಶಾಸನಗಳು ಆವೊಂದು ಪ್ರದೇಶದ ಮಟ್ಟಿಗೆ ಸಾಮಾನ್ಯವಾಗಿ ಸಾಕಷ್ಟು ಪ್ರಾಚೀನತೆಯುಳ್ಳವಾಗಿರುತ್ತವೆ. ಇತರ ಯಾವುದೇ ಪ್ರಬಲ ರಾಜಕೀಯ ಒತ್ತಡಗಳು ಇಲ್ಲದಿದ್ದರೆ, ಮುಂದೆಯೂ ಅವು ಆ ಪ್ರದೇಶದಲ್ಲಿ ಅವ್ಯಾಹತವಾಗಿ ರಚನೆಗೊಳ್ಳುತ್ತಾ ಬಂದಿರುತ್ತವೆ. ಅಂತೆಯೇ ಆ ಭಾಷೆ ಮತ್ತು ಸಂಸ್ಕೃತಿಗಳು ಸ್ವಾಭಾವಿಕವಾಗಿಯೇ ಆ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುತ್ತದೆ, ಅಲ್ಲದೆ ಅಲ್ಲಿನ ಸ್ಥಳನಾಮಗಳು, ವ್ಯಕ್ತಿನಾಮಗಳು, ಅಷ್ಟೇ ಏಕೆ ಆ ಪ್ರದೇಶದಲ್ಲಿ ಪಳೆಯುಳಿಕೆಗಳಂತೆ ಉಳಿದು ಬಂದಿರುವ ಜಾನಪದ ಆಚರಣೆಗಳು ಕೂಡ ಆ ಅಂಶವನ್ನು ಸಾಬೀತುಪಡಿಸುತ್ತವೆ. ಪ್ರಸ್ತುತ ಇಂದಿನ ಕರ್ನಾಟಕದ ಆಗ್ನೇಯ ಮತ್ತು ದಕ್ಷಿಣಕ್ಕಿರುವ ತಮಿಳುನಾಡಿನ ಗಡಿ ಜಿಲ್ಲೆಗಳು ಇಂತಹ ಗುಣವನ್ನು ನಿಚ್ಚಳವಾಗಿ ಪಡೆದಿರುವುದನ್ನು ಕಾಣಬಹುದು, ಹಾಗೇ ನಮ್ಮ ಪ್ರಾಚೀನ ಕರ್ನಾಟಕದ ಆಳರಸರ ಶೌರ್ಯ, ಪ್ರತಾಪ, ತ್ಯಾಗ, ಭಕ್ತಿಗಳ ಪ್ರತೀಕಗಳಾಗಿ ನೂರಾರು ಕನ್ನಡ ಶಾಸನಗಳು ತಮಿಳುನಾಡಿನಾದ್ಯಂತ ತಲೆಯೆತ್ತಿರುವುದನ್ನೂ ಕಾಣಬಹುದಾಗಿದೆ.

ತಮಿಳುನಾಡಿನಲ್ಲಿ ಲಭ್ಯವಿರುವ ಕನ್ನಡ ಶಾಸನಗಳನ್ನು ಕುರಿತ ಅಧ್ಯಯನಗಳಲ್ಲಿ ಡಾ। ಕೆ.ವಿ. ರಮೇಶರವರ **'ಕರ್ಣಾಟಕ ಶಾಸನಗಳ ಸಮೀಕ್ಷೆ'** ಕೃತಿಯಲ್ಲಿ ಪ್ರಸ್ತಾಪಿತವಾಗಿರುವ ಹಲವು ವಿವರಗಳ ಹೊರತು ಹೆಚ್ಚಿನ ಅಧ್ಯಯನಗಳು[೧] ನಡೆದಿರುವಂತೆ ಕಾಣುತ್ತಿಲ್ಲ. ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಡಾ। ಎಂ.ಎಂ. ಕಲಬುರ್ಗಿಯವರ **'ಮಹಾರಾಷ್ಟ್ರದ ಕನ್ನಡ ಶಾಸನಗಳು'**, ಒಂದು ಗಮನಾರ್ಹ ಕೃತಿಯಾಗಿದೆ. ಒಂದು ದೃಷ್ಟಿಯಲ್ಲಿ ಈ ಕೃತಿಯೇ ನನಗೆ, ತಮಿಳುನಾಡಿನ ಕನ್ನಡ ಶಾಸನಗಳನ್ನು ಕುರಿತು ಅಧ್ಯಯನ ಮಾಡಲು ಪ್ರೇರಣೆ ನೀಡಿತೆಂದರೆ ತಪ್ಪಾಗಲಾರದು. ಆ ನಂತರದಲ್ಲಿ ನನ್ನ **ತಮಿಳುನಾಡಿನ ಕನ್ನಡ ಶಾಸನಗಳು ಅವಲೋಕನ**[೨], **ಕರ್ನಾಟಕಕ್ಕೆ ಹೊಂದಿಕೊಂಡ ತಮಿಳುನಾಡು ಗಡಿ ಪ್ರಾಂತ್ಯದ ಕನ್ನಡ ಶಾಸನಗಳು,**[೩] **ವಿಜಯನಗರ ಸಾಮ್ರಾಟರ ದೇವದಾನಗಳು,**[೪] ಹಾಗೂ **'ತಮಿಳುನಾಡಿನ ವೀರಶೈವ ಶಾಸನಗಳು'**[೫], ಎಂಬ ಬಿಡಿ ಲೇಖನಗಳು ಪ್ರಕಟವಾದವು. ಇತ್ತೀಚೆಗೆ

ಡಾ। ಕೆ.ಆರ್. ಗಣೇಶ ಅವರ **'ಆಂಧ್ರಪ್ರದೇಶದ ಕನ್ನಡ ಶಾಸನಗಳು'** ಎಂಬ ಪಿಎಚ್.ಡಿ., ನಿಬಂಧವೂ ಪ್ರಕಟವಾಗಿದೆ. ಈ ಎಲ್ಲಾ ಅಧ್ಯಯನಗಳು ಪ್ರಾಚೀನ ಕರ್ನಾಟಕದ ಭೌಗೋಳಿಕ ಎಲ್ಲೆ ಮತ್ತು ಸಂಸ್ಕೃತಿಯ ಪ್ರಭಾವ ವಲಯವು ಬಹು ವಿಸ್ತಾರವಾಗಿದ್ದುದನ್ನು ತೋರಿಸಿಕೊಟ್ಟಿವೆ. ಪ್ರಸ್ತುತ ಮೇಲೆ ಪ್ರಸ್ತಾಪಿತವಾಗಿರುವ ತಮಿಳುನಾಡಿನ ಕನ್ನಡ ಶಾಸನಗಳ ಬಗೆಗಿನ ನನ್ನ ಬಿಡಿ ಲೇಖನಗಳಲ್ಲಿ ಚದುರಿ ಹೋಗಿರುವ ವಿವರಗಳನ್ನು ಒಂದೆಡೆ ಸಂಕಲಿಸಿ, ಸೂಕ್ತ ರೀತಿಯಲ್ಲಿ ಅಳವಡಿಸಿ, ಪರಿಷ್ಕರಿಸಿ, ವಿಸ್ತರಿಸಿ 'ತಮಿಳುನಾಡಿನ ಕನ್ನಡ ಶಾಸನಗಳ' ಸ್ವರೂಪ ಮತ್ತು ಮಹತ್ವಗಳನ್ನು ಒಂದೆಡೆ ಪರಿಚಯಿಸುವ ಒಂದು ನಮ್ರ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

* * *

---

* ಕರ್ನಾಟಕ ಏಕೀಕರಣ ಹೋರಾಟದ ಹಿನ್ನೆಲೆಯಲ್ಲಿ 'ಹೊಸೂರು ತಾಲೂಕಿನ ಪರಿಚಯ' ಎಂಬ ಲೇಖನವೊಂದನ್ನು ಕೆಲಮಂಗಲದ ಶ್ರೀ ಕೆ.ವೆಂಕಟಾಚಾರ್ಯ ಎಂಬುವರ 'ಶರಣಸಾಹಿತ್ಯ' ಸಂ.೧೭-೩ (೧೯೫೪ ಜೂನ್)ರಲ್ಲಿ ಪ್ರಕಟಿಸಿದ್ದು, ಅದರಲ್ಲಿ ಸೇಲಂ ಗ್ಯಾಜೇಟಿಯರ್ ಹಾಗೂ ಸ್ವಂತ ಕ್ಷೇತ್ರಕಾರ್ಯದಿಂದ ಹಲವು ವಿವರಗಳನ್ನು ಸಂಗ್ರಹಿಸಿ ನೀಡಿರುತ್ತಾರೆ.

೧. ಸಂಶೋಧನ, (ಡಾ। ಎಂ.ಚಿದಾನಂದಮೂರ್ತಿ ಅವರ ಗೌರವ ಸಂಪುಟ) ಸಂ : ಲಕ್ಷ್ಮಣ ತೆಲಗಾವಿ, ಬೆಂಗಳೂರು ೧೯೯೦, ಪು.೭೫೦.

೨. ನಾಗಾಭಿನಂದನ (ಶ್ರೀ.ಎಂ.ಜಿ.ನಾಗರಾಜ್ ರಾವ್ ಅಭಿನಂದನಾ ಗ್ರಂಥ) ಸಂ: ಡಾ। ಹೆಚ್.ಎಸ್.ಗೋಪಾಲರಾವ್, ಬೆಂಗಳೂರು, ೧೯೯೪ ಪು.೩೭.

೩. ಸತ್ಯಶುದ್ಧಕಾಯಕ, ಸಂ.೨, ಸಂಚಿಕೆ ೧-೨ (ಸೆಪ್ಟೆಂಬರ್-ಡಿಸೆಂಬರ್ ೧೯೯೧) ಪು.೮೧.

೪. ಅದೇ ಸಂ.೨, ಸಂಚಿಕೆ ೪, (ಮಾರ್ಚ್-ಏಪ್ರಿಲ್ ೧೯೯೨) ಪು.೨೫

೨.೦. ತಮಿಳುನಾಡಿನ ಕನ್ನಡ ಶಾಸನಗಳು

೨.೧ ಆಕರ ಮತ್ತು ವಿತರಣೆ

ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ಶಾಸನಗಳ ವಾರ್ಷಿಕ ವರದಿಗಳು ಮತ್ತು ದಕ್ಷಿಣ ಭಾರತದ ಶಾಸನ ಸಂಪುಟಗಳನ್ನು ಅವಲೋಕಿಸಿದರೆ, ಕರ್ನಾಟಕಕ್ಕೆ ಹೊಂದಿಕೊಂಡ ತಮಿಳುನಾಡು ಗಡಿ ಪ್ರಾಂತ್ಯದಲ್ಲಿ, ಗಂಗರ ಕಾಲದಿಂದ ಪ್ರಾರಂಭಿಸಿ ತೀರಾ ಇತ್ತೀಚಿನವರೆಗೂ ನೂರಾರು ಕನ್ನಡ ಶಾಸನಗಳು ಹುಟ್ಟಿಕೊಂಡಿರುವುದು ಮನವರಿಕೆಯಾಗುತ್ತದೆ ಅಲ್ಲದೆ ಗಡಿಪ್ರಾಂತ್ಯದ ಹೊರಗೂ – ತಮಿಳುನಾಡಿನಾದ್ಯಂತ[*] ಅನೇಕ ಕನ್ನಡ ಶಾಸನಗಳು ಅಸ್ತಿತ್ವವನ್ನು ಪಡೆದಿರುವುದು ತಿಳಿದುಬರುತ್ತದೆ.

ಡಾ॥ ರಾಬರ್ಟ್ ಸಿವೆಲ್‌ರವರು ಕ್ರಿ.ಶ. ೧೮೮೨ರಲ್ಲಿ ದಕ್ಷಿಣ ಭಾರತದ ಪುರಾತತ್ವ ಸರ್ವೇಕ್ಷಣ ಇಲಾಖೆಯವರ ಕೋರಿಕೆಯ ಮೇರೆಗೆ ಸಿದ್ಧಪಡಿಸಿದ *Lists of the Antiquarian Remains in the Presidency of Madras*, ಸಂಪುಟ – ೧ರಿಂದ ತಮಿಳುನಾಡಿನಲ್ಲಿರುವ ಕನ್ನಡ ಶಾಸನಗಳ ಬಗ್ಗೆ ಮೊದಲಿಗೆ ಹೆಚ್ಚು ವಿವರಗಳು ಲಭ್ಯವಾದವೆನ್ನಬಹುದು. ಆ ನಂತರದಲ್ಲಿ ಸಿವೆಲ್‌ರವರೇ ಸಂಪಾದಿಸಿದ *Historical Inscriptions of South India* ಕೃತಿ ಕೂಡ ಗಮನಾರ್ಹ. ವಿ. ರಂಗಾಚಾರ್ಯ ಎಂಬುವರಿಂದ ಕ್ರಿ.ಶ. ೧೯೧೯ರಲ್ಲಿ ಪ್ರಕಟಿಸಲ್ಪಟ್ಟಿರುವ *'A Topographical List of the Inscriptions of the Madras Presidency'* ಎಂಬ ಸಂಪುಟಗಳು ಪ್ರಕಟವಾದವು. ಈ ಸಂಪುಟಗಳಲ್ಲಿ ಮೇಲೆ ಉಲ್ಲೇಖಿಸಿದ ಡಾ॥ ಸಿವೆಲ್ಲರ ಲಿಸ್ಟ್, ಜೊತೆಗೆ ದಕ್ಷಿಣ ಭಾರತದ ಪುರಾತತ್ವ ಸರ್ವೇಕ್ಷಣ ಇಲಾಖೆಯ ಶಾಸನಶಾಸ್ತ್ರದ ೧೯೧೫ರ ವರೆಗಿನ ವಾರ್ಷಿಕ ವರದಿಗಳು ಹಾಗೂ ಅನ್ಯತ್ರ ಪ್ರಕಟವಾಗಿರುವ ಶಾಸನಗಳ ಸಾರಾಂಶಗಳನ್ನು ಸಂಗ್ರಹಿಸಲಾಗಿದೆ. ಆ ನಂತರದಲ್ಲಿ ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಅಲ್ಲೊಂದು ಇಲ್ಲೊಂದು ಕನ್ನಡ ಶಾಸನಗಳ ಸಾರಾಂಶಗಳು ಬೆಳಕು ಕಂಡಿವೆ.[**] ಆದರೆ ೧೯೬೮–೬೯ರ ನಂತರದ ಕೆಲವು ವಾರ್ಷಿಕ ವರದಿಗಳಲ್ಲಿ ಹೆಚ್ಚಿನ ಪ್ರಮಾಣದ ಕನ್ನಡ ಶಾಸನಗಳ ಸಾರಾಂಶಗಳು ಪ್ರಕಟವಾಗಿವೆ. ಈ ಮಧ್ಯೆ *South Indian*

---

* ತಿರುನ್ವೇಲಿ, ರಾಮೇಶ್ವರ, ತಂಜಾವೂರು, ಕುಂಭಕೋಣ, ಮದ್ರಾಸ್, ಧಾರಾಪುರ ಮುಂತಾದ ದೂರದ ಸ್ಥಳಗಳಲ್ಲೂ ಕನ್ನಡ ಶಾಸನಗಳು ಲಭ್ಯ.

** "ಈ ವಾರ್ಷಿಕ ವರದಿಗಳು ಆಯಾ ವರ್ಷ ಪತ್ತೆಯಾದ ಶಾಸನಗಳ ಬಗೆಗೆ ಒಂದೆರಡು ಪರಿಚಯದ ಮಾತುಗಳನ್ನು ಮಾತ್ರ ಹೇಳುವ ಉದ್ದೇಶವುಳ್ಳವಾಗಿದ್ದು, ಹೆಚ್ಚು ಕಡಿಮೆ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಹೊಸ ಅಂಶಗಳನ್ನು ಮಾತ್ರ ಒತ್ತಿ ಹೇಳುವ ಇವುಗಳು ಶಾಸನಪಾಠವನ್ನು ಇನ್ನಷ್ಟು ಸೂಕ್ಷ್ಮವಾಗಿ ಪರೀಕ್ಷಿಸುವಂತೆ ಸಂಶೋಧಕರಿಗೆ ಕರೆ ನೀಡುವಂತಹವೇ ಹೊರತು, ಸ್ವತಃ ಮೂಲ ಸಾಮಾಗ್ರಿಗಳಾಗಿರಲಾರವು" ಎಂಬ ಡಾ। ಕೆ.ವಿ.ರಮೇಶರ ಅಭಿಪ್ರಾಯವನ್ನು ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ('ಕರ್ನಾಟಕ ಶಾಸನ ಸಮೀಕ್ಷೆ' ಪು.೫೧).

Inscriptions, ಸಂಪುಟ VII (೧೯೩೩), IX ಭಾಗ ೧ (೧೯೩೨), ಭಾಗ ೨ (೧೯೪೧), ಸಂಪುಟ XVII (೧೯೬೪) ಮತ್ತು ಶ್ರೀರಂಗಂ ಕ್ಷೇತ್ರಕ್ಕೇ ಮೀಸಲಾದ ಸಂಪುಟ XXIVಗಳಲ್ಲೂ ಹಲವು ಶಾಸನಗಳ ಪೂರ್ಣಪಾಠಗಳು ಪ್ರಕಟವಾಗಿವೆ. ಒಟ್ಟಾರೆ ಹೀಗೆ ಪತ್ತೆಯಾಗಿರುವ ಶಾಸನಗಳ ಸಂಖ್ಯೆ ಸುಮಾರು ೨೫೦. ಅವುಗಳಲ್ಲಿ ಪೂರ್ಣ ಪಾಠಗಳು ಪ್ರಕಟವಾಗಿರುವುದು ಕೇವಲ ಸುಮಾರು ೧೪೫ಕ್ಕೆ ಮಾತ್ರ. ಇವುಗಳ ಜಿಲ್ಲಾವಾರು ಹಂಚಿಕೆ ಸ್ಥೂಲವಾಗಿ ಈ ರೀತಿ ಇದೆ.

ಕೃಷ್ಣಗಿರಿ	೯೬	ತಿರುಚಿನಾಪಳ್ಳಿ	೨೨
ಧರ್ಮಪುರಿ	೪೨	ಕಾಂಚೀಪುರಂ	೧೧
ಈರೋಡ್	೧೫	ತಂಜಾವೂರು	೩
ಸೇಲಂ	೧೩	ತಿರುವಳ್ಳೂರು	೪
ಕೊಯಮತ್ತೂರು	೬	ತಿರುವಣ್ಣಾಮಲೆ	೮
ನಾಮಕ್ಕಲ್	೨	ರಾಮನಾಥಪುರಂ	೩
ವೆಲ್ಲೂರು	೭	ನಾಗಪಟ್ಟಣಂ	೧
ಮಧುರೆ	೨	ಕಡಲೂರು	೪
ವಿಟುಪುರಂ	೬	ತಿರುನೆಲ್ವೆಲಿ	೧

ಒಟ್ಟು ೨೪೬

೨.೨ ಅಧ್ಯಯನದ ಆತಂಕಗಳು, ಮಿತಿ – ವ್ಯಾಪ್ತಿ

ಇಂದಿನ ಕರ್ನಾಟಕದ ಮೈಸೂರು, ಚಾಮರಾಜನಗರ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಿಗೆ ಹೊಂದಿಕೊಂಡಂತಿರುವ ಇಂದಿನ ತಮಿಳುನಾಡಿನ ನೀಲಗಿರಿ, ಈರೋಡ್, ಕೊಯಮತ್ತೂರು, ಕೃಷ್ಣಗಿರಿ, ಧರ್ಮಪುರಿ, ಸೇಲಂ ಜಿಲ್ಲಾ ಪ್ರದೇಶಗಳಲ್ಲಿನ ಶಾಸನಗಳ ಪರಿವೀಕ್ಷಣೆ, ಅದರಲ್ಲೂ ಈರೋಡ್, ಕೊಯಮತ್ತೂರು ಮತ್ತು ನೀಲಗಿರಿ ಪ್ರದೇಶಗಳ ಶಾಸನಗಳ ಪರಿವೀಕ್ಷಣೆ ಸಮರ್ಪಕವಾಗಿ ನಡದೇ ಇಲ್ಲವೆಂಬುದು, ಈವರೆಗೆ ಪ್ರಕಟವಾಗಿರುವ ಶಾಸನ ಸಂಪುಟಗಳು ಮತ್ತು ವಾರ್ಷಿಕ ವರದಿಗಳನ್ನು ಗಮನಿಸಿದರೆ ಮನಗಾಣಬಹುದಾಗಿದೆ.

ಹೀಗೆ ಪ್ರಕಟವಾಗಿರುವ ಸಾಮಗ್ರಿಯನ್ನು ಅಧ್ಯಯನಕ್ಕೆ ಸಂಗ್ರಹಿಸುವುದಂತೂ ತೀರಾ ತ್ರಾಸದ ಕೆಲಸ. ಏಕೆಂದರೆ, ನಮ್ಮ ಭಾರತ ಸ್ವಾತಂತ್ರ್ಯದ ನಂತರ, ಅದರಲ್ಲೂ ಭಾಷಾವಾರು ಪ್ರಾಂತ್ಯಗಳಾದ ನಂತರವೂ ದೇಶದ ಅನೇಕ ರಾಜ್ಯಗಳ ಜಿಲ್ಲೆ ಮತ್ತು ತಾಲ್ಲೂಕುಗಳ ವಿಂಗಡಣೆ ಮತ್ತು ಮರುವಿಂಗಡಣೆ ಕಾರ್ಯ ಮುಂದುವರೆದಿದ್ದು, ಹಿಂದೆ ವಾರ್ಷಿಕ ವರದಿ ಇತ್ಯಾದಿಗಳಲ್ಲಿ ನಮೂದಾಗಿರುವ ಯಾವುದೇ ಒಂದು ಸ್ಥಳದ ತಾಲೂಕು, ಜಿಲ್ಲೆ ಇತ್ಯಾದಿಗಳು ಬದಲಾವಣೆಗೆ ಈಡಾಗಿರುವುದುಂಟು[೧]. ಕೆಲವೊಮ್ಮೆ ಶಾಸನವೊಂದು ಸ್ಥಳಾಂತರವಾದಂತೆಲ್ಲ, ಅದು ಮತ್ತೆ ಮತ್ತೆ ಹೊಸ ಶೋಧವೆಂಬಂತೆ ವಾರ್ಷಿಕ ವರದಿ ಇತ್ಯಾದಿಗಳಲ್ಲಿ ನಮೂದಾಗುತ್ತಾ ಹೋಗಿರುವುದುಂಟು. ಇವೆಲ್ಲಕ್ಕೂ ಮಿಗಿಲಾಗಿ ತಮಿಳುನಾಡಿನ ಎಲ್ಲ ಕನ್ನಡ ಶಾಸನಗಳು ಶೋಧವಾಗದೆಯಿರುವುದು, ಶೋಧವಾಗಿರುವ ಶಾಸನಗಳ ಪೂರ್ಣಪಾಠಗಳು

೧. ಅನಿವಾರ್ಯವಾಗಿ ಈ ಸಂಬಂಧದಲ್ಲಿ, ಹಲವು ಲೋಪದೋಷಗಳು ಈ ಬರಹದಲ್ಲೂ ಉಳಿದಿವೆ.

ಅಲಭ್ಯವಾಗಿರುವುದು, ಪೂರ್ಣಪಾಠ ಲಭ್ಯವಿರುವ ಶಾಸನಗಳ ಪ್ರಮಾಣ ಅಲ್ಪವಾಗಿರುವುದು, ಈ ದಿಸೆಯಲ್ಲಿ ಅಧ್ಯಯನ ಕೈಗೊಳ್ಳಲು ಎದುರಾಗುವ ಸವಾಲುಗಳಾಗಿರುತ್ತವೆ. ಇದರ ಜೊತೆಗೆ ಇಲ್ಲಿ ಕನ್ನಡ ಭಾಷೆಯ ಶಾಸನಗಳನ್ನಷ್ಟೇ ಹೆಚ್ಚು ಗಮನಕ್ಕೆ ತೆಗೆದುಕೊಂಡಿರುವುದರಿಂದಾಗಿ, ಕನ್ನಡ ಅರಸು ಮನೆತನದವರೇ ಆದ ಗಂಗ, ನೊಳಂಬ, ಬಾಣ, ರಾಷ್ಟ್ರಕೂಟ, ಹೊಯ್ಸಳ ಮುಂತಾದವರು ಹಾಕಿಸಿರುವ ಸಂಸ್ಕೃತ ಮತ್ತು ತಮಿಳು ಭಾಷೆಯ ಶಾಸನಗಳಲ್ಲಿನ ಮಾಹಿತಿಗಳು ಹೊರಗುಳಿದು ಒಂದು ಮಿತಿಯಂತೂ ಏರ್ಪಡುತ್ತದೆ. ಇಂತಹ ಹಲವು ಇತಿಮಿತಿಗಳ ಹಿನ್ನೆಲೆಯಲ್ಲಿ ಪ್ರಸ್ತುತ ತಮಿಳುನಾಡಿನಲ್ಲಿ ದೊರೆತಿರುವ ಕನ್ನಡ ಶಾಸನಗಳ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ನೀಡಲು ಪ್ರಯತ್ನಿಸಲಾಗಿದೆ.

೨.೩. ವರ್ಗೀಕರಣ

ತಮಿಳುನಾಡಿನ ಕನ್ನಡ ಶಾಸನಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು: ೧. ಸಹಜ ಕನ್ನಡ ಪ್ರದೇಶದ ಶಾಸನಗಳು, ೨. ಕನ್ನಡ ಅರಸು ಮನೆತನಗಳ ಆಳ್ವಿಕೆಯ ಪರಿಣಾಮವಾಗಿ 'ರಾಜಭಾಷೆ'ಯಾಗಿ ಹಾಕಿಸಿರುವ ಶಾಸನಗಳು ಹಾಗೂ ೩. ದಿಗ್ವಿಜಯದ ಸ್ಮಾರಕವಾಗಿ ಹಾಕಿಸಿರುವ ಶಾಸನಗಳು.

೨.೩.೧. ಸಹಜ ಕನ್ನಡ ಪ್ರದೇಶದ ಶಾಸನಗಳು

ಹಿಂದೆ ಕನ್ನಡ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟು ಸ್ವಾಭಾವಿಕವಾಗಿಯೇ ಕನ್ನಡ ಭಾಷಾ ಪ್ರದೇಶಗಳಾಗಿದ್ದ ಅನೇಕ ಭಾಗಗಳು ಇಂದಿಗೂ ಕರ್ನಾಟಕದ ಹೊರಗುಳಿದಿರುವುದು ಸರಿಯಷ್ಟೆ. ಅಂತಹ ಪ್ರದೇಶಗಳಲ್ಲೊಂದಾದ ಸ್ವಭಾವತಃ ಕನ್ನಡವೇ ಮೂಲಭಾಷೆಯಾಗಿದ್ದಂತಹ ಪ್ರದೇಶವೇ, ಸಹಜ ಕನ್ನಡ ಪ್ರದೇಶ. ಇದರ ಹರವು ಆ ಪ್ರದೇಶಗಳಲ್ಲಿ ದೊರೆತಿರುವ ಕನ್ನಡ ಶಾಸನಗಳ ಸ್ವರೂಪ ಮತ್ತು ಲಕ್ಷಣಗಳಿಂದ ಮನಗಾಣಬಹುದಾಗಿದೆ. ಇಂದಿನ ಕರ್ನಾಟಕದ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಿಗೆ ಅಂಟಿಕೊಂಡಂತಿರುವ ಇಂದಿನ ತಮಿಳುನಾಡಿನ ಕೃಷ್ಣಗಿರಿ, ಧರ್ಮಪುರಿ, ಸೇಲಂ, ಈರೋಡ್, ಕೊಯಮತ್ತೂರು ಜಿಲ್ಲೆಗಳಿಗೆ ಸೇರಿದ ಪ್ರದೇಶಗಳಲ್ಲಿ ಇಂತಹ ಶಾಸನಗಳು ಕಂಡುಬಂದಿವೆ. ಈ ಪ್ರದೇಶಗಳಲ್ಲಿ ದೊರೆತಿರುವ ಪ್ರಾಚೀನತಮ ಶಾಸನಗಳು ಕನ್ನಡದವಾಗಿವೆ. ಇಷ್ಟು ಪ್ರಾಚೀನ ಕಾಲಕ್ಕೆ ಸೇರಿದ ಬೇರೆ ಯಾವ ಭಾಷೆಯ ಶಾಸನಗಳೂ ಈ ಪ್ರದೇಶದಲ್ಲಿ ಇಷ್ಟು ಪ್ರಮಾಣದಲ್ಲಿ ದೊರೆತಿರುವುದಿಲ್ಲ. ಇವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿಯೇ ಲಿಖಿತವಾಗಿರುತ್ತವೆ: ಅಂದರೆ, ಈ ಶಾಸನಗಳಿಗೆ ಬೇರೊಂದು ಭಾಷೆಯ ಅವತರಣಿಕೆಯಾಗಲೀ, ಲಿಪ್ಯಂತರವಾಗಲೀ ಇರುವುದಿಲ್ಲ. ಸಹಜವಾಗಿಯೇ ಈ ಪ್ರದೇಶಗಳಲ್ಲಿ ಹೆಚ್ಚು ಕನ್ನಡ ಶಾಸನಗಳು ಲಭ್ಯವಿರುತ್ತವೆ. ಸದ್ಯಕ್ಕೆ ತಮಿಳುನಾಡಿನಲ್ಲಿ ದೊರೆತಿರುವ ಒಟ್ಟು ಕನ್ನಡ ಶಾಸನಗಳ ಸು. ಶೇಕಡ ೭೦ರಷ್ಟು ಶಾಸನಗಳು ಈ ಪ್ರದೇಶಕ್ಕೆ ಸೇರಿದವಾಗಿರುತ್ತವೆ. ಇವುಗಳಲ್ಲಿ ಹನ್ನೊಂದನೆಯ ಶತಮಾನಕ್ಕಿಂತ ಹಿಂದಿನವು ಶೇಕಡ ೨೦ರಷ್ಟಿವೆ. ಗಂಗರ ಶಾಸನಗಳಲ್ಲಿ [೨] ಶ್ರೀಪುರುಷ, ಶಿವಮಾರ, ಮಾರಸಿಂಹ ಮತ್ತು ರಾಚಮಲ್ಲರ ಉಲ್ಲೇಖನಗಳಿದ್ದು ಸೇಲಂ, ಮಾಚಿನಾಯಕನ ಹಳ್ಳಿ, ಹೊಸೂರು, ವಳ್ಳಿಮಲೆ ಮುಂತಾದ ಸ್ಥಳಗಳಲ್ಲಿ ಕಂಡುಬಂದಿವೆ. ನೊಳಂಬರ ಮಹೇಂದ್ರ, ಅಯ್ಯಪದೇವ, ಇರುಳಚೋರ ಮತ್ತು ಪೊಳಲ್ಚೋರ ವೀರನೊಳಂಬರ ಶಾಸನಗಳು ಧರ್ಮಪುರಿ, ಮಾಚಿನಾಯಕನಹಳ್ಳಿ, ಮೊದಕೇರಿ,

೨. ತಡಂಗಾಲ ಮಾಧವ ಮತ್ತು ಹರಿವರ್ಮರ ತಾಮ್ರಶಾಸನಗಳು ದೊರೆತಿದ್ದಾಗ್ಯೂ, ಅವನ್ನು ವಿದ್ವಾಂಸರು ಕೃತಕವೆಂದು ಭಾವಿಸಿರುವುದರಿಂದ ಗಣನೆಗೆ ತೆಗೆದುಕೊಂಡಿಲ್ಲ.

ಕೊಲಗತ್ತೂರು, ನವಿಲೈ, ಪಾಲವಾಡಿ ಮತ್ತು ತವಳಂಗಳಲ್ಲಿ ಕಂಡುಬಂದಿವೆ. ಬಾಣರ ಮಹಾಬಲಿ ಬಾಣರಸನ ಶಾಸನಗಳು ರಾಯಕೋಟೆ, ಮುತ್ತನೂರು, ವಳ್ಳಿಮಲೆ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ. ಚೋಳ ರಾಜೇಂದ್ರನ ಕನ್ನಡ ಶಾಸನವೊಂದು ಹೊಸೂರು ಬೆಟ್ಟದಲ್ಲಿದ್ದು ಗಮನ ಸೆಳೆಯುತ್ತದೆ. ಅಲ್ಲದೆ ಡೆಂಕಣಿಕೋಟೆ ತಾಲೂಕಿನ ಸಂದನಹಳ್ಳಿ ಮತ್ತು ಚಿನ್ನಟ್ಟಿ ಗ್ರಾಮಗಳಲ್ಲೂ ಈತನ ಶಾಸನಗಳಿವೆ.

ಹತ್ತನೆಯ ಶತಮಾನದ ನಂತರ, ಹದಿನಾಲ್ಕನೆಯ ಶತಮಾನದ ಒಳಗಿನ ಕನ್ನಡ ಶಾಸನಗಳ ಸಂಖ್ಯೆ ಕೇವಲ ಶೇಕಡ ೫ ರಷ್ಟಿದೆ. ಇವುಗಳಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳನ ಉಲ್ಲೇಖ ಬಂದಿದ್ದು, ಸರಕನಹಳ್ಳಿ, ಮಾಚಿನಾಯಕನಹಳ್ಳಿ ಮತ್ತು ಹೊಸೂರುಗಳಲ್ಲಿ ಲಭ್ಯವಾಗಿವೆ. ಈ ಪ್ರದೇಶದ ಶಾಸನಗಳಲ್ಲಿ ವಿಜಯನಗರ ಅರಸರ ಕಾಲದವು ಶೇಕಡ ೬೦ರಷ್ಟಿವೆ. ಕುಮಾರ ವೀರಕಂಪಣ ಒಡೆಯ, ಹರಿಯಪ್ಪ ಒಡೆಯ, ಬುಕ್ಕಣ ಒಡೆಯ, ದೇವರಾಯ, ವೀರಭುಜಬಲರಾಯ (?), ನರಸಿಂಹದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ, ವೆಂಕಟಪತಿರಾಯ, ರಾಮರಾಜ ಒಡೆಯ, ಶ್ರೀರಂಗರಾಯ ಮುಂತಾದ ವಿಜಯನಗರ ಅರಸರು ಶಾಸನೋಕ್ತರಾಗಿದ್ದು, ಹೊಸೂರು ಮತ್ತು ಡೆಂಕಣಿಕೋಟೆ ತಾಲೂಕುಗಳಿಗೆ ಸೇರಿದ ಹೊಸೂರು, ಮುಗಳೂರು, ಕೂಸ್ತನಹಳ್ಳಿ, ಗುಮ್ಮಳಾಪುರ, ಉಳಮಾರನಹಳ್ಳಿ, ಗಂಗನಹಳ್ಳಿ, ತಳಿ, ಬಾಗೇಪಲ್ಲಿ, ಡೆಂಕಣಿಕೋಟೆ, ಬುಕ್ಕಸಾಗರ, ಮುದಗಾನಹಳ್ಳಿ, ಕಾಟಿನಾಯಕನದೊಡ್ಡಿ, ನಾಗೊಂಡಹಳ್ಳಿ; ಧರ್ಮಪುರಿ ತಾಲೂಕಿನ ಕೂತ್ತಪಾಡಿ, ಅಧಮಾನಕೋಟೆ, ಇಂದೂರು, ಕೃಷ್ಣಗಿರಿ, ಧರ್ಮಪುರಿ, ಕಾರಿಮಂಗಲ; ನಾಮಕ್ಕಲ್ ಜಿಲ್ಲೆಯ ತಿರುಚೆಂಗೋಡು ತಾಲೂಕಿನ ಶಂಖಗಿರಿ: ಈರೋಡ್ ಜಿಲ್ಲೆಯ ಗೋಪಿಚೆಟ್ಟಿಪಾಳ್ಯ ತಾಲೂಕಿನ ಎರಗನಹಳ್ಳಿ; ಧಾರಾಪುರ ಮುಂತಾದ ಸ್ಥಳಗಳಲ್ಲಿ ಇವು ಕಾಣಿಸಿಕೊಂಡಿವೆ.

ಕಂಠೀರವ ನರಸರಾಜ ಒಡೆಯ, ದೊಡ್ಡದೇವರಾಜ ಒಡೆಯ, ಚಿಕ್ಕದೇವರಾಜ ಒಡೆಯ, ಕೃಷ್ಣರಾಜ ಒಡೆಯ, ವೀರರಾಜ ಒಡೆಯ, ಹೈದರಾಲಿ ಮತ್ತು ಚಾಮರಾಜ ಒಡೆಯ ಮುಂತಾದ ಮೈಸೂರು ಅರಸರ ಶಾಸನಗಳು ಶೇಕಡ ೨೪ ರಷ್ಟಿದ್ದು ಗಮನ ಸೆಳೆಯುತ್ತವೆ. ಈರೋಡ್ ಜಿಲ್ಲೆಗೆ ಸೇರಿದ ಈರೋಡ್, ಸತ್ಯಮಂಗಲ, ಸೆಂಗಲರಾಯ್‌ಶಿವಯ್ಯಪಾಳ್ಯ, ಬೆಸ್ತರಪಾಳ್ಯ, ವಿನ್ನಪಳ್ಳಿ, ಕೊಯಮತ್ತೂರು ಜಿಲ್ಲೆಯ ಅವಿನಾಶಿ, ದಣ್ಣಾಯಕನಕೋಟೆ, ಸೇಲಂ ಜಿಲ್ಲೆಯ ಮೆಟ್ಟೂರು, ಕೃಷ್ಣಗಿರಿ ಜಿಲ್ಲೆ ಹೊಸೂರು ಮತ್ತು ಡೆಂಕಣಿಕೋಟೆ ತಾಲೂಕುಗಳ ಉಳಮಾರನಹಳ್ಳಿ, ದೊಡ್ಡಬೇಲೂರು, ತೊರಹಳ್ಳಿ, ಹಳೆಯೂರು, ಉಪ್ಪಾರಹಳ್ಳಿ, ತಳಿ, ಹಿರೇಮದಗೊಂಡಹಳ್ಳಿ ಮುಂತಾದ ಸ್ಥಳಗಳಲ್ಲಿ ಅವರ ಶಾಸನಗಳು ಕಂಡುಬಂದಿವೆ.

ಕ್ರಿ.ಶ. ೧೧-೧೨ನೇ ಶತಮಾನಗಳಲ್ಲಿ ತಮಿಳು ಅರಸು ಮನೆತನದವರಾದ ಚೋಳರು ತಲಕಾಡು ಗಂಗರನ್ನು ಮೂಲೆಗೊತ್ತಿ ಈ ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಆಗ ಅವರು ಪ್ರಾರಂಭದಲ್ಲಿ ಈ ಪ್ರದೇಶದಲ್ಲಿ ಹಾಕಿಸಿರುವ ಶಾಸನಗಳು ಮೈಸೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಪ್ರದೇಶಗಳಂತೆ ಕನ್ನಡದಲ್ಲಿರುವುದು ಕಂಡುಬಂದಿದೆ.

ಒಟ್ಟಾರೆ ಈ ಸಹಜ ಕನ್ನಡ ಪ್ರದೇಶದ ಶಾಸನಗಳು ಎಲ್ಲ ದೃಷ್ಟಿಗಳಿಂದಲೂ ಇಂದಿನ ಕರ್ನಾಟಕದ ಗಡಿಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಂತೆಯೇ ಇದ್ದು, ತಮ್ಮ ಗತಕಾಲದ ಇತಿಹಾಸದ ಮೂಕಸಾಕ್ಷಿಗಳಾಗಿ ನಿಂತಿವೆ.

೨.೩.೨. ಕನ್ನಡ ಅರಸುಮನೆತನಗಳ ರಾಜಭಾಷಾ ಶಾಸನಗಳು

ಎರಡನೆಯ ಗುಂಪಿಗೆ ಸೇರಿದ ಈ ಶಾಸನಗಳು, ಮೇಲೆ ಪ್ರಸ್ತಾಪಿತವಾಗಿರುವ ಸಹಜ ಕನ್ನಡ ಪ್ರದೇಶದಿಂದ ಹೊರಗಿನವಾಗಿದ್ದು, ಇವುಗಳಲ್ಲಿ ಹತ್ತನೆಯ ಶತಮಾನ ಮತ್ತು ಅದಕ್ಕಿಂತ ಹಿಂದಿನವು ವೆಲ್ಲೂರು, ಕಾಂಚೀಪುರಂ, ತಿರುಚಿನಾಪಲ್ಲಿ ಜಿಲ್ಲೆಗಳಲ್ಲಿವೆ. ಅವು ಚಲುಕ್ಯ ವಿಕ್ರಮಾದಿತ್ಯ, ಗಂಗ ರಾಚಮಲ್ಲ, ರಾಷ್ಟ್ರಕೂಟ ಮುಮ್ಮಡಿ ಕನ್ನರದೇವ ಬಾಣರಾಜರ, ಮತ್ತು ಕಲ್ಯಾಣದ ಚಾಲುಕ್ಯರ ಆರನೇ ವಿಕ್ರಮಾದಿತ್ಯರಿಗೆ ಸೇರಿದವಾಗಿವೆ. ಈ ಶಾಸನಗಳಲ್ಲಿ ಹಲವಕ್ಕೆ ಕನ್ನಡೇತರ ಲಿಪಿ ಅಂದರೆ ಗ್ರಂಥ ಲಿಪಿ ಅಥವಾ ನಾಗರೀ ಲಿಪಿಯ ಲಿಪ್ಯಂತರದ ಜೊತೆಗೆ ಸ್ಥಳೀಯ ಭಾಷೆಯಾದ ತಮಿಳಿನ ಅವತರಣಿಕೆಗಳು ಇರುತ್ತವೆ.

ಕಾಂಚೀಪುರಂ ಜಿಲ್ಲೆಯ ಮಧುರಾಂತಕಂ ತಾಲೂಕಿನ ಒರತ್ತಿ ಸ್ಥಳಕ್ಕೆ ಸೇರಿದ ಕನ್ನಡ ಶಾಸನವು[೩] ರಾಷ್ಟ್ರಕೂಟ ಮುಮ್ಮಡಿ ಕನ್ನರದೇವನ ಆಳ್ವಿಕೆಯ ಕಾಲಕ್ಕೆ ಸೇರಿದುದಾಗಿದೆ. ಈ ಅವಧಿಯ ಗಂಗ ಮತ್ತು ಬಾಣರ ಶಾಸನಗಳು ಜೈನಧರ್ಮಕ್ಕೆ ಸಂಬಂಧಿಸಿವೆ. ಕಲ್ಯಾಣದ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಶಾಸನವೊಂದು[೪] ಶ್ರೀರಂಗಂನಲ್ಲಿದ್ದು, ರಾಜನ ಪರವಾಗಿ ದಂಡನಾಯಕ ಮತ್ತು ಕನ್ನಡ ಸಂಧಿವಿಗ್ರಹಿ ಎಂಬ ಅಧಿಕಾರಿಗಳಿಂದ ದೇವಾಲಯಗಳಲ್ಲಿ ನಂದಾದೀವಿಗೆಗಳ ನಿರ್ವಹಣೆಗಾಗಿ ದತ್ತಿ ಬಿಡಲಾದ ವಿಷಯವನ್ನು ಹೇಳುತ್ತದೆ.

ಹೊಯ್ಸಳ ಸೋಮೇಶ್ವರನ ಕನ್ನಡ ಶಾಸನವೊಂದು[೫] ತಿರುನ್ವೆಲಿಯಲ್ಲಿ ದೊರೆತಿದೆ. ತಿರುಚಿರಾಪಳ್ಳಿ ಜಿಲ್ಲೆಯ ಲಾಲ್‌ಗುಡಿ ತಾಲೂಕಿನ ಸಮಯವರಂನಲ್ಲಿ ಹೊಯ್ಸಳ ರಾಮನಾಥನ ಆಳ್ವಿಕೆಯ ಇನ್ನೊಂದು ಕನ್ನಡ ಶಾಸನ[೬] ಲಭ್ಯವಾಗಿದೆ.

ವಿಜಯನಗರ ಅರಸರ ಕನ್ನಡ ಶಾಸನಗಳು ತಿರುಚಿರಾಪಳ್ಳಿ, ಕಾಂಚೀಪುರಂ, ತಿರುವಣ್ಣಾಮಲೆ, ವೆಲ್ಲೂರು ಮತ್ತು ತಂಜಾವೂರು ಜಿಲ್ಲೆಗಳಲ್ಲಿ ಕಂಡುಬಂದಿವೆ. ಇವುಗಳಲ್ಲಿ ಬಹಳಷ್ಟು ಶ್ರೀರಂಗಂ, ಕಂಚಿ, ತಿರುಮನಿಕುಳಿ, ತಿರುವಡಿ, ತಿರುವೆಣ್ಣೈನಲ್ಲೂರು, ತಿರುವಣ್ಣಾಮಲೆ, ತಿರುವತ್ತಿಯೂರ್, ತಿರುವರೂರ್, ಕುಂಭಕೋಣಂ ಮುಂತಾದ ತೀರ್ಥಕ್ಷೇತ್ರಗಳಲ್ಲಿಯೇ ಇದ್ದು, ಕಂಪಣ್ಣ ಒಡೆಯ, ವಿರೂಪಾಕ್ಷ, ಹರಿಹರ, ದೇವರಾಯ, ಪ್ರೌಢದೇವರಾಯ, ವಿಜಯರಾಯ, ಸಾಳ್ವನರಸಿಂಗನಾಯಕ, ಕೃಷ್ಣರಾಯ, ಅಚ್ಯುತರಾಯ ಮುಂತಾದವರ ಆಳ್ವಿಕೆಯ ಕಾಲಕ್ಕೆ ಸೇರಿದವಾಗಿವೆ.

ಬಹುತೇಕ ಕನ್ನಡ ಶಾಸನಗಳಿಗೆ ಸ್ಥಳೀಯ ಭಾಷೆಯಾದ ತಮಿಳಿನ ಹಾಗೂ ದೇವಭಾಷೆಯೆನಿಸಿದ್ದ ಸಂಸ್ಕೃತದ ಅವತರಣಿಕೆಗಳು ಸಾಮಾನ್ಯವಾಗಿ ಕಂಡುಬರುತ್ತದೆ. ಸಾಕಷ್ಟು ಸಂಸ್ಕೃತ ಶಾಸನಗಳು ಕನ್ನಡ ಲಿಪಿಯಲ್ಲಿವೆ. ಕೆಲವು ಸಂಸ್ಕೃತ ಶಾಸನಗಳಿಗೆ ಗ್ರಂಥ ಹಾಗೂ ನಾಗರೀ ಲಿಪಿಗಳನ್ನು ಬಳಸಿರುವುದುಂಟು. ಇದರಿಂದ ಕನ್ನಡ ಭಾಷೆಯು ಕರ್ಣಾಟಕಾಧೀಶರಾದ ವಿಜಯನಗರ ಸಾಮ್ರಾಟರ 'ರಾಜಭಾಷೆ' ಎಂಬ ಗೌರವಾದರಗಳ ಕುರುಹಾಗಿಯೇ ಇಲ್ಲಿ ವಿಜೃಂಭಿಸಿರುವುದು ವ್ಯಕ್ತಪಡುತ್ತದೆ.

---

೩. *ARIE*, 1976-77 B 211

೪. *ARIE*, 1941-42 B 204

೫. ಅದೇ, *ARIE*, 1912 B 15

೬. *SII*, Vol.IX, No.348

೨.೩.೩ ದಿಗ್ವಿಜಯದ ಸ್ಮಾರಕ ಶಾಸನಗಳು

ಮೂರನೇ ಗುಂಪಿನ ಈ ಶಾಸನಗಳ ಪ್ರಮಾಣ ಕಡಿಮೆ ಸಂಖ್ಯೆಯದೇ ಆಗಿರುತ್ತದೆ. ಇವು ಪ್ರಶಸ್ತಿ ಗುಂಪಿಗೆ ಸೇರಿಸಬಹುದಾದಂತಹವು. ಮಧುರಾವಿಜಯದ ಎಂಟನೆಯ ಸರ್ಗದಲ್ಲಿ ವೀರಕಂಪಣನಿಗೆ ದೇವತೆಯೊಬ್ಬಳು ಪ್ರತ್ಯಕ್ಷಳಾಗಿ ದೈವೀ ಖಡ್ಗವನ್ನು ನೀಡಿ "ರಾಮಸೇತುವಿನ ನಡುವೆ ನಿನ್ನ 'ಜಯಸ್ತಂಭ'ವನ್ನು ನಿಲ್ಲಿಸು" ಎಂಬ ಹೇಳಿಕೆ ಬಂದಿದೆ. ಹಾಗೆಯೇ ವಿಜಯನಗರದ ಶಾಸನಗಳಲ್ಲಿ[೭] ತಾಮ್ರಪರ್ಣಿಯಲ್ಲಿ ಜಯಸ್ತಂಭವನ್ನು ಹಾಕಿಸಿದ ಉಲ್ಲೇಖ ಬರುತ್ತದೆ.

ಈ ಹಿನ್ನೆಲೆಯಲ್ಲಿ, ರಾಜರು ತಮ್ಮ ವಿಜಯದ ಸ್ಮಾರಕವಾಗಿ ಒಂದು ಪ್ರದೇಶವನ್ನು ಗೆದ್ದಾಗ ಜಯಸ್ತಂಭಗಳನ್ನು ನಿಲ್ಲಿಸುತ್ತಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಇಂತಹ ಉಲ್ಲೇಖಗಳು ಅನೇಕ ಶಾಸನಗಳಲ್ಲಿ* ಹಾಗೂ ಸಂಸ್ಕೃತ ಕೃತಿಗಳಲ್ಲಿ ಕಂಡು ಬಂದರೂ ವಾಸ್ತವವಾಗಿ ದೊರೆತಿರುವುದು ಅಪರೂಪ. ಸಮುದ್ರಗುಪ್ತನ ಸ್ತಂಭ ಶಾಸನ, ಮೂರನೇ ಕೃಷ್ಣನ ಜೂರಾ ಪ್ರಶಸ್ತಿಗಳು ವಿಷ್ಣುವರ್ಧನನ ಶಾಸನ** ಇಂತಹ ಗುಂಪಿಗೆ ಸೇರಿಸಬಹುದಾದ ಶಾಸನಗಳಾಗಿವೆ. ಪ್ರಸ್ತುತ ತಮಿಳುನಾಡಿನಲ್ಲಿ ದೊರೆಯುವ ಈ ಗುಂಪಿಗೆ ಸೇರಿಸಬಹುದಾದ ಶಾಸನವೊಂದು[೮] ಕಂಚಿಯ ರಾಜಸಿಂಘೇಶ್ವರ ದೇವಾಲಯದ ಕಂಬದಲ್ಲಿದೆ. ಕಾಲದ ಉಲ್ಲೇಖವಿಲ್ಲದ ಈ ಶಾಸನವನ್ನು ವಿದ್ವಾಂಸರು ಬಾದಾಮಿ ಚಲುಕ್ಯರ ಇಮ್ಮಡಿ ವಿಕ್ರಮಾದಿತ್ಯನ ಕಾಲದ್ದೆಂದು ಅಭಿಪ್ರಾಯಪಟ್ಟಿರುತ್ತಾರೆ. ಲಿಪಿ ದೃಷ್ಟಿಯಿಂದ ಈ ಶಾಸನವನ್ನು ಇಮ್ಮಡಿ ಪುಲಿಕೇಶಿಯ ಮಗನಾದ ಮೊದಲ ವಿಕ್ರಮಾದಿತ್ಯನ ಕಾಲಕ್ಕೂ ಅನ್ವಯಿಸಬಹುದಾಗಿದೆ. ಈತನ ಆಳ್ವಿಕೆಯ ಕಾಲ ಕ್ರಿ.ಶ. ೬೫೫ ರಿಂದ ೬೮೦. ಚಲುಕ್ಯ ವಲ್ಲಭೇಶ್ವರನಾದ ವಿಕ್ರಮಾದಿತ್ಯನು ಕಂಚಿಯನ್ನು ಗೆದ್ದು, ರಾಜಸಿಂಘೇಶ್ವರ ದೇವಾಲಯದ ಐಶ್ವರ್ಯವನ್ನು ಪರಿಶೀಲಿಸಿ ಮತ್ತೆ ಮರಳಿ ಆ ದೇವರಿಗೆ ದತ್ತಿ ಬಿಟ್ಟಿರುವ ವಿವರವನ್ನು ಶಾಸನ ನೀಡುತ್ತದೆ. ಈ ಶಾಸನವನ್ನು ವಲ್ಲಭದುರ್ಜಯನೆಂಬ ಅಧಿಕಾರಿಯ ಆಜ್ಞೆಯ ಮೇರೆಗೆ ಅನಿವಾರಿತ ವಲ್ಲಭನೆಂಬುವನಿಂದ ಲಿಖಿತವಾಯಿತೆಂದು ತಿಳಿದುಬರುತ್ತದೆ. ಸದ್ಯದ ಮಟ್ಟಿಗೆ ಈ ಶಾಸನವು ತಮಿಳುನಾಡಿನಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಕನ್ನಡ ಶಿಲಾಶಾಸನ. ಇದರಲ್ಲಿ ಉಲ್ಲೇಖಿತವಾಗಿರುವ ಅಧಿಕಾರಿಗಳ ಹೆಸರುಗಳು ವಾಸ್ತವವಾಗಿ ಮೊದಲನೆಯ ವಿಕ್ರಮಾದಿತ್ಯನಿಗಿದ್ದ ಬಿರುದುಗಳನ್ನೇ ಸೂಚಿಸುತ್ತದೆ. ಕರ್ನಾಟಕದ ಅರಸರ ಶೌರ್ಯವನ್ನಷ್ಟೇ ಅಲ್ಲದೇ ಅವರ ಔದಾರ್ಯವನ್ನೂ ಈ ಶಾಸನವು ಪ್ರತಿಬಿಂಬಿಸುತ್ತದೆ.

* * *

---

೭ *SII*, Vol.XXIV, No.411

* ಬೆಳಗಾವಿ ಜಿಲ್ಲೆಯ ರಾಯಬಾಗ್‌ನ ವೀರಗಲ್ಲೊಂದರಲ್ಲಿ ಆರನೇ ವಿಕ್ರಮಾದಿತ್ಯನು ಮಾಳವದ ಮೇಲೆ ದಂಡೆತ್ತಿ ಹೋಗಿ ಅಲ್ಲಿನ ಅರಸು ಉದಯಿಯನ್ನು (ಉದಯಾದಿತ್ಯನನ್ನು) ಸೋಲಿಸಿ ಧಾರೆಯನ್ನು (ಧಾರಾನಗರ) ಸುಟ್ಟು, ಜಯಸ್ತಂಭವನ್ನು ನಿಲ್ಲಿಸಿದನೆಂಬ ವಿವರವಿದೆ. (ಡಾ। ಕೆ.ವಿ.ರಮೇಶ, ಕರ್ನಾಟಕ ಶಾಸನ ಸಮೀಕ್ಷೆ, ಬೆಂಗಳೂರು, ೧೯೭೧, ಪು.೪೩).

** *EC.*, Vol.X, ತಿ.ನರಸೀಪುರ, ೧೫೧ ಮುಂತಾದವು.

೮. *EI*, Vol.III, p.359

೩.೦ ಪ್ರಾದೇಶಿಕ ಆಡಳಿತ ವಿಭಾಗಗಳು ಮತ್ತು ಭೌಗೋಳಿಕ ವಿವರ

ಪ್ರದೇಶವೊಂದನ್ನು ಆಳುವುದಕ್ಕಾಗಿ, ಅನೇಕ ವಿಭಾಗಗಳಾಗಿ ವಿಂಗಡಿಸಿಕೊಳ್ಳುವುದು ಪ್ರಾಚೀನ ಕಾಲದಿಂದಲೂ ಪ್ರಚಲಿತವಿರುವ ಪದ್ಧತಿ. ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಇಂತಹ ಅನೇಕ ಪ್ರಾದೇಶಿಕ ವಿಭಾಗಗಳ ಪ್ರಸ್ತಾಪ ಬಂದಿದೆ. ಗಡಿಪ್ರಾಂತ್ಯದಲ್ಲಿ ದೊರೆಯುವ ಪ್ರಾಚೀನತಮ ಶಾಸನಗಳೆಂದರೆ ತಲಕಾಡಿನ ಗಂಗರವು. ಇವರು ಗಂಗವಾಡಿ ೯೬೦೦೦ ಪ್ರದೇಶದ ಒಡೆಯರು. ಗಂಗವಾಡಿಗೆ ಸೇರಿದ ಗಂಗಲಱುಸಾಸಿರ, ಮೊರಸುನಾಡು, ಪುದಕನ್ದ ವಿಷಯ, ಕೊಂಗುನಾಡು, ಪೊರಮನ್ದನಾಡು ಮುಂತಾದವು ಈ ಪ್ರದೇಶದ ಶಾಸನಗಳಲ್ಲಿ[೧] ಉಕ್ತವಾಗಿವೆ. ಕ್ರಿ.ಶ. ೮ನೇ ಶತಮಾನದಲ್ಲಿ ಗಂಗನಾಡು, ಪೊರಮಲೆನಾಡು, ಕೊವೂರ್ನಾಡು, ತಾಯಲುನಾಡು, ಮಿಗೆನಾಡು, ಪೊನ್ನನಾಡು, ಮೇಳಲನಾಡು, ವೆಂಗಲನಾಡುಗಳಲ್ಲದೆ ತೇಕಲ್‌ನಾಡೆಳ್ಪತ್ತು ಮುಂತಾದ ಪ್ರಾದೇಶಿಕ ವಿಭಾಗಗಳು ಬಾಣರ ವಶದಲ್ಲಿದ್ದಂತೆ ತಿಳಿದುಬರುತ್ತದೆ.[೨] ನೊಳಂಬರ ಶಾಸನಗಳಲ್ಲಿ[೩] ತಗಡೂರುನಾಡು, ಪೊರಮಲೆನಾಡು, ಗಂಗಅರುಸಾಸಿರ ಮುಂತಾದವು ಉಲ್ಲೇಖಿತವಾಗಿವೆ. ಚೋಳರ ಕನ್ನಡ ಶಾಸನಗಳಲ್ಲಿ ನಿಗರಿಲಿ ಚೋಳಮಂಡಲ, ಪೊಲಮನ್ದನಾಡು[೪] ಎಂಬುವು ಪ್ರಸ್ತಾಪಗೊಂಡಿವೆ. ಹದಿನಾಲ್ಕನೆಯ ಶತಮಾನದ ಶಾಸನವೊಂದರಲ್ಲಿ[೫] ಎರಮಂಡಲ ನಾಡಿನ ಉಲ್ಲೇಖ ಬಂದಿದೆ. ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಿಂದ ವಿಜಯನಗರದ ಕರ್ನಾಟಕಾಧೀಶರ ಆಳ್ವಿಕೆಯ ಕುರುಹುಗಳಾಗಿ ಅನೇಕ ಶಾಸನಗಳು ಕಂಡುಬಂದಿವೆ. ಕುಮಾರ ವೀರಕಂಪಣ ಒಡೆಯನ ಮಾಂಡಲಿಕತನದ ಅನೇಕ ಶಾಸನಗಳಲ್ಲಿ ಮುಳವಾಯಿ ರಾಜ್ಯ,[೬] ಮೊರಸುನಾಡುಗಳ[೭] ಉಲ್ಲೇಖ ಬಂದಿದೆ.

ಜಯಗೊಂಡ ಚೋಳಮಂಡಲ,[೮] ಕೀಳ್‌ಅಳಿಶುಕಟ್ಟುಪಟ್ಟು[೯], ವಳದಿಲಂಪಟಿನ, ಚಾವಡಿ,[೧೦] ಸಾಳುವನಾಯಕನ ಸೀಮೆ,[೧೧] ಅಪ್ಪರ್‌ಪಿಳ್ಳೆ ಸೀಮೆ,[೧೨] ತಿರುಚಿನಾಪಳ್ಳಿ ಚಾವಡಿ, ತೆಂಕರಾಜಗಂಭೀರ ವಳನಾಡು, ರಾಜರಾಜ ವಳನಾಡು, ಮಳನಾಡು,[೧೩] ತಿರುವಡಿಯ ರಾಜ್ಯ, ಮೆಣಸಲೆನಾಡು,

---

೧. *EI*, Vol.XXVII, p.145, *ARIE*, 1969-70, B 307

೨. *SII*, Vol. VII, No.2

೩. *ARIE*, 1967-68, B 242, *SII*, Vol. IX, No.38

೪. ಅದೇ, 1969-70, B 270

೫. ಅದೇ, 1969-70, B 298

೬. *SII*, Vol. VII.No.15

೭. *ARIE*, 1975-76 B, 214

೮. *SII*, Vol.IX, No.499

೯. *ARIE*, 1920-21 B, 374

೧೦. *SII*, Vol. VII, No.789

೧೧. *ARIE*, 1955-56 B, 318

೧೨. ಅದೇ

ತೊಂಡಮಂಡಲಂ,[೧೪] ಮುಂತಾದವು ಪಶ್ಚಿಮಘಟ್ಟಗಳ ಆಚಿನ ಪ್ರದೇಶಗಳಲ್ಲಿನ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ಪ್ರಾದೇಶಿಕ ವಿಭಾಗಗಳಾಗಿವೆ.

ಡೆಂಕಣಿಕೋಟೆಯು ಮುಳವಾಗಿಲು ಚಾವಡಿಗೆ[೧೫] ಸೇರಿದ್ದ ನಾಯಕತನದ ಸ್ಥಳವೆಂದು ಶಾಸನವೊಂದರಿಂದ ತಿಳಿದು ಬರುತ್ತದೆ. ಬೆಂಗಳೂರು ವಳಿತದ ಗುಮ್ಮಳಾಪುರ ಹೋಬಳಿ,[೧೬] ಮಂಜಿನಾಡ ಪೆಣ್ಣಾಗರಸೀಮೆ, ಕೂತಪಾಡಿ[೧೭], ಬಡಗಕೊಂಗನಾಡ ಗಾಜಿನೂರಸ್ಥಳ[೧೮], ಧಾರಾಪುರ ಚಾವಡಿಯ[೧೯] ಭಾ... ಹಳ್ಳಿ; ಕಾರಿಮಂಗಲ ಸೀಮೆಯ ತಗಡನಾಡು, ಕಾರಿಮಂಗಲ, ಪೆಂಣಾಗರ[೨೦]; ಮೊರಸುನಾಡಿನ ಡೆಂಕಣಿಕೋಟೆ ಸ್ಥಳದ ಡೆಂಕಣಿಕೋಟೆ[೨೧] ಎಂಬಿವೇ ಮುಂತಾದ ಆಡಳಿತ ವಿಭಾಗಗಳು, ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಕಂಡುಬಂದಿವೆ. ಕ್ರಿ.ಶ.೧೭ನೇ ಶತಮಾನ ಅಂದರೆ ಮೈಸೂರು ಅರಸ ರಣಧೀರಕಂಠೀರವ ನರಸರಾಜ ಒಡೆಯರ ಕಾಲದಿಂದೀಚೆಗೆ, ಆ ವಂಶೀಯರ ಅನೇಕ ಶಾಸನಗಳು ಈ ಪ್ರದೇಶದಲ್ಲಿ ಕಂಡುಬಂದಿವೆ. ಅವರ ಶಾಸನಗಳಲ್ಲಿ ಉಕ್ತವಾಗಿರುವ ಗಡಿನಾಡಿನ ಆಡಳಿತ ವಿಭಾಗಗಳು ಮತ್ತು ಅವುಗಳಲ್ಲಿ ಅಂತರಗತವಾಗಿದ್ದ ಊರುಗಳ ವಿವರ ಈ ರೀತಿ ಇದೆ.

೧. ವಾಮಲೂರು ಸ್ಥಳದ ಮಲ್ಲಿಕೋಂಟೆಗೆ ಸೇರಿದ ವೆಳಗೌಂಡನಪಟ್ಟಿ, ನಾಡರೆಡ್ಡಿ ಪಟ್ಟಿ, ಮಲಯರಾಯಪಟ್ಟಿ.[೨೨]

೨. ಯೇಣೂರು ಕಣಿವೆಯ ಕೆಳಗಣ ಉಡವಂಕನಾಡ[೨೩] ಸತ್ಯಮಂಗಲದ ಸ್ಥಳಕ್ಕೆ ಸಲ್ಲುವ ಕರವಳಿ ಹೋಬಳಿಯ ಬೆಸ್ತಪಾಳ್ಯಕ್ಕೆ ಪ್ರತಿನಾಮ ಕುಮಾರಪುರ ಗ್ರಾಮ.

೩. ವೀರಭದ್ರದುರ್ಗದ ಸೀಮೆಯ[೨೪] ಕುಂನೆಕೊಳದ ಹೋಬಳಿ ಪಾಪರಪಟ್ಟಿ, ಯಟಗಾನಹಳ್ಳಿ, ಆಚಾರಹಳ್ಳಿ, ಕಮಲನಾಯಕನಹಳ್ಳಿ, ಗುಲ್ಲಪ್ಪನಾಯಕನಹಳ್ಳಿ, ಮಾದಹಳ್ಳಿ, ಬೇಲೂರು, ವರತಹಳ್ಳಿ, ಬೆಳಚಾರಹಳ್ಳಿ, ಸಕುಲಹಳ್ಳಿ, ವಾಸಲಿಹಳ್ಳಿ, ನಲಪನಾಯಕನಹಳ್ಳಿ.

೪. ಶಂಖಗಿರಿ ಹೋಬಳಿಗೆ[೨೫] ಸೇರಿದ ತಗುಡಪ್ಪಾಡಿ (ಅದಕ್ಕೆ ಸೇರಿದ ೧೪ ಉಪ ಗ್ರಾಮಗಳು)

---

೧೩. *SII*, Vol.XXIV, No.330
೧೪. ಅದೇ, No.411
೧೫. *SII*, Vol.VII.No.15
೧೬. ಶರಣ ಸಾಹಿತ್ಯ, ಸಂ. ೨೧-೨, ೩. ಪು. ೮೪,೮೫
೧೭. *SII*, Vol. VII, No.15
೧೮. ಅದೇ. Vol.IX, No.545 & 546
೧೯. *SII*, IX, No.644
೨೦. *SII*, Vol.VII, No.5
೨೧. *ARIE*, 1975-76, B 214
೨೨. ಅದೇ, 1955-56, B 317
೨೩. *SII*, Vol. IX, No.703
೨೪. ಅದೇ, Vol. IX, No.704
೨೫. *ARIE*, 1942-43, A 9

೫. ಪೊಸೂರು ಸೀಮೆಯ[೨೬] ಗುಮ್ಮಳಾಪುರ ಹೋಬಳಿ ಉಳಮಾರನಹಳ್ಳಿ, ಹೊನ್ನಹಳ್ಳಿ ಮತ್ತು ಉಪ್ಪಾರಹಳ್ಳಿ.

೬. ಮೈಸೂರು ರಾಜ್ಯದ ಮಂಜಿನಾಡಿನ ವನವಾಸಿ.[೨೭]

ಈ ಮೇಲೆ ಪ್ರಸ್ತಾಪಿತವಾಗಿರುವ ಪ್ರಾದೇಶಿಕ ಆಡಳಿತ ವಿಭಾಗಗಳಲ್ಲಿ ಅನೇಕವನ್ನು ಗುರುತಿಸಬಹುದಾಗಿದೆ. ಗಂಗರ ಕಾಲದಿಂದ ವಿಜಯನಗರದ ಅರಸರ ಕಾಲದವರೆಗಿದ್ದ **ಮೊರಸುನಾಡೆಂಬ ಗಂಗ ಅಱುಸಾಸಿರ ಭಾಗವು**, ಇಂದಿನ ಕರ್ನಾಟಕದ ಕೋಲಾರ ಜಿಲ್ಲೆಯ ಮಾಲೂರು, ಬೆಂಗಳೂರು ಜಿಲ್ಲೆಯ ಹೊಸಕೋಟೆ ಆನೇಕಲ್ಲು ತಾಲೂಕಿನ ಭಾಗಗಳು ಹಾಗೂ ಇಂದಿನ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ಮತ್ತು ಡೆಂಕಣಿಕೋಟೆ ತಾಲೂಕು ಪ್ರದೇಶಗಳ ಹಲವು ಭಾಗಗಳನ್ನೊಳಗೊಂಡಂತೆ ಇದ್ದ ಒಂದು ಪ್ರಾಚೀನ ಪ್ರಾದೇಶಿಕ ವಿಭಾಗ, ಗಂಗಅಱುಸಾಸಿರದ ವ್ಯಾಪ್ತಿ ಇದನ್ನೂ ಒಳಗೊಂಡಂತೆ ಮತ್ತೂ ವಿಸ್ತಾರವಾಗಿದ್ದಿರಬೇಕೆಂದು ತೋರುತ್ತದೆ. ಇದು ಬಹುತೇಕವಾಗಿ ನೊಳಂಬರ ಆಳ್ವಿಕೆಯಲ್ಲಿಯೇ ಇದ್ದ ಬಗ್ಗೆ ಶಾಸನ ಆಧಾರಗಳಿವೆ.

ತಗಡೂರುನಾಡು ಇಂದಿನ ಧರ್ಮಪುರಿಯ ಸುತ್ತಮುತ್ತಲ ಪ್ರದೇಶವಾಗಿದ್ದಿತು. ತಗಡೂರು ಎಂಬುದು ಧರ್ಮಪುರಿಯ ಪೂರ್ವನಾಮವಾಗಿತ್ತು.

ತೇಕಲನಾಡು ಇಂದಿನ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ತೇಕಲ್ಲನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಮುತ್ತಲ ೨೦ ಗ್ರಾಮಗಳನ್ನು ಒಳಗೊಂಡಿದ್ದಂತಹ ಒಂದು ವಿಭಾಗ. ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲೂಕಿನ ಹಲವು ಗ್ರಾಮಗಳು ಈ ಪ್ರಾದೇಶಿಕ ವಿಭಾಗದಲ್ಲಿ ಅಂತರಗತವಾಗಿದ್ದವೆಂದು ಹೇಳಬಹುದಾಗಿದೆ.

ತೊಂಡಮಂಡಲ ಎಂಬುದು ಪಲ್ಲವರ ಆಳ್ವಿಕೆಯ ಪ್ರದೇಶವಾಗಿದ್ದಿತು. ಇದು ಸುವರ್ಣ ನದಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಮಧ್ಯದ ಪೂರ್ವಕಡಲಿನವರೆಗೂ ವ್ಯಾಪಿಸಿದ್ದ ಪ್ರದೇಶ. ಇಂದಿನ ಆಂಧ್ರಪ್ರದೇಶದ ದಕ್ಷಿಣ ಗಡಿ, ತಮಿಳುನಾಡಿನ ತಿರುವಳ್ಳುರ್, ಕಾಂಚೀಪುರಂ ಜಿಲ್ಲೆಗಳು ಹಾಗೂ ವೆಲ್ಲೂರು, ತಿರುವಣ್ಣಾಮಲೆ ಜಿಲ್ಲೆಗಳ ಸ್ವಲ್ಪ ಭಾಗಗಳನ್ನು ಒಳಗೊಂಡಿದ್ದಂಥ ಪ್ರದೇಶವಾಗಿದ್ದಿತು.

ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ, ಚಾಮರಾಜನಗರ ತಾಲೂಕುಗಳ ಹಲವು ಭಾಗಗಳು ಹಾಗೂ ಅವುಗಳಿಗೆ ಅಂಟಿಕೊಂಡಂತಿರುವ ಈರೋಡ್ ಜಿಲ್ಲೆಯ ಸತ್ಯಮಂಗಲ, ಗೋಪಿಚೆಟ್ಟಿಪಾಳ್ಯ ಮುಂತಾದ ಪ್ರದೇಶಗಳು **ಬಡಗಕೊಂಗ ನಾಡಿನಲ್ಲಿ** ಅಂತರಗತವಾಗಿದ್ದವೆಂದು ಹೇಳಬಹುದಾಗಿದೆ.

ಚೋಳರ ಆಳ್ವಿಕೆಯ ಕಾಲದಲ್ಲಿ **ದಡಿಗಾವಳಿ** ಪ್ರದೇಶಕ್ಕೆ **ವಿಕ್ರಮಚೋಳಮಂಡಲ** ಎಂಬ ಹೆಸರಿದ್ದಿತು. ಅದೇ ಮುಂದೆ **ನಿಗರಿಲಿಚೋಳಮಂಡಲ** ಎಂದು ನಾಮಾಂತರಗೊಂಡಿತು. ಕರ್ನಾಟಕದ ಬೆಂಗಳೂರು, ಕೋಲಾರ ಜಿಲ್ಲೆಯ ಹಲವು ಭಾಗಗಳನ್ನು ಒಳಗೊಂಡಂತೆ ತಮಿಳುನಾಡಿನ ವೆಲ್ಲೂರು, ಕೃಷ್ಣಗಿರಿ, ಧರ್ಮಪುರಿ ಜಿಲ್ಲೆಗಳ ಸ್ವಲ್ಪ ಪ್ರದೇಶಗಳು ಇದರಲ್ಲಿ ಅಂತರಗತವಾಗಿದ್ದವೆನ್ನಬಹುದು.

ಎರಮಂಡಲ ಎಂಬುದು ಪ್ರಾಯಶಃ ಆನೇಕಲ್ ತಾಲೂಕಿನ ಶಾಸನಗಳಲ್ಲಿ ಉಕ್ತವಾಗಿರುವ ಎಱುಮರೈ / ಹೆಮರೆನಾಡಿನ ಪರ್ಯಾಯ ರೂಪವೆನ್ನಬಹುದು. ಮಾಶಂಡಿನಾಡಿನ ಭಾಗವಾದ ಎಱುಮರೈ

೨೬. ಅದೇ, 1971-72, B 197

೨೭. ಅದೇ, 1971-72, B 197 & *TLIMP*, 135 C.P.No. 195 of Sewell's list.

(ಎಮರೆ)ನಾಡು: ಆನೇಕಲ್ ತಾಲೂಕಿನ ಸರ್ಜಾಪುರ, ಹೊಸೂರು ತಾಲೂಕಿನ ಬಾಗಲೂರು ಪ್ರದೇಶಗಳನ್ನು ಒಳಗೊಂಡಿದ್ದಂಥ ವಿಭಾಗ ಇದಾಗಿದ್ದಿತು.

ವಿಜಯನಗರ ಕಾಲದ ಮುಳವಾಯಿ ಅಥವಾ **ಮುಳವಾಗಿಲು** ರಾಜ್ಯವು ಅವರ ಸಾಮ್ರಾಜ್ಯದ ಒಂದು ಮುಖ್ಯ ರಾಜ್ಯವಾಗಿದ್ದಿತು. ಇದರಲ್ಲಿ ಕೋಲಾರ, ಬೆಂಗಳೂರು ಜಿಲ್ಲೆಯ ಹಲವು ಪ್ರದೇಶಗಳನ್ನೊಳಗೊಂಡಂತೆ ಕೃಷ್ಣಗಿರಿ ಜಿಲ್ಲೆಯ ಕೃಷ್ಣಗಿರಿ, ಹೊಸೂರು, ಡೆಂಕಣಿಕೋಟೆ, ರಾಯಕೋಟೆಯ ಸುತ್ತಮುತ್ತಲ ಪ್ರದೇಶಗಳು ಒಳಗೊಂಡಿದ್ದವು. ಇದರಲ್ಲಿ ಇಂದಿನ ಧರ್ಮಪುರಿ ಜಿಲ್ಲೆಯ ಪೆನ್ನಾಗರದ ಸುತ್ತಮುತ್ತಲ ಪ್ರದೇಶವೇ **ಮಂಜಿನಾಡ ಪೆಣ್ಣಾಗರ ಸೀಮೆ**ಯಾಗಿದ್ದಿತು.

ಮೈಸೂರು ಅರಸರ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ಬಹುತೇಕ ಎಲ್ಲ ಪ್ರಾದೇಶಿಕ ವಿಭಾಗಗಳ ಕೇಂದ್ರಸ್ಥಳಗಳು ಇಂದಿಗೂ ಪ್ರಮುಖ ಸ್ಥಳಗಳಾಗಿರುವುದು ಕಂಡುಬರುತ್ತದೆ.

ಭೌಗೋಳಿಕವಾಗಿ ಕರ್ನಾಟಕದ ಗಡಿ ಜಿಲ್ಲೆಗಳಾದ ಕೋಲಾರ, ಬೆಂಗಳೂರು, ಮೈಸೂರು ಚಾಮರಾಜನಗರ ಜಿಲ್ಲೆಗಳು, ತಮಿಳುನಾಡಿನ ಕೃಷ್ಣಗಿರಿ, ಧರ್ಮಪುರಿ, ಸೇಲಂ, ಈರೋಡ್, ಕೊಯಮತ್ತೂರು, ನೀಲಗಿರಿ ಜಿಲ್ಲೆಗಳಿಗೆ ಹೊಂದಿಕೊಂಡಿವೆ. ಇವುಗಳಲ್ಲಿ ಕೃಷ್ಣಗಿರಿ, ಧರ್ಮಪುರಿ ಜಿಲ್ಲಾಪ್ರದೇಶವು ಮೊದಲಿಗೆ ಬಾಣರಸರ ಆಳ್ವಿಕೆಗೆ ಒಳಪಟ್ಟಿತ್ತು. ಪ್ರಸ್ತುತ ಬಾರಾಮಹಲ್ ಮತ್ತು ಬಾಲಾಘಾಟ್ ಎಂದು ವ್ಯವಹರಿಸುವ ಪೂರ್ವಘಟ್ಟಗಳ ಪಶ್ಚಿಮಕ್ಕಿರುವ, ಕರ್ನಾಟಕಕ್ಕೆ ಹೊಂದಿಕೊಂಡ ಎತ್ತರವಾದ ಪ್ರಸ್ಥಭೂಮಿ ಪ್ರದೇಶವೇ ಇದಾಗಿದೆ. ಮೈಸೂರು ಜಿಲ್ಲೆಗೆ ಅಂಟಿಕೊಂಡಿರುವ ಸೇಲಂ, ಈರೋಡ್, ಕೊಯಮತ್ತೂರು, ನೀಲಗಿರಿ ಜಿಲ್ಲೆಯ ಉತ್ತರ ಭಾಗಗಳು **ಪುನ್ನಾಟ** ಮತ್ತು **ಕೊಂಗುನಾಡುಗಳ** ಭಾಗಗಳಾಗಿದ್ದವು. ಪುನ್ನಾಟ ಮತ್ತು ಕೊಂಗುಪ್ರದೇಶಗಳು ನೆರೆಹೊರೆಯ ಪ್ರದೇಶಗಳೆಂಬ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ಪೂರ್ವಘಟ್ಟಗಳ ಸರಣಿಗೆ ಸೇರಿದ ಜಾವಡಿ, ಶೆವ್ರಾಯ್, ಕರಿರಾಯನ್ ಮತ್ತು ಪಚ್ಚೆಮಲೆ ಬೆಟ್ಟಗಳಿಗೆ ಪಶ್ಚಿಮೋತ್ತರವಾಗಿರುವ ಪ್ರದೇಶ ಅಂದರೆ ಬಾರಾಮಹಲ್ ಮತ್ತು ಬಾಲಾಘಾಟ್ ಎಂದು ಕರೆಯಲ್ಪಡುತ್ತಿರುವ ಪ್ರಸ್ಥಭೂಮಿಯಾಗಿದೆ. ಈ ಪ್ರದೇಶಗಳಲ್ಲೇ, ಮೇಲೆ ವಿವರಿಸಿದ ಸಹಜ ಕನ್ನಡ ಪ್ರದೇಶಕ್ಕೆ ಸಂಬಂಧಿಸಿದ ನಾಡುಗಳು ಅಂತರಗತವಾಗಿದ್ದವು.

ಮೂಲತಃ ಯಾವುದೇ ಒಂದು ನಾಡಿನ ಗಡಿಗಳನ್ನು ನಿರ್ಧರಿಸುವಲ್ಲಿ ನದಿಗಳು, ಬೆಟ್ಟಗುಡ್ಡಗಳು ಇತ್ಯಾದಿ ನೈಸರ್ಗಿಕ ಅಡಚಣೆಗಳು ನಿರ್ಣಾಯಕ ಅಂಶಗಳಾಗಿರುತ್ತವೆ. "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಎಂಬ ಕವಿರಾಜಮಾರ್ಗಕಾರನ ಹೇಳಿಕೆಯು ಕನ್ನಡನಾಡಿನ ದಕ್ಷಿಣ ಎಲ್ಲೆ 'ಕಾವೇರಿ' ಎಂದು ಸ್ಪಷ್ಟಪಡಿಸಿದೆ. ಮೇಲೆ ಪ್ರಸ್ತಾಪಿಸಿರುವ ಸಹಜ ಕನ್ನಡ ಪ್ರದೇಶವು ಧರ್ಮಪುರಿ, ಶಾಲ್ಯ (ಸೇಲಂ) ಮತ್ತು ಪೆರಿಯಾರ್ ಜಿಲ್ಲೆಗಳನ್ನು ಒಳಗೊಂಡಿದ್ದು, ಅವನ್ನು ಪ್ರತ್ಯೇಕಿಸುವ ಜಾವಡಿ, ಶೆವ್ರಾಯ್, ಪಚ್ಚೆಮಲೆ ಮತ್ತು ನೀಲಗಿರಿ ಬೆಟ್ಟದ ಸಾಲುಗಳು ಗಮನ ಸೆಳೆಯುತ್ತವೆ. ಈ ಪೂರ್ವ ಪಶ್ಚಿಮ ಘಟ್ಟಗಳು ಸೇರುವ ಸರಹದ್ದಿನಲ್ಲಿ ಹರಿಯುವ ಕಾವೇರಿ ನದಿ, ಅಂದರೆ ಶಾಲ್ಯದ ದಕ್ಷಿಣಕ್ಕಿರುವ ಪಚ್ಚೆಮಲೆಬೆಟ್ಟಗಳ ತಪ್ಪಲಿನವರೆಗಿನ ಪ್ರದೇಶವನ್ನೇ ಕವಿರಾಜಮಾರ್ಗಕಾರನು ಹೇಳಿರುವ ದಕ್ಷಿಣದ ಎಲ್ಲೆಯಾಗಿದೆ. ಈ ಪ್ರದೇಶದ ಹೊರಗಿನ ಭಾಗ ಅಂದರೆ ಘಟ್ಟದ ಪೂರ್ವ ದಕ್ಷಿಣ ದಿಸೆಗಿರುವ ಕೆಳಗಿನ ಭಾಗಗಳನ್ನು ತಾಲಾಘಾಟ್ ಎಂದು ಕರೆಯಲ್ಪಡುತ್ತಿದ್ದು, ತಿರುಚಿನಾಪಳ್ಳಿ, ತಿರುವಣ್ಣಾಮಲೆ, ಕೊಯಮತ್ತೂರು ಜಿಲ್ಲೆಯ ದಕ್ಷಿಣಭಾಗಗಳು ಅದರ ವ್ಯಾಪ್ತಿಯಲ್ಲಿ ಬರುತ್ತವೆ.

* * *

೪.೦ ರಾಜಕೀಯ ಮಹತ್ವ

ರಾಜಕೀಯವಾಗಿ ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಚಲುಕ್ಯ, ಗಂಗ, ಬಾಣ, ರಾಷ್ಟ್ರಕೂಟ, ನೊಳಂಬ, ಚೋಳ, ಕಲ್ಯಾಣದ ಚಾಲುಕ್ಯ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಆಳ್ವಿಕೆಯ ಕುರುಹುಗಳು ಕಂಡುಬಂದಿರುತ್ತದೆ.

೪.೧ ಚಲುಕ್ಯರು

ಕರ್ನಾಟಕದ ಇತಿಹಾಸದಲ್ಲಿ ಬಾದಾಮಿ ಚಲುಕ್ಯರದು ಬಹಳ ದೊಡ್ಡ ಹೆಸರು. ಇವರ ಕೀರ್ತಿ ದಕ್ಷಿಣಭಾರತದಂತೆ ಉತ್ತರ ಭಾರತದಲ್ಲೂ ಹರಡಿತ್ತು. ಈ ವಂಶದ ಇಮ್ಮಡಿ ಪುಲಿಕೇಶಿ ಬಹು ಪರಾಕ್ರಮಶಾಲಿ ದೊರೆ. ಈತನು ಕದಂಬ, ಆಳುಪ, ಕೊಂಕಣದ ಮೌರ್ಯ, ಗುಜರಾತ್, ಮಾಳವಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ, ಸಕಲೋತ್ತರಾಪಥೇಶ್ವರನೆಂದು ಬಿರುದನ್ನು ಧರಿಸಿದ್ದ ಕನೋಜಿನ ಶ್ರೀಹರ್ಷನನ್ನು ನರ್ಮದೆಯಿಂದ ಈಚೆಗೆ ಬಾರದಂತೆ ತಡೆದು ಹಿಮ್ಮೆಟ್ಟಿಸಿದ್ದ. ನಂತರದಲ್ಲಿ ವೇಂಗಿಮಂಡಲ ಪ್ರದೇಶವನ್ನು ಗೆದ್ದನು. ಹೀಗೆ ಗೆದ್ದ ಪ್ರದೇಶಗಳಲ್ಲಿ ತನ್ನ ಸಂಬಂಧಿಗಳಾದ ಬಪ್ಪುರ ಕುಲದ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನಿಗೆ, ರೇವತಿ ದ್ವೀಪಕ್ಕೆ ಸೇರಿದ ಮಂಡಲಗಳ ಆಡಳಿತವನ್ನು ವಹಿಸಿದನು. ತನ್ನ ಒಬ್ಬ ಸೋದರನಾದ ಧರಾಶ್ರಯ ಜಯಸಿಂಹನನ್ನು ನಾಸಿಕ್ ಮತ್ತು ಸುತ್ತಲಿನ ಪ್ರದೇಶಗಳ ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದ. ಇನ್ನೊಬ್ಬ ಸೋದರನಾದ ಕುಬ್ಜ ವಿಷ್ಣುವರ್ಧನನನ್ನು ವೇಂಗಿಮಂಡಲದ ಅಧಿಪತಿಯನ್ನಾಗಿ ಮಾಡಿದ. ದಕ್ಷಿಣಕ್ಕೆ ತನ್ನ ದಿಗ್ವಿಜಯ ಯಾತ್ರೆಯನ್ನು ಮುಂದುವರಿಸಿ ಕಂಚಿಯ ಪಲ್ಲವ ಮಹೇಂದ್ರನನ್ನು ಸೋಲಿಸಿದನು. ಹೀಗೆ ಪುಲಿಕೇಶಿಯ ಕೀರ್ತಿ ಭಾರತದಾದ್ಯಂತ ಹಾಗೂ ದೇಶದ ಹೊರಗೂ ಹಬ್ಬಿದಾಗ – ಪಲ್ಲವ ಮಹೇಂದ್ರವರ್ಮನ ಮಗ ನರಸಿಂಹನು ಪಟ್ಟಕ್ಕೆ ಬಂದ ಕೂಡಲೇ ಅನಿರೀಕ್ಷಿತವಾಗಿ ಬಾದಾಮಿಯ ಮೇಲೆ ಧಾಳಿಮಾಡಿ ಪುಲಿಕೇಶಿಯನ್ನು ಸೋಲಿಸಿದನು. ಅಂದಿನಿಂದ ಸುಮಾರು ಹದಿಮೂರು ವರ್ಷಗಳ ಕಾಲ. ಚಲುಕ್ಯರ ಇತಿಹಾಸದಲ್ಲಿ ಕತ್ತಲೆಯ ಕಾಲ ಕ್ರಿ.ಶ.೬೫೫ರಲ್ಲಿ ಪಟ್ಟವೇರಿದ ಪುಲಿಕೇಶಿಯ ಓರ್ವ ಮಗ ವಿಕ್ರಮಾದಿತ್ಯನು ಪಲ್ಲವರನ್ನು ತನ್ನ ರಾಜ್ಯದಿಂದ ಹೊರಗೆ ಓಡಿಸಿದ್ದಲ್ಲದೆ ಪಲ್ಲವರ ರಾಜಧಾನಿಯಾದ ಕಂಚಿಯನ್ನು ಆಕ್ರಮಿಸಿದ. ಈ ವಿಷಯವನ್ನು ಬಿಂಬಿಸುವ ಶಾಸನವೊಂದು ಕಂಚಿಯ ರಾಜಸಿಂಹೇಶ್ವರ ದೇವಾಲಯದ ಕಂಬವೊಂದರಲ್ಲಿದ್ದು, ರಾಜನು, ರಾಜಸಿಂಹೇಶ್ವರದ ಧನವನ್ನು ಕಂಡು ಮತ್ತೆ ಅದನ್ನು ಆ ದೇವರಿಗೇ ದತ್ತಿಯಾಗಿ ನೀಡಿರುವ ವಿವರವನ್ನು ನೀಡುತ್ತದೆ. ಇತಿಹಾಸಕಾರರು ಈ ಸಾಧನೆಯನ್ನು ಇಮ್ಮಡಿ ವಿಕ್ರಮಾದಿತ್ಯನಿಗೆ ಆರೋಪಿಸಿರುವುದು ಕಂಡುಬರುತ್ತದೆ. ಕಾಲದ ಉಲ್ಲೇಖವಿಲ್ಲದ ಈ ಶಾಸನದ ಲಿಪಿ ವಿನ್ಯಾಸದ ಹಿನ್ನೆಲೆಯಲ್ಲಿ ಈ ಸಾಧನೆ ಮೊದಲ ವಿಕ್ರಮಾದಿತ್ಯನದೆಂದೇ ಹೇಳಬೇಕಾಗಿದೆ, ಅಲ್ಲದೆ ಅದೇ ಶಾಸನದಲ್ಲಿ ಉಲ್ಲೇಖಿತರಾಗಿರುವ ಅಧಿಕಾರಿಗಳು ಧರಿಸಿರುವ ಬಿರುದುಗಳು ಮೊದಲನೇ ವಿಕ್ರಮಾದಿತ್ಯನಿಗೆ ಸಂಬಂಧಿಸಿದವು ಎಂಬುದು ಗಮನಾರ್ಹ. ಬಿರುದುಗಳನ್ನು ತಮ್ಮ ಅಧೀನತೆಯ ಕುರುಹಾಗಿ ಅವನ ಅಧಿಕಾರಿಗಳು ಧರಿಸುತ್ತಿದ್ದುದು ಅಂದಿನ ಪದ್ಧತಿಯಾಗಿದ್ದಿತು. ಈ ವಿಜಯದ ನಂತರದಲ್ಲಿ ಚಲುಕ್ಯರು ಹಲವು ಬಾರಿ ಪಲ್ಲವರಿಂದ ಕಪ್ಪಕಾಣಿಕೆಗಳನ್ನು ಸಂಗ್ರಹಿಸಲು ದಂಡಯಾತ್ರೆಗಳನ್ನು ನಡೆಸಿರುವುದು ಕಂಡುಬರುತ್ತದೆ.

೪.೨ ಗಂಗರು

ಗಡಿನಾಡಿನ ಪ್ರಾಚೀನತಮ ಶಾಸನಗಳು ಈ ಮೊದಲೇ ಹೇಳಿರುವಂತೆ ಗಂಗ ವಂಶೀಯರವಾಗಿವೆ. ದಕ್ಷಿಣದಲ್ಲಿ ಪ್ರಬಲರಾಗಿದ್ದ ತಮಿಳರಸರ ರಾಜ್ಯಗಳೊಂದಿಗೆ ದಕ್ಷಿಣ ಕರ್ನಾಟಕವು ಸೇರದಂತೆ ಕರ್ನಾಟಕದ ಶ್ರೀರಕ್ಷೆಯಾಗಿ ನಿಂತವರು ಗಂಗರು. ಇವರು ವಿಶೇಷವಾದ ರಾಜನೀತಿ ನೈಪುಣ್ಯ ಪಡೆದಿದ್ದು ಕಾಲಕಾಲಕ್ಕೆ ಸರಿತೋರಿದ ರೀತಿಯಲ್ಲಿ ಮೈತ್ರಿ, ಸಮರ ಸಂದರ್ಭಗಳಲ್ಲಿ ಹೋರಾಟ ಮಾಡುತ್ತಾ ಬಹುಮಟ್ಟಿಗೆ ಯಶಗಳಿಸಿದವರು. ಅದರಿಂದಾಗಿಯೇ ದಕ್ಷಿಣ ಕರ್ನಾಟಕದ ಬಹುಭಾಗ ಅಚ್ಚಕನ್ನಡ ರಾಜ್ಯವಾಗಿಯೇ ಉಳಿಯುವಂತಾಯಿತು. 'ಸಮ್ಯಕ್ ಪ್ರಜಾಪಾಲನ ಮಾತ್ರಾಧಿಗತ ರಾಜ್ಯ ಪ್ರಯೋಜನಸ್ಯ' ಎಂಬಂತೆ ಜನಪದ ಹಿತವೇ ಗಂಗರಸರ ರಾಜ್ಯಾಡಳಿತದ ಅಳತೆಗೋಲಾಗಿತ್ತು. ಗಂಗವಂಶದ ದೊರೆ ಮೊದಲ ಶಿವಮಾರನ ನಂತರ ಆತನ ಮೊಮ್ಮಗನಾದ ಶ್ರೀಪುರುಷ ಕ್ರಿ.ಶ.೭೨೬ ರಿಂದ ೭೮೮ರ ವರೆಗೆ ರಾಜ್ಯಭಾರ ಮಾಡಿದನು. ಇವರ ಕಾಲದಲ್ಲಿ ಗಂಗವಾಡಿಯು ವೈಭವದ ತುತ್ತತುದಿಯಲ್ಲಿತ್ತು. ಶ್ರೀಪುರುಷನು ಪಲ್ಲವರನ್ನು ಗಂಗರಾಜ್ಯದಂಚಿಗೇನೇ ತಡೆದಿಟ್ಟು ಕನ್ನಡ ರಾಜ್ಯವನ್ನು ಉಳಿಸಿದ ವಿಖ್ಯಾತಿಯನ್ನು ಪಡೆದವನು. 'ಕೊಂಗುಣಿ ರಾಜಾಧಿರಾಜ ರಾಜಪರಮೇಶ್ವರ ಶ್ರೀಪುರುಷ' ಎಂಬ ಬಿರುದು ಧರಿಸಿದ್ದನು. ಪಲ್ಲವ ಮತ್ತು ರಾಷ್ಟ್ರಕೂಟರ ವಿರುದ್ಧ ಅವಿರತ ಹೋರಾಟ ನಡೆಸಿ ಗಂಗವಾಡಿಯನ್ನು ಪರರ ಆಕ್ರಮಣದಿಂದ ಕಾಪಾಡಿದ ಕೀರ್ತಿ ಈತನದು. ಈತನ ಕ್ರಿ.ಶ.೭೭೧ರ ಸೇಲಂ ಸ್ಥಳದ ಸುಕನೇಶ್ವರ ದೇವಾಲಯದ ತಾಮ್ರಪಟಗಳಲ್ಲಿ[೧] ಪ್ರಸ್ತಾಪಿತವಾಗಿರುವ ಕೋರಮಂಗಲವು ಸೇಲಂ ಜಿಲ್ಲೆಯ ತಿರುಚೆಂಗೋಡು ತಾಲೂಕಿನ ಕೊಮರಮಂಗಲಂ ಎಂದೂ, ಅದೇ ಜಿಲ್ಲೆಯ ಪುದೂರು ಎಂಬುದೇ ಪುದುಕನ್ನ ವಿಷಯದ ಕೇಂದ್ರಸ್ಥಳವಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಕೊನೆಯ ಬಲಿಷ್ಠ ಗಂಗರಾಜರಲ್ಲೊಬ್ಬನಾದ ಮಾರಸಿಂಹ (ಕ್ರಿ.ಶ.೯೬೧–೯೭೪)ನ ಆಳ್ವಿಕೆಯಲ್ಲಿ ಕರ್ನಾಟಕ ಭರತಖಂಡದ ರಾಜಕೀಯದಲ್ಲಿ ಪ್ರಮುಖಸ್ಥಾನ ಪಡೆಯಲು ಪ್ರಯತ್ನಪಟ್ಟಿರುವುದು ಕಂಡುಬರುತ್ತದೆ. ಈತನು ತನ್ನ ಮಿತ್ರನಾದ ರಾಷ್ಟ್ರಕೂಟ ಕನ್ನರನ (ಕೃಷ್ಣ III) ಪರವಾಗಿ ಗುಜರಾತಿನ ಮೇಲೆ ದಂಡೆತ್ತಿಹೋದನು. ಇಂತಹ ಪರಾಕ್ರಮಿಯಾದ ಮಾರಸಿಂಹನ ಶಾಸನವೊಂದು[೨] ಹೊಸೂರಿನ ರಾಮನಾಯಕನ ಕೆರೆಯಲ್ಲಿರುವ ಗಂಗಮ್ಮನ ದೇವಾಲಯದಲ್ಲಿದ್ದು, ಮೊರಸುನಾಡು ಮತ್ತು ಪೊಳಲಸೆಟ್ಟಿ ಎಂಬ ಉಲ್ಲೇಖಗಳನ್ನು ಮಾಡುತ್ತದೆ.

೪.೩ ಬಾಣರಸರು

ಕ್ರಿಸ್ತಶಕದ ಪ್ರಾರಂಭದಿಂದಲೇ ದಕ್ಷಿಣ ಭಾರತದ ಇತಿಹಾಸದಲ್ಲಿ ಕಾಣಿಸಿಕೊಳ್ಳುವ ಬಾಣರಸರು, ಪಲ್ಲವರು ಪ್ರಬಲರಾದಾಗ ಅವರ ಮಾಂಡಲಿಕರಾಗಿ, ಕೋಲಾರ, ಕಡಪ, ತಿರುವಲ್ಲಂ ಪ್ರದೇಶಗಳನ್ನು ಆಳುತ್ತಿದ್ದರು. ೩–೪ನೇ ಶತಮಾನದಲ್ಲಿ ಕದಂಬರು, ನಂತರದಲ್ಲಿ ಚಲುಕ್ಯರು, ಆನಂತರ ಗಂಗರು ಕೊನೆಗೆ ನೊಳಂಬರು ಹಾಗೂ ಚೋಳರು ಬಾಣರಸರ ಮೇಲೆ ದಾಳಿ ನಡೆಸಿದ್ದಾರೆ. ಇವರ

---

೧. *EI*, Vol.XXVII p.145 ಮಗ ದುಗ್ಗಮಾರ, ಸೊಸೆ ಕಾಂಚಿಯಬ್ಬೆ, ಹಾಗೂ ಕಾಂಚಿಯಬ್ಬೆಯ ವಂಶವೃಕ್ಷದ ವಿವರಗಳು ಈ ಶಾಸನದಲ್ಲಿ ಬಂದಿದೆ. ಗೋವಿಂದರಾಜ, ಇಂದ್ರರಾಜ, ವಿನಯವತಿ, ವಿಕ್ರಮಾದಿತ್ಯ, ಶಿವರಾಜ, ನನ್ನಪ್ಪ ಮುಂತಾದವರ ಉಲ್ಲೇಖವಿದ್ದು, ಕುತೂಹಲಕಾರಿಯಾಗಿದೆ. ಈ ಕಾಂಚಿಯಬ್ಬೆಯ ಸೋದರ ಇಂದ್ರರಾಜನ ಸ್ಮಾರಕವಾಗಿ ಈ ದತ್ತಿ ನೀಡಲಾಗಿದೆ.

೨. *ARIE*, 1969-70, B 307

೩. *SII*, Vol.VII, No.2

ಶಾಸನವೊಂದು[೩] ಕೃಷ್ಣಗಿರಿ ತಾಲೂಕು ರಾಯಕೋಟೆಯಲ್ಲಿ ದೊರೆತಿದ್ದು, ಮಹಾಬಲಿ ಬಾಣರಸನಿಗೆ ಸೇರಿದುದಾಗಿದೆ. ಮಹಾವಲಿ ವಂಶದ ಜಯಮೇರು ಈತನಿರಬೇಕೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿರುತ್ತಾರೆ. ಈ ಶಾಸನದ ಪ್ರಕಾರ ಈತನು ಅನೇಕ ಪ್ರಾಂತ್ಯಗಳ ಮೇಲೆ ಅಧಿಕಾರ ಪಡೆದಿದ್ದ ಅಂಶ ಸ್ಪಷ್ಟವಾಗುತ್ತದೆ. ಉತ್ತಂಗೆರೆ ತಾಲೂಕಿನ ಮುತ್ತನೂರು, ವಂದವಾಸಿ ತಾಲೂಕಿನ ವಳ್ಳಿಮನೆಗಳಲ್ಲೂ ಬಾಣರಸರ ಕನ್ನಡ ಶಾಸನಗಳಿವೆ. ಇದಕ್ಕೂ ಪೂರ್ವದಲ್ಲಿ ಈ ಪ್ರಾಂತ್ಯಗಳು ಗಂಗರ ಆಳ್ವಿಕೆಗೆ ಒಳಪಟ್ಟಿದ್ದ ಅಂಶ ಗಂಗರ ಶಾಸನಗಳಿಂದ ತಿಳಿದುಬರುತ್ತದೆ.

೪.೪ ರಾಷ್ಟ್ರಕೂಟರು

ಭಾರತದ ಅಧಿರಾಜರು ತಾವು ಎಂದು ಹೇಳಿಕೊಳ್ಳುವ ಯೋಗ್ಯತೆಯನ್ನು ರಾಷ್ಟ್ರಕೂಟರು ಪಡೆದಿದ್ದರು. ಏಕೆಂದರೆ ಅವರ ಸಮಕಾಲೀನವಾಗಿ ಅವರಷ್ಟು ಬಲಶಾಲಿಗಳಾದ ಚಕ್ರವರ್ತಿಗಳು ಭಾರತದಲ್ಲಿ ಯಾರೂ ಇರಲಿಲ್ಲ. ಉತ್ತರದ ದಿಗ್ವಿಜಯವನ್ನು ಕೈಗೊಂಡ ರಾಷ್ಟ್ರಕೂಟ ಸಾಮ್ರಾಟ ಧ್ರುವ (೭೮೦–೯೩) ಗುರ್ಜರ–ಪ್ರತೀಹಾರ ದೊರೆ ಮತ್ಸರಾಜನನ್ನು ಸೋಲಿಸಿದ. ಬಂಗಾಳದ ಪಾಲವಂಶದ ಧರ್ಮಪಾಲನನ್ನು ಪರಾಜಯಗೊಳಿಸಿದನು. ನಂತರದಲ್ಲಿ ಅವನ ಮಗ ಮೂರನೇ ಗೋವಿಂಗನು ಗುರ್ಜರ, ಕನೋಜ, ಮಾಳವ, ಕೋಸಲ, ಕಳಿಂಗ, ವೆಂಗಿ ಹಾಹಳ, ಓಡ್ರಗಂಗ, ಕೇರಳ, ಚೋಳ, ಪಾಂಡ್ಯ, ಪಲ್ಲವ ಹಾಗೂ ಲಂಕೆಯ ದೊರೆಗಳನ್ನು ಸೋಲಿಸಿದ್ದನೆಂಬ ವಿವರ ಸಂಜಾನದ ತಾಮ್ರಪಟಗಳಿಂದ ವಿದಿತವಾಗುತ್ತದೆ. ಗೋವಿಂದನ ಮಗ ಅಮೋಘವರ್ಷ (ಕ್ರಿ.ಶ.೮೧೪–೮೭೮)ನ ಕಾಲದಲ್ಲಿ ಅವನ ರಾಜ್ಯ ವಿಸ್ತಾರವು, ಜಗತ್ತಿನ ನಾಲ್ಕು ಹಿರಿಯ ಸಾಮ್ರಾಜ್ಯಗಳಲ್ಲಿ ಒಂದಾಗಿದ್ದಿತೆಂಬ ವಿವರ ಅರಬ್ಬಿ ಪ್ರವಾಸಿ ಸುಲೇಮಾನ (೮೫೧)ನ ಬರಹಗಳಿಂದ ತಿಳಿದುಬರುತ್ತದೆ. ನಂತರದಲ್ಲಿ ಬಂದ ಇಮ್ಮಡಿಕೃಷ್ಣ, ಇಂದ್ರರು ಮಹಾಸಾಹಸಿಗಳಾಗಿದ್ದರು. ಕ್ರಿ.ಶ. ೯೪೦ರಲ್ಲಿ ಪಟ್ಟಕ್ಕೆ ಬಂದ ಮೂರನೇ ಕೃಷ್ಣ ರಾಷ್ಟ್ರಕೂಟರಲ್ಲೇ ಬಹು ಪ್ರಸಿದ್ಧನು. ಈತನು ಮಧ್ಯಭಾರತದ ಚೇದಿಗಳನ್ನು ಸೋಲಿಸಲು ಯತ್ನಿಸಿದ. ಗುರ್ಜರ ಪ್ರತೀಹಾರರಿಗೆ ಬುದ್ಧಿ ಕಲಿಸಿದ. ದಕ್ಷಿಣದಲ್ಲಿ ಚೋಳರ ಮೇಲೆ ಎರಗಿ, ಚೋಳ ಪರಾಂತಕನ ಮಗ ರಾಜಾದಿತ್ಯನನ್ನು ತಕ್ಕೋಳದಲ್ಲಿ ನಡೆದ ಕಾಳಗದಲ್ಲಿ (ತಮ್ಮ ಮಾಂಡಲಿಕರಾಗಿದ್ದ ಗಂಗರ ನೆರವಿನಿಂದ) ಕೊಂದನು. ಮುಂದೆ ದಕ್ಷಿಣದವರೆಗೂ ದಂಡೆತ್ತಿ ಹೋಗಿ ರಾಮೇಶ್ವರದ ಬಳಿ ಕೃಷ್ಣೇಶ್ವರ ಮಂದಿರವನ್ನು ಸ್ಥಾಪಿಸಿ, ವಿಜಯಸ್ತಂಭವನ್ನು ನೆಟ್ಟನು. ಈ ಆಘಾತದಿಂದ ಚೋಳರು ಸುಧಾರಿಸಿಕೊಳ್ಳಲು ಒಂದೆರಡು ದಶಕಗಳೇ ಬೇಕಾದವು. ಆಗ ೧೦೦ಕ್ಕೂ ಹೆಚ್ಚು ತಮಿಳು ಶಾಸನಗಳು ತಮಿಳುನಾಡಿನ ವೆಲ್ಲೂರು, ತಿರುವಣ್ಣಾಮಲೆ, ಕಾಂಚೀಪುರಂ ಜಿಲ್ಲೆಗಳಲ್ಲಿ ಹಾಗೂ ಪಾಂಡಿಚೇರಿ ಪ್ರದೇಶದಲ್ಲಿ ಕಾಣಿಸಿಕೊಂಡಿವೆ. ಈ ಅವಧಿಗೆ ಸೇರಿದ ಮೂರನೇ ಕನ್ನರದೇವನ ಕನ್ನಡ ಶಾಸನವೊಂದು ಕಾಂಚೀಪುರಂ ಜಿಲ್ಲೆ ಮದುರಾಂತಕಂ ತಾಲೂಕು ಒರತ್ತಿ ಗ್ರಾಮದ ದೇವಾಲಯದಲ್ಲಿದ್ದು, ಮಾಚೇಶ್ವರ ದೇವರಿಗೆ ವ್ಯಕ್ತಿಯೋರ್ವನು (ಪ್ರಾಯಶಃ ಖಜಾನೆಯ ಅಧಿಕಾರಿ ಕಾಂಚಯ ಎಂಬುವನ ಸಂಬಂಧಿ ಇರಬೇಕು). ತನ್ನ ತಲೆಯನ್ನು ಅರ್ಪಿಸಿ ಆತ್ಮಬಲಿಯಾಗಿರುವುದನ್ನು ಉಲ್ಲೇಖಿಸುತ್ತದೆ. ಇದೇ ದೇವಾಲಯದಲ್ಲಿರುವ ರಾಷ್ಟ್ರಕೂಟರ ತಮಿಳು ಶಾಸನ, ಖಜಾನೆಯ ಅಧಿಕಾರಿ ಕಾಂಚಯನನ್ನು ಉಲ್ಲೇಖಿಸುತ್ತದೆ. ಅಲ್ಲದೆ ವೆಲ್ಲೂರು ಜಿಲ್ಲೆಯ ವಲಝು ತಾಲೂಕಿನ ತಿರುಮಲೆಚೇರಿಯ ಶಾಸನ ಕನ್ನಡದಲ್ಲೇ ಇದ್ದು ಕೀರ್ತಿಮಾರ್ತಾಂಡ ಎಂಬ ಕಾಳಪ್ರಿಯ ಹೆಸರಿನ ದೇವಾಲಯದ ರಚನೆಯ ಬಗ್ಗೆ ತಿಳಿಸುತ್ತದೆ.

೪.೫ ನೊಳಂಬರು

ಪಲ್ಲವರ ವಂಶದಿಂದ ಬಂದವರೆಂದು ಹೇಳಲಾದ ನೊಳಂಬರು ತಮ್ಮ ಆಳ್ವಿಕೆಯನ್ನು ಇಂದಿನ ಆಂಧ್ರಪ್ರದೇಶದ ಮಡಕಶಿರಾ ತಾಲೂಕಿನ ಹೆಂಜೇರು ಅಥವಾ ಹೇಮಾವತಿಯಲ್ಲಿ ಕ್ರಿ.ಶ.೮ನೆಯ ಶತಮಾನದಲ್ಲಿ ಆರಂಭಿಸಿದರು. ಮೊದಮೊದಲು ಗಂಗರ ಅಧೀನದಲ್ಲಿ ತಮ್ಮ ಆಳ್ವಿಕೆಯನ್ನು ನಡೆಸುತ್ತಿದ್ದರು. ಈ ವಂಶದ ಚಾರುಪೊನ್ನೇರನು ಗಂಗರ ಆಶ್ರಯವನ್ನು ಬಿಟ್ಟು ರಾಷ್ಟ್ರಕೂಟ ದೊರೆ ಮುಮ್ಮಡಿ ಗೋವಿಂದನ ಅಧೀನದಲ್ಲಿ ಆಳಿದನು. ಇವನ ಕಾಲದಲ್ಲೇ 'ನೊಳಂಬಳಿಗೆ–೧೦೦೦' ಎಂಬ ಪ್ರಾಂತ್ಯ ಅಸ್ತಿತ್ವಕ್ಕೆ ಬಂದಿತು. ಈತನು ಮತ್ತೆ ಗಂಗರೊಂದಿಗೆ ಸ್ನೇಹ ಸಂಪಾದಿಸಿ ಗಂಗದೊರೆ ರಾಚಮಲ್ಲನ ಮಗಳಾದ ಜಾಯಬ್ಬೆಯನ್ನು ತನ್ನ ಸೊಸೆಯಾಗಿ ಮಾಡಿಕೊಂಡನು. ಇವನ ನಂತರ ಆಳಿದ ಪೊಳಲ್ಚೋರನು ಗಂಗದೊರೆ ಮೊದಲನೇ ನೀತಿಮಾರ್ಗನ ಸಾಮಂತನಾಗಿ ರಾಜ್ಯವಾಳಿದನು. ಗಂಗರು ಬಾಣರನ್ನು ಸೋಲಿಸಿ ಅವರಿಂದ ಗೆದ್ದ ಭಾಗಗಳನ್ನು ನೊಳಂಬ ಪೊಳಲ್ಚೋರನಿಗೆ ಕೊಟ್ಟರು. ಪೊಳಲ್ಚೋರನು ತನ್ನ ಮಗನಾದ ಮೊದಲನೇ ಮಹೇಂದ್ರನಿಗೆ ಗಂಗರಾಜಕುಮಾರಿ ಗಾಮಬ್ಬೆಯನ್ನು ತಂದುಕೊಂಡ. ಇದರಿಂದ ನೊಳಂಬ ಮತ್ತು ಗಂಗರ ಸ್ನೇಹ ವೃದ್ಧಿಸಿತು. ಕ್ರಿ.ಶ. ೮೭೫ರ ಸುಮಾರಿನಲ್ಲಿ ಮಹೇಂದ್ರ ರಾಜನು ಪಟ್ಟಕ್ಕೆ ಬಂದನು. ಈತನು ಬಾಣರನ್ನು ಪೂರ್ಣವಾಗಿ ಸೋಲಿಸಿ 'ಮಹಾಬಲಿ ಕುಲವಿಧ್ವಂಸಕ' ಎಂಬ ಬಿರುದನ್ನು ಧರಿಸಿದನು. ತನ್ನ ಬಂಧುಗಳೇ ಆದ ತಲಕಾಡಿನ ಗಂಗರ ಮೇಲೂ ಯುದ್ಧ ಮಾಡಿದನು. ಇವನ ಕಾಲದಲ್ಲಿ ನೊಳಂಬವಾಡಿ ವಿಸ್ತಾರವಾಯಿತು. ಇವನ ಆಳ್ವಿಕೆಗೆ ಸೇರಿದ ಹಲವು ಶಾಸನಗಳು ಧರ್ಮಪುರಿ, ಮೊದಕೇರಿ, ಹೊಸೂರು ತಾಲೂಕಿನ ಮಾಚಿನಾಯಕನಹಳ್ಳಿ ಮೊದಲಾದ ಸ್ಥಳಗಳಲ್ಲಿ ದೊರೆತಿವೆ. ಕ್ರಿ.ಶ.೮೯೩ಕ್ಕೆ ಸೇರಿದ ಈತನ ಧರ್ಮಪುರಿ ಶಾಸನವು[೪] ಜೈನ ಬಸದಿಯೊಂದಕ್ಕೆ ದತ್ತಿಯನ್ನು ನೀಡಿರುವ ವಿವರವನ್ನು ನೀಡುತ್ತದೆ. ಮಾಚಿನಾಯಕನಹಳ್ಳಿ ಶಾಸನವು[೫] ತುರುಗಾಳೆಗಕ್ಕೆ ಸಂಬಂಧಿಸಿದ ವೀರಗಲ್ಲಾಗಿದೆ. ಧರ್ಮಪುರಿಯ ಮತ್ತೊಂದು ಶಾಸನವು[೬] ಈತನ ಆಳ್ವಿಕೆಯ ಅವಧಿಗೆ ಸೇರಿದ್ದು ಆ ಕಾಲದ ವಾಣಿಜ್ಯ ಮತ್ತು ಕೃಷಿಯ ಬಗ್ಗೆ ಬೆಳಕು ಚೆಲ್ಲುತ್ತದೆ. ಈತನ ನಂತರ ಇವನ ಮಗನಾದ ಅಯ್ಯಪದೇವನು ನೊಳಂಬವಾಡಿಯ ದೊರೆಯಾದ. ಈತನು ಗಂಗರೊಂದಿಗೆ ಸ್ನೇಹದಿಂದಿದ್ದು, 'ನೊಳಂಬವಾಡಿ ೩೨೦೦೦' ಎಂಬ ವಿಶಾಲವಾದ ಪ್ರಾಂತ್ಯಕ್ಕೆ ಅಧಿಪತಿಯಾದನು. ಇವನು ಪೂರ್ವಚಾಲುಕ್ಯರೊಂದಿಗೆ ನಡೆಸಿದ ಹೋರಾಟಗಳಲ್ಲಿ ಗಂಗರು ನೆರವಾಗಿರುವ ಅಂಶ, ಪ್ರಸಿದ್ಧ ಬೇಗೂರು ವೀರಗಲ್ಲು ಶಾಸನದಿಂದ ಸ್ಪಷ್ಟಪಡುತ್ತದೆ. ಮೊದಕೇರಿಯ ಶಾಸನವು[೭] ಗಂಗರಾಜಕುಮಾರಿ ಗಾಮಬ್ಬೆಯನ್ನು (ಅಯ್ಯಪದೇವನ ತಾಯಿ) ಪ್ರಸ್ತಾಪಿಸುವಂತಿದ್ದು ಆಕೆಯ ಮಗನಾದ ಈತನನ್ನು ಉಲ್ಲೇಖಿಸುವ ತ್ರುಟಿತ ಕಂಬ ಶಾಸನವಾಗಿದೆ. ಈತನ ಇನ್ನೊಂದು ಶಾಸನವು[೮] ಧರ್ಮಪುರಿಯಲ್ಲೇ ಇದ್ದು, ಹಿಂದೆ ನಿಧಿಯಣ್ಣನಿಂದ ಕಟ್ಟಲಾಗಿದ್ದ ಬಸದಿಗೆ

---

೪. *EI*, Vol.X, p.54-70 (*ARIE* 1901 / 305)

೫. *ARIE*, 1970-71, B 510

೬. *SII*, Vol. VII, No.580

೭. ಎಚ್.ಎಸ್. ಗೋಪಾಲರಾವ್, ಧರ್ಮಪುರಿ ಜಿಲ್ಲೆಯ ಮೂರು ಶಾಸನಗಳು, ಇತಿಹಾಸದರ್ಶನ, ಸಂ.೧೧ (೧೯೭೬) ಪು. ೧೧೦

೮. *ARIE*, 1901 / 305

ಲೋಕಯ್ಯನೆಂಬುವನು ಬೂದುಗೂರೆಂಬ ಸ್ಥಳವನ್ನು ದತ್ತಿಬಿಟ್ಟಿರುವ ವಿಷಯವನ್ನು ತಿಳಿಸುತ್ತದೆ. ಬೀರನೊಳಂಬನ ಮಗನಾದ ಇರುಳಚೋರನ (ಕ್ರಿ.ಶ. ೯೨೯) ಶಾಸನಗಳು[೯] ಧರ್ಮಪುರಿ ತಾಲೂಕು ಕೊಳಗಟ್ಟೂರು ಸ್ಥಳದಲ್ಲಿ ದೊರೆತಿವೆ. ಧರ್ಮಪುರಿಯಲ್ಲಿರುವ ಈತನ ಶಾಸನದಿಂದ[೧೦] ನೊಳಂಬರ ವಂಶವೃಕ್ಷ, ಗಂಗ, ನೊಳಂಬ ಮತ್ತು ಚಾಲುಕ್ಯರೊಂದಿಗಿದ್ದ ವೈವಾಹಿಕ ಸಂಬಂಧಗಳನ್ನು ಅರಿಯಬಹುದಾಗಿದೆ. ಇವನ ನಂತರ ಬೀರನೊಳಂಬ ಅಣ್ಣಿಗನು ದೊರೆಯಾದನು. ನಂತರ ಇವನ ಸೋದರ ಇರಿವನೊಳಂಬ I (ದಿಲೀಪ) (ಕ್ರಿ.ಶ.೯೪೧-೬೮) ರಾಜನಾದ. ಇವನು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಮಿತ್ರನಾಗಿದ್ದು ರಾಷ್ಟ್ರಕೂಟರು ಕೈಗೊಂಡ ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದನು. ದಿಲೀಪನ ಮಗ ನನ್ನಿನೊಳಂಬನ ಕಾಲಕ್ಕೆ ರಾಷ್ಟ್ರಕೂಟ ಮುಮ್ಮಡಿಕೃಷ್ಣನು ಮರಣ ಹೊಂದಿದ್ದುದರಿಂದ ಅಸಹಾಯಕನಾಗಿದ್ದನು. ಆಗ ಗಂಗರ ಇಮ್ಮಡಿ ಮಾರಸಿಂಹನು ಈತನನ್ನು ಸೋಲಿಸಿ 'ನೊಳಂಬ ಕುಲಾಂತಕ' ಎಂಬ ಬಿರುದನ್ನು ಧರಿಸಿದನು. ನಂತರದಲ್ಲಿ ಇಮ್ಮಡಿ ಮಹೇಂದ್ರ, ಇಮ್ಮಡಿ ಇರಿವನೊಳಂಬ ಮುಂತಾದವರು ಆಳಿದರು. ಇವರು ಕೊನೆಕೊನೆಗೆ ಕಲ್ಯಾಣದ ಚಾಲುಕ್ಯರ ಆಶ್ರಿತರಾಗಿ ಹಲವು ಕಾಲ ಆಳಿರುವುದು ಕಂಡುಬರುತ್ತದೆ.

೪.೬ ಚೋಳರು

ಕ್ರಿ.ಶ.೧೦೦೪ ರಿಂದ ೧೧೧೬ರ ವರೆಗೂ ಕರ್ನಾಟಕದ ದಕ್ಷಿಣ ಮತ್ತು ಪೂರ್ವಭಾಗಗಳ ಹೆಚ್ಚು ಪ್ರದೇಶಗಳನ್ನು ಚೋಳರು ಆಕ್ರಮಿಸಿದ್ದರು. ಅದಕ್ಕೂ ಮೊದಲು ಕ್ರಿ.ಶ.೯೪೯ರಲ್ಲಿ ಗಂಗರಾಜ ಬೂತುಗನು, ರಾಷ್ಟ್ರಕೂಟ ಮತ್ತು ಚೋಳರ ಮಧ್ಯೆ ತಕ್ಕೋಲದಲ್ಲಿ ನಡೆದ ಯುದ್ಧದಲ್ಲಿ ಚೋಳರಾಜಾದಿತ್ಯನನ್ನು ಕೊಂದಿದ್ದನು. ರಾಜೇಂದ್ರ ಚೋಳನ ಕಾಲದ ಕನ್ನಡ ಶಾಸನವೊಂದು[೧೧] ಹೊಸೂರಿನಲ್ಲಿದ್ದು ಅದು ಆತನ ಆಳ್ವಿಕೆಯ ೧೪ನೆಯ ವರ್ಷದ್ದೆಂದು ತಿಳಿದುಬರುತ್ತದೆ. ಅಂದರೆ ಕ್ರಿ.ಶ.೧೦೧೮ನೇ ವರ್ಷಕ್ಕೆ ಸೇರಿದ್ದು ಪುಲಮನ್ದನಾಡಿನ ವಿಕ್ರಮ ಚೋಳಗಾವುಂಡನನ್ನು ಉಲ್ಲೇಖಿಸುತ್ತದೆ. ಇದೇ ಅರಸನ ಕನ್ನಡ ಶಾಸನಗಳು ಡೆಂಕಣಿಕೋಟೆ ತಾಲೂಕಿನ ಸಂದನಹಳ್ಳಿ ಮತ್ತು ಚಿನ್ನಟ್ಟಿ ಗ್ರಾಮಗಳಲ್ಲೂ ಇದ್ದು, ಕೆರೆ ನಿರ್ಮಾಣ, ವೀರರಿಗೆ ಕೊಟ್ಟ ದತ್ತಿಗಳನ್ನು ದಾಖಲಿಸಿದೆ.

ಚೋಳರ ಆಳ್ವಿಕೆಯ ಮೊದಲ ಐವತ್ತು ವರ್ಷಗಳ ಕಾಲ, ಅಂದರೆ ಸುಮಾರು ಕ್ರಿ.ಶ.೧೦೫೦ರ ವರೆಗೆ ಈ ಪ್ರದೇಶದಲ್ಲಿ ಕನ್ನಡ ಶಾಸನಗಳನ್ನೇ ಹಾಕಿಸಿರುವಂತೆ ತೋರುತ್ತದೆ. ಮುಂದೆ ಇಮ್ಮಡಿ ರಾಜೇಂದ್ರಚೋಳನ ಕಾಳದಿಂದ ತಮಿಳನ್ನು ಕನ್ನಡ ಲಿಪಿಯಲ್ಲೂ, ನಂತರ ತಮಿಳು ಲಿಪಿಯಲ್ಲೂ ಹಂತ ಹಂತವಾಗಿ ಜಾರಿಗೆ ತಂದಿರುವ ಅಂಶ ಈ ಪ್ರದೇಶದ ನೆರೆಹೊರೆಯ ಶಾಸನಗಳ ಅಧ್ಯಯನದಿಂದ[೧೨] ದೃಢಪಟ್ಟಿದೆ. ನಂತರದಲ್ಲಿ ಕರ್ನಾಟಕದ ಅರಸು ಮನೆತನದವರೇ ಆದ ಹೊಯ್ಸಳರ ಆಳ್ವಿಕೆ ಈ ಪ್ರದೇಶದ ಮೇಲೆ ಆರಂಭಗೊಂಡರೂ; ತಮಿಳು ಭಾಷೆ ಈ ಪ್ರದೇಶದ ಶಾಸನಗಳ ಭಾಷಾ ಮಾಧ್ಯಮವಾಗಿ ಮುಂದುವರೆದಿರುವುದು ಕಂಡುಬರುತ್ತದೆ.

---

೯. *SII*, Vol. IX.No.38

೧೦. ಅದೇ. No.23

೧೧. *ARIE*, 1969-70, B 270

೧೨. C.S.Vasudevan, *Scriptal Transmutability of Chola Inscriptions in Karnataka* (Mysore District) ***JESI***, Vol. XVIII (1992) p.110

೪.೭ ಕಲ್ಯಾಣದ ಚಾಲುಕ್ಯರು

ಮೂಲತಃ (ಬಾದಾಮಿಯ) ಚಲುಕ್ಯರ ಕುಲಕ್ಕೆ ಸೇರಿದ ಕಲ್ಯಾಣದ ಚಾಲುಕ್ಯರು ರಾಷ್ಟ್ರಕೂಟರ ಮಾಂಡಲಿಕರಾದಿ ಮುಂದುವರೆದು ಇಮ್ಮಡಿ ತೈಲಪನ ಕಾದಲ್ಲಿ ರಾಷ್ಟ್ರಕೂಟ ಖೊಟ್ಟಿಗನನ್ನು ಸೋಲಿಸಿ ಪುನಃ ಅಧಿಕಾರಕ್ಕೆ ಬಂದರು. ಹೀಗೆ ಇಮ್ಮಡಿ ತೈಲಪನಿಂದ ಆರಂಭವಾಗುವ ಕಲ್ಯಾಣದ ಚಾಲುಕ್ಯರ ಆಳ್ವಿಕೆ, ಆಗ್ಗೆ ದಕ್ಷಿಣದಲ್ಲಿ ಹೆಚ್ಚು ಪ್ರಬಲರಾಗತೊಡಗಿದ್ದ ಚೋಳರೊಡನೆ ಅವಿರತವಾಗಿ ಹೋರಾಟವನ್ನು ಮುಂದುವರಿಸಿದ್ದಿತು. ಇರಿವಬೆಡಂಗ ಸತ್ಯಾಶ್ರಯ, ಐದನೇ ವಿಕ್ರಮಾದಿತ್ಯ, ಇಮ್ಮಡಿ ಜಯಸಿಂಹ, ಮೊದಲನೇ ಸೋಮೇಶ್ವರ, ಇಮ್ಮಡಿ ಸೋಮೇಶ್ವರ, ನಂತರದಲ್ಲಿ ಕ್ರಿ.ಶ. ೧೦೭೬ರಿಂದ ಆರನೇ ವಿಕ್ರಮಾದಿತ್ಯನ ಆಳ್ವಿಕೆ ಆರಂಭವಾಗುತ್ತದೆ. ಈತನು ಕುಮಾರವೃತ್ತಿಯಿಂದ ಆಳುತ್ತಿರುವಾಗಲೇ ಸದಾ ಯುದ್ಧನಿರತನಾಗಿ ಅನೇಕ ಕದನಗಳಲ್ಲಿ ಪಾಲುಗೊಂಡಿದ್ದನು. ಬಾದಾಮಿ ಚಲುಕ್ಯರ ಇಮ್ಮಡಿ ಪುಲಕೇಶಿಯ ಕಾಲದಿಂದ ಕರ್ನಾಟಕ ಮತ್ತು ತಮಿಳುನಾಡಿನ ಅರಸು ಮನೆತನಗಳ ನಡುವೆ ಸಾಗಿ ಬಂದಿದ್ದ ಪೈಪೋಟಿ ಇವನ ಆಳ್ವಿಕೆಯ ಕಾಲಕ್ಕೆ ಒಂದು ಘಟ್ಟವನ್ನು ತಲುಪಿತು. ಚೋಳ ವೀರರಾಜೇಂದ್ರನು ತನ್ನ ಮಗಳನ್ನು ಈತನಿಗೆ ಧಾರೆಯೆರೆದು ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ವೀರರಾಜೇಂದ್ರನ ಮರಣದ ನಂತರ ಅವನ ಮಗನನ್ನು ಚೋಳರಾಜ್ಯದ ಅಧಿಪತಿಯನ್ನಾಗಿಸುತ್ತಾನೆ. ಆದರೆ ಮುಂದೆ ವೆಂಗಿದೇಶದ ಅಧಿಪತಿಯಾಗಿದ್ದ ರಾಜಿಗ – (ರಾಜೇಂದ್ರಚೋಳ) ಅಂದರೆ ಕುಲೋತ್ತುಂಗ; ಚೋಳಪಟ್ಟವನ್ನು ಆಕ್ರಮಿಸುತ್ತಾನೆ. ಆಗ ವಿಕ್ರಮಾದಿತ್ಯನು ಕಂಚಿಯ ಮೇಲೆ ಯುದ್ಧಮಾಡಿ ಚೋಳ ಕುಲೋತ್ತುಂಗನ ದರ್ಪವನ್ನು ಅಡಗಿಸುತ್ತಾನೆ. ಒಂದು ಕಡೆ ಚೋಳ ದೊರೆ ಕುಲೋತ್ತುಂಗನು ಮತ್ತೊಂದು ಕಡೆ ಕಲ್ಯಾಣದ ಚಾಲುಕ್ಯರ ದೊರೆ ವಿಕ್ರಮಾದಿತ್ಯನು – ಸಮಾನ ಶೂರರಾಗಿದ್ದರು. ಈರ್ವರೂ ತಮ್ಮ ತಮ್ಮ ಹಿತಗಳನ್ನು ಕಾಪಾಡಿಕೊಂಡರಾದರೂ, ಯಾರೊಬ್ಬರೂ ಮೇಲುಗೈ ಪಡೆಯದೇ ಹೋದರು. ಒಟ್ಟಾರೆ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಚೋಳ–ಚಾಲುಕ್ಯರ ನಡುವಣ ಸುದೀರ್ಘ ಕದನಗಳು ಅಂತ್ಯಗೊಂಡಿದ್ದವೆನ್ನಬಹುದು. ಇಬ್ಬರೂ ರಾಜಕೀಯ ಹೋರಾಟಗಳನ್ನು ಕೊನೆಗಾಣಿಸಿ ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುವುದು ಶ್ರೇಯಸ್ಕರವೆಂದು ಈ ಅರಸರು ಭಾವಿಸಿದಂತೆ ತೋರುತ್ತದೆ. ವಿಕ್ರಮಾದಿತ್ಯನು ದಿಕ್ಕುದಿಕ್ಕುಗಳಲ್ಲೂ ಶತ್ರುಗಳನ್ನು ಸಂಹರಿಸಿ ಸಾಮಂತರನ್ನು ಆಜ್ಞಾಧಾರಕರನ್ನಾಗಿ ಮಾಡಿ, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ, ಪ್ರಜಾರಂಜಕನಾಗಿಯೂ, ಕಲಾಪೋಷಕನಾಗಿಯೂ, ಕವಿಗಳಿಗೂ, ವಿದ್ವಾಂಸರಿಗೂ ಆಶ್ರಯದಾತನಾಗಿ ಶಿಸ್ತಿನಿಂದ, ಸೌಹಾರ್ದದಿಂದ ಐವತ್ತು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೧೨೬ರ ವರೆಗೂ ರಾಜ್ಯಭಾರ ಮಾಡಿದನು. ಈತನ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನವೊಂದು ಶ್ರೀರಂಗಂನಲ್ಲಿದ್ದು, ರಾಜನ ಪರವಾಗಿ ದಂಡನಾಯಕ ಮತ್ತು ಕನ್ನಡ ಸಂಧಿವಿಗ್ರಹಿ ಎಂಬ ಅಧಿಕಾರಿಗಳು ದೇವಾಲಯದಲ್ಲಿ ನಂದಾದೀವಿಗೆಗಳ ನಿರ್ವಹಣೆಗೆ ದತ್ತಿ ಬಿಟ್ಟಿರುವ ವಿಷಯವನ್ನು ಉಲ್ಲೇಖಿಸುತ್ತದೆ.

೪.೮ ಹೊಯ್ಸಳರು

ಇಮ್ಮಡಿ ರಾಜೇಂದ್ರಚೋಳನ ಕಾಲದಲ್ಲಿ (ಕ್ರಿ.ಶ. ೧೦೭೦) ಮತ್ತು ನಂತರದಲ್ಲಿ ಪ್ರಬಲರಾಗತೊಡಗಿದ್ದ ಹೊಯ್ಸಳರಿಂದ ಚೋಳರು ಹಿಮ್ಮೆಟ್ಟಬೇಕಾಯಿತು. ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಪ್ರಸಿದ್ಧ ಹೊಯ್ಸಳ ಸೇನಾನಿ ಗಂಗರಾಜನು ಕ್ರಿ.ಶ. ೧೧೧೬ರಲ್ಲಿ ಚೋಳರಿಂದ ತಲಕಾಡನ್ನು

ವಶಪಡಿಸಿಕೊಂಡನು. ಮಲೆಪರೊಳ್ಗಂಡರೆನಿಸಿಕೊಂಡಿದ್ದ ಹೊಯ್ಸಳರು, ಚೋಳರನ್ನು ಕರ್ನಾಟಕದಿಂದ ಓಡಿಸಿ ಕೊಂಗು, ನಂಗಲಿ ಗಂಗವಾಡಿ, ಹುಚ್ಚಂಗಿ ಮೊದಲಾದ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ವಿಷ್ಣುವರ್ಧನನ ನಂತರ ಮೊದಲನೇ ನರಸಿಂಹ, ಅನಂತರ ಇಮ್ಮಡಿ ವೀರಬಲ್ಲಾಳನ ಆಳ್ವಿಕೆ ಪ್ರಾರಂಭವಾಯಿತು. ಈತನ ಅನೇಕ ಶಾಸನಗಳು ಈ ಗಡಿಭಾಗದಲ್ಲಿ ಲಭ್ಯವಿದ್ದು, ತಮಿಳು ಭಾಷಿಯಲ್ಲಿವೆ. ಅವುಗಳಲ್ಲಿ ಪೂರ್ವಾದಿರಾಯರೆಂಬ ಮಾಂಡಲಿಕರ ಪ್ರಸ್ತಾಪ ವಿಶೇಷವಾಗಿ ಬಂದಿದೆ. ಹೊಯ್ಸಳರ ಆಳ್ವಿಕೆಯ ಅವಧಿಗೆ ಸೇರಿದ ಕನ್ನಡ ಶಾಸನಗಳು ಹೊಸೂರು ತಾಲೂಕಿನ ಸರಕನಹಳ್ಳಿ[೧೩], ಮಾಚಿನಾಯಕನಹಳ್ಳಿ[೧೪], ಹೊಸೂರು[೧೫] ಸ್ಥಳಗಳಲ್ಲಿ ಕಂಡುಬಂದಿವೆ.

ವಾಸ್ತವವಾಗಿ, ಕರ್ನಾಟಕದ ಇತಿಹಾಸದಲ್ಲಿ ಕನ್ನಡ ನಾಡಿನ ಹೊರಗೂ ತಮಿಳು ಪ್ರದೇಶಗಳಲ್ಲಿ ಹೆಚ್ಚು ಅಧಿಕಾರ ಪಡೆದಿದ್ದ ಅರಸರಲ್ಲಿ ಹೊಯ್ಸಳರೇ ಮೊದಲಿಗರು. ಆದರೆ ಅವರ ಆಳ್ವಿಕೆಯ ಅವಧಿಯಲ್ಲಿ ನೂರಾರು ತಮಿಳು ಶಾಸನಗಳು ತಮಿಳುನಾಡಿನಲ್ಲೂ ಹಾಗೂ ಕರ್ನಾಟಕದ ಕೋಲಾರ, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲೂ ವಿಶೇಷವಾಗಿ ಕಂಡುಬಂದಿವೆ. ಆಗ ತಿರುವಣ್ಣಾಮಲೆ ಮತ್ತು ಕಣ್ಣಾನೂರುಗಳು ಅವರ ರಾಜಧಾನಿಗಳಾಗಿದ್ದು, ಈ ಪ್ರದೇಶಗಳ ಆಡಳಿತವನ್ನು ಅಲ್ಲಿನ ಅಧಿಕಾರಿಗಳಿಂದ ನಿರ್ವಹಿಸುತ್ತಲಿದ್ದರು. ಅಲ್ಲದೆ ಚೋಳರ ಆಳ್ವಿಕೆಯ ಕಾಲದಲ್ಲಿ ನೇಮಕಗೊಂಡ ಸ್ಥಳೀಯ ಅಧಿಕಾರಿಗಳನ್ನೇ ಮುಂದುವರಿಸಿದ್ದು, ಕೂಡ ಈ ರೀತಿ ತಮಿಳು ಶಾಸನಗಳ ಹೆಚ್ಚಳಕ್ಕೆ ಕಾರಣವೆಂದು ಊಹಿಸಬಹುದು. ಹೀಗೆ ನೇಮಕಗೊಂಡ ಅಧಿಕಾರಿಗಳಲ್ಲಿ ಅನೇಕರು ಮೂಲತಃ ಗಂಗವಂಶೀಯರೇ ಆಗಿದ್ದರು. ಕ್ರಿ.ಶ.೮–೯ನೇ ಶತಮಾನದಲ್ಲಿ ಪಲ್ಲವರ ಆಶ್ರಯ ಪಡೆದ ಗಂಗ ಪೃಥಿವೀಪತಿಯ ಸಂತತಿಯವರೇ ಮುಂದೆ ತಮಿಳುನಾಡಿನಲ್ಲಿ ಚೋಳರ ಮಾಂಡಲಿಕರಾಗಿ ಮುಂದುವರೆದು, ಚೋಳರು ಕರ್ನಾಟಕ ಪ್ರದೇಶವನ್ನು ಆಕ್ರಮಿಸಿದಾಗ ಆ ಸಂತತಿಗೆ ಸೇರಿದವರನ್ನೇ ಈ ಪ್ರದೇಶಗಳ ಅಧಿಕಾರಿಗಳನ್ನಾಗಿ ನೇಮಿಸಿದಂತೆ ತೋರುತ್ತದೆ. ಅವರಲ್ಲಿ ಪೂರ್ವಾದಿರಾಯ ವೀರಗಂಗ ಮತ್ತು ಬ್ರಹ್ಮಾದಿರಾಯನ ವಂಶೀಯರು ಖ್ಯಾತರಾಗಿದ್ದು, ಅವರನ್ನು ಇತಿಹಾಸಕಾರರು ತಮಿಳುಗಂಗರೆಂದು ಗುರುತಿಸಿರುತ್ತಾರೆ. ಇವರು ಉಗ್ರ ತಮಿಳು ಅಭಿಮಾನಿಗಳಾಗಿದ್ದ ಬಗ್ಗೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ[೧೬]. ಮೂರನೇ ಬಲ್ಲಾಳನ ಆಳ್ವಿಕೆಯೊಂದಿಗೆ ಈ ಸ್ಥಿತಿ ಬದಲಾಗಲು ಪ್ರಾರಂಭವಾಗಿ ವಿಜಯನಗರದ ಆಳ್ವಿಕೆಯೊಂದಿಗೆ ಸಹಜ ಸ್ಥಿತಿಗೆ ಬರುತ್ತದೆ. ಆ ವೇಳೆಗಾಗಲೇ ಮುಸ್ಲಿಮರ ದಾಳಿಗಳು, ಹೊಯ್ಸಳರ ರಾಜ್ಯವನ್ನು ಹಾಳುಮಾಡಲು ಪ್ರಯತ್ನ ಮಾಡಿದ್ದವು. ಮುಮ್ಮಡಿ ಬಲ್ಲಾಳನು, ಸಾಹಸದಿಂದ ಅವರನ್ನು ಎದುರಿಸಿದ್ದನು.

೪.೯ ವಿಜಯನಗರದ ಅರಸರು

ತುಂಗಭದ್ರಾ ತೀರದ ವಿಜಯನಗರದಲ್ಲಿ ಸ್ಥಾಪಿತವಾದ ಕರ್ನಾಟಕ ಸಾಮ್ರಾಜ್ಯ ಕ್ರಿ.ಶ. ೧೩೩೬ ರಿಂದ ೧೬೪೬ರ ವರೆಗೆ ಬಾಳಿ ಸೈನಿಕ ಮತ್ತು ರಾಜಕೀಯ ರಂಗಗಳಲ್ಲಿ ಹಿಂದೂಗಳ ಘನತೆಯನ್ನು

---

೧೩. *ARIE*, 1971-72, B 204 ಮತ್ತು B 206

೧೪. ಅದೇ. 1970-71, B 511

೧೫. ಅದೇ, 1969-70, B 298

೧೬. C. Krishnamurthy, *Some Minor Dynasties of Kolar District* (1175-1338) ***Prof. K.A. Neelakantasastry Felicitation Volume***, Madras, 1971 p.72

ಹಿಂದೆಂದೂ ಕಾಣದಷ್ಟು ಮಟ್ಟಿಗೆ ಉನ್ನತಿಗೇರಿಸಲು ಕಾರಣವಾಯಿತು. ಹೊಯ್ಸಳರ ಆಳ್ವಿಕೆಯ ಕಾಲಕ್ಕಾಗಲೇ ಉತ್ತರ ಭಾರತದಲ್ಲಿ ಮುಸ್ಲಿಮರ ಧಾಳಿಗಳು ಪ್ರಾರಂಭವಾಗಿ ದಕ್ಷಿಣಕ್ಕೂ ಹಬ್ಬತೊಡಗಿತ್ತು. ಕರ್ನಾಟಕದ ಉತ್ತರ ಭಾಗದಲ್ಲಿ ಸೇವುಣರನ್ನು ತೊಡೆದುಹಾಕಿ, ಪೂರ್ವದಲ್ಲಿ ಗಜಪತಿಯ ರಾಜ್ಯವನ್ನು ನಾಶಮಾಡಿ, ದಕ್ಷಿಣದ ತಮಿಳು ರಾಜ್ಯದ ಕೊನೆಯ ಗುರುತುಗಳನ್ನು ಅಳಿಸಿಬಿಟ್ಟಿದ್ದರು. ಹೊಯ್ಸಳರು ಆಳ್ವಿಕೆ ಕೊನೆಕೊಸೆಯ ಕಾಲಕ್ಕೆ ತಮಿಳುನಾಡಿನ ಮದುರೆ ಪ್ರದೇಶವು ಮುಸ್ಲಿಮರ ವಶವಾಯಿತು. ಹೊಯ್ಸಳರಿಂದ ನೇಮಿತವಾಗಿದ್ದ ಕಂಚಿಯ ಶಂಬುವರಾಯನ ವಂಶೀಯರ ಆಳ್ವಿಕೆ ಅಷ್ಟು ಸಮರ್ಪಕವಾಗಿರಲಿಲ್ಲ. ಇದರ ಪರಿಣಾಮವಾಗಿ ತಮಿಳುನಾಡಿನಲ್ಲೆಲ್ಲಾ ಅರಾಜಕತೆಯುಂಟಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಮಿಳುನಾಡನ್ನು ಕ್ರೂರಿಗಳಿಂದ ಮತ್ತು ಪರಕೀಯರಿಂದ ಬಿಡಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಅಂದಿನ ಸ್ಥಿತಿಯನ್ನು ವೀರ ಕಂಪಣರಾಯನ ಪತ್ನಿ ಗಂಗಾದೇವಿಯ ಮಧುರಾವಿಜಯದ ಕಾವ್ಯವು "ಕಾಡುಬೆಂಕಿಯಿಂದ ಪಾರಾದ ಅಡವಿಯಂತೆ ಗ್ರಹಣದಿಂದ ಬಿಡುಗಡೆ ಹೊಂದಿದ ಆಗಸದಂತೆ ಮತ್ತು ಕಾಲಿಯ ಮರ್ಧನದ ಬಳಿಕ ಕಂಡ ಯಮುನಾನದಿಯಂತೆ ಶಾಂತವಾಯಿತು" ಎಂದು ಬಹು ಸಮರ್ಥವಾಗಿ ವರ್ಣಿಸಿದೆ[೧೭]. ಈ ರೀತಿ ಒಂದು ಘೋರ ಸಂದರ್ಭದಲ್ಲಿ ತಮಿಳುನಾಡಿಗೆ ಮಾತ್ರವಲ್ಲದೆ, ಇಡೀ ಹಿಂದೂ ಸಂಸ್ಕೃತಿಗೆ ಪುನರ್ ಜನ್ಮವನಿತ್ತವರು ಕರ್ನಾಟಕಾಧೀಶರಾದ ವಿಜಯನಗರದ ಸಾಮ್ರಾಟರು, ಎಂಬುದನ್ನು ನೆನೆಯುವುದು ಹೆಮ್ಮೆಯ ಸಂಗತಿ.

ವಿಜಯನಗರದ ಸಂಸ್ಥಾಪಕರಾದ ಹಕ್ಕಬುಕ್ಕ ಸಹೋದರರು ಸ್ವೀಕರಿಸಿದ ಹಿಂದೂ ರಕ್ಷಣೆಯ ದೀಕ್ಷೆಯು ಮುಸ್ಲಿಮರನ್ನು ನಾಡಿನಿಂದ ಹೊರಗೋಡಿಸಿ ಹಿಂದೂಗಳ ಪರಮ ಪ್ರಭುತ್ವವನ್ನು ಸ್ಥಾಪಿಸಲು ಕಾರಣವಾಯಿತು. ವಿಜಯನಗರ ರಾಜಧಾನಿಯನ್ನೂ ಅದರ ಕೋಟೆಕೊತ್ತಲಗಳನ್ನು ಕಟ್ಟಿಸಿದ ಸಂಗಮರ ಎರಡನೆಯ ಮಗ ಬುಕ್ಕರಾಯ ಪ್ರಸಿದ್ಧನು. ಅವನು ಮತ್ತು ಅವನ ಸೋದರರ ಸೈನಿಕ ಜಯಗಳ ಫಲವಾಗಿ ಕೃಷ್ಣಾನದಿಯ ದಕ್ಷಿಣನಾಡೆಲ್ಲ ಹಿಂದೂಧರ್ಮದ ನಾಡಾಯಿತು. ಮದುರೆಯಲ್ಲಿ ಕಡೆಕಡೆಯ ಕುರುಹಾಗಿ ಉಳಿದಿದ್ದ ಮಹಮ್ಮದೀಯ ಅಧಿಕಾರವನ್ನು ಬುಕ್ಕರಾಯನ ಕುಮಾರನಾದ ವೀರಕಂಪಣರಾಯನು ಒರಿಸಿಹಾಕಿದನು. ಈ ಕುಮಾರಕಂಪಣ ಒಡೆಯನನ್ನು ಪ್ರಸ್ತಾಪಿಸುವ ಕ್ರಿ.ಶ. ೧೩೭೦ರ ಅವಧಿಗೆ ಸೇರಿದ ಕನ್ನಡ ಶಾಸನಗಳು[೧೮] ಹೊಸೂರಿನಲ್ಲಿದ್ದು, ಆತನ ಮಹಾಪ್ರಧಾನಿ ಸೋವಪ್ಪ ದಂಡನಾಯಕನೆಂದು ತಿಳಿದುಬರುತ್ತದೆ.

ಇಮ್ಮಡಿ ಹರಿಹರನ ಮಗ ಬುಕ್ಕಣ ಒಡೆಯನ ಕ್ರಿ.ಶ. ೧೩೭೮ರ ಶಾಸನಗಳು ಹೊಸೂರು[೧೯] ಹಾಗೂ ಅದೇ ತಾಲೂಕಿನ ಮುಗಳೂರು[೨೦] ಗ್ರಾಮದಲ್ಲಿ ಕಂಡುಬಂದಿವೆ. ಕ್ರಿ.ಶ.೧೩೮೬ಕ್ಕೆ ಸೇರಿದ ವೀರಹರಿಯಪ್ಪ ಒಡೆಯನ ಆಳಿಕೆಯ ಶಾಸನ[೨೧] ಗೋಪಿಚೆಟ್ಟಿಪಾಳ್ಯ ತಾಲೂಕಿನ ಎರಗನಹಳ್ಳಿಯಲ್ಲಿದೆ.

೧೭. ಡಿ.ಎಸ್. ಶಾನಭಾಗ, ಗಂಗಾದೇವಿಯ ಮಧುರಾವಿಜಯ, ಧಾರವಾಡ, ೧೯೮೫, ಪು.೫೫

೧೮. *ARIE*, 1970-71, B 492 & 493

೧೯. ಅದೇ, 1969-70, B 294

೨೦. ಅದೇ, 1970-71, B 513

೨೧. *SII*, Vol. IX.No.420

ಅಲ್ಲದೆ ಮತ್ತೊಂದು ಶಾಸನವು[೨೨] ಹೊಸೂರು ತಾಲೂಕಿನ ಕೂಸ್ತನಹಳ್ಳಿ ಗ್ರಾಮದಲ್ಲಿದೆ. ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನಗಳು ಉಳಮಾರನಹಳ್ಳಿ,[೨೩] ಗುಮ್ಮಳಾಪುರ[೨೪] ಸ್ಥಳಗಳಲ್ಲಿ ಕಂಡುಬಂದಿವೆ. ಸಾಳುವ ವೀರಭುಜಬಲರಾಯನದೆಂದು ತಿಳಿದುಬರುವ ಕ್ರಿ.ಶ. ೧೫೦೯ರ ಶಾಸನವೊಂದು[೨೫] ಕೂತಪ್ಪಾಡಿ ಸ್ಥಳದಲ್ಲಿದೆ. ತುಳುವ ವಂಶದ ಕೃಷ್ಣದೇವರಾಯನನ್ನು ಇಲ್ಲಿನ ಹಲವು ಶಾಸನಗಳು ಸಾಳುವ ಇಮ್ಮಡಿ ಕೃಷ್ಣರಾಯನೆಂದು ಕರೆದಿರುವುದು ಕುತೂಹಲಕಾರಿಯಾಗಿದೆ. ಕ್ರಿ.ಶ.೧೫೦೮ ರಿಂದ ೧೫೨೬ರ ವರೆಗೂ ಗಂಗನಹಳ್ಳಿ,[೨೬] ಕಾಟಿನಾಯಕನದೊಡ್ಡಿ,[೨೭] ಹೊಸೂರು,[೨೮] ಗುಮ್ಮಳಾಪುರ,[೨೯] ಇಂದೂರು[೩೦] ಮುಂತಾದ ಸ್ಥಳಗಳಲ್ಲಿ ಈತನ ಶಾಸನಗಳಿವೆ. ಕ್ರಿ.ಶ. ೧೫೩೦ರಿಂದ ೧೫೪೯ರ ಅವಧಿಗೆ ಸೇರಿದ ಅಚ್ಯುತರಾಯನ ಅನೇಕ ಶಾಸನಗಳು ಅಧಮಾನಕೋಟೆ,[೩೧] ತಳಿ,[೩೨] ಎರಗನಹಳ್ಳಿ,[೩೩] ಹೊಸೂರು,[೩೪] ಮುದಗಾನಹಳ್ಳಿ ಮುಂತಾದ ಸ್ಥಳಗಳಲ್ಲಿ ಕಂಡುಬಂದಿವೆ. ಕ್ರಿ.ಶ.೧೫೪೦ ರಿಂದ ೧೫೫೬ರ ವರೆಗಿನ ಹಲವು ಶಾಸನಗಳಲ್ಲಿ ಸದಾಶಿವದೇವರಾಯನು ಉಲ್ಲೇಖಿತವಾಗಿದ್ದು, ಶಂಖಗಿರಿ,[೩೫] ಧಾರಾಪುರ,[೩೬] ಕಾರಿಮಂಗಲ[೩೭] ಮುಂತಾದ ಸ್ಥಳಗಳಲ್ಲಿವೆ. ರಾಮರಾಜ ಒಡೆಯನನ್ನು ಉಲ್ಲೇಖಿಸುವ ಕ್ರಿ.ಶ. ೧೫೬೩ರ ಶಾಸನವೊಂದು[೩೮] ಡೆಂಕಣಿಕೋಟೆಯಲ್ಲಿದೆ. ಕ್ರಿ.ಶ. ೧೬೦೬ರ ಗುಮ್ಮಳಾಪುರದ ಶಾಸನವೊಂದರಲ್ಲಿ[೩೯] ವೆಂಕಟಪತಿರಾಯನ ಉಲ್ಲೇಖ ಬಂದಿದೆ. ಧರ್ಮಪುರಿಯ ವಿರೂಪಾಕ್ಷಪುರದಲ್ಲಿರುವ ಕ್ರಿ.ಶ. ೧೬೧೯ರ ಶಾಸನವು[೪೦] ಶ್ರೀರಂಗರಾಯನದಾಗಿದೆ.

---

೨೨. *ARIE*, 1970-71, B 508
೨೩. ಅದೇ, 1971-72, B 208
೨೪. ಅದೇ, B 196
೨೫. *SII*, Vol. VII No.15
೨೬. *ARIE*, 1971-72, B 193
೨೭. ಅದೇ, 1970-71, B 504
೨೮. ಅದೇ, 1969-70, B 304
೨೯. ಅದೇ, 1971-72, B 194
೩೦. ಅದೇ, 1900 / 13
೩೧. ಅದೇ, 1910 / 200
೩೨. ಅದೇ, 1955-56, B 310
೩೩. *SII*, XI, No.532, 545 etc.
೩೪. *ARIE*, 1969-70, B 255 & 288
೩೫. *ARIE*, 1929-30, B 510
೩೬. *SII*, Vol. IX.No. 634
೩೭. ಅದೇ, Vol. VII, No.5
೩೮. *ARIE*, 1976-76, B 214
೩೯. ಅದೇ, 1971-72, B 195
೪೦. *TLIMP*, 81 A

ವಿಜಯನಗರ ಆಳ್ವಿಕೆಯ ಕೊನೆಕೊನೆಯ ಕಾಲದಲ್ಲಿ ಪ್ರಬಲರಾಗತೊಡಗಿದ್ದ ಸ್ಥಳೀಯ ಸಾಮಂತರೇ ಮುಂತಾದವರು ಮುಂದೆ ಪಾಳೆಯಗಾರರೆನಿಸಿಕೊಂಡರು. ಹೀಗೆ ತಲೆಯೆತ್ತಿದ್ದ ಅನೇಕರಲ್ಲಿ ಮೈಸೂರಿನ ಒಡೆಯರು ಹೆಚ್ಚು ಪ್ರಬಲರಾಗಿ ಇತರ ಪಾಳೆಯಗಾರರನ್ನು ಸೋಲಿಸಿ ತಮ್ಮ ಅಧೀನಕ್ಕೆ ಒಳಪಡಿಸಿಕೊಂಡಿರುವುದು ಶಾಸನಗಳಿಂದ ತಿಳಿದುಬರುತ್ತದೆ.

೪.೧೦ ಮೈಸೂರು ದೊರೆಗಳು

ಕ್ರಿ.ಶ. ಹದಿನೈದನೆಯ ಶತಮಾನದ ಆದಿಭಾಗದಲ್ಲಿ ತಲೆಯೆತ್ತತೊಡಗಿದ ಮೈಸೂರು ಅರಸರು ವಿಜಯನಗರದ ಪತನದೊಂದಿಗೆ ಹುಟ್ಟಿಕೊಂಡ ಪಾಳೆಯಗಾರರಿಂದ ಏರ್ಪಟ್ಟಿದ್ದ ಅರಾಜಕತೆಯ ಅನುಕೂಲವನ್ನು ಪಡೆದು ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಹೋದರು. ಈ ವಂಶದಲ್ಲಿ ಹನ್ನೆರಡನೆಯ ಅರಸನೆನಿಸಿಕೊಂಡ ರಣಧೀರಕಂಠೀರವ ನರಸರಾಜ ಒಡೆಯ (ಕ್ರಿ.ಶ.೧೬೩೮–೫೯) ಬಹು ಪರಾಕ್ರಮಿಯಾದ ಅರಸು, ತಮಿಳುನಾಡಿನ ಮದುರೆ ಪ್ರದೇಶವನ್ನು ಘಟ್ಟಿ ಮೊದಲಿಯಾರ್ ವೆಂಕಟಾದ್ರಿ ಮುಂತಾದ ನಾಯಕರು ಆಳುತ್ತಿದ್ದರು. ಮದುರೆಯ ಆಡಳಿತಕ್ಕೆ ಸೇರಿದ್ದ ದಂಟಳ್ಳಿ, ಶಿಂಗಾನಲ್ಲೂರು, ಕಾವೇರಿಪುರ, ತೋಳ್ಯದ ಹೋಬಳಿಗೆ ಸೇರಿದ ಚಂಗಪಾಡಿ, ಮೊರಟಿಹಳ್ಳಿ ಮುಂತಾದವುಗಳನ್ನು ಕ್ರಿ.ಶ. ೧೬೪೧ರಲ್ಲಿ ಸಾಧಿಸಿದ ಇವರು ಮತ್ತು ಕ್ರಿ.ಶ. ೧೬೫೨ರಲ್ಲಿ ದಣಾಯಕನಕೋಟೆ, ಬಿಜಾಪುರ ಮುಸ್ಲಿಮರ ವಶದಲ್ಲಿದ್ದ ವೀರಭದ್ರದುರ್ಗ, ಪೆನ್ನಾಗರ, ಡೆಂಕಣಿಕೋಟೆ, ಧರ್ಮಪುರಿಗಳನ್ನು ಚಂದ್ರಶೇಖರನಿಂದ ಹೊಸೂರನ್ನು ಕ್ರಿ.ಶ. ೧೬೫೫ರಲ್ಲಿಯೂ ವಶಪಡಿಕೊಂಡರು. ಹೀಗೆ ರಾಜ್ಯ ವಿಸ್ತರಣಾ ವಿಷಯದಲ್ಲಿ ಪುರೋಗಾಮಿಯಾದ ಇವರ ಕ್ರಿ.ಶ. ೧೬೫೫ರ ಶಾಸನವೊಂದು[೪೧] ಈರೋಡಿನಲ್ಲಿ ದೊರೆತಿದ್ದು ದಳವಾಯಿ ಹಂಪೈಯ ಮತ್ತು ಮದುರೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೬೫೯ರಲ್ಲಿ ಮುಪ್ಪಿನ ದೇವರಾಜ ಒಡೆಯನ ಮಗ ದೊಡ್ಡದೇವರಾಜ ಒಡೆಯರು (ಕ್ರಿ.ಶ. ೧೬೫೫–೧೬೭೩) ಸಿಂಹಾಸನಸ್ಥರಾದರು. ಪರಾಕ್ರಮಿ ಹಾಗೂ ಪರಮದೈವಭಕ್ತರಾಗಿದ್ದ ಇವರು ಸೇಲಂ ಜಿಲ್ಲೆಗೆ ಸೇರಿದ ವಾಮಲೂರು ಸ್ಥಳದ ಮಲ್ಲಿಗೆಕೋಟೆಯನ್ನು[೪೨] ಸ್ವಪರಾಕ್ರಮದಿಂದ ಗೆದ್ದ, ನಂಜನಗೂಡಿನ ನಂಜುಂಡೇಶ್ವರನಿಗೆ ಕೆಲವು ಗ್ರಾಮಗಳನ್ನು ದತ್ತಿಬಿಟ್ಟ ವಿವರಗಳನ್ನು ಶಾಸನವೊಂದು ನೀಡುತ್ತದೆ. ಕ್ರಿ.ಶ. ೧೬೬೮ರ ಸತ್ಯಮಂಗಲ ತಾಲೂಕಿನ ಬಸ್ತರಪಾಳ್ಯ (ಬೆಸ್ತರಪಾಳ್ಯ) ಗ್ರಾಮದ ಶಿಲಾಶಾಸನ[೪೩] ಗ್ರಾಮದಾನವನ್ನು ಉಲ್ಲೇಖಿಸಿದರೆ, ಕ್ರಿ.ಶ. ೧೬೭೦ರ ಶಾಸನವೊಂದು[೪೪] ಯೇಣೂರು ಕಣಿವೆಯ ಕೆಳಗಣ ಉಡವಂಕನಾಡ ಸತ್ಯಮಂಗಲದ ಸ್ಥಳಕ್ಕೆ ಸಲ್ಲುವ ಕರವಳಿ ಹೋಬಳಿಯಲ್ಲಿನ ಬೆಸ್ತರಪಾಳಕ್ಕೆ ಪ್ರತಿನಾಮವಾದ ಕೋಮಾರಪುರದ ಗ್ರಾಮವನ್ನು ಧವಳಗಿರಿಯ ಕುಮಾರಸ್ವಾಮಿಯವರ ಸೇವೆಗೆ ದತ್ತಿಬಿಟ್ಟ ವಿವರವನ್ನು ತಿಳಿಸುತ್ತದೆ. ಈ ಅರಸರ ಆಳ್ವಿಕೆಗೆ ಸೇರಿದ ಇನ್ನೊಂದು ಶಾಸನವು[೪೫] ಸತ್ಯಮಂಗಲ ತಾಲೂಕಿನ ವಿನ್ನಪಳ್ಳಿಯಲ್ಲಿ ದೊರೆತಿದ್ದು, (ಕ್ರಿ.ಶ. ೧೬೭೧) ಬ್ರಾಹ್ಮಣರಿಗೆ ದತ್ತಿ ಬಿಟ್ಟ ವಿವರವನ್ನು ತಿಳಿಸುತ್ತದೆ.

---

೪೧. *SII*, Vol. IX.No.705

೪೨. *ARIE*, 1955-56, B 317

೪೩. *TLIMP*, No.306

೪೪. *SII*, Vol. IX. No.703

೪೫. *TLIMP*, 309

ಚಿಕ್ಕದೇವರಾಜ ಒಡೆಯರು (ಕ್ರಿ.ಶ. ೧೬೭೩–೧೭೦೪): ಮೈಸೂರು ದೊರೆಗಳಲ್ಲಿಯೇ ಕ್ರಾಂತಿಕಾರಿ ಎನಿಸಿಕೊಂಡವರು. ಇವರು ಕಳಲೆ ಕುಮಾರಯ್ಯ, ದೊಡ್ಡಯ್ಯ ಮುಂತಾದ ದಳವಾಯಿಗಳ ನೆರವಿನಿಂದ, ಕೈಬಿಟ್ಟು ಹೋಗಿದ್ದ ಅನೇಕ ಪ್ರದೇಶಗಳನ್ನು ಮತ್ತೆ ಪಡೆದುಕೊಂಡರು. ಹೀಗೆ ಬಂದ ಸ್ಥಳಗಳಲ್ಲಿ ಶಂಖಗಿರಿ, ಮನ್ನಾರಗುಡಿ, ವಾಮಲೂರು, ಧರ್ಮಪುರಿ, ಕಾವೇರಿಪಟ್ಟಣ, ಶಾದಮಂಗಲ, ನಾಮಕಲ್ಲು, ತಮ್ಮಂಬಟ್ಟಿ ಮುಂತಾದವುಗಳನ್ನು ಹೆಸರಿಸಬಹುದು. ಇವರು ತಿರುಚಿನಾಪಳ್ಳಿಗೆ ಮುತ್ತಿಗೆ ಹಾಕಿದರು. ನಂತರ ಮರಾಠರೊಂದಿಗೂ ಯುದ್ಧ ಮಾಡಿದರು. ಇವರ ಆಳ್ವಿಕೆಯ ಕಾಲದ ಹಲವು ಶಾಸನಗಳು ಈ ಗಡಿ ಪ್ರದೇಶದಲ್ಲಿದ್ದು ಅವರ ದಳವಾಯಿಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕ್ರಿ.ಶ. ೧೬೭೩ರ ಹೊಸೂರು ತಾಲೂಕಿನ ದೊಡ್ಡಬೇಲೂರಿನ ಶಾಸನವು[೪೬] ದಳವಾಯಿ ಕುಮಾರಯ್ಯನನ್ನು ಪ್ರಸ್ತಾಪಿಸುತ್ತದೆ. ಈತನ ಕಿರಿಯ ಸೋದರನಾದ ನಂಜರಾಜಯ್ಯನನ್ನು ಪ್ರಸ್ತಾಪಿಸುವ ಶಾಸನವು[೪೭] ತೊರಹಳ್ಳಿ ಗ್ರಾಮದಲ್ಲಿದ್ದು ಕ್ರಿ.ಶ. ೧೬೭೪ಕ್ಕೆ ಸೇರಿದೆ. ತಿರುಚೆಂಗೋಡು ತಾಲೂಕು ಶಂಖಗಿರಿಯ ಕ್ರಿ.ಶ. ೧೬೭೮ರ ಶಾಸನವು[೪೮] ಅಲ್ಲಿನ ಚೆನ್ನಕೇಶವ ದೇವಾಲಯಕ್ಕೆ ದ್ವಾರಪಾಲಕರನ್ನು ಮಾಡಿಸಿಕೊಟ್ಟಿರುವ ವಿವರವನ್ನು ನೀಡುತ್ತದೆ.

ಚಿಕ್ಕದೇವರಾಜ ಒಡೆಯರ ನಂತರದಲ್ಲಿ ಬಂದ ಮೈಸೂರು ಅರಸರಲ್ಲಿ ದೊಡ್ಡಕೃಷ್ಣರಾಜ ಮತ್ತು ಇಮ್ಮಡಿ ಕೃಷ್ಣರಾಜರ ಆಳ್ವಿಕೆ ಮುಖ್ಯವಾದುದು. ದೊಡ್ಡಕೃಷ್ಣರಾಜರ ಆಳ್ವಿಕೆಯ ಕಾಲದಲ್ಲಿ ಹಿಂದಿನಂತೆ ರಾಜ್ಯವಿಸ್ತರಣಾ ಕಾರ್ಯವು ದಳವಾಯಿಗಳ ಮುಖಾಂತರ ಮುಂದುವರೆದು ಅವರು ಹೆಚ್ಚು ಪ್ರಬಲರಾದರು. ಮಹಾರಾಜರಾದರೋ ಸಂಗೀತ, ಸಾಹಿತ್ಯ, ನಾಟಕರಂಗು ಮುಂತಾದವುಗಳಲ್ಲಿ ತಲ್ಲೀನರಾಗಿದ್ದರಲ್ಲದೆ, ತಿರುಪತಿಯ ಪರಕಾಲಸ್ವಾಮಿಗಳಿಂದ ಶ್ರೀವೈಷ್ಣವ ದೀಕ್ಷೆಯನ್ನು ಪಡೆದು ಪರಮ ಭಾಗವತರಾಗಿದ್ದರು. ಕ್ರಿ.ಶ. ೧೭೧೭ರ ಧರ್ಮಪುರಿ ಜಿಲ್ಲೆಯ ಪಾಪಾರಪಟ್ಟಿ ಸ್ಥಳದ ಶಾಸನವು[೪೯] ಕಂಚಿಯ ವರದರಾಜಸ್ವಾಮಿ ಸಂನಿಧಿಯಲ್ಲಿ ಆಳಘಿಯಮನವಾಳ ರಾಮಾನುಜಜೀಯರವರ ಹವಾಲಿನಲಿ ಶಾಶ್ವತವಾಗಿ ನಡೆಸಿಕೊಂಡು ಬರುವ ನಿತ್ಯಕೈಂಕರ್ಯಕ್ಕೆ ವೀರಭದ್ರದುರ್ಗದ ಸೀಮೆಯ ಕುಂನೆಕೊಳದ ಹೋಬಳಿಯ ಪಾಪಾರಪಟ್ಟಿ ಮುಂತಾದ ಒಟ್ಟು ೧೨ ಗ್ರಾಮಗಳನ್ನು ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. ಹೀಗಾಗಿ ಈ ಅರಸರ ಕಾಲದಲ್ಲಿ ದಳವಾಯಿ ನಂಜರಾಜಯ್ಯ ಸರ್ವಾಧಿಕಾರಿ ಸ್ಥಾನವನ್ನು ಪಡೆದು ತಾನೇ ರಾಜನೆಂಬಂತೆ ಮೆರೆದ. ಕೈಬಿಟ್ಟು ಹೋಗಿದ್ದ ಮಾಗಡಿ, ಶಾಲ್ಯ (ಸೇಲಂ), ರತ್ನಗಿರಿ ಮುಂತಾದವುಗಳನ್ನು ಮರಳಿ ವಶಪಡಿಸಿಕೊಳ್ಳುವುದರ ಮೂಲಕ ರಾಜ್ಯವಿಸ್ತರಣಾ ಕಾರ್ಯವೇನೋ ಮುಂದುವರೆಯಿತು. ಮುಂದೆ ಬಂದ ಚಾಮರಾಜ ಒಡೆಯ (ಕ್ರಿ.ಶ. ೧೭೩೨–೩೪)ರವರನ್ನು ದಳವಾಯಿ ದೇವರಾಜಯ್ಯನೇ ಮುಂತಾದವರು ಸೇರಿ ಕಬ್ಬಾಳುದುರ್ಗದಲ್ಲಿ ಬಂಧನದಲ್ಲಿರಿಸಿದರು. ಆನಂತರ ಕ್ರಿ.ಶ. ೧೭೩೪ರಿಂದ ಇಮ್ಮಡಿ ಕೃಷ್ಣರಾಜ ಒಡೆಯನ ಆಳ್ವಿಕೆ ಆರಂಭವಾಯಿತು. ಪಟ್ಟಕ್ಕೆ ಬಂದಾಗ ರಾಜರು ಕೇವಲ ಆರು ವರ್ಷದ ಬಾಲಕನಾಗಿದ್ದುದರಿಂದ ಸರ್ವಾಧಿಕಾರಿ ನಂಜರಾಜಯ್ಯನು ೫–೬

---

೪೬. *TLIMP*, - ***Antiquities*** Vol. I p. 194

೪೭. *ARIE*, 1954-55, B 317

೪೮. ಅದೇ, 1929-30, B 512

೪೯. *SII*, Vol. IX, No.704

ವರ್ಷಗಳ ಕಾಲ ಎಲ್ಲ ಕಾರುಬಾರನ್ನು ತಾನೇ ಮಾಡಿದನು. ಈತನು ಕ್ರಿ.ಶ. ೧೭೩೯ರಲ್ಲಿ ತೀರಿಕೊಂಡ ನಂತರ ದಳವಾಯಿ ದೇವರಾಜಯ್ಯನ ಸೋದರನಾದ ಕರಾಚೂರಿ ನಂಜರಾಜನು ಸರ್ವಾಧಿಕಾರಿಯಾದನು. ಆ ಅವಧಿಯಲ್ಲೇ, ಕೇವಲ ಜಮಾದಾರನಾಗಿದ್ದ ಹೈದರನಾಯಕನು ಸ್ವಾಮಿನಿಷ್ಠೆ ಮತ್ತು ಪರಾಕ್ರಮಗಳಿಂದ ತನ್ನ ಭವಿಷ್ಯವನ್ನು ರೂಪಿಸಿಕೊಂಡನು. ಕೈತಪ್ಪಿ ಹೋಗಿದ್ದ ಅನೇಕ ಪ್ರದೇಶಗಳನ್ನು ಹೈದರ್ ಗೆದ್ದುದಲ್ಲದೆ, ಮೈಸೂರು ಸೀಮೆಯನ್ನು ನಾಲ್ಕೂದಿಕ್ಕುಗಳಲ್ಲಿ ವಿಸ್ತರಿಸುತ್ತಾ ಹೋದನು. ಕ್ರಿ.ಶ. ೧೭೪೨ರಿಂದ ೧೭೬೩ರ ಅವಧಿಯ ಇಮ್ಮಡಿ ಕೃಷ್ಣರಾಜ ಒಡೆಯರ ಅನೇಕ ಶಾಸನಗಳು ತಳಿ, ಅವಿನಾಶಿ, ಅಮ್ಮಾಪಾಳ್ಯ, ಸತ್ಯಮಂಗಲ, ಕುಮಾರಪಾಳ್ಯ, ಮೆಟ್ಟೂರು ಅನ್ನಿಮಲೈ (ಆನೆಮಲೆ) ಮುಂತಾದ ಸ್ಥಳಗಳಲ್ಲಿ ದೊರೆತಿವೆ.[೫೦]

ಕಾಲದ ಉಲ್ಲೇಖವಿಲ್ಲದ ಉಪ್ಪಾರಹಳ್ಳಿಯ ಶಾಸನವೊಂದು[೫೧] ಚಾಮರಾಜ ಒಡೆಯ ಮತ್ತು ನರಸಿಂಹರಾಜ ಎಂಬುವರನ್ನು ಪ್ರಸ್ತಾಪಿಸುತ್ತದೆ. ತಳಿ ಸ್ಥಳದಲ್ಲಿರುವ ಶಾಸನವೊಂದು ಸಿದ್ಧಾರ್ಥಿ ಸಂವತ್ಸರ ಚೈತ್ರ ಬಹುಳ ೩೦ ಶನಿವಾರದಂದು ಮಧ್ಯಾಹ್ನ ಶ್ರೀರಂಗಪಟ್ಟಣವನ್ನು ಕುಂಪಣಿಯವರು (ಈಸ್ಟ್ ಇಂಡಿಯಾ ಕಂಪನಿ) ವಶಪಡಿಸಿಕೊಂಡ ವಿಷಯ ಹಾಗೂ ಕಲೆಕ್ಟರ್ ಹಾಮಿಲ್ಟನ್ನನನ್ನು ಉಲ್ಲೇಖ ಮಾಡುತ್ತದೆ.[೫೨] ಈ ತೇದಿ ವಿವರಗಳು ಕ್ರಿ.ಶ. ೧೭೯೯ ಮೇ ೪ನೇ ತಾರೀಖಿಗೆ ತಾಳೆಯಾಗುತ್ತದೆ.

ಒಟ್ಟಾರೆ ಗಡಿ ಪ್ರದೇಶದ ಶಾಸನಗಳು ರಾಜಕೀಯವಾಗಿ ಅನೇಕ ವಿಷಯಗಳ ಬಗ್ಗೆ ಮಹತ್ವದ ಬೆಳಕನ್ನು ಚೆಲ್ಲಿ ಗಮನ ಸೆಳೆಯುತ್ತವೆ.

೪.೧೧ ಆಡಳಿತಾಧಿಕಾರಿಗಳು

ಯಾವುದೇ ಒಂದು ಪ್ರದೇಶದ ನಿಜವಾದ ಆಡಳಿತಗಾರರೆಂದರೆ, ರಾಜರಿಂದ ಅಥವಾ ಸಾಮಂತರಿಂದ ನೇಮಿತರಾದ ಇಲ್ಲವೆ ಅಧಿಕೃತರಾದ ಮಾಂಡಲಿಕ ಮತ್ತು ಅವರ ಕೈಕೆಳಗಿನ ದಂಡಾಧಿಕಾರಿಗಳೇ ಮುಂತಾದ ಅಧಿಕಾರಿಗಳೆಂದೇ ಹೇಳಬಹುದು. ಅಂತಹ ಅನೇಕ ಅಧಿಕಾರಿಗಳ ಉಲ್ಲೇಖಗಳನ್ನು ತಮಿಳುನಾಡಿನ ಕನ್ನಡ ಶಾಸನಗಳಲ್ಲೂ ಕಾಣಬಹುದಾಗಿದೆ.

ಗಂಗರ ಮಾಂಡಲಿಕನಾಗಿ ವೈದುಂಬರ ರಾಮರಾಜ ಅರಸ ಎಂಬುವನ ಉಲ್ಲೇಖ ಮಾಚಿನಾಯಕಹಳ್ಳಿಯ ಒಂಬತ್ತನೆಯ ಶತಮಾನದ ಶಾಸನದಲ್ಲಿ[೫೩] ಬಂದಿದೆ. ಪ್ರಾಯಶಃ ತವಳಂ ಶಾಸನದಲ್ಲಿ ಉಕ್ತನಾಗಿರುವ ರಾಮರಸನೆಂಬುವನು ಇವನೇ ಇರಬೇಕು. ಬಾಣರ ಆಳ್ವಿಕೆಯ ಕಾಲದಲ್ಲಿ ತೇಕ[illegible]ಡಳ್ಪತ್ತನ್ನು ಕೀರ್ತಿಲಮ್ಮರಸನೆಂಬುವನು ಆಳುತ್ತಿದ್ದ.[೫೪] ಅವನ ಮಗನ ಹೆಸರು ಎರೆಗಂಗ ಎಂದು ತಿಳಿದುಬರುತ್ತದೆ.

---

೫೦. *TLIMP*, No.113, 32, 264, 303, 305, 307, 304, 42; *ARIE*, 1933-34, B 155, 1942-43, A 9; 1947-48, A 1, A 2; 1927-28, A7; 1959-60, B 345.

೫೧. *ARIE*, 1971-72, B 209

೫೨. ಅದೇ, 1955-56 B 311

೫೩. *ARIE*, 1970-71, B 509

೫೪. *SII*, Vol. VII, No.2

ವಲ್ಲಭದುರ್ಜಯರ ಅಧಿಕಾರದ ಮೇರೆಗೆ ಶ್ರೀಮದನಿವಾರಿತ ಪುಣ್ಯವಲ್ಲಭನೆಂಬುವ ಅಧಿಕಾರಿ ಕಂಚಿಯ ರಾಜಸಿಂಘೇಶ್ವರ ದೇವಾಲಯದ ಶಾಸನವನ್ನು ಹಾಕಿಸಿರುತ್ತಾನೆ. ಇಲ್ಲಿ ಪ್ರಯುಕ್ತವಾಗಿರುವ 'ವಲ್ಲಭದುರ್ಜಯ' ಎಂಬ ಬಿರುದು ಚಾಲುಕ್ಯರ ಮೊದಲ ವಿಕ್ರಮಾದಿತ್ಯನದೇ ಆಗಿದೆ. ಶಾಸನವನ್ನು ಹಾಕಿಸಿದ ಪುಣ್ಯವಲ್ಲಭನು ಒಬ್ಬ ಸಂಧಿವಿಗ್ರಹಾಧಿಕಾರಿಯಾಗಿದ್ದಿರಬೇಕು.

ಕಲ್ಯಾಣದ ಚಾಲುಕ್ಯರ ಶ್ರೀರಂಗಂ ಶಾಸನದಲ್ಲಿ ದಂಡನಾಯಕ ಹಾಗೂ ಕನ್ನಡ ಸಂಧಿವಿಗ್ರಹಿಕ ಎಂಬ ಅಧಿಕಾರಿಗಳ ಪ್ರಸ್ತಾಪ ಬಂದಿದೆ.

ಆರಂಭ ಕಾಲದ ಶಾಸನಗಳಲ್ಲಿ ಸ್ಥಳೀಯ ಆಡಳಿತ ಘಟಕಗಳಾದ ನಾಡು, ಗ್ರಾಮ ಮತ್ತು ಪಟ್ಟಣಗಳ ಅಧಿಕಾರಿಗಳಾಗಿ ಹಲವು ಗಾವುಂಡರ ಮತ್ತು ಸೆಟ್ಟಿವರ್ತಕರ ಉಲ್ಲೇಖಗಳು ಕಂಡುಬರುತ್ತವೆ. ನೊಳಂಬರ ಶಾಸನಗಳಲ್ಲಿ ದಾನದತ್ತಿಗಳನ್ನು ನೀಡುವಾಗ ನಾಲ್ಕು ಸಮಯಿಗಳು ಮತ್ತು ನಕರರ ಮುಖ್ಯರನ್ನು ಪ್ರಸ್ತಾಪಿಸಿರುವುದು ಕಂಡುಬರುತ್ತದೆ.

ಕ್ರಿ.ಶ. ಒಂಬತ್ತನೆಯ ಶತಮಾನದ ಮಾಚಿನಾಯಕನಹಳ್ಳಿಯ ಶಾಸನದಲ್ಲಿ[೫೫] ವೆಂತುರಗಾಮುಂಡನ ಹೆಸರು ಬಂದಿದೆ. ತವಳಂ ಶಾಸನದಲ್ಲಿ[೫೬] ಕೊಳ್ಳಗಾಮುಣ್ಡ, ಹೊಸೂರಿನ ಶಾಸನದಲ್ಲಿ ಪೊಲಮಂದನಾಡಿನ ನಾಡಗಾವುಂಡ ವಿಕ್ರಮಚೋಳಗಾವುಂಡನ ಉಲ್ಲೇಖ ಬಂದಿದೆ. ಮೊರಸುನಾಡಿನ ಗೌಡ ಸಾಲಯ, ಎಲಹಂಕನಾಡ ಪ್ರಭು ಇಮ್ಮಡಿ ಕೆಂಪೇಗೌಡ ಮುಂತಾದವರಲ್ಲದೆ, ಚೂಡೇಗೌಡ, ಕೆಂಪಣ್ಣಗೌಡ ಎಂಬ ಊರುಗೌಡುಗಳ ಉಲ್ಲೇಖಗಳು ವಿಜಯನಗರದ ಮತ್ತು ನಂತರ ಕಾಲದ ಶಾಸನಗಳಲ್ಲಿ ಕಂಡುಬಂದಿದೆ. ಪೊಳಲಮೆಟ್ಟಿ, ಪಟ್ಟಣಸೆಟ್ಟಿ, ಕರಡಿಸೆಟ್ಟಿ, ರಾಜಬೆವಹಾರಿ ಗುಮ್ಮಳಾಪುರದ ಅಕ್ಕಲ ಚೆಂನಿಸೆಟ್ಟಿ ಮುಂತಾದ ನಕರ ವರ್ಗದ ಮುಖಂಡರ ಉಲ್ಲೇಖಗಳು ಗಮನ ಸೆಳೆಯುತ್ತದೆ. ಹೊಯ್ಸಳ ಸೋಮೇಶ್ವರನ ಮಯಿಗಾಹಿನಾಳು (body gaurd) ಪದುಮಯ್ಯನಾಯಕನ ಮಗ ಹರತಿನಾಯಕ ಎಂಬುವನನ್ನು ತಿರುಚಿರಾಪಳ್ಳಿ ಜಿಲ್ಲೆಯ ಲಾಲ್‌ಗುಡಿ ತಾಲೂಕಿನ ಸಮಯವರಂ ಸ್ಥಳದ ಕನ್ನಡ ಶಾಸನವು[೫೭] ಉಲ್ಲೇಖಿಸುತ್ತದೆ.

ವಿಜಯನಗರದ ಅರಸರು ಪ್ರಾರಂಭದಲ್ಲಿ ತಮ್ಮನ್ನು ಮಹಾಮಂಡಲೇಶ್ವರರೆಂದೇ ಕರೆದುಕೊಂಡಿದ್ದರು. ಅವರ ಬಹುತೇಕ ತಾಮ್ರಪಟಗಳಲ್ಲಿ ಹಾಗೂ ಹಲವು ಶಿಲಾಶಾಸನಗಳಲ್ಲಿ 'ಶ್ರೀ ವಿರೂಪಾಕ್ಷ' ಎಂಬ ಒಪ್ಪವನ್ನು ಹಾಕಿರುವುದನ್ನು ಗಮನಿಸಿದರೆ ವಿರೂಪಾಕ್ಷಸ್ವಾಮಿಯೇ ಸಾಮ್ರಾಜ್ಯದ ಒಡೆಯ, ತಾವು ಆತನ ಆಜ್ಞಾಧಾರಕರಾದ ಮಂಡಲೇಶ್ವರರು ಎಂಬ ನಿಲುವನ್ನು ತಳೆದಿದ್ದರೆಂದು ಅನಿಸುತ್ತದೆ. ಮಹಾಮಂಡಳೇಶ್ವರ ಬುಕ್ಕಣವೊಡೆಯ ಮತ್ತು ಅವನ ಮಗ ಕುಮಾರ ವೀರಕಂಪಣ ಒಡೆಯ, ಮಹಾಮಂಡಳೇಶ್ವರ ಹರಿಯಪ್ಪ ಒಡೆಯ ಎಂಬ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತದೆ. ನಂತರದ ಶಾಸನಗಳಲ್ಲಿ ಮಹಾಮಂಡಳೇಶ್ವರ ಹಿರಿಯ ತಿರುಮಲೇದೇವ ಅರಸು[೫೮] ಹುಲಿಯ

೫೫. *ARIE*, 1970-71, B 510

೫೬. ಅದೇ, 1967-68, B 247

೫೭. *SII*, Vol. IX, No.348

೫೮. *ARIE*, 1975-76, B 214

ರಾಮಯ್ಯದೇವ ಮಹಾ ಅರಸು[೫೯] ಮುಂತಾದವರು ಮಹಾಮಂಡಳೇಶ್ವರರೆಂಬ ಅಧಿಕಾರವನ್ನು ಪಡೆದಿದ್ದ ಅಂಶ ತಿಳಿದುಬರುತ್ತದೆ.

ಮಹಾಮಂಡಳೇಶ್ವರರ ಕೈಕೆಳಗೆ ಅನೇಕ ಪ್ರಧಾನಿಗಳು ಹಾಗೂ ದಂಡನಾಯಕರು ಕಾರ್ಯ ನಿರ್ವಹಿಸುತ್ತಿದ್ದರು. ಕುಮಾರ ವೀರಕಂಪಣ ಒಡೆಯನ ಮಹಾಪ್ರಧಾನ ಸೋವಪ್ಪನಾಗಿದ್ದನು.[೬೦] ಮಹಾಪ್ರಧಾನ ಕಪ್ಪಯದಂಡನಾಯಕ,[೬೧] ಪ್ರಧಾನ ಮಲ್ಲಪ್ಪಯ್ಯ,[೬೨] ಶಿರಃಪ್ರಧಾನ ಶಿಕ್ಕರಸ[೬೩] ಮುಂತಾದವರು ಶಾಸನೋಕ್ತರಾಗಿದ್ದಾರೆ. ಎರಮಂಡಲನಾಡಿನ ದಂಡನಾಯಕ[೬೪] ಅಚಲಪ್ಪ, ಮುಳುವಾಯಿ ರಾಜ್ಯದ ದಂಡನಾಯಕ[೬೫] ಲಕ್ಕಣ್ಣರಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಅಮರನಾಯಕರೆನಿಸಿಕೊಂಡ ಅನೇಕ ಸ್ಥಳೀಯ ಸೇನಾನಾಯಕರ ಹಾಗೂ ಆಡಳಿತಗಾರರ ಉಲ್ಲೇಖಗಳು ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ. ಡೆಂಕಣಿಕೋಟೆಯ ಅಮರನಾಯಕ[೬೬] ರಾಮರಾಜ ಒಡೆಯನಾಗಿದ್ದನೆಂಬ ಅಂಶ ಶಾಸನವೊಂದರಿಂದ ತಿಳಿದುಬರುತ್ತದೆ. ಮಹಾನಾಯಕಾಚಾರ್ಯರೆನಿಸಿಕೊಂಡ ಅಧಿಕಾರಿಗಳ ಸೇವೆ ವಿಜಯನಗರ ಸಾಮ್ರಾಜ್ಯಕ್ಕೆ ಅಪೂರ್ವವಾದುದು. ಶ್ರೀಮನ್ಮಹಾನಾಯಕಾಚಾರ್ಯ[೬೭] ಪಾಲುವಲ್ಲಟರ ಬಪ್ಪನಾಯಕನ ಮಗ ಮದ್ದೆಬೊಮ್ಮಿಯಪ್ಪ, ಅವನ ಮಗ ಕಾಮಿಯಪ್ಪನಾಯಕ, ವಿರುಪೆನಾಯಕರ ಮಕ್ಕಳು ಸಾಲೆನಾಯಕರು, ಪದ್ಮನಾಯಕ, ಅಲ್ಕಪ್ಪನಾಯಕ, ಸಾರರಿಯ ನಾಗಿಯನಾಯಕನ ಮಗ ಪೆಮ್ಮಯನಾಯಕ ಕೋಟಿನಾಯಕನ ಮಗ ಮುದಿಯ ಮುಂತಾದವರು ಶಾಸನೋಕ್ತರಾಗಿದ್ದಾರೆ.

ಕಂದಾಚಾರದ ಅಧಿಕಾರಿ[೬೮] ತಿಮ್ಮರಸಯ್ಯನ ಮಕ್ಕಳು ನಂಜಪ್ಪಯ್ಯನವರು, ಗಾಜಿನೂರು ಸ್ಥಳದ ಪಾರುಪತ್ಯಗಾರ[೬೯] ಕೊಂಡಪ್ಪಯ್ಯನವರು, ಅಲ್ಲಿನ ಶಾನುಭೋಗ[೭೦] ಗುಮ್ಮಟಯ್ಯ ಜೊತೆಗೆ ಹಲವು ಸ್ಥಳದ ಗವುಡುಗಳ ಪ್ರಸ್ತಾಪ ಶಾಸನಗಳಲ್ಲಿ ಬರುತ್ತದೆ.

ದೇವಾಲಯದ ಸ್ಥಾನಿಕನಾಗಿ[೭೧] ಕುಪ್ಪೆಯ ಚೂಡೇಆಳ್ವರೆಂಬುವರು ಹೊಸೂರಿನ ಚೂಡೆಯಲಿಂಗನ ದೇವಸ್ಥಾನದಲ್ಲಿದ್ದ ಬಗ್ಗೆ ತಿಳಿದುಬರುತ್ತದೆ. ಚೂಡಜೀಯನ ಮಗ ಚೆಂಬಿನಾಯಕ

---

೫೯. *ARIE*, 1975-76, B 214

೬೦. *ARIE*, 1970-71, B 492 & 493

೬೧. ಅದೇ. 1969-70, B 293

೬೨. *SII*, Vol.IX, No.596

೬೩. *ARIE*, 11975-76, B 214

೬೪. ಅದೇ. 1969-70, B 298

೬೫. ಅದೇ. 1971-72, B 208

೬೬. ಅದೇ. 1975-76, B 214

೬೭. *SII*, Vol. IX, No.532

೬೮. *SII*, Vol. IX, No.545, 546

೬೯. ಅದೇ.

೭೦. ಅದೇ.

೭೧. *ARIE*, 1969-70, B 255

> ಚೆಂಬಿಜೀಯ, ಸಣಜೀಯನ ಮಗ ವೀರಪ್ಪ ಮುಂತಾದ ಅಧಿಕಾರಿಗಳ ಪ್ರಸ್ತಾಪ ಕೂಸ್ತನಹಳ್ಳಿಯ ಶಾಸನದಲ್ಲಿ[೭೨] ಬಂದಿದೆ. ಶ್ರೀರಂಗಂ ದೇವಾಲಯದಲ್ಲಿ ಉತ್ತಮನಂಬಿಯರೆಂಬ ಸ್ಥಾನಿಕರಿದ್ದ ಬಗ್ಗೆ ಶಾಸನಗಳು ಬೆಳಕು ಚೆಲ್ಲುತ್ತವೆ.

ಕೊಯಮತ್ತೂರು ಜಿಲ್ಲೆಯ ಶಾಸನವೊಂದರಲ್ಲಿ ದಳವಾಯಿ ಹಂಪಯ್ಯನೆಂಬುವನ ಉಲ್ಲೇಖ ಬಂದಿದೆ.[೭೩] ಕ್ರಿ.ಶ.೧೬೭೩ರ ಶಾಸನವೊಂದರಲ್ಲಿ ದಳವಾಯಿ[೭೪] ಕುಮಾರರಾಯನು ಉಕ್ತವಾಗಿದ್ದಾನೆ. ಈತನನ್ನು ಉಲ್ಲೇಖಿಸುವ ಇನ್ನೊಂದು ಶಾಸನ ಹೊಸೂರಿನಲ್ಲಿದ್ದು ಕೊಮಾರಯ್ಯ ಎಂದು ಕರೆಯಲಾಗಿದೆ. ಆತನ ಕಿರಿಯ ಸೋದರ ನಂಜರಾಜಯ್ಯನೆಂಬವನನ್ನು ಹೆಸರಿಸುತ್ತದೆ. ದಳವಾಯಿ ಕೊಮಾರಯ್ಯನ ಅಧೀನದಲ್ಲಿ ನಂಜರಾಜಯ್ಯನು ಹೊಸೂರನ್ನು ಆಳುತ್ತಿದ್ದನು. ಆತನೇ ಮುಂದೆ ಸರ್ವಾಧಿಕಾರಿಯಾದ ಕರಾಚೂರಿ ನಂಜರಾಜಯ್ಯ. ಈತನ ತಂದೆ ಮಲ್ಲರಾಜಯ್ಯನೆಂದೂ ಗುರು ಸ್ವಾಮಿಕೆರೆ ಪದ್ಮರಸಯ್ಯದೇವನೆಂದೂ, ವೀರರಾಜಯ್ಯನೆಂಬುವನು ಮಗನೆಂದು ತಿಳಿಯುತ್ತದೆಯಲ್ಲದೆ, ನಂಜರಾಜಯ್ಯನ ಹೆಂಡತಿಯ ಹೆಸರು ಲಿಂಗಪಾದಮ್ಮನೆಂದು ಅದೇ ಶಾಸನದಿಂದ[೭೫] ತಿಳಿದುಬರುತ್ತದೆ.

ಗುಮ್ಮಳಾಪುರದ ಶಾಸನವೊಂದರಲ್ಲಿ[೭೬] ದಳವಾಯಿ ಕ್ಷತ್ರಿಯ ವಂಶದ ಕಳಲೆ ನಂಜರಾಜಯ್ಯನ ಉಲ್ಲೇಖ ಬಂದಿದೆ. ಈತನು ಸರ್ವಾಧಿಕಾರಿ ಕರಾಚೂರಿ ನಂಜರಾಜಯ್ಯನಿಂದ ಭಿನ್ನ.

ರಾಯದುರ್ಗ ಎಂಬ ಕನ್ನತೂರುದುರ್ಗವನ್ನು ನಂಜರಾಜನ ಅಧಿಕಾರಿ ಮುದ್ದಳಕಾದ್ರಿ ನಾಯಕ ಮತ್ತು ಅವನ ಅಧೀನದಲ್ಲಿದ್ದ ಮುದ್ದಯ್ಯನೆಂಬುವನು ಆಳುತ್ತಿದ್ದ.[೭೭] ಇಲ್ಲಿ ಉಕ್ತವಾಗಿರುವ ರಾಯದುರ್ಗವೆಂಬ ಕನ್ನತೂರುದುರ್ಗವು, ಪ್ರಾಯಶಃ ಇಂದಿನ ಶಂಖಗಿರಿಯೇ ಆಗಿದ್ದಿತೆಂದೆನಿಸುತ್ತದೆ.

ದಳವಾಯಿ ದೇವರಾಜಯ್ಯನ ಅಧೀನದಲ್ಲಿ ಶಂಕರಯ್ಯ ಎಂಬುವನು ಕೊಯಮತ್ತೂರಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಶಂಕರಯ್ಯನ ತಂದೆಯು ತೆರಕಣಾಂಬಿಯ ಮಾದಯ್ಯ, ಶಂಕರಯ್ಯನ ಮಗನ ಹೆಸರೂ ಕೂಡ ಮಾದಯ್ಯ ಎಂದಿದ್ದುದು ಶಾಸನಗಳಿಂದ[೭೮] ತಿಳಿದುಬರುತ್ತದೆ. ಮಾದಯ್ಯ ತನ್ನ ತಂದೆಯ ನಂತರ ಕೊಯಮತ್ತೂರಿನ ಅಧಿಕಾರಿಯಾಗಿದ್ದ. ಆತನ ಕಾಲದಲ್ಲಿ ಅನ್ನಿಮಲೆ (ಆನೆಮಲೆ) ಸಮೀಪದಲ್ಲಿ ಮಾಧವಪುರ ಎಂಬ ಅಗ್ರಹಾರ ಸ್ಥಾಪಿತವಾಯಿತು.[೭೯]

ಈ ಕಳಲೆವಂಶದ ದಳವಾಯಿಗಳ ಪ್ರಾಬಲ್ಯ ತಮಿಳುನಾಡಿನ ಗಡಿಪ್ರಾಂತ್ಯದಲ್ಲಿ ಇದ್ದುದನ್ನು ಜೆಸುಯಿಟ್ ಪತ್ರಗಳೂ[೮೦] ಅನುಮೋದಿಸುತ್ತವೆ :

---

೭೨. ಅದೇ, 1970-71, B 508

೭೩. *SII*, Vol. IX, No.705

೭೪. *TLIMP*, **Antiquities** Vol. I p.194

೭೫. *ARIE*, 1971-72, B 207

೭೬. ಅದೇ, B 197

೭೭. ಅದೇ, 1929-20, B 512

೭೮. ಅದೇ, 1909 / 201


೭೯. *ARIE*, 1927-28, A 7

೮೦. ಸ್ವಾಮಿ ಐ. ಆಂತಪ್ಪ, ಆನೇಕಲ್ ತಾಲ್ಲೂಕು ಮತ್ತು ಸುತ್ತುಮುತ್ತಲ ಪ್ರದೇಶದಲ್ಲಿ ಕ್ರೈಸ್ತಧರ್ಮದ ಉಗಮ, ಬೆಂಗಳೂರು, ೧೯೯೦

ಅ. ಮೈಸೂರು ದೊರೆ ದೊಡ್ಡದೇವರಾಜ ಒಡೆಯನ ಮಾವನಾಗಿದ್ದ ದೊಡ್ಡಯ್ಯನು (ಕ್ರಿ.ಶ.೧೬೬೪–೬೭ರ ಅವಧಿಯಲ್ಲಿ), ಆಗ ಮೈಸೂರು ಸಂಸ್ಥಾನದ ಭಾಗವಾಗಿದ್ದ ತಳಿ, ಡೆಂಕಣಿಕೋಟೆ, ಹೊಸೂರು ಪ್ರದೇಶಗಳ ಅಧಿಕಾರಿಯಾಗಿದ್ದ ಈತನು ಮಾರ್ಟಿನೆಸ್ ಎಂಬ ಪಾದ್ರಿಗೆ ಒಂದು ಚರ್ಚನ್ನು ಹಾಗೂ ತೋಟದಿಂದ ಕೂಡಿದ ಒಂದು ನಿಲಯವನ್ನು ಕಟ್ಟಿಸಲು ಆಜ್ಞೆನೀಡಿರುವ ಹಾಗೂ ಅವನ ಜೀವನಕ್ಕಾಗಿ ಹೊಲ, ಗದ್ದೆಗಳನ್ನು ಉಂಬಳಿಯಗಿ ನೀಡಿದ್ದ ವಿವರ ಕ್ರಿ.ಶ. ೧೬೬೪–೬೭ರ ಅವಧಿಯ ಜೆಸುಯಿಟ್ ಪತ್ರಗಳಿಂದ ತಿಳಿದುಬರುತ್ತದೆ.

ಆ. ಕ್ರಿ.ಶ. ೧೬೭೪ರ ಮಾರ್ಚಿ ತಿಂಗಳ ಪತ್ರವೊಂದು ದಳವಾಯಿ ಕಳಲೆ ಕುಮಾರಯ್ಯನು ಹೊಸೂರಿನ ಆಡಳಿತಗಾರನಾಗಿದ್ದ ನಂಜರಾಜನಿಗೆ ಅಲ್ಲಿನ ಕ್ರೈಸ್ತ ಗುರುವಾಗಿದ್ದ ಮನವೇಲ್‌ಕೊರೆಯ ಎಂಬುವನನ್ನು ನಾಡಿನಿಂದ ಹೊರಹಾಕಬೇಕೆಂದು ಆಜ್ಞೆಮಾಡಿರುವ ವಿವರ ಹಾಗೂ ನಂಜರಾಜನ ಸೊಸೆ ಲಿಂಗಾಯತಳೆಂಬ ವಿವರವನ್ನು ಒದಗಿಸುತ್ತದೆ.

* * *



ವಳ್ಳಿಮಲೆಯ ಜಿನ ಬಿಂಬಗಳು

೫.೦. ಧಾರ್ಮಿಕ ಮಹತ್ವ

ಪ್ರಾಚೀನ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿದ್ದ ಜೈನಧರ್ಮ ಮತ್ತು ಲಕುಲೀಶ ಪಾಶುಪತ ಕಾಳಾಮುಖ ಪಂಥದ ಶೈವಧರ್ಮಗಳು ಹಾಗೂ ವೀರಶೈವ, ವೈಷ್ಣವ, ವೈದಿಕ ಮತ್ತು ಇಸ್ಲಾಂಧರ್ಮಗಳು ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ಹಲವು ಕಾಲ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದ ಬಗ್ಗೆ ಲಭ್ಯ ಕನ್ನಡ ಶಾಸನಗಳು ಬೆಳಕು ಚೆಲ್ಲುತ್ತವೆ.

೫.೧ ಜೈನಧರ್ಮ

ಧರ್ಮಪುರಿ ಮತ್ತು ಸುತ್ತಮುತ್ತಲು ದೊರೆತ ನೊಳಂಬರ ಶಾಸನಗಳಲ್ಲಿ ಜೈನಧರ್ಮದ ಕುರುಹುಗಳು ಕಂಡುಬರುತ್ತವೆ. ನೊಳಂಬರು ಮೂಲತಃ ಶೈವರಾದರೂ ಜೈನಧರ್ಮವನ್ನು ಪ್ರೋತ್ಸಾಹಿಸಿದ್ದರು. ಇದಕ್ಕೆ ಪ್ರಾಯಶಃ ಧರ್ಮಸಮನ್ವಯ ಗುಣವಷ್ಟೇ ಅಲ್ಲದೇ ಅವರಿಗಿದ್ದ ಗಂಗವಂಶೀಯರ ಸಂಬಂಧವೂ ಕೂಡ ಕಾರಣವಾಗಿರಬೇಕು. ಧರ್ಮಪುರಿಯಲ್ಲಿನ ನೊಳಂಬರ ಮಹೇಂದ್ರನ ಕಾಲದ (ಕ್ರಿ.ಶ. ೮೭೮–೮೯೩) ಶಾಸನದಲ್ಲಿ[೧] ಸಿರಿಯಮಂಗಲದ ವರ್ತಕರಾದ ನಿಧಿಯಣ್ಣ ಮತ್ತು ಚಂಡಿಯಣ್ಣ ಎಂಬುವರು ರಾಜನಿಂದ ಮೂಲಪಳ್ಳಿ ಎಂಬ ಸ್ಥಳವನ್ನು ಪಡೆದು ಮೂಲಸಂಘದ ಸೇನಾನ್ವಯದ ಪೊಗರೀಯ ಗಣದ ವಿನಯಸೇನ ಭಟ್ಟಾರಕರ ಶಿಷ್ಯ ಕನಕಸೇನ ಸಿದ್ಧಾಂತಭಟ್ಟಾರರಿಗೆ ತಗಡೂರಿನಲ್ಲಿ ಬಸದಿಯ ಜೀರ್ಣೋದ್ಧಾರಕ್ಕಾಗಿ ನಾಲ್ಕು ಸಮಯಿಗಳು, ನಾಡು, ನಗರ, ನರಶಾಸನ ಅಧಿಕಾರಿಗಳ ಸಮ್ಮುಖದಲ್ಲಿ ದತ್ತಿ ಬಿಡಲಾಗಿದೆ. ಇಲ್ಲಿ ಉಕ್ತವಾಗಿರುವ ಮೂಲಪಳ್ಳಿ ಎಂಬುದು ಧರ್ಮಪುರಿಯ ಪಶ್ಚಿಮಕ್ಕೆ ಸುಮಾರು ಹದಿನೈದು ಕಿಲೋಮೀಟರು ಅಂತರದಲ್ಲಿರುವ ಮೂಲಕಾಡು ಸ್ಥಳವೇ ಇರಬೇಕು. ನೊಳಂಬ ಅಯ್ಯಪದೇವನ ಶಾಸನದಲ್ಲಿ[೨] ಇದೇ ಬಸದಿಗೆ ಲೋಕಯ್ಯನೆಂಬುವನು ಬೂದುಗೂರು ಎಂಬ ಸ್ಥಳವನ್ನು ದತ್ತಿ ಬಿಟ್ಟಿರುವ ವಿವರ ಬಂದಿದೆ. ಧರ್ಮಪುರಿಯ ದಕ್ಷಿಣಕ್ಕೆ ಹನ್ನೊಂದು ಕಿಲೋಮೀಟರ್ ದೂರದಲ್ಲಿರುವ ಬೂದುಗನಹಳ್ಳಿ ಗ್ರಾಮವೇ ಇಲ್ಲಿ ಉಕ್ತವಾಗಿರುವ ಬೂದುಗೂರು ಆಗಿರಬೇಕು. ಕ್ರಿ.ಶ. ೯೨೯ರ ನೊಳಂಬ ಇರುಳಚೋರನ ಕಾಲದಲ್ಲಿ ತಗಡೂರು (ಧರ್ಮಪುರಿ) ಸ್ಥಳದ ಪಡುವಣ ದೇಹಾರು ಮಾಣ್ಕಬ್ಬೆ ಕಂತಿಯ ಉಲ್ಲೇಖ ಬಂದಿದೆ.[೩]

ಗಂಗ ರಾಚಮಲ್ಲನು ವೆಲ್ಲೂರು ಜಿಲ್ಲೆಯ ವಂದವಾಶಿ ತಾಲೂಕಿನ ವಳ್ಳಿಮಲೆ ಎಂಬಲ್ಲಿ ಗುಹಾದೇವಾಲಯಗಳನ್ನು ಮಾಡಿಸಿದ ಬಗೆಗೆ,[೪] ಬಾಣರಾಜನೋರ್ವನು ತೀರ್ಥಂಕರನ ಪ್ರತಿಮೆಯೊಂದನ್ನು ಸ್ಥಾಪಿಸಿದ ಬಗೆಗೆ[೫] ತಿಳಿಯುತ್ತದೆ. ಆರ್ಯನಂದಿ ಎಂಬ ಜೈನಯತಿ ಜಿನಬಿಂಬವೊಂದನ್ನು

---

೧. *EI*, Vol. X, p.54-76

೨. *ARIE*, 1901 / 305, *TLIMP*, 75-305 / 1901

೩. *SII*, Vol. IX. No.23

೪. *ARIE*, 1889 / 91, 1895 / 6

೫. ಅದೇ, 1895 / 8

ಸ್ಥಾಪಿಸಿದ ಅಂಶ ಅಲ್ಲಿನ ಇನ್ನೊಂದು ಶಾಸನದಿಂದ[೬] ತಿಳಿದುಬರುತ್ತದೆ. ಜಿಂಜಿ ತಲೂಕಿನ ಶಿಯಮಂಗಲಂ ಸ್ಥಳದ ಬೆಟ್ಟದ ಮೇಲಿನ ಗವಿಯಲ್ಲಿ ಗಂಗ ರಾಚಮಲ್ಲನ ಸಂಸ್ಕೃತ ಶಾಸನವೊಂದಿದ್ದು[೭] ಆತನು ಎರಡು ಜೈನಮಂದಿರಗಳನ್ನು, ಕಟ್ಟಿಸಿದ ವಿವರವನ್ನು ನೀಡುತ್ತದೆ. ಅದೇ ತಾಲೂಕಿನ ಚಿತ್ತಮೂರು ಸ್ಥಳದ ಕನ್ನಡ ಲಿಪಿಯಲ್ಲಿರುವ ಸಂಸ್ಕೃತ ಶಾಸನವು[೮] ಮಹಾನಾಗಕುಲದ ಭೂಶ್ರೇಷ್ಠಿ ಮಾನಸ್ತಂಭವೊಂದನ್ನು ಸ್ಥಾಪಿಸಿದ ಬಗ್ಗೆ ತಿಳಿಸುತ್ತದೆ. ಮದುರೆ ಜಿಲ್ಲೆಯ ಕೀಟಿಕುಯಿಕುಡಿ (ಕೀಟಿಕ್ಕುಡಿ) ಎಂಬ ಸ್ಥಳದ ಸಮಣರಮಲೆಯಲ್ಲಿನ ದೀಪದ ಕಂಬದಲ್ಲಿ ಹನ್ನೆರಡನೆಯ ಶತಮಾನಕ್ಕೆ ಸೇರಿದ ಶಾಸನವೊಂದಿದ್ದು[೯] ಬೆಳುಗುಳದ ಮೂಲಸಂಘಕ್ಕೆ ಸೇರಿದ ಆರ್ಯದೇವ, ಬಾಳಚಂದ್ರದೇವ ಮತ್ತು ಗೋವರ್ಧನದೇವ ಅವರುಗಳು ಉಲ್ಲೇಖಿತರಾಗಿದ್ದಾರೆ. ಕರ್ನಾಟಕದ ಶ್ರವಣಬೆಳ್ಗೊಳದೊಂದಿಗೆ ತಮಿಳುನಾಡಿನ ಜೈನಕೇಂದ್ರಗಳು ಸಂಬಂಧ ಪಡೆದಿದ್ದ ಅಂಶ ಇದರಿಂದ ವ್ಯಕ್ತವಾಗುತ್ತದೆ.

ಕೃಷ್ಣಗಿರಿ ಜಿಲ್ಲೆಯ ಹೊಸೂರು,[೧೦] ತವಳಂ[೧೧] ಮತ್ತು ಈರೋಡು ಜಿಲ್ಲೆಯ ವಿಜಯಮಂಗಲಂಗಳಲ್ಲಿ[೧೨] ಜೈನಸಂಬಂಧಿ ದಾಖಲೆಗಳು ಲಭ್ಯವಾಗಿವೆ. ಹೊಸೂರಿನಲ್ಲಿ ಪಾರ್ಶ್ವನಾಥ ಬಸದಿಯ ಪ್ರಸ್ತಾಪವಿದ್ದು, ವಾಸುಪೂಜ್ಯ ಪಂಡಿತನೆಂಬುವನು ಅಲ್ಲಿನ ಸ್ಥಾನಪತಿಯಾಗಿದ್ದನು. ಶೆವಡಪಾಡಿಗೆ (ಚೂಡವಾಡಿ>ಹೊಸೂರು) ಸೇರಿದ ಇಲಂದ್ಯೆ ಎಂಬ ಚಿತ್ರಮೋಟಿನೆಲ್ಲೂರನ್ನು ದತ್ತಿ ಬಿಟ್ಟಿರುವ ವಿವರವು ಇಲ್ಲಿನ ಹೊಯ್ಸಳರ ಕಾಲದ ತಮಿಳು ಶಾಸನವೊಂದರಿಂದ ತಿಳಿದುಬರುತ್ತದೆ. ವಿಜಮಂಗಲದಲ್ಲಿ ಗಂಗದೊರೆ ರಾಚಮಲ್ಲನ ಪ್ರಸಿದ್ಧ ಮಂತ್ರಿ ಚಾವುಂಡರಾಯನ ಕಿರಿಯ ಸೋದರಿ ಪೊಲ್ಲಬ್ಬೆಯ ನಿಸಿಧಿ ಶಾಸನ[೧೩] ತಮಿಳು ಗ್ರಂಥಲಿಪಿಯಲ್ಲಿದೆ.

ಮದ್ರಾಸಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಹಲವು ಶಾಸನಗಳಿವೆ. ಅವು ನೇರವಾಗಿ ತಮಿಳುನಾಡಿಗೆ ಸಂಬಂಧಿಸಿದವಲ್ಲದ ಕಾರಣ ಅವನ್ನು ಇಲ್ಲಿ ಪರಿಶೀಲನೆಗೆ ಒಳಪಡಿಸಿರುವುದಿಲ್ಲ.

ಒಟ್ಟಾರೆ ಹನ್ನೊಂದನೆಯ ಶತಮಾನದ ನಂತರದಲ್ಲಿ ಜೈನಧರ್ಮ ತಮಿಳುನಾಡು ಪ್ರದೇಶದ ಕನ್ನಡ ಶಾಸನಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

೫.೨ ಶೈವಧರ್ಮ

ಭಾರತದ ಧಾರ್ಮಿಕ ಇತಿಹಾಸದಲ್ಲಿ ಶೈವಧರ್ಮವು ಪ್ರಧಾನವಾಗಿ ಎದ್ದುಕಾಣುತ್ತದೆ. ಅದು ದೇಶದ ಬೇರೆಬೇರೆ ಭಾಗಗಳಲ್ಲಿ, ಬೇರೆ ಬೇರೆ ಕಾಲದಲ್ಲಿ ಬೆಳೆದು ಬಂದ ರೀತಿ, ಪಡೆದುಕೊಂಡ

---

೬. *ARIE*, 1895, D 8
೭. *Jaina Inscriptions in Tamil Nadu* (Ed.Dr.A. Ekambaranathan, Dr. C.K. Shivaprakasham), Madras, 1987, Inscription No.319
೮. *ARIE*, 1937-38, B 518
೯. ಅದೇ, 1950-51, B 244
೧೦. *Jaina Inscriptions in Tamil Nadu*, No.165
೧೧. *ARIE*, 1967-68, B 46,47
೧೨. *Jaina Inscriptions in Tamil Nadu*, No.370
೧೩. ಅದೇ,

ತಿರುವುಗಳು ವಿಸ್ಮಯಕಾರಿಯಾದುದು. ದಕ್ಷಿಣ ಭಾರತದಲ್ಲಿ, ಈ ಧರ್ಮವು ಪ್ರಾಚೀನ ಕಾಲದಿಂದಲೂ ಪ್ರಬಲವಾಗಿದ್ದು, ಅನೇಕ ರೀತಿಯ ಶ್ರದ್ಧೆಗಳ ಮೂಲಕ ಅಭಿವ್ಯಕ್ತಗೊಂಡಿದೆ. ಈ ಧರ್ಮದ ಅನೇಕ ಶಾಖೆಗಳಲ್ಲಿ ಲಕುಲೀಶ ಪಾಶುಪತ ಕಾಳಾಮುಖ ಶೈವಪಂಥವು ತಮಿಳುನಾಡಿನಲ್ಲೂ ಹೆಚ್ಚು ಪ್ರಚಲಿತವಿದ್ದಂತೆ ತೋರುತ್ತದೆ. ಅಲ್ಲಿನ ಪ್ರಾಚೀನ ಶೈವದೇವಾಲಯಗಳು ಕರ್ನಾಟಕದಲ್ಲಿನಂತೆ ಲಕುಲೀಶ ಪಾಶುಪತ ಹೆಸರಿನ ಆಗಮಿಕ ಶೈವಪಂಥಕ್ಕೆ ಸೇರಿದವೆಂದು ಹೇಳಬಹುದು. ಈ ಪಾಶುಪತರ ಮುಖ್ಯ ಕೊಡುಗೆ ದೇವಾಲಯಗಳು. ದೇವಾಲಯಗಳನ್ನು ಕಟ್ಟಿಸಿ ತಮ್ಮ ಹೆಸರಿನಲ್ಲಿ ಲಿಂಗವನ್ನು ಸ್ಥಾಪಿಸುವುದರಿಂದ ಅವರು ದೇವರೇ ಆಗುತ್ತಾರೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲಿ ಕಂಡುಬರುವ ಕಲಿಚೋರೇಶ್ವರ, ಪಲ್ಲವೇಶ್ವರ, ನನ್ನೀಶ್ವರ ಹೆಸರುಗಳಿಂದ ಮನಗಾಣಬಹುದು. ಈ ಹೆಸರುಗಳು ನೊಳಂಬ ಅರಸರಿಗೆ ಸಂಬಂಧಿಸಿದವೆಂಬುದು ಸ್ವಯಂವೇದ್ಯ.

ಧರ್ಮಪುರಿ ನೊಳಂಬರ ಆಳ್ವಿಕೆಯ ಕಾಲದಲ್ಲಿ ಅನೇಕ ಧರ್ಮಗಳ ಆಗರವಾಗಿದ್ದಿತೆನ್ನಬಹುದು. ಇಲ್ಲಿನ ಶಾಸನಗಳಲ್ಲಿ ಶೈವಧರ್ಮದ ದಟ್ಟ ಕುರುಹುಗಳಿವೆ. ಧರ್ಮಪುರಿಯ ಮಲ್ಲಿಕಾರ್ಜುನ ದೇವಾಲಯದ ಶಾಸನವೊಂದರಲ್ಲಿ[೧೪] ಭೈರವ ಶಕ್ತಿಭಟ್ಟಾರಕನ ಉಲ್ಲೇಖ ಬಂದಿದೆ. ಅದೇ ಊರಿನ ಕೆರೆಯ ಕಟ್ಟೆಯ ಮೇಲಿದ್ದ ಶಾಸನ[೧೫] ವಿದ್ಯೆರಾಶಿ ಎಂಬ ಲಾಕುಳಾಗಮಿಕ ಶೈವಪಂಥದ ಸ್ಥಾನಿಕನನ್ನು ಬಣ್ಣಿಸುತ್ತದೆ. ಈ ವಿದ್ದೇರಾಶೀನ್ದ್ರರ ಮಹಿಮೆಯಿಂದ ತಗಡೂರು ಸ್ಥಳವು; ಕೊಳ, ನಂದನವನ, ಪ್ರಾಕಾರ ಮುಂತಾದವುಗಳನ್ನು ಪಡೆದು 'ಕಲಿಚೋರೇಶ್ವರ, ಪಲ್ಲವೇಶ್ವ ಮಹಾಭೋಗೇಶ್ವರ ಉತ್ತುಂಗ ನಿರ್ಮಲನನ್ನೇಶ್ವರ, ಸತ್ಯಾಇಟ್ಟೆಭುಜಂಗೇಶ್ವರ ಇತ್ಯಾದಿ ದೇಗುಲಗಳಿಂದ ಕಂಗೊಳಿಸುತ್ತಿದ್ದಿತು ಎಂಬ ವರ್ಣನೆ[೧೬] ಶಾಸನಗಳಲ್ಲಿ ಬಂದಿದೆ.

ಡೆಂಕಣಿಕೋಟೆ ತಾಲೂಕು ಮದಗೊಂಡನಹಳ್ಳಿ ಗ್ರಾಮದ ಅರ್ಕೇಶ್ವರ ದೇವಾಲಯಕ್ಕೆ ಹೊಯ್ಸಳರ ಕಾಲದಲ್ಲಿ ದಾನದತ್ತಿಗಳನ್ನು ಬಿಟ್ಟಿರುವುದು ಕಂಡುಬರುತ್ತದೆ. ಅದರಿಂದಾಗಿ ಇದು ಒಂದು ಪ್ರಾಚೀನ ಶೈವದೇವಾಲಯವೆಂಬುದರಲ್ಲಿ ಸಂಶಯವಿಲ್ಲ ಅಲ್ಲದೆ, ಇದರ ವಾಸ್ತುಶಿಲ್ಪವು ಗಂಗರ ಕಾಲದ ದೇವಾಲಯಗಳ ರಚನೆಗಳೊಂದಿಗೆ ಹೋಲಿಸಬಹುದಾಗಿದೆ. ಹೊಸೂರಿನ ಬೆಟ್ಟದ ಮೇಲಿರುವ ಚಂದ್ರಚೂಡೇಶ್ವರ ದೇವಾಲಯವೂ ಕೂಡ ಒಂದು ಪ್ರಾಚೀನ ಶೈವಕೇಂದ್ರವಾಗಿದ್ದಿತು. ಚೋಳರ ಕಾಲಕ್ಕಾಗಲೇ ಈ ದೇವಾಲಯ ಅಸ್ತಿತ್ವದಲ್ಲಿದ್ದಿತೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಈ ಕಾಲಕ್ಕಾಗಲೇ ಈ ದೇವಾಲಯ ವಿಸ್ತರಣೆ ಮತ್ತು ಜೀರ್ಣೋದ್ಧಾರದ ಕಾರ್ಯಗಳಲ್ಲಿ ಹೊಯ್ಸಳರು ಹೆಚ್ಚು ಆಸಕ್ತಿ ತೋರಿಸಿರುವುದು, ಅಲ್ಲಿನ ವಾಸ್ತು ಮತ್ತು ಶಾಸನಗಳನ್ನು ಗಮನಿಸಿದಾಗ ಮನವರಿಕೆಯಾಗುತ್ತದೆ. ಹೊಯ್ಸಳ ರಾಮನಾಥನು ಮರಣಹೊಂದಿದ ತೇದಿ ವಿವರಗಳನ್ನು ತಿಳಿಸುವ ಗ್ರಂಥಲಿಪಿಯ ಸಂಸ್ಕೃತ ಶಾಸನವೊಂದು ಇಲ್ಲಿ[೧೭] ದೊರೆತಿದೆ. ಈ ದೇವಾಲಯದಲ್ಲಿನ ಪೂಜಾಕೈಂಕರ್ಯಗಳಿಗೆ ಹದಿನಾಲ್ಕನೆಯ ಶತಮಾನದಲ್ಲಿ ಅಚಲಪ್ಪ ದಂಡನಾಯಕನೆಂಬುವನು ಎರಮಂಡಲನಾಡಿನ ಯಾವುದೋ ತೆರಿಗೆಯ

---

೧೪. *SII*, Vol. VIII, No.532
೧೫. ಅದೇ, No.535
೧೬. ಅದೇ,
೧೭. *ARIE*, 1969-70, B 261

ಅರ್ಧಭಾಗವನ್ನು ದತ್ತಿಬಿಟ್ಟ ವಿವರ ಶಾಸನವೊಂದರಲ್ಲಿ[೧೮] ಉಕ್ತವಾಗಿದೆ. ವಿಜಯನಗರದರಸರ ಕಾಲದ ಶಾಸನಗಳಲ್ಲಿ ಕುಮಾರ ವೀರಕಂಪಣರಾಯನ ಮಹಾಪ್ರಧಾನ ಸೋವಪ್ಪ ಒಡೆಯನಿಂದ ಪ್ರಾರಂಭಿಸಿ ಮುಂದೆ ಬಂದ ಮಹಾಪ್ರಧಾನ ಕುಪ್ಪೆಯ ದಂಡನಾಯಕ, ಅಚ್ಯುತರಾಯನ ಓರ್ವ ಮಹಾಮಂಡಳೇಶ್ವರನಾದ ಹಿರಿಯ ತಿರುಮಲದೇವ ಮಹಾಅರಸುಗಳ ಕಾರ್ಯಕ್ಕೆ ಕರ್ತನಾದ ರಾಮನಾಯಕ ಮುಂತಾದವರು ವಿಪುಲ ದತ್ತಿಗಳನ್ನು ಈ ದೇವರಿಗೆ ಬಿಟ್ಟಿರುತ್ತಾರೆ.[೧೯] ಇಲ್ಲಿ ಉಕ್ತವಾಗಿರುವ ರಾಮನಾಯಕನ ಹೆಸರಿನ ಕೆರೆಯೊಂದು ಹೊಸೂರಿನಲ್ಲಿದ್ದು, ಆತನ ಸ್ಮಾರಕವಾಗಿ ಇಂದಿಗೂ ಉಳಿದಿದೆ. ಕುಪ್ಪಯ್ಯ ಮತ್ತು ಚೊಡೇಆಳ್ವನ ಮಗ ಚೂಡಪ್ಪ ಅವರುಗಳು ದೇವಾಲಯದ ಸ್ಥಾನಿಕರಾಗಿದ್ದ ಅಂಶ ಶಾಸನವೊಂದರಿಂದ[೨೦] ತಿಳಿದುಬರುತ್ತದೆ. ಕೋಟೆನಾಯಕನ ಮಗ ಮುದಿಯನೆಂಬುವನು ಈ ದೇವಾಲಯಕ್ಕೆ ಪ್ರಾಕಾರಗೋಡೆಯನ್ನು ಕಟ್ಟಿಸಿದನೆಂಬ ವಿಷಯ ಹದಿನಾರನೇ ಶತಮಾನದ ಶಾಸನವೊಂದರಿಂದ[೨೧] ತಿಳಿದುಬರುತ್ತದೆ. ಈ ದೇವಾಲಯಕ್ಕೆ ಹಲವರು ದಾನದತ್ತಿಗಳನ್ನು ಬಿಟ್ಟಿರುವ ವಿಷಯವನ್ನು ತಿಳಿಸುವ ಅನೇಕ ಶಾಸನಗಳು ಆ ಬೆಟ್ಟದಲ್ಲಿವೆ.

ಧರ್ಮಪುರಿ ಜಿಲ್ಲೆಯ ಅಧಮಾನಕೋಟೆಯಲ್ಲಿರುವ ವಿಜಯನಗರದರಸು ಇಮ್ಮಡಿ ಅಚ್ಯುತರಾಯನ ಕ್ರಿ.ಶ. ೧೫೩೦ರ ಶಾಸನದಲ್ಲಿ[೨೨] ಭೈರವದೇವರ ಪ್ರಸ್ತಾಪ ಬಂದಿದ್ದು, ದೇವರ ದೀಪಾರಾಧನೆ ಮುಂತಾದವುಗಳಿಗೆ ದತ್ತಿ ಬಿಟ್ಟ ವಿಷಯವಿದೆ.

ವಿಜಯನಗರದರಸರ ಆಳ್ವಿಕೆಯ ಕಾಲಕ್ಕಾಗಲೇ ನಂಜನಗೂಡಿನ ನಂಜುಂಡೇಶ್ವರದೇವರ ಪ್ರಸಿದ್ಧಿ ಕೊಂಗುನಾಡು ಪ್ರದೇಶದಲ್ಲೆಲ್ಲಾ ಆವರಿಸಿತ್ತು. ಮೈಸೂರು ಅರಸರ ಆಳ್ವಿಕೆಯಲ್ಲಿ ನಂಜನಗೂಡಿನ ನಂಜುಂಡೇಶ್ವರದೇವರಿಗೆ ಅವರು ಗೆದ್ದ ದೂರದ ಪ್ರದೇಶಗಳಲ್ಲೂ ದತ್ತಿಗಳನ್ನು ಬಿಟ್ಟಿರುವುದು ಕಂಡುಬರುತ್ತದೆ. ಸೇಲಂ ಜಿಲ್ಲೆಯ ಓಮಲೂರು ತಾಲೂಕು ಮಲ್ಲಿಕೋಟೆಯಲ್ಲಿರುವ ದೊಡ್ಡದೇವರಾಯ ಒಡೆಯನ ಶಾಸನವು[೨೩] ನಂಜನಗೂಡಿನ ನಂಜುಂಡೇಶ್ವರನಿಗೆ ವಾಮಲೂರು ಸ್ಥಳದ ಮಲ್ಲಿಗೆಕೋಟೆಗೆ ಸೇರಿದ ಹಲವು ಗ್ರಾಮಗಳನ್ನು ದತ್ತಿಬಿಟ್ಟ ವಿವರವನ್ನು ನೀಡುತ್ತದೆ.

ಕೊಯಮತ್ತೂರು ಸಮೀಪದ ಅವಿನಾಶಿ ಎಂಬಲ್ಲಿನ ಅವಿನಾಶೀಶ್ವರ ದೇವಾಲಯವನ್ನು ಇಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಅಂದರೆ ಕ್ರಿ.ಶ. ೧೭೫೬ರಲ್ಲಿ ಜೀರ್ಣೋದ್ಧಾರ ಮಾಡಿಸಿರುವ ಬಗ್ಗೆ ವಿವರ ದೊರೆಯುವುದಲ್ಲದೆ, ಕೊಯಮತ್ತೂರಿನ ಅಧಿಕಾರಿಯಾದ ಶಂಕರಯ್ಯನು ಶಂಕರಲಿಂಗವನ್ನು ಪ್ರತಿಷ್ಠಾಪಿಸಿದ ದಾಖಲೆಯಿದೆ.[೨೪] ಕ್ರಿ.ಶ. ೧೭೭೬ರಲ್ಲಿ ದಳವಾಯಿ ವೀರರಾಜ ಒಡೆಯನ ಆಳ್ವಿಕೆಯಲ್ಲಿ ಮಂಜಿನಾಡಿನ ವನವಾಸಿಯಲ್ಲಿ ಶಿವದೇವಾಲಯಕ್ಕೆ ತೋಟವನ್ನು ದತ್ತಿ ಬಿಟ್ಟಿರುವ ವಿವರ ಶಾಸನವೊಂದರಲ್ಲಿ[೨೫] ಬಂದಿದೆ.

---

೧೮. ಅದೇ, 1969-70, B 298
೧೯. ಅದೇ, B 255
೨೦ ಅದೇ.
೨೧. ಅದೇ, 1969-70, B 264
೨೨. *ARIE*, 1910 / 200
೨೩. ಅದೇ, 1954-55, B 317
೨೪. ಅದೇ, 1909 / 201
೨೫. *TLIMP*, 135 - C.P.No.195 of *Sewell's list*

೫.೨ ವೀರಶೈವಧರ್ಮ

ಹನ್ನೆರಡನೆಯ ಶತಮಾನದಲ್ಲಿ, ಕರ್ನಾಟಕದಲ್ಲಿ ಏಳಿಗೆಯನ್ನು ಪಡೆದ ವೀರಶೈವಧರ್ಮ, ವಿಜಯನಗರ ಅರಸರ ಕಾಲದಲ್ಲಿ ದಕ್ಷಿಣ ಕರ್ನಾಟಕ ಹಾಗೂ ಅದರ ಹೊರಗೂ ಹರಡಿತು. ತಮಿಳುನಾಡಿನ ಗಡಿಪ್ರಾಂತ್ಯದಲ್ಲಷ್ಟೇ ಅಲ್ಲದೆ ಅದರ ಹೊರಗೂ ವೀರಶೈವಧರ್ಮ ನೆಲೆಯೂರಿರುವ ಅಂಶ ಶಾಸನಗಳಿಂದ ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಕ್ರಿ.ಶ. ೧೨ನೆಯ ಶತಮಾನದಲ್ಲಿ ಭಕ್ತಿಭಂಡಾರಿ ಬಸವಣ್ಣನವರ ಪ್ರಭಾವ ವಲಯದಲ್ಲಿ ನೇರ, ಸರಳ, ನಿರಾಡಂಬರ ಧರ್ಮವಾಗಿ ವೀರಶೈವ ಮತವು ಪುನರುಜ್ಜೀವನ ಪಡೆದು ಜನಸಾಮಾನ್ಯರನ್ನು ಹೆಚ್ಚು ಆಕರ್ಷಿಸಿದ್ದಿತು. ಅಲ್ಲದೆ ಶತಶತಮಾನಗಳಿಂದಲೂ ತುಳಿತಕ್ಕೆ ಈಡಾಗಿದ್ದ ದಲಿತವರ್ಗದ ಜನರು ಆತ್ಮವಿಶ್ವಾಸದಿಂದ ಮೇಲೇಳುವಂತೆ ಮಾಡಿತು. ಇಷ್ಟು ಪ್ರಭಾವಶಾಲಿಯಾದ ಲಿಂಗವಂತ ಅಥವಾ ವೀರಶೈವ ಆಂದೋಳನವು ಕಾಲಾಂತರದಲ್ಲಿ ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳಿಗೂ ಪಸರಿಸಿರುವುದು ಕಂಡುಬರುತ್ತದೆ. ವಿಜಯನಗರದ ಪ್ರೌಢದೇವರಾಯನ ಆಳ್ವಿಕೆಯ ಕಾಲದಲ್ಲಿ ಪ್ರತ್ಯಕ್ಷ ಪರೋಕ್ಷ ರಾಜಾಶ್ರಯವೂ ದೊರಕಿತು. ಮೂಲತಃ ಶಾಸನ ಮತ್ತು ದೇವಾಲಯಗಳಂತಹ ಸ್ಥಾವರ ರಚನೆಗಳಿಗೆ ವಿಮುಖ ಪ್ರವೃತ್ತಿಯುಳ್ಳ, ಈ ಧರ್ಮದ ಸುಳಿವನ್ನು ನೀಡುವ ಶಾಸನಗಳು ವಿರಳವಾಗಿ ಕಾಣಿಸಿಕೊಂಡಿವೆ. ಪ್ರಸ್ತುತ ಅರವತ್ತಮೂರು ಶೈವಪುರಾತನರ ನೆಲೆವೀಡಾದ ತಮಿಳುನಾಡು ಪ್ರದೇಶದಲ್ಲಿ ಕಂಡುಬರುವ ವೀರಶೈವ ಶಾಸನಗಳನ್ನು ಪರಿಚಯಿಸಿಕೊಳ್ಳಬಹುದಾಗಿದೆ :

ಇಂದಿನ ಧರ್ಮಪುರಿ ಜಿಲ್ಲೆಯ ಡೆಂಕಣಿಕೋಟೆ ತಾಲೂಕಿನ ಗ್ರಾಮವಾಗಿರುವ ಗುಮ್ಮಳಾಪುರವು ಒಂದು ಕಾಲದಲ್ಲಿ ವೀರಶೈವ ಧರ್ಮದ ಪ್ರಸಿದ್ಧ ಕೇಂದ್ರವಾಗಿದ್ದಿತು. ಈ ಅಂಶವನ್ನು ಕನ್ನಡ ಸಾಹಿತ್ಯ ಚರಿತ್ರೆಯಿಂದ ಹಾಗೂ ಆ ಪ್ರದೇಶದಲ್ಲಿ ದೊರೆತಿರುವ ಶಾಸನಗಳಿಂದ ಮನಗಾಣಬಹುದಾಗಿದೆ.

ಕ್ರಿಸ್ತಶಕ ಹದಿನೈದನೆಯ ಶತಮಾನದ ಪ್ರಾರಂಭಕ್ಕಾಗಲೇ ಗುಮ್ಮಳಾಪುರದಲ್ಲಿ ವೀರಶೈವ ಮಠಗಳು ಹುಟ್ಟಿಕೊಂಡಿದ್ದವು ಎಂದು ತೋರುತ್ತದೆ. ಏಕೆಂದರೆ, ವೀರಶೈವ ವರ್ತಕರ ಪ್ರಭಾವವನ್ನು ಬಿಂಬಿಸುವ ಕ್ರಿ.ಶ. ೧೪೦೭ರ ವಿಜಯನಗರ ಅರಸ ಇಮ್ಮಡಿ ಹರಿಹರರಾಯನ ಕುಮಾರ ದೇವರಾಯನ ಕಾಲದ ಶಾಸನವೊಂದು[೨೬] ಈ ಊರಲ್ಲಿದ್ದು, ಸಾಜಿರಿ ನಾಗಿನಾಯಕನ ಮಗ ಹಿರಿಯ ಪೆಮ್ಮೆಯನಾಯಕ ಹಾಗೂ ಪಟ್ಟಣಸ್ವಾಮಿ ಹಾಮ್ಮಿಸೆಟ್ಟಿಯ ಮಗ ಕರಡಿಸೆಟ್ಟಿಯವರುಗಳು ಕುಂಟೆ(ಕೆರೆ)ಯೊಂದನ್ನು ನಿರ್ಮಿಸಿರುವ ಬಗ್ಗೆ ಮಾಹಿತಿ ಒದಗಿಸುತ್ತದೆ.

ಗುಮ್ಮಳಾಪುರದ ಹಲವು ವೀರಶೈವ ಮಹಾಪುರುಷರನ್ನು ಉಲ್ಲೇಖಿಸುವ ತಾಮ್ರಶಾಸನವೊಂದು ವಿಜಯನಗರದ ವೀರನರಸಿಂಹದೇವನ ಆಳ್ವಿಕೆಗೆ ಅಂದರೆ ಕ್ರಿ.ಶ.೧೪೭೪ಕ್ಕೆ ಸೇರಿದ್ದು ವೀರಮಾಹೇಶ್ವರ ಗೋತ್ರದ ಶಾಂತದೇವರ ಪೌತ್ರರಾದ ಚಿಕ್ಕವೀರದೇವರ ಪುತ್ರರಾದ ಶರಣ

---

೨೬. *ARIE*, 1971-72, B 196

ವೀರಣ್ಣದೇವರು ಮತ್ತು ಈ ಸ್ಥಳದಲ್ಲಿರುವ ಶಾಂತದೇವರು, ನಾಗದೇವರು, ಚಿಕದೇವಪ್ಪನವರು, ನಿಜಲಿಂಗಚಿಕ್ಕಯ್ಯನವರು, ಬಿಟ್ಟಮಂಡೆಪ್ರಭು, ಶಂಖದ ಸಿದ್ಧಲಿಂಗದೇವರು, ಜಂಗಳಿದೇವರು, ಪ್ರಸಾದಿದೇವರು, ಮಲ್ಲಿಕಾರ್ಜುನಾರಾಧ್ಯರು, ಬಸವಣ್ಣದೇವರು ಮುಂತಾದ ಆಶೇಷ ವೀರಮಾಹೇಶ್ವರರು ಪೌರಕುತ್ಸಗೋತ್ರದ ಆಪಸ್ತಂಭ ಸೂತ್ರದ ಯಜುಶ್ಯಾಖಾಧ್ಯಾಯಿಗಳಾದ ಅರುಣಗಿರಿ ದೀಕ್ಷಿತರಾದ ಗಿರೀಶ್ವರದೀಕ್ಷಿತರ ಪುತ್ರರಾದ ವೆಂಕಟೇಶ್ವರ ಉಪಾಧ್ಯಾಯರಿಗೆ, ರಾಯಸಮುದ್ರ ಮತ್ತು ತಂಮಾಪುರಗಳನ್ನು ಆ ಸ್ಥಳಕ್ಕೆ ಪ್ರಭುಗಳಾದ ಚಿಕ್ಕರಾಯರಿಂದ ಕಾಲಕ್ರಯಕ್ಕೆ ತೆಗೆದುಕೊಂಡು ಅದಕ್ಕೆ ವೀರರಾಯಸಮುದ್ರ ಅಗ್ರಹಾರವೆಂದು ನಾಮಧೇಯವನ್ನಿಟ್ಟು, ಗ್ರಾಮ ಭೂಮಿಗಳನ್ನು ಮಹಾಶಿವರಾತ್ರಿಯ ಪುಣ್ಯಕಾಲದಲ್ಲಿ ದತ್ತಿ ಬಿಟ್ಟಿರುವ ವಿಷಯವನ್ನು ತಿಳಿಸುತ್ತದೆ. ಈ ದತ್ತಿಯನ್ನು ಬ್ರಾಹ್ಮಣ ಮತ್ತು ವೀರಶೈವ ಶರಣರ ಮತ ಮೈತ್ರಿಯ ಪ್ರತೀಕವೆಂದು ವಿದ್ವಾಂಸರು ಗುರುತಿಸಿರುತ್ತಾರೆ. ಇಲ್ಲಿ ಉಕ್ತರಾಗಿರುವ ಚಿಕದೇವಪ್ಪ, ಶಂಖದ ಸಿದ್ಧಲಿಂಗ, ನಿಜಲಿಂಗಚಿಕ್ಕಯ್ಯ, ಬಿಟ್ಟಮಂಡೆಪ್ರಭು, ಜಂಗುಳಿದೇವ, ಪ್ರಸಾದಿದೇವ ಮುಂತಾದವರು ವೀರಶೈವ ಪುರಾಣಗಳಾದ 'ಶಿವತತ್ವಚಿಂತಾಮಣಿ', ರಾಘವಾಂಕ ಚಾರಿತ್ರಗಳಲ್ಲಿ ಉಲ್ಲೇಖಿತರಾಗಿರುವ ಅಂಶವನ್ನು ಡಾ। ಎಂ.ಎಂ. ಕಲಬುರ್ಗಿಯವರು ತಮ್ಮ **'ಶಾಸನಗಳಲ್ಲಿ ಶಿವಶರಣರು'**[೨೮] ಕೃತಿಯಲ್ಲಿ ಖಚಿತಪಡಿಸಿರುತ್ತಾರೆ. ಈ ಶಾಸನದಲ್ಲಿ ಆ ಸ್ಥಳಕ್ಕೆ ಪ್ರಭುಗಳಾದ ಚಿಕ್ಕರಾಯರು ಎಂದು ಉಕ್ತವಾಗಿರುವ ಪ್ರಭು ಸುಗುಟೂರು ವಂಶದ ಪಾಳೆಯಗಾರನಾದ ಚಿಕ್ಕರಾಯ ತಮ್ಮೇಗೌಡನೇ ಇದ್ದಿರಬೇಕೆಂದು ತೋರುತ್ತದೆ.

ಡೆಂಕಣಿಕೋಟೆ ತಾಲೂಕು ಗಂಗನಹಳ್ಳಿಯಲ್ಲಿರುವ ಕ್ರಿ.ಶ. ೧೫೧೮ರ ಶಾಸನವು[೨೯] ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರಾದ ಗುಮ್ಮಳಾಪುರದ ರಾಜಬೆವಹಾರಿಯೊಬ್ಬನನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೫೨೭ರ ಗುಮ್ಮಳಾಪುರದಲ್ಲೇ ಇರುವ ಶಾಸನವು[೩೦] ಅಕ್ಕಲಚೆನ್ನಿಸೆಟ್ಟಿ ಎಂಬುವನು ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರನೆಂದು ತಿಳಿಸುತ್ತದೆ. ಕ್ರಿ.ಶ. ೧೫೩೦ರ ಅಚ್ಯುತರಾಯನ ಕಾಲದ ಶಾಸನ[೩೧] ತಳಿ ಗ್ರಾಮದ ಕೆರೆಯ ಕಟ್ಟೆಯ ಮೇಲೆದ್ದು ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರಾದ ಅಕ್ಕನಚೆನ್ನಿಸೆಟ್ಟಿಯ ಪೌತ್ರ ಹೊನ್ನಸೆಟ್ಟಿಯ ಪುತ್ರ ಹೊನ್ನಹಲಗಿಸೆಟ್ಟಿ ಎಂಬುವನು 'ಹೊನ್ನಾಂಬುಧಿ' ಕೆರೆಯನ್ನು ಕಟ್ಟಿಸಿದ ಬಗ್ಗೆ ವಿವರ ನೀಡುತ್ತದೆ.

ಈ ಮೇಲಿನ ಮೂರೂ ಶಾಸನಗಳನ್ನು ಒಟ್ಟಾರೆ ಗಮನಿಸಿದಾಗ ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರೆನಿಸಿಕೊಂಡ ಗುಮ್ಮಳಾಪುರಕ್ಕೆ ಸೇರಿದ ವೀರಶೈವ ವರ್ತಕರು ಪ್ರಸಿದ್ಧರಿದ್ದಂತೆ ತೋರುತ್ತದೆ. ಅಕ್ಕನ/ಅಕ್ಕಲಚೆನ್ನಿಸೆಟ್ಟಿ ವಿಜಯನಗರದ ಕೃಷ್ಣದೇವರಾಯನ ಕಾಲದ ರಾಜಬೆವಹಾರಿ (*Royal merchant*) ಆಗಿದ್ದ. ಆತನ ಮಗ ಹೊನ್ನಸೆಟ್ಟಿ, ಮೊಮ್ಮಗ ಹೊನ್ನಹಲಗಿಸೆಟ್ಟಿ. ಈತನು ಸಾಕಷ್ಟು ಶ್ರೀಮಂತನಿದ್ದಿರಬೇಕು. ಅಂತೆಯೇ 'ಹೊನ್ನಾಂಬುಧಿ' ಎಂಬ ಕೆರೆಯನ್ನು ನಿರ್ಮಿಸಿ, ದೇವ,

---

೨೭. ಶಿ.ಚೆ. ನಂದೀಮಠ, ಗುಮ್ಮಳಾಪುರದ ದಾನಶಾಸನಗಳು, **ಶರಣ ಸಾಹಿತ್ಯ** ಸಂ.೨೧ ಸಂಚಿಕೆ.೨-೩ ಪು.೮೪-೮೫.

೨೮. ಎಂ.ಎಂ.ಕಲಬುರ್ಗಿ, **ಶಾಸನಗಳಲ್ಲಿ ಶಿವಶರಣರು** (ದ್ವಿ.ಮು.) ೧೯೭೪ ಪು.೧೪೪-೪೭

೨೯. *ARIE*, 1971-72, B 193

೩೦. ಅದೇ, B 194

೩೧. ಅದೇ, 1955-56, B 310

ಬ್ರಾಹ್ಮಣ, ಜಂಗಮ ಮತ್ತು ವಿದ್ವಾಂಸರಿಗೆ ಅಗ್ರಹಾರವೊಂದನ್ನು, ದತ್ತಿ ಬಿಟ್ಟಿರುವುದನ್ನು ಕಂಡರೆ, ಅಂದಿನ ಸಮಾಜದ ವಣಿಕವರ್ಗದ ಉದಾರತೆ, ದೇವ, ಬ್ರಾಹ್ಮಣ, ಜಂಗಮ ಮತ್ತು ವಿದ್ವಾಂಸರ ಬಗೆಗಿನ ಗೌರವಾದರಗಳು ಮನವರಿಕೆಯಾಗುತ್ತದೆ. ಈ ಶಾಸನಗಳಲ್ಲಿ ಪ್ರಯುಕ್ತವಾಗಿರುವ ನಾಗಮಂಗಲವು ಮಂಡ್ಯ ಜಿಲ್ಲೆಯ ನಾಗಮಂಗಲವೇ ಆಗಿದೆ. ಏಕೆಂದರೆ ಅಲ್ಲಿನ ವೀರಭದ್ರೇಶ್ವರ ದೇವಸ್ಥಾನಗೊಳಗೆ ನವರಂಗ ಮಂಟಪದ ಬಾಗಿಲಿನ ಬಲಭಾಗದಲ್ಲಿರುವ ಶಾಸನವು[೩೨] ಕ್ರಿ.ಶ. ೧೫೧೧ಕ್ಕೆ ಸೇರಿದ್ದು, 'ಶ್ರೀ ವೀರಪ್ರತಾಪ ಕೃಷ್ಣದೇವರಾಯರೂ ಪೃಥ್ವೀರಾಜ್ಯಂಗೆಯಿವುತಿರಲು ಅವರ ಅರಮನೆಯ ಬೇಹಾರಿಗಳು ಗುಂಮಳಾಪುರದ ಅಕ್ಕನ ಚೆಂನಿಸೆಟ್ಟಿಯರ ಮಕ್ಕಳು ಹೊಂನಿಸೆಟ್ಟಿಯರೂ . . . ವೀರಭದ್ರದೇವರ ರಂಗಮಂಟಪ ಮುಂದಣ ಗಂಧಗೋಡಿ ಮಂಟಪದ ಸೇವೆಯನೂ ಮಾಡಿ ವೀರಭದ್ರದೇವರ ಶ್ರೀಪಾದಕ್ಕೆ ಸಮರ್ಪಿಸಿದ' ವಿವರವನ್ನು ನೀಡುತ್ತದೆ.

ವಿಜಯನಗರದ ವೀರವೆಂಕಟಪತಿದೇವ ಮಹಾರಾಯರ ಆಳ್ವಿಕೆಯ ಕಾಲದಲ್ಲಿ ಎಲಹಂಕ ನಾಡಪ್ರಭು ಕೆಂಪನಾಚೇಗೌಡರ ಪೌತ್ರ ಕೆಂಪೇಗೌಡರ ಪುತ್ರ ಇಮ್ಮಡಿ ಕೆಂಪೇಗೌಡರು ಭಾರದ್ವಾಜ ಗೋತ್ರದ ಪಡಿವಿಡಿವರ್ಗದ ಕೊಲ್ಲಿಪಾಕೆ ರೇವಣಸಿದ್ಧೇಶ್ವರ ಸಂಪ್ರದಾಯದವರಾದ ಗುಮ್ಮಳಾಪುರದ ಸಿಂಹಾಸನದ ಕರ್ತರಾದ ನಂಜೇದೇವರು ಅಯ್ಯನವರ ಪೌತ್ರರಾದ ಚೆನ್ನಮಲ್ಲಿಕಾರ್ಜುನದೇವರ ಪುತ್ರರಾದ ನಂಜೇದೇವ ಅಯ್ಯನವರಿಗೆ ಮೇಲೂರೊಳಗಣ ಗುಂಮಳಾಪುರದ ಗ್ರಾಮವನ್ನು ಶಿವಾರ್ಪಿತವಾಗಿ ಸಮರ್ಪಿಸಿದ ವಿವರ ಕ್ರಿ.ಶ. ೧೬೦೬ರ ಗುಮ್ಮಳಾಪುರದ ಗೌರಮ್ಮನ ಗುಡಿಯ ಶಿಲಾಶಾಸನದಲ್ಲಿ[೩೩] ಬಂದಿದೆ. ಈ ಶಾಸನದಲ್ಲಿ ಉಕ್ತನಾಗಿರುವ ನಂಜೇದೇವ ಅಯ್ಯನವರು ಬೆಂಗಳೂರಿನ ಕೆಂಪೇಗೌಡ ಹಾಗೂ ಸುಗುಟೂರಿನ ಚಿಕ್ಕರಾಯ ತಮ್ಮೇಗೌಡ ವಂಶೀಯರಿಗೆ ಗುರುವಿನ ಸ್ಥಾನದಲ್ಲಿದ್ದ ಜಗ್ಗ ಸಾಹಿತ್ಯಕ[೩೪] ಮತ್ತು ಶಾಸನಗಳ[೩೫] ಆಧಾರಗಳಿವೆ.

ಮೈಸೂರು ಅರಸರ ಇತಿಹಾಸದಲ್ಲಿ ಕಳಲೆ ವಂಶದ ದಳವಾಯಿಗಳ ಪಾತ್ರ ಅವಿಸ್ಮರಣೀಯ. ಇವರು ಸರ್ವಾಧಿಕಾರಿಗಳಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. ಇವರು ವೀರಶೈವಧರ್ಮದ ಪೋಷಕರಾಗಿದ್ದರೆಂಬುದು ತಿಳಿದ ವಿಷಯವೆ. ಕರ್ನಾಟಕದ ಆಳರಸರ ಮುಖ್ಯಲಕ್ಷಣವಾದ ಧರ್ಮಸಮನ್ವಯ ಗುಣದಿಂದ ಈ ಕಳಲೆ ವಂಶದ ದಳವಾಯಿಗಳೂ ಹೊರತಾಗಿಲ್ಲ. ಅಂತೆಯೇ ಪೊಸೂರು ಸೀಮೆ ಗುಮ್ಮಳಾಪುರ ಹೋಬಳಿಗೆ ಸೇರಿದ ಉಳುಮಾರನಹಳ್ಳಿ, ಹುರಳಿಬೀರನಹಳ್ಳಿ, ಹೊನ್ನಹಳ್ಳಿ ಮತ್ತು ಉಪ್ಪಾರಹಳ್ಳಿಗಳನ್ನು ಅಮ್ಮನಭಟ್ಟನ ಮಗ ಕವಿವೆಂಕಟ ಎಂಬುವವನಿಗೆ ಸಾಂಬಶಿವ ವ್ರಿತ್ತಿಯಾಗಿ ಕಳಲೆ ನಂಜರಾಜನು ದತ್ತಿ ನೀಡಿರುವುದು ಉಳುಮಾರನಹಳ್ಳಿ ದಾಖಲೆ ಹಳೆಯೂರಿನ ಶಾಸನದಿಂದ[೩೬] ತಿಳಿಯುತ್ತದೆ. ಆ ಶಾಸನದಲ್ಲಿ ಉಕ್ತನಾಗಿರುವ ಕವಿ ವೆಂಕಟನು, ಕವಿಚರಿತ್ರೆಕಾರರು ದಾಖಲಿಸಿರುವ ಗುಮ್ಮಳಾಪುರದ ವೆಂಕಟಶರ್ಮನೇ ಇದ್ದಿರಬೇಕೆಂದು ತೋರುತ್ತದೆ.[೩೭]

---

೩೨. *EC*, Vol. 7, Nagamangala 6 (Revised)

೩೩. ದೇವರಕೊಂಡಾರೆಡ್ಡಿ., ಗುಮ್ಮಳಾಪುರದ ಗೌರಮ್ಮನ ಗುಡಿಯ ಶಿಲಾಶಾಸನ, **ಇತಿಹಾಸ ದರ್ಶನ**, ಸಂ.೫, ಪು.೩೧.

೩೪. ಕರ್ಲಮಂಗಲಂ ಶ್ರೀಕಂಠಯ್ಯ (ಸಂ), **ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ**, ಬೆಂಗಳೂರು, ೧೯೬೧.

೩೫. ಅದೇ, (i) *EC*, Vol. X, Kolar 64, (Garadanahalli), (ii) ಅದೇ, Vol.IX, Anekal 10 (Sarjapura)

೩೬. *ARIE*, 1971-72, B 197

೩೭. ಆರ್. ನರಸಿಂಹಾಚಾರ್ಯ., **ಕರ್ಣಾಟಕ ಕವಿಚರಿತೆ** ಸಂ.೨, ಬೆಂಗಳೂರು ೧೯೭೩, ಪು.೩೧೯

ವಿಜಯನಗರದ ಅರಸರ ಆಳ್ವಿಕೆಯ ಕಾಲಕ್ಕಾಗಲೇ ನಂಜನಗೂಡಿನ ನಂಜುಂಡೇಶ್ವರದೇವರ ಖ್ಯಾತಿ ತಮಿಳುನಾಡಿನ ಕೊಂಗು ಪ್ರದೇಶದಲ್ಲೆಲ್ಲಾ ಪಸರಿಸಿದ್ದ ಅಂಶ ಈ ಹಿಂದೆಯೇ ಪ್ರಸ್ತಾಪಿಸಿದೆ. ಕ್ರಿ.ಶ. ೧೫೩೨ರ ಗೋಪಿಚೆಟ್ಟಿಪಾಳ್ಯ ತಾಲೂಕಿನ ಎರಗನಹಳ್ಳಿ ಶಾಸನಗಳು[೩೮] ವಿಜಯನಗರ ಅರಸು ಅಚ್ಯುತದೇವರಾಯನ ಕಾಲದ್ದಾಗಿದ್ದು, ಸ್ಥಳೀಯ ಅಧಿಕಾರಿಗಳು, ಎಂಟು ಹಳ್ಳಿಯ ಹದಿನಾರು ಸ್ಥಾನಿಕರು, ಪಾರುಪತ್ಯಗಾರರು, ಸೇನಬೋವರು ಸೇರಿದಂತೆ ಬಡಗಕೊಂಗನಾಡ ಸ್ಥಳದ ಗೌಡುಗಳ ಮುಂದಿಟ್ಟು ಕಪಿಲಾ ಕೌಂಡಿನೀ ಸಂಗಮಕ್ಷೇತ್ರದಲ್ಲಿ ಪ್ರಸನ್ನರಾದ ನಂಜನಗೂಡು ಶ್ರೀನಂಜುಂಡೇಶ್ವರ ದೇವರ ಸನ್ನಿಧಿಯಲ್ಲಿ ನಡವಂಥಾ ಛತ್ರಕ್ಕೆ ಎರಗನಹಳ್ಳಿಯ ಗ್ರಾಮವನ್ನು ಎರಡು ಭಾಗಮಾಡಿ, ಒಂದು ಭಾಗವನ್ನು ಜಂಗಮಛತ್ರದ ಪರ್ವತವೊಡೆಯರ ಮಕ್ಕಳು ಅನ್ನದಾನಿ ಒಡೆಯರು, ನಂಜೆಯದೇವರ ಮಕ್ಕಳು ಭೋಗನಂಜಯ್ಯನವರಿಗೂ, ಇನ್ನೊಂದು ಭಾಗವನ್ನು ಬ್ರಾಹ್ಮಣ ಛತ್ರದ ಲಿಂಗಪ್ಪಯ್ಯನವರ ಮಕ್ಕಳು ದೇವಣ್ಣನವರಿಗೂ ಗ್ರಾಮದ ಹಸಿಗೆಯ (ವಿಭಾಗದ) ವಿವರ ಎಂದು ಭೂಮಿದತ್ತಿಯನ್ನು ನೀಡಲಾಗಿದೆ.

ಅದೇ ಸ್ಥಳದಲ್ಲಿ ದೊರೆತ ಕ್ರಿ.ಶ. ೧೫೪೯ರ ಇನ್ನೊಂದು ಶಾಸನವು[೩೯] ಮಹಾದೇವ ದೇವೋತ್ತಮ ಶ್ರೀನಂಜುಂಡೇಶ್ವರದೇವರ ಸಂನಿಧಿಯಲ್ಲಿ ಬ್ರಾಹ್ಮಣ ಜಾತಿಯ ಜಂಗಮದೇವರಿಗೆ . . . ಎರಗನಹಳ್ಳಿಯ ಸ್ಥಳದವೊಳಗಾದ ಹಲವು ಗ್ರಾಮಪುರಗಳಿಗೆ ಸಲುವ . . . ಎಂದಿದ್ದು ಮುಂದೆ ತ್ರುಟಿತವಾಗಿದೆ.

ಈ ಮೇಲಿನ ಎರಗನಹಳ್ಳಿ ಶಾಸನಗಳಿಂದ, ನಂಜನಗೂಡಿನ ನಂಜುಂಡೇಶ್ವರದೇವರು ಬ್ರಾಹ್ಮಣ ಜಾತಿಯ ಜಂಗಮದೇವರು ಎಂದೂ, ಆ ಸ್ಥಳದಲ್ಲಿ ಜಂಗಮ ಮತ್ತು ಬ್ರಾಹ್ಮಣರಿಗೆ ಛತ್ರದ ವ್ಯವಸ್ಥೆ ಏರ್ಪಡಿಸಿದ್ದ ವಿವರ ತಿಳಿದುಬರುತ್ತದೆ.

ಅಪ್ರತಿಮ ವೀರರಾಗಿದ್ದ ಮೈಸೂರು ಅರಸರ ದಳವಾಯಿಗಳು ದೈವಭಕ್ತರು, ವಿದ್ವತ್ ಪ್ರೇಮಿಗಳು, ಸ್ವತಃ ವಿದ್ವಾಂಸರೂ ಆಗಿದ್ದರು. ಕಳಲೆ ವಂಶದವರಾದ ಆ ದಳವಾಯಿಗಳು ನಂಜನಗೂಡಿನ ನಂಜುಂಡೇಶ್ವರನ ಪರಮಭಕ್ತರು. ಕ್ರಿ.ಶ. ೧೬೬೯ರಲ್ಲಿ ತಾವು ಗೆದ್ದ ಮಲ್ಲಿಗೆಕೋಂಟೆಗೆ ಸೇರಿದ್ದ ವಾಮಲೂರು ಸ್ಥಳದ ಅನೇಕ ಗ್ರಾಮಗಳನ್ನು ನಂಜನಗೂಡಿನ.ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟಿರುವ ಅಂಶ ಓಮಲೂರು ತಾಲೂಕಿನ ಮಲ್ಲಿಕೋಟೆ ಸ್ಥಳದ ಶಾಸನದಿಂದ ತಿಳಿದುಬರುತ್ತದೆ.

ಕೃಷ್ಣಗಿರಿ ಜಿಲ್ಲೆ ಹೊಸೂರು ತಾಲೂಕಿನ ತೊರಹಳ್ಳಿ ಗ್ರಾಮದ ರುದ್ರಪಾದಗಳ ಬಂಡೆಯ ಮೇಲಿರುವ ಶಾಸನವು[೪೦] ಕ್ರಿ.ಶ. ೧೬೬೪ಕ್ಕೆ ಸೇರಿದ್ದು, ಭಾರದ್ವಾಜಗೋತ್ರದ ದಳವಾಯಿ ಕೊಮಾರೈಯ್ಯನ ಸೋದರ ದಳವಾಯಿ ಕ್ಷತ್ರಿಯ ವಂಶದ ನಂಜರಾಜಯ್ಯನು ತನ್ನ ವಂಶಗುರುವಾದ ಸ್ವಾಮಿಕೆರೆ ಪದ್ಮರಸದೇವನ ಕೃಪೆ, ಅಣ್ಣ ಮಲ್ಲರಾಜಯ್ಯನ ಪ್ರೇರಣೆಯಿಂದ ಅರಳದ ಮಲ್ಲಿಕಾರ್ಜುನ ಮತ್ತು ನಂಜನಗೂಡಿನ ನಂಜುಂಡೇಶ್ವರನ ಕೃಪಾಕಟಾಕ್ಷದಿಂದ ತನ್ನ ತಂದೆ, ತಾಯಿ ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿ ಮತ್ತು ಪುಣ್ಯಫಲಾಕಾಂಕ್ಷೆಯಿಂದ ಭದ್ರಗಿರಿಯ ಪೂರ್ವಕ್ಕೆ ದಕ್ಷಿಣ ಪಿನಾಕಿನಿ ನದಿಯ

---

೩೮. *SII*, Vol. IX.No.545, 546

೩೯. ಅದೇ, 596

೪೦. *ARIE*, 1955-55, B 317

ದಂಡೆಯಲ್ಲಿರುವ ತಿರುವಿಚಿಹಳ್ಳಿ ಎಂಬಲ್ಲಿ ನಂಜರಾಯಸಮುದ್ರ ಎಂಬ ಅಣೆಕಟ್ಟೆಯನ್ನು ಕಟ್ಟಿಸಿ ಕೃತಾರ್ಥನಾದನೆಂದು ಕಂಡರಿಸಿದೆ. ಈ ಶಾಸನದಿಂದ ಕಳಲೆ ದಳವಾಯಿಗಳು ನಂಜನಗೂಡಿನ ನಂಜುಂಡೇಶ್ವರ ದೇವರಲ್ಲಿ ಹಾಗೂ ಗುರುಹಿರಿಯರಲ್ಲಿ ಅಪಾರವಾದ ಭಕ್ತಿಯುಳ್ಳವರಾಗಿದ್ದರೆಂದು ಗ್ರಹಿಸಬಹುದಾಗಿದೆ.

ಕೃಷ್ಣಗಿರಿ ಜಿಲ್ಲೆಯ ಉತ್ತಂಗೆರೆ ತಾಲೂಕಿನ 'ಕಲ್ಲಾವಿ' ಸ್ಥಳದ ರೈಲ್ವೆ ಹಾದಿಯ ೧೫೭ನೇ ಮೈಲಿಕಲ್ಲಿನ ಸಮೀಪದ ಬಂಡೆಯ ಮೇಲಿನ ಶಾಸನವು[೪೧] ಹಿರತ್ತ (ವಿರಕ್ತ) ಮಠದ ಕರಿಬಸಪ್ಪದೇವರಿಗೆ ಪರವತಮುಡೆಯನೆಂಬುವವನು ಲಿಂಗಾಯತ ಮಠವನ್ನು ಕಟ್ಟಿಸಿಕೊಟ್ಟು, ತೋಟದ ಭೂಮಿಯ ಲಿಂಗಮುದ್ರೆಕಲ್ಲು ಅದೆಂದು ತಿಳಿಸುತ್ತದೆ.

ತಂಜಾವೂರ ಜಿಲ್ಲೆ ಕುಂಭಕೋಣಂನ ವೀರಶೈವಮಠದ ಗೋಡೆಯಲ್ಲಿರುವ ಕ್ರಿ.ಶ. ೧೫೦೭ರ ಶಾಸನವು[೪೨] ವಿಜಯನಗರ ಅರಸು ವೀರನರಸಿಂಗರಾಯನ ಆಳ್ವಿಕೆಗೆ ಸೇರಿದ್ದು ಅದು ಸಾಳುವನಾಯಕನ ಸೀಮೆಯ ವೀರಮಂಗಲ ಮತ್ತು ಅಪ್ಪರ್‌ಪಿಳ್ಳೆ ಸೀಮೆಯ ಒಲಿಮಂಗಲಂ ಸ್ಥಳದಲ್ಲಿಯ ಭೂಮಿಯನ್ನು ಹಿರಿಯಮಠದ ಸೋಮೇಶ್ವರ ಜಂಗಮನಿಗೆ ರಾಜನು ಸರ್ವಮಾನ್ಯವಾಗಿ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲದೆ ಈ ಶಾಸನದ ಕೊನೆಯಲ್ಲಿ ಸೋಮಿದೇವನ ಭಕ್ತ ಚಿಕ್ಕಬಸವಣ್ಣ ಒಡೆಯನ ಸೇವೆ ಇದೆಂದು ಹೇಳಲಾಗಿದೆ.

ಕ್ರಿಸ್ತಶಕ ೧೫೧೦ರ ಕುಂಭಕೋಣಂ ತಾಲೂಕು ತಿರುವಲನ್ಜುಲಿ ಸ್ಥಳದ ಕಪರ್ದೀಶ್ವರ ದೇವಾಲಯದ ಆವರಣದಲ್ಲಿನ ಶ್ವೇತವಿನಾಯಕ ದೇವಾಲಯದ ಬಾಗಿಲವಾಡದ ಮೇಲಿನ ಶಾಸನದಲ್ಲಿ[೪೩] ಕೃಷ್ಣರಾಯನ ಊಳಿಗದವನಾದ ಬಸವಯ್ಯನು ವೆಳ್ಳೈಪಿಳ್ಳೈಯಾರಿಗೆ ತನ್ನ ನಮಸ್ಕಾರಗಳನ್ನು ತಿಳಿಸಿರುತ್ತಾನೆ.

ಕರಿಕಾಲಚೋಳನ ಆಳ್ವಿಕೆಯ ಕಾಲಕ್ಕೆ ಸೇರಿದುದೆಂದು ಲಿಖಿತವಾಗಿರುವ ತಾಮ್ರಪಟವೊಂದು[೪೪] ಮದುರೆ ಜಿಲ್ಲೆಯ ತಿರುಮಂಗಲಂ ತಾಲೂಕು ಪೆರೈಯೂರು ಸ್ಥಳಕ್ಕೆ ಸೇರಿದುದಾಗಿದೆ. ಅದು ವೀರಶೈವಮಠದ ಕಲ್ಯಾಣ ದೇಶೀಕೇಂದ್ರಸ್ವಾಮಿಯವರು ತಮ್ಮ ಭಕ್ತರಿಂದ ಹಣದ ರೂಪದಲ್ಲಿ ಕಾಣಿಕೆಗಳನ್ನು ಸಂಗ್ರಹಿಸಲು ರಾಜಮಾನ್ಯತೆ ನೀಡಿರುವ ವಿಷಯವನ್ನು ತಿಳಿಸುತ್ತದೆ. ಈ ಶಾಸನಕ್ಕೆ, ತಮಿಳು ಆವೃತ್ತಿಯೂ ಇದೆ.

ಮೇಲೆ ಪ್ರಸ್ತಾಪಿತವಾಗಿರುವ ಕಲ್ಲಾವಿ, ಕುಂಭಕೋಣಂ ಮತ್ತು ಪೆರೈಯೂರು ಶಾಸನಗಳಲ್ಲಿ ಉಕ್ತವಾಗಿರುವ ವೀರಶೈವ ಮಠಗಳ ಬಗ್ಗೆ ಅಧ್ಯಯನ ನಡೆದು ಇಂದಿನ ಸ್ಥಿತಿಗತಿಗಳನ್ನು ಇನ್ನೂ ಬೆಳಕಿಗೆ ತರಬೇಕಾದ ಅಗತ್ಯವಿದೆ.

---

೪೧. ಅದೇ, 1971-72, B 207
೪೨. *ARIE*, 1910 / 213
೪೩. ಅದೇ, 1955-56, 44; *ARIE*, 1927-28, B 213
೪೪. ಅದೇ, 1960-61, A 25

ಸುಗುಟೂರು ಪಾಳೆಯಗಾರರ ವಂಶಗುರು ಸುಜ್ಞಾನಮೂರ್ತಿದೇಶಿಕರ ಸ್ಥಳ ಹೊಸೂರು ಎಂದು ಬೆಂಗಳೂರು ಜಿಲ್ಲೆಯ ಶಾಸನಗಳಿಂದ[೪೫] ತಿಳಿದುಬರುತ್ತದೆ. ಸುಜ್ಞಾನಮೂರ್ತಿ ದೇಶಿಕರ ಪ್ರಸ್ತಾಪ ಅದೇ ವಂಶದ ಮುಮ್ಮಡಿ ತಮ್ಮೇಗೌಡನ 'ಶಂಕರ ಸಂಹಿತೆ' ಕಾವ್ಯ, ಅವನ ಆಸ್ಥಾನ ಕವಿ ಸಿದ್ಧಲಿಂಗಾರ್ಯನ 'ಮಳೆಯರಾಜ ಚಾರಿತ್ರ'ಗಳಲ್ಲೂ ಬಂದಿದೆ. ಹೊಸೂರಿನಲ್ಲಿ ಸುಜ್ಞಾನಮೂರ್ತಿಗಳ ಶಿವಾಚಾರದ ಮಠವೊಂದು ಈಗಲೂ ಇದ್ದು, ವಿಶೇಷತಃ ವಿಶ್ವಕರ್ಮ ಗುಂಪಿಗೆ ಸೇರಿದ ವೀರಶೈವರು ಹಾಗೂ ಇತರರು ಈ ಮಠಕ್ಕೆ ನಡೆದುಕೊಳ್ಳುತ್ತಾರೆ.

ನಿರಂತರ ಚಲನಶೀಲತೆಯುಳ್ಳ ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ಒಂದು ಬಹುಮುಖ್ಯ ಘಟ್ಟ ವೀರಶೈವ ಆಂದೋಳನ ಎಂಬುದನ್ನು ಬಹುಮಟ್ಟಿಗೆ ಎಲ್ಲರೂ ಒಪ್ಪುವರು. ಆದರೆ ಅದರ ಎಲ್ಲ ಮುಖಗಳನ್ನು ಕುರಿತ ನಿಷ್ಪಕ್ಷಪಾತವಾದ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ. ಕನ್ನಡಿಗರು ಇಂದಿಗೂ ಹೆಮ್ಮೆಪಡಬಹುದಾದ ವೀರಶೈವ ಆಂದೋಳನದ ಕೊಡುಗೆ ಮಹತ್ತರವಾದುದು ಎಂಬುದನ್ನು ಪ್ರಸ್ತುತ ಕಾಲದಲ್ಲೂ ನಾಡಿನ ಅನೇಕ ಮಠಮಾನ್ಯಗಳು ನಡೆಯಿಸಿಕೊಂಡು ಬರುತ್ತಿರುವ ಸಮಾಜೋಧಾರ್ಮಿಕ ಕೈಂಕರ್ಯಗಳಿಂದ ಮನಗಾಣಬಹುದಾಗಿದೆ.

೫.೪ ವೈಷ್ಣವಧರ್ಮ

ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ವೈಷ್ಣವಧರ್ಮದ ಕುರುಹುಗಳು ವಿಜಯನಗರ ಅರಸರ ಆಳ್ವಿಕೆಯ ಕಾಲದಿಂದಷ್ಟೇ ವಿವರವಾಗಿ ಕಾಣುತ್ತದೆ. ಕ್ರಿಸ್ತಶಕ ೧೪೧೪ರ ನಂತರದಲ್ಲಿ ಅಂದರೆ ವೀರಹರಿಹರರಾಯನ ಕಾಲದಿಂದಲೇ ಶ್ರೀರಂಗಂನ ರಂಗನಾಥದೇವರಿಗೆ ದಾನದತ್ತಿಗಳನ್ನು ನೀಡಲು ಆರಂಭಿಸಿರುವುದು ಕಂಡುಬರುತ್ತದೆ. ಕ್ರಿ.ಶ. ೧೪೩೪ರ ಇಮ್ಮಡಿ ದೇವರಾಯನ ಶಾಸನವು[೪೬] ಘೃತಫಲ ಶರ್ಕರಾದಿ ಮಿಶ್ರವಾಗಿ ಐದು ಹರಿವಾಣ ನೈವೇದ್ಯ, ನಂದಾಬೆಳಕು, ರಥೋತ್ಸವಾದಿಗಳಿಗೆ ಗ್ರಾಮದಾನ ನೀಡಿರುವುದನ್ನಲ್ಲದೆ, ಮೂವತ್ತು ಹಸುಗಳನ್ನು, ಒಂದು ಆನೆಯನ್ನು ದತ್ತಿ ನೀಡಿರುವ ವಿವರ ನೀಡುತ್ತದೆ. ಪ್ರೌಢದೇವರಾಯನ ಕಾಲದ (ಕ್ರಿ.ಶ. ೧೪೪೭) ಶಾಸನವೊಂದು[೪೭] ಕನ್ನಡ ಭಾಷೆ ಮತ್ತು ಗ್ರಂಥಲಿಪಿಯಲ್ಲಿದ್ದು ಮಾದಣ ದಂಣಾಯಕ, ಶಿರುಪ್ಪರಸ, ಹಿರಿಯ ಶಿರುಪ್ಪರಸ, ನಾಗಾಯಮ್ಮ, ಅಕ್ಕಮ್ಮ ಮುಂತಾದವರು ರಂಗನಾಥದೇವರ ಪೂಜಾಕೈಂಕರ್ಯಗಳಿಗೆ ದತ್ತಿ ನೀಡಿರುವುದನ್ನು ತಿಳಿಸುತ್ತದೆ. ಗ್ರಂಥಲಿಪಿಯಲ್ಲಿರುವ ಇನ್ನೊಂದು ಕನ್ನಡ ಭಾಷೆಯ ಶಾಸನವು[೪೮] ದೇವಾಲಯದ ಯತಿರಾಜನ್ ತೋಟದಲ್ಲಿ ಹೂ ಗಿಡ, ತೆಂಗಿನಮರ ಮುಂತಾದವುಗಳನ್ನು ಬೆಳೆಸಲು ಶ್ರೀವತ್ಸ ಗೋತ್ರದ ಕಾರಣಿಕ ಭಾರತಿ ವಿಟ್ಟಣ್ಣನ ಮಗ ಕಾರಣಿಕ ಪೊನ್ನಂಬಳನಾಥನು ಭೂಮಿಯನ್ನು ದತ್ತಿ ನೀಡಿರುವ ವಿವರ ನೀಡುತ್ತದೆ. ಕ್ರಿ.ಶ. ೧೪೯೨ರಲ್ಲಿ ದೇವರ ಪೂಜಾಕೈಂಕರ್ಯ ಹಾಗೂ ಇಪ್ಪತ್ತು ಮಂದಿ ಬ್ರಾಹ್ಮಣ ಭೋಜನಕ್ಕೆ ದತ್ತಿ ನೀಡಿರುವ ವಿವರ ಶಾಸನವೊಂದರಲ್ಲಿ[೪೯] ಬಂದಿದೆ. ಹೂಮಾಲೆ, ಫಲ, ತೆಂಗಿನಕಾಯಿ,

---

೪೫. *EC*, Vol.IX, Hoskote 156 (Khajihosahalli)

೪೬. *SII*, Vol.XXIV, No.330

೪೭. *ARIE*, 1938-39, B 33

೪೮. ಅದೇ, B 106

೪೯. *SII*, Vol. XXIV, No.350

ಹೂವಿನದಂಡೆ, ತುಪ್ಪ, ಮೇಲೋಗರ, ಬಾಳೆಹಣ್ಣು ಮುಂತಾದ ಪೂಜಾ ಸಾಮಗ್ರಿಗಳಿಗಾಗಿಯೂ ದತ್ತಿ ನೀಡಿರುವ ವಿವರವುಳ್ಳ ಕನ್ನಡ ಶಾಸನಗಳು[೫೦] ಶ್ರೀರಂಗಂ ದೇವಾಲಯದಲ್ಲಿವೆ.

ಕ್ರಿಸ್ತಶಕ ೧೫೧೪ರ ಆಚೀಚಿನ ಅವಧಿಯಲ್ಲಿ ವಿಜಯನಗರದ ಅರಸು ಕೃಷ್ಣದೇವರಾಯ ಹಾಗೂ ಕ್ರಿ.ಶ. ೧೫೩೦ರ ನಂತರ ಅಚ್ಯುತದೇವರಾಯರು ತಮಿಳುನಾಡಿನ ಪ್ರಸಿದ್ಧ ವೈಷ್ಣವ ಕ್ಷೇತ್ರಗಳಾದ ಶ್ರೀರಂಗಂ ಹಾಗೂ ಕಂಚಿಯ ದೇವಾಲಯಗಳಿಗೆ ವಿಧವಿಧವಾದ ದಾನದತ್ತಿಗಳನ್ನು ಯಥೇಚ್ಛವಾಗಿ ನೀಡಿರುವುದನ್ನು ಆ ಸ್ಥಳಗಳಲ್ಲಿ ದೊರೆತಿರುವ ಕನ್ನಡ ಶಾಸನಗಳಿಂದ[೫೧] ಮನಗಾಣಬಹುದಾಗಿದೆ.

ಅಮೂಲ್ಯವಾದ ಮುತ್ತು ಮಾಣಿಕ್ಯ, ವಜ್ರ, ವೈಡೂರ್ಯ, ನೀಲ, ಪಚ್ಚೆ, ಪುಷ್ಪರಾಗಗಳನ್ನೊಳಗೊಂಡ ಆಭರಣಗಳು ಅಂದರೆ ರತ್ನಘಟಿತ ಶಂಖು, ಚಕ್ರ, ಅಭಯಹಸ್ತ, ತಿರುನಾಮ, ಕಿರೀಟ, ರತ್ನಕುಂಡಣ, ಕರ್ಣ್ನಪತ್ರ, ಪದಕಗಳು, ಅಲಕಚೂಡ ಮುಂತಾದವುಗಳನ್ನು ವಿಶೇಷವಾಗಿ ದೇವರಿಗೆ ಅಲಂಕರಿಸಲು ಮಾಡಿಸಿಕೊಟ್ಟಿರುವ ವಿವರಗಳು ಈ ಕ್ಷೇತ್ರಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಪಂನೀರಚೆಂಬು ಮುಂತಾದ ಪೂಜಾಪರಿಕರಗಳನ್ನೂ, ಪಟ್ಟೆಹಚಡ, ಪಟ್ಟೆಸೀರೆ, ಚಿನ್ನದ ಬರಹದ ಹಚಡ, ಚಿನ್ನದ ಬರಹದ ಸೀರೆ, ಮಂಜಿಡಿಕೆ ಸೀರೆ ಇತ್ಯಾದಿ ವಸ್ತ್ರ ವಿಶೇಷಗಳನ್ನೂ ಯಥೇಚ್ಛವಾಗಿ ನೀಡಿರುವುದು ಕಂಡುಬರುತ್ತದೆ. ತುಲಾಪುರುಷ, ಸಹಸ್ರದಾನ, ಗೋದಾನ ಮುಂತಾದ ಮಹಾದಾನಗಳನ್ನು ವಿಜಯನಗರದ ಅರಸರು ಈ ಕ್ಷೇತ್ರಗಳಲ್ಲಿ ನಡೆಸಿರುತ್ತಾರೆ. ಈ ವಿವರಗಳನ್ನು ಗಮನಿಸಿದರೆ ವಿಸ್ಮಯದೊಂದಿಗೆ, ವಿಜಯನಗರ ಸಾಮ್ರಾಜ್ಯದ ಸಿರಿವಂತಿಕೆ, ಡಾಂಭಿಕತೆ ಮತ್ತು ಔದಾರ್ಯಗಳು ಕಣ್ಣಮುಂದೆ ಹಾದುಹೋದಂತಾಗುತ್ತದೆ.

ಕ್ರಿಸ್ತಶಕ ೧೫೫೧ರ ಸದಾಶಿವರಾಯನ ಶಾಸನವೊಂದು ಧಾರಾಪುರದಲ್ಲಿದ್ದು, ಅಲ್ಲಿನ ವಿಷ್ಣುದೇವೋತ್ತಮ ರಾಘವದೇವರ ಪಲ್ಲಕ್ಕಿಯ ಸೇವೆಗಾಗಿ ಧಾರಾಮರ ಚಾವಡಿಗೆ ಸಲ್ಲುವ ಹಲವು ಗ್ರಾಮಗಳನ್ನು ದತ್ತಿಬಿಟ್ಟಿರುವ ವಿವರವನ್ನೊಳಗೊಂಡಿದೆ. ರಾಹುತರು, ನಾಯಕಮಕ್ಕಳು, ಯಕ್ಕಟಿಗಳು, ಬಿಲ್ಲರು, ಬಾಣದ ಬಾಗಿಲಗೊಲ್ಲರು, ಬೋಯರು, ಊಳಿಗದವರು, ಹುಲ್ಲವರು, ದಿಯವರು, ಬೆಸ್ತ . . ಮಣಿಗಳು, ಕಾಮಾಟದ . . ಯಿವರು, ವಾದ್ಯದವರು, ಅಡ್ಡ ಹೊರುವವರು, ಕೂಟದವರು, ಕಟ್ಟುವರು, ಹಸ್ತಕರು ಧಾರಾಪುರ ಚಾವಡಿಯಲಿ ಒಪ್ಪಿ ಸರ್ವರು ವರ್ಷಕ್ಕೆ ಬಂಡಿ ಹಣವ ಪಲ್ಲಕ್ಕಿ ಸೇವೆಗೆ ದತ್ತಿ ಬಿಟ್ಟಿರುವಂತೆ ಈ ಶಾಸನದಿಂದ ಗ್ರಹಿಸಬಹುದಾಗಿದೆ. ಇಲ್ಲಿ ಉಕ್ತವಾಗಿರುವವರು ಶ್ರೀವೈಷ್ಣವ ದೀಕ್ಷೆಯನ್ನು ಪಡೆದ ಭಕ್ತರೆಂದು ಭಾವಿಸಬಹುದಾಗಿದೆ.

ಧರ್ಮಪುರಿ ಸಮೀಪದ ಇಂದೂರಿನ ಪ್ರಸನ್ನ ವೆಂಕಟೇಶ್ವರ ದೇವರಿಗೆ[೫೨] ಹಾಗೂ ತಿರುವಳ್ಳೂರು ಜಿಲ್ಲೆಯ ಹೊನ್ನೇರಿ ತಾಲೂಕಿನ ನಾಗಲಾಪುರದ ವೇದನಾರಾಯಣಸ್ವಾಮಿ ದೇವರಿಗೆ ಕೃಷ್ಣದೇವರಾಯನ

೫೦, ಅದೇ, No. 358 & 411, *ARIE*, 1950-51 B 339

೫೧. ಅದೇ, Vol, IX, No.499, 552, 547, 562; ಅದೇ, Vol. XXIV, Nos. 411, 417 & 437; ARIE, 1938-39, B 44, B 1, B 38

೫೨. *SII*, Vol, IX No.644

೫೩. *ARIE*, 1971-72, B 194

ಕಾಲದಲ್ಲಿ ಪೂಜಾಪುನಸ್ಕಾರ, ಅಂಗರಂಗ ವೈಭೋಗಗಳು ಸಾಂಗವಾಗಿ ಸಾಗಲು ವ್ಯವಸ್ಥೆ ಮಾಡಿರುವ ವಿವರಗಳು ಆಯಾ ದೇವಾಲಯಗಳಲ್ಲಿ ದೊರೆತಿರುವ ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ.

ಹೊಸೂರು ತಾಲೂರು ಬಾಗೇಪಲ್ಲಿ ವೆಂಕಟರಮಣಸ್ವಾಮಿ ದೇವಾಲಯ[೫೫] ಮತ್ತು ಡೆಂಕಣಿಕೋಟೆಯ ಬೇಟೆರಾಯಸ್ವಾಮಿ[೫೬] ದೇವಾಲಯಗಳಲ್ಲಿರುವ ಶಾಸನಗಳು ಕ್ರಿ.ಶ. ೧೫೭೩ಕ್ಕೆ ಸೇರಿದ್ದು, ವಿಜಯನಗರದ ಅರಸು ಸದಾಶಿವರಾಯನ ಆಳ್ವಿಕೆಯವಾಗಿವೆ. ಸೇಲಂ ಜಿಲ್ಲೆಯ ತಿರುಚೆಂಗೋಡು ತಾಲೂಕಿನ ಶಂಖಗಿರಿಯ ಚೆನ್ನಕೇಶವ ದೇವಾಲಯದ ಮೆಟ್ಟಲುಗಳ ಮೇಲೆ ಸಾಕಷ್ಟು ತ್ರುಟಿತವಾದ ಶಾಸನವಿದ್ದು[೫೭] 'ಚೆನ್ನರಾಯ' ಎಂಬ ಬರಹವಿದೆ.

ಧರ್ಮಪುರಿ ಜಿಲ್ಲೆಯ ಪೆನ್ನಾಗರದ ಸಮೀಪದ ಹಳೇಪುರದ ಶ್ರೀನಾರಸಿಂಹದೇವರಿಗೆ[೫೮] ವಿರುಪೆಯ ನಾಯ್ಕನ ಮಕ್ಕಳು ಪಾಲೆಯನಾಯಕರು ವಿಶೇಷ ನೈವೇದ್ಯ ದೀಪ ಮಾಡಿಸಿದ ಬಗ್ಗೆ ವಿವರ ದೊರೆಯುತ್ತದೆ.

ಕ್ರಿಸ್ತಶಕ ೧೬೭೮ರ ಮೈಸೂರು ದೊರೆ ಚಿಕ್ಕದೇವರಾಯನ ಆಳ್ವಿಕೆಯಲ್ಲಿ ಅವನ ಅಧಿಕಾರಿಗಳು ರಾಯದುರ್ಗವೆಂಬ ಕನ್ನತೂರುದುರ್ಗದ ಚೆನ್ನರಾಯ ಪೆರುಮಾಳ್ ದೇವರಿಗೆ ದ್ವಾರಪಾಲಕರನ್ನು ಮಾಡಿಸಿಕೊಟ್ಟಿರುವ ವಿವರವಿದೆ.[೫೯] ಇಮ್ಮಡಿ ಕೃಷ್ಣರಾಜ ಒಡೆಯರ ಕ್ರಿ.ಶ. ೧೭೧೭ರ ಶಾಸನವೊಂದು[೬೦] ಧರ್ಮಪುರಿ ಜಿಲ್ಲೆಯ ಪಾಪ್ಪಾರಪಟ್ಟಿಯಲ್ಲಿದ್ದು, ಕಂಚಿಯ ವರದರಾಜಸ್ವಾಮಿಯ ಸನ್ನಿಧಿಯಲ್ಲಿ ಅಳಘಿಯ ಮನವಾಳ ರಾಮಾನುಜಾಜೀಯರವರ ಹವಾಲಿನಲ್ಲಿ ಶಾಶ್ವತವಾಗಿ ನಡೆಸಿಕೊಂಡು ಬರುವ ನಿತ್ಯಕೈಂಕರ್ಯಕ್ಕೆ ಪಾಪಾರಪಟ್ಟಿ ಮುಂತಾದ ಒಟ್ಟು ೧೨ ಗ್ರಾಮಗಳನ್ನು ಪಾಪಾರಪಟ್ಟಿಯ ಒಂದು ಕೆರೆಯನ್ನು ದತ್ತಿ ಬಿಟ್ಟ ವಿವರವನ್ನು ನೀಡುತ್ತದೆ.

ಡೆಂಕಣಿಕೋಟೆ ತಾಲೂಕು ತಳಿಗ್ರಾಮದ ಗೋಪಾಲಸ್ವಾಮಿ ದೇವಾಲಯವನ್ನು[೬೧] ಮೈಸೂರು ದೊರೆ ಕೃಷ್ಣರಾಜ ಒಡೆಯರವರು ಕ್ರಿ.ಶ.೧೭೪೨ರಲ್ಲಿ ನಿರ್ಮಿಸಿದರೆಂದು ತಿಳಿದುಬರುತ್ತದೆ. ಕೊಯಮತ್ತೂರು ತಾಲೂಕು ಗಣಪತಿಸ್ಥಳದ ವೇಣುಗೋಪಾಲಸ್ವಾಮಿಗೆ[೬೨] ತೆರಕಣಾಂಬಿ ಮಾದಯ್ಯನ ಪೌತ್ರ ಶಂಕರಯ್ಯನ ಪುತ್ರ ಮಾದಯ್ಯ, ದೇವರ ಪೂಜಾ ಕೈಂಕರ್ಯಗಳಿಗಾಗಿ ದತ್ತಿ ಬಿಟ್ಟಿರುತ್ತಾನೆ. ಈತನು ಕೊಯಮತ್ತೂರಿನ ಅಧಿಕಾರಿಯಾಗಿದ್ದನು. ಸೇಲಂ ಜಿಲ್ಲೆ ತಿರುಚೆಂಗೋಡು ತಾಲೂಕು ಪಾಲ್‌ಮೇಡು ಸ್ಥಳದಲ್ಲಿರುವ ಶಾಸನವೊಂದು ಅಹೋಬಲ ಲಕ್ಷ್ಮೀನರಸಿಂಹಸ್ವಾಮಿಯ[೬೩]

---

೫೪. *ARIE*, 1904 / 619
೫೫. ಅದೇ, 1970-71, B 469
೫೬. ಅದೇ, 1975-76, B 214
೫೭. ಅದೇ, 1929-30, B 511
೫೮. *SII*, Vol.VII, No.14
೫೯. *ARIE*, 1929-30, B 512
೬೦. *SII*, Vol.IX, No. 704
೬೧. *TLIMP*, 113
೬೨. *ARIE*, 1961-62, B 235
೬೩. ಅದೇ, 1959-60 B, 345

ಪೂಜಾಕೈಂಕರ್ಯಗಳಿಗೆ ಶ್ರೀಪರಾಂಕುಶ ರಾಮಾನುಜಾಜೀಯರ್ ಮಠ ಮತ್ತು ಶ್ರೀವೈಷ್ಣವರ ಆಹಾರದಾನಕ್ಕೆ ಪಾಲ್‌ಮೇಡು ಸ್ಥಳವನ್ನು ಮೈಸೂರು ಕೃಷ್ಣರಾಯ ಒಡೆಯರವರು ಸಾವಿರ ವರಹಗಳಿಗೆ ಗೇಣಿಗೆ ದತ್ತಿ ಬಿಟ್ಟಿರುವ ವಿವರವಿದೆ.

ಹೀಗೆ ವಿಜಯನಗರದ ಮತ್ತು ಮೈಸೂರು ಅರಸರ ಕಾಲದಲ್ಲಿ, ವೈಷ್ಣವಧರ್ಮ ತಮಿಳುನಾಡಿನಲ್ಲೂ ವಿಶೇಷ ಪ್ರಾಶಸ್ತ್ಯಪಡೆದ ಅಂಶ ಮನವರಿಕೆಯಾಗುತ್ತದೆ.

೫.೫ ವೈದಿಕಧರ್ಮ / ಅಗ್ರಹಾರ ಇತ್ಯಾದಿ

ಹಿಂದೂ ವರ್ಣಾಶ್ರಮ ಪದ್ಧತಿಯಲ್ಲಿ ಅಗ್ರಸ್ಥಾನ ಬ್ರಾಹ್ಮಣರಿಗೆ ಸಲ್ಲುತ್ತದೆ. ಅವರು ಷಟ್ಕರ್ಮಗಳಾದ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹಗಳಲ್ಲಿ ನಿರತರಾಗಿದ್ದರೆ ದೇಶಕ್ಕೆ ಸನ್ಮಂಗಳ ಉಂಟಾಗಿ ಸಮಾಜವು ಧರ್ಮನಿರತವಾಗಿರುತ್ತದೆ ಎಂಬ ಪ್ರಬಲ ನಂಬಿಕೆ ನಮ್ಮ ರಾಜಮಹಾರಾಜರಲ್ಲಿ ಇದ್ದಿತು. ಆ ಕಾರಣದಿಂದಾಗಿಯೇ ಶಾಸನಗಳಲ್ಲಿ, ಬ್ರಾಹಣರಿಗಾಗಿ ಅಗ್ರಹಾರಗಳನ್ನು ವಿಶೇಷವಾಗಿ ದತ್ತಿ ಬಿಟ್ಟಿರುವುದು ಕಂಡುಬರುತ್ತದೆ. ಜೊತೆಗೆ ಗ್ರಾಮದಾನ, ಬ್ರಹ್ಮದೇಯ ಮುಂತಾದ ದತ್ತಿಗಳನ್ನು ರಾಜಮಹಾರಾಜರು ಕಾಲದಿಂದ ಕಾಲಕ್ಕೆ ಯಥೇಚ್ಛವಾಗಿ ಬಿಟ್ಟಿರುವುದು ಕಂಡುಬರುತ್ತದೆ.

ಕ್ರಿಸ್ತಶಕ ೧೭೬೫ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಮಾದಯ್ಯ ಎಂಬ ಕೊಯಮತ್ತೂರಿನ ಅಧಿಕಾರಿ ಮಾಧವಪುರವೆಂಬ ಅಗ್ರಹಾರವನ್ನು[೬೪] ಆನೆಮಲೆಗೆ ಪಶ್ಚಿಮದಲ್ಲಿ ಸ್ಥಾಪಿಸಿ ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಭೂಮಿಯನ್ನು ದತ್ತಿ ನೀಡಿದ ವಿವರ ಶಾಸನೋಕ್ತವಾಗಿದೆ. ಹೊಸೂರು ತಾಲೂಕು ಮುದಗಾನಹಳ್ಳಿ ಗ್ರಾಮದ ಹದಿನೈದನೆಯ ಶತಮಾನದ ಶಾಸನವೊಂದು ಬ್ರಹ್ಮದೇಯವನ್ನು[೬೫] ಉಲ್ಲೇಖಿಸುತ್ತದೆ. ಧಾರಾಪುರದಲ್ಲಿರುವ ಸದಾಶಿವರಾಯನ ಕಾಲದ ಶಾಸನವೊಂದು[೬೬] ಭಾರದ್ವಾಜಗೋತ್ರದ ಅಶ್ವಲಾಯನ ಸೂತ್ರದ ಋಕ್‌ಶಾಖೆಯ ಶಿವನಪ್ಪ ಪಂಡಿತರ ಪುತ್ರ ವೀರಾಪಂಡಿತರಿಗೆ ಗ್ರಾಮದಾನ ನೀಡಿದ ವಿವರವನ್ನು ನೀಡುತ್ತದೆ. ಸತ್ಯಮಂಗಲ ತಾಲೂಕಿನ ವಿನ್ನಪಳ್ಳಿ ಗ್ರಾಮದ ಶಾಸನವೊಂದು[೬೭] ಕ್ರಿ.ಶ. ೧೭೭೧ಕ್ಕೆ ಸೇರಿದ್ದು ಮೈಸೂರು ದೊರೆ ದೇವರಾಜ ಒಡೆಯನದಾಗಿದೆ. ಗ್ರಾಮವೊಂದನ್ನು ೬೪ ವೃತ್ತಿಗಳಾಗಿ ವಿಂಗಡಿಸಿ ೬೪ ಜನ ಬ್ರಾಹ್ಮಣರಿಗೆ ದತ್ತಿ ಬಿಟ್ಟ ಬಗ್ಗೆ ಆ ಶಾಸನ ತಿಳಿಸುತ್ತದೆ. ಇಮ್ಮಡಿ ಕೃಷ್ಣರಾಜ ಒಡೆಯನ ಆಳ್ವಿಕೆಯ ಕಾಲದಲ್ಲಿ ಅನೇಕ ಬ್ರಾಹ್ಮಣರಿಗೆ ಭೂಮಿಗಳನ್ನು ಮತ್ತು ಗ್ರಾಮಗಳನ್ನು ಕ್ರಯದಾನವಾಗಿ ಕೊಟ್ಟಿರುವುದು ಕಂಡುಬರುತ್ತದೆ. ಸತ್ಯಮಂಗಲ,[೬೮] ಮೆಟ್ಟೂರು,[೬೯] ಪುದುಪಾಳ್ಯಂ[೭೦] ಮುಂತಾದ ಸ್ಥಳಗಳಿಗೆ ಸೇರಿದ ಈ ಅರಸರ ತಾಮ್ರಪಟಗಳಲ್ಲಿ ಗೋಪಾಲಸಮುದ್ರ, ಗುಡ್ಡನಾಯಕನಪಾಳ್ಯ, ತಿರುಮಲೆಶೆಟ್ಟಿಪಾಳ್ಯ, ಶಂಖಗಿರಿಗೆ ಸೇರಿದ ತಗಡಪ್ಪಾಡಿ,

---

೬೪. *ARIE*, 1927-28, A 7
೬೫. ಅದೇ, 1970-71, B 512
೬೬. *SII*, Vol. IX, No.624
೬೭. *TLIMP*, 309
೬೮. ಅದೇ, 304, 303
೬೯. *ARIE*, 1947-48, A 1
೭೦. *TLIMP*, 43; *TLIMP*, 304; (*ARIE*, 1947-48, A 2; ಅದೇ, 1942-43, A 9 ಇತ್ಯಾದಿ

ಮನೂರ್ ಮುಂತಾದ ಗ್ರಾಮಗಳನ್ನು ಅಥವಾ ಗ್ರಾಮದ ಭೂಮಿಗಳನ್ನು ಸುಬ್ಬಾಶಾಸ್ತ್ರಿ, ರಾಮಾಶಾಸ್ತ್ರಿ, ರಾಮಾವಧಾನಿ, ವೆಂಕಟೇಶ್ವರಶಾಸ್ತ್ರಿ, ವೆಂಕಟರಮಣಾಚಾರ್ಯ, ರಾಮಲಿಂಗಶಾಸ್ತ್ರಿ ಮುಂತಾದ ಬ್ರಾಹ್ಮಣರಿಗೆ ಕ್ರಯದಾನವಾಗಿ ನೀಡಿರುವುದು ಕಂಡುಬರುತ್ತದೆ. ಈ ಕ್ರಯದಾನ ಶಾಸನಗಳೆಲ್ಲವೂ ತಾಮ್ರಪಟಗಳಾಗಿದ್ದು ಕ್ರಿ.ಶ. ೧೭೬೦–೬೨ರ ಅವಧಿಗೆ ಸೇರಿದವಾಗಿರುವುದು ಗಮನಾರ್ಹ ಅಂಶ. ಈ ಕ್ರಯಭೂದಾನಗಳನ್ನು ಆ ಭೂಮಿಗಳ ಮೇಲಿನ 'ಶ್ರೋತ್ರಿಯಂ' ಎಂಬ ವಾರ್ಷಿಕ ಆಯದ ಹತ್ತರಷ್ಟು ಬೆಲೆಯನ್ನು ಪಡೆದು ದತ್ತಿ ನೀಡಿರುವುದು ಕಂಡುಬರುತ್ತದೆ. ಕ್ರಿ.ಶ. ೧೭೬೦–೬೨ರ ಅವಧಿಯಲ್ಲಿ ಹೈದರಾಲಿ ಹೆಚ್ಚು ಪ್ರಬಲವಾಗತೊಡಗಿದ್ದ ಕಾಲ.

ಉಳಮಾರನಹಳ್ಳಿ ಸಮೀಪದ ಹಳೆಯೂರು ಶಾಸನದಲ್ಲಿ[೭೧] ಪುಸೂರು ಸೀಮೆಯ ಗುಮ್ಮಳಾಪುರ ಹೋಬಳಿಗೆ ಸೇರಿದ ಹಲವು ಗ್ರಾಮಗಳನ್ನು ಸಾಂಬಶಿವ ವೃತ್ತಿಯಾಗಿ ಅಮ್ಮಣ್ಣಭಟ್ಟನ ಮಗ ಕವಿ ವೆಂಕಟ ಎಂಬುವವನಿಗೆ ದಳವಾಯಿ ನಂಜರಾಜಯ್ಯನು ದತ್ತಿ ಬಿಟ್ಟ ವಿವರವಿದೆ. ಕವಿಚರಿತ್ರೆಕಾರರು ಉಲ್ಲೇಖಿಸಿರುವ ವೆಂಕಟಶರ್ಮ ಈತನೇ ಇರಬೇಕು. ಗುಮ್ಮಳಾಪುರದ ಹಲವು ವೀರಶೈವ ಮಹಾಪುರುಷರು ಕ್ರಿ.ಶ.೧೪೭೪ರಲ್ಲಿ ಬ್ರಾಹ್ಮಣಮತದ ವೆಂಕಟೇಶ್ವರ ಉಪಾಧ್ಯಾಯನಿಗೆ ಒಂದು ಗ್ರಾಮವನ್ನು ದಾನ ನೀಡಿದ್ದಾರೆ. ಇದು ಶರಣರ ಮತ ಮೈತ್ರಿಗೆ ನಿದರ್ಶನವೆಂದು ಪರಿಗಣಿಸಲಾಗಿದೆ.[೭೨]

೫.೬ ಇಸ್ಲಾಂ ಧರ್ಮ

ಬಿಜಾಪುರದ ಸುಲ್ತಾನನ ಅಧಿಕಾರಿಯಾಗಿ ಮರಾಠರ ಷಹಜಿಯ ಪ್ರವೇಶದೊಂದಿಗೆ ದಕ್ಷಿಣ ಕರ್ನಾಟಕದ ಹಾಗೂ ತಮಿಳುನಾಡಿನ ಗಡಿ ಪ್ರದೇಶಗಳಲ್ಲಿ ಮುಸ್ಲಿಂಧರ್ಮವು ತನ್ನ ಅಸ್ತಿತ್ವವನ್ನು ದೃಢಪಡಿಸಿಕೊಂಡಿತು. ಮುಂದೆ ಮೊಘಲರ ಪ್ರವೇಶ, ನಂತರದಲ್ಲಿ ಸ್ಥಳೀಯವಾಗಿ ತಲೆಯೆತ್ತಿದ ಆರ್ಕಾಡು ನವಾಬರು ಮತ್ತು ಮೈಸೂರಿನ ಹೈದರಾಲಿ, ಟಿಪ್ಪುಸುಲ್ತಾನರ ಕಾಲದಲ್ಲಿ ಇಸ್ಲಾಂಧರ್ಮಕ್ಕೆ ಒಳ್ಳೆಯ ಪೋಷಣೆ ಹಾಗೂ ಪ್ರೋತ್ಸಾಹ ದೊರೆಯಿತು. ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಸೇಲಂ ತಾಲೂಕಿನ ಅಮ್ಮಾಪಾಳ್ಯಂನಲ್ಲಿರುವ ಕ್ರಿ.ಶ. ೧೭೫೯ರ ಶಿಲಾಶಾಸನವು[೭೩] ತಾಮ್ರಶಾಸನದ ನಕಲೆಂದು ತಿಳಿಯುತ್ತದೆಯಲ್ಲದೆ ಆಗ ಮೈಸೂರಿನ ಸೇನೆಯ ದಳವಾಯಿಯಾಗಿದ್ದ ಹೈದರಾಲಿಯಿಂದ ಖಜಾನೆಗೆ ಹಣತುಂಬಿ ಅಕಾವಲ್ಲ ಸಾಹೇಬು ಎಂಬುವರಿಗೆ ದರ್ಗಾವನ್ನು ನಿರ್ವಹಣೆ ಮಾಡಲು ಅಮ್ಮಾಪಾಳ್ಯ ಮುಂತಾದ ಗ್ರಾಮಗಳನ್ನು ರಾಜನಿಂದ ದತ್ತಿ ಬಿಡಿಸಲಾಗಿದೆ. ಸರಿಸುಮಾರು ಇದೇ ಅವಧಿಗೆ ಸೇರಿದ ಬೆಂಗಳೂರು ಜಿಲ್ಲೆಯ ಆನೇಕಲ್ ಮತ್ತು ಚೆನ್ನಪಟ್ಟಣ ತಾಲೂಕುಗಳಲ್ಲೂ ಇದೇ ರೀತಿಯ ದತ್ತಿಗಳನ್ನು ಹೈದರಾಲಿಯು ಬಿಡಿಸಿರುವುದು ಕಂಡುಬರುತ್ತದೆ.[೭೪]

* * *

೭೧. *ARIE*, 1971-72, B 197
೭೨. ಶಿ.ಚೆ. ನಂದಿಮಠ, *ಗುಮ್ಮಳಾಪುರದ ದಾನಶಾಸನಗಳು*, ಶರಣ ಸಾಹಿತ್ಯ ಸಂ.೨೧, ಸಂಚಿಕೆ ೨–೩, ಪು.೮೪, ೮೫
೭೩. *ARIE*, 1933-34, B 155
೭೪. *EC*, Vol. IX, Anekal 90, Channapatna 32

೬.೦ ದೇವಾಲಯ ರಚನೆ, ಜೀರ್ಣೋದ್ಧಾರ, ಪೂಜಾಕೈಂಕರ್ಯಗಳು

ವಿಶ್ವದ ಎಲ್ಲ ಜನಾಂಗಗಳಲ್ಲಿಯೂ, ದೇವರೊಬ್ಬನಿದ್ದಾನೆ, ಅವನು ಈ ಜಗತ್ತಿನ ಸೃಷ್ಟಿಕರ್ತ, ನಿಯಂತ್ರ, ಅವನ ಒಲವಿನಿಂದ ಸುಖ, ಮುನಿಸಿನಿಂದ ದುಃಖ, ಕಷ್ಟಕಾರ್ಪಣ್ಯ ಉಂಟಾಗುತ್ತದೆ ಎಂಬ ನಂಬಿಕೆ ಒಂದಿಲ್ಲೊಂದು ರೀತಿಯಲ್ಲಿ ನೆಲೆನಿಂತಿದೆ. ಅಂತಹ ಕರ್ತೃ ತಮಗಾಗಿ ಈ ಲೋಕಕ್ಕೆ ಬಂದಿದ್ದಾನೆಂದು ಪರಿಭಾವಿಸಿ ಅವನನ್ನು ಒಲಿಸಿಕೊಳ್ಳಲು ಅವನಿಗೆ ಬಿಡಾರವನ್ನು ಕಟ್ಟಿ ಅಲ್ಲಿ ಅವನನ್ನು ಕಾಣಲು ನಡೆಸಿದ ಪ್ರಯತ್ನದ ಫಲವೇ ದೇವಾಲಯ. ವೇದಗಳ ಕಾಲದಲ್ಲಿ ಪ್ರಾಯಶಃ ದೇವಾಲಯಗಳು ಇರಲಿಲ್ಲ. ವೈದಿಕ ಯಜ್ಞಗಳನ್ನು ಮಾಡುತ್ತಿದ್ದ ಯಾಗಶಾಲೆಯೇ ಕಾಲಕ್ರಮೇಣ ಭಕ್ತಿಪಂಥಗಳ ಪ್ರಭಾವದಿಂದ, ವಿಗ್ರಹಾರಾಧನಾ ಪದ್ಧತಿಗೆ ನಾಂದಿಯಾಗಿ ಮುಂದೆ ಯಾಗಶಾಲೆಯೇ ದೇವಾಲಯವಾಗಿ ರೂಪಾಂತರವಾಯಿತೆಂದು ಹೇಳಬಹುದು. ಇದು ವೇದಕಾಲದ ಕೊನೆಯ ಘಟ್ಟದಲ್ಲಿ ಆರಂಭಗೊಂಡ ಪ್ರಕ್ರಿಯೆ ಎನ್ನಬಹುದು.

ಭಾರತೀಯರ ಧರ್ಮ ಸಂಸ್ಕೃತಿಗಳೆಂಬ ದೀಪವನ್ನು ಜ್ವಲಂತವಾಗಿ ಕಾಪಾಡಿಕೊಂಡು ಬಂದ ದೇವಾಲಯಗಳು, ನಿರ್ವಹಿಸಿರುವ ಪಾತ್ರ ತುಂಬ ಹಿರಿದು. ಅವು ಸಮಾಜದ ಐಕ್ಯತೆಗೂ ಶ್ರಮಿಸಿವೆ, ಅಲ್ಲದೆ ನೂರಾರು ಜನರ ಜೀವನೋಪಾಯಕ್ಕೂ ಇಂಬುಕೊಟ್ಟಿವೆ. ಲಲಿತಕಲೆಗಳಿಗೆ ಉತ್ತೇಜನ ನೀಡಿದೆ. ವೈದಿಕ ಮತ್ತು ಶಾಸ್ತ್ರೀಯ ಜ್ಞಾನಗಳು ಉಳಿಯಲು, ಬೆಳೆಯಲು, ಹರಡಲು ದೇವಾಲಯ ಸಹಾಯ ಮಾಡಿದೆ. ಮನಸ್ತಾಪ ವ್ಯಾಜ್ಯ ವಿವಾದಗಳಲ್ಲಿ ನ್ಯಾಯಾಲಯವಾಗಿಯೂ ತೀರ್ಪನ್ನು ನೀಡಿವೆ. ಇಂತಹ ಹಿನ್ನೆಲೆಯುಳ್ಳ ದೇವಾಲಯಗಳ ರಚನೆ ಜೀರ್ಣೋದ್ಧಾರ ಹಾಗೂ ದೇವರ ಸ್ಥಾಪನೆ, ಆರಾಧನೆಗೆ ಸಂಬಂಧಿಸಿದಂಥ ವಿವರಗಳನ್ನು ನೀಡುವ ಅನೇಕ ಕನ್ನಡ ಶಾಸನಗಳು ತಮಿಳುನಾಡಿನ ಅನೇಕ ಪವಿತ್ರ ಕ್ಷೇತ್ರಗಳಲ್ಲಿ ಕಂಡುಬಂದಿವೆ.

ಧರ್ಮಪುರಿಯು ಒಂಬತ್ತನೆಯ ಶತಮಾನದಲ್ಲಿ 'ತಗಡೂರು' ಎಂದು ವಿಖ್ಯಾತವಾಗಿದ್ದಿತು. ಐಶ್ವರ್ಯಭರಿತವಾದ ದೇವಾಲಯಗಳಿಂದಲೂ ರಾಜರ ಸ್ವರ್ಗೀಯ ಉದ್ಯಾನವನಗಳಿಂದಲೂ ಸುತ್ತಲೂ ಎತ್ತರವಾದ ಭಿತ್ತಿಗಳಿಂದಲೂ ಕೂಡಿ ಅಭೇದ್ಯವಾಗಿದ್ದಿತೆಂದು ಶಾಸನಗಳೂ ವರ್ಣಿಸಿವೆ. ಅದು ಜೈನ, ಶೈವಧರ್ಮಗಳ ಕೇಂದ್ರವಾಗಿದ್ದಿತು. ರಾಮಕ್ಕನ ಕೆರೆ ಮತ್ತು ಸಮೀಪದ ಅಧಮಾನಕೋಟೆಯ ಜೈನಶಿಲ್ಪಗಳೂ, ಪ್ರಾಚೀನ ಶಾಸನಗಳೂ ನೊಳಂಬರ ಕಾಲದಲ್ಲಿನ ಇದರ ಪ್ರಾಮುಖ್ಯತೆಯನ್ನು ಎತ್ತಿತೋರಿಸುತ್ತದೆ. ಧರ್ಮಪುರಿಯ ಜೈನಶಾಸನಗಳಲ್ಲಿ ಬಸದಿ ನಿರ್ಮಾಣ, ಪೂಜಾಕೈಂಕರ್ಯ ಮತ್ತು ಜೀರ್ಣೋದ್ಧಾರ ಮುಂತಾದವುಗಳಿಗೆ ದತ್ತಿಗಳನ್ನು ಬಿಟ್ಟಿರುವುದು ಕಂಡುಬರುತ್ತದೆ. ಈಗಲೂ ಇಲ್ಲಿನ ಮಲ್ಲಿಕಾರ್ಜುನ ದೇವಾಲಯವು ಬಹು ಆಕರ್ಷಕವಾಗಿದೆ.

ವೆಲ್ಲೂರು ಜಿಲ್ಲೆಯ ವಳ್ಳಿಮಲೆಯಲ್ಲಿ ಗಂಗ ರಾಚಮಲ್ಲನು ಜೈನಗುಹಾ ಬಸದಿಯನ್ನು ಮಾಡಿಸಿದ ವಿವರ ಶಾಸನಗಳಲ್ಲಿ ಬಂದಿದೆ. ಜಿಂಜಿ ತಾಲೂಕು ಶಿಯಮಂಗಲಂನಲ್ಲಿ ಎರಡು ಜೈನ ಬಸದಿ, ಚಿತ್ತಮೂರಿನಲ್ಲಿ ಮಾನಸ್ತಂಭವೊಂದರ ಸ್ಥಾಪನೆ, ಮದುರೆ ಜಿಲ್ಲೆ ಕುಯಿಕುಡಿಯಲ್ಲಿ ದೀಪದ ಕಂಬ ಇತ್ಯಾದಿ ಗಮನಾರ್ಹವಾಗಿದೆ.

ಕ್ರಿಸ್ತಶಕ ಹದಿನಾಲ್ಕನೆಯ ಶತಮಾನದ ಪ್ರಾರಂಭಕ್ಕಾಗಲೇ ಮುಸ್ಲಿಮರ ದಾಳಿಗಳು ದಕ್ಷಿಣ ಭಾರತಕ್ಕೂ ವ್ಯಾಪಿಸಿದ್ದವು. ಆಗ ಪೂಜಾಸ್ಥಾನಗಳ ನಾಶ, ಪರಂಪರಾಗತ ಧಾರ್ಮಿಕ ಮೌಲ್ಯಗಳಿಗೆ ಆಘಾತವುಂಟಾಗಿ ಅಭದ್ರತೆಯಿಂದ ಅರಾಜಕ ಸ್ಥಿತಿ ಉಂಟಾಗಿದ್ದಿತು. ಮುಸ್ಲಿಮರ ಆಕ್ರಮಣದಿಂದಾಗಿ ತಮಿಳುನಾಡಿನಲ್ಲಂತೂ ಇಂತಹ ಸ್ಥಿತಿ ಹೆಚ್ಚು ಭೀಕರವಾಗಿಯೇ ಇತ್ತು. ಅನೇಕ ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳು ನಿಂತುಹೋದವು. ಆ ಬಗೆಗಿನ ವಿವರಗಳನ್ನು ಪ್ರತ್ಯಕ್ಷದರ್ಶಿ ಮುರಿಶ್ ದೇಶದ ಪ್ರವಾಸಿ ಇಬ್ನಬಬೂತಾನ ಬರಹಗಳು[೧] ನೀಡುವ ವಿವರಗಳನ್ನೇ ಶಾಸನಗಳು ದೃಢೀಕರಿಸುತ್ತವೆ. ಅಂತಹ ಸಂದರ್ಭದಲ್ಲಿ, ವಿಜಯನಗರ ಸಾಮ್ರಾಜ್ಯ ಉದಯಿಸಿ, ಇಡೀ ದಕ್ಷಿಣ ಭಾರತವನ್ನು ಏಕಛತ್ರದಡಿಗೆ ತಂದು ಪರಂಪರಾಗತ ಧರ್ಮ, ಜೀವನ ವಿಧಾನವನ್ನು ರಕ್ಷಿಸಿ, ಅವುಗಳ ಪ್ರಗತಿಗೆ ತನ್ನದೇ ಆದ ಅಮೂಲ್ಯ ಕೊಡುಗೆಯನ್ನು ನೀಡಿತು.

ವೀರಬುಕ್ಕರಾಯನ ಕುಮಾರ, ವೀರಕಂಪಣನ ಮಧುರಾ ವಿಜಯದಿಂದ ಪ್ರಾರಂಭವಾಗುವ ತಮಿಳುನಾಡಿನ ದೇವಾಲಯಗಳ ಜೀರ್ಣೋದ್ಧಾರ, ಪೂಜಾಕೈಂಕರ್ಯಗಳ ಪುನರುದ್ಧಾರ ಈ ಕಾರ್ಯಗಳು ಮುಂದೆ ದೇವರಾಯ, ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಕಾಲದವರೆಗೂ ಅಡೆತಡೆಯಿಲ್ಲದೆ ಮುಂದುವರೆದಿರುವುದು ಕಂಡುಬರುತ್ತದೆ.

ದೇವಾಲಯಗಳ ಜೀರ್ಣೋದ್ಧಾರ ಮತ್ತು ವಿಸ್ತರಣೆಗಳಿಗೆ ಸಂಬಂಧಿಸಿದಂತೆ ಮಂಟಪ, ಚಿತ್ರಮಂಟಪ, ಪ್ರಾಕಾರ(ಗೋಡೆಗಳ) ರಚನೆ, ಮೆಟ್ಟಿಲುಗಳ ನಿರ್ಮಾಣ, ಧ್ವಜಸ್ತಂಭ, ಗರುಡಸ್ತಂಭಗಳ ಸ್ಥಾಪನೆಗಳಲ್ಲದೆ, ಅನೇಕ ದೇವಾಲಯಗಳ ರಾಜಗೋಪುರಗಳೂ ನಿರ್ಮಾಣಗೊಂಡವು.

ಕ್ರಿಸ್ತಶಕ ೧೩೭೦ರಲ್ಲಿ ವೀರಕಂಪಣ್ಣ ಒಡೆಯನ ಮಹಾಪ್ರಧಾನ ಸೋವಪ್ಪದಂಣಾಯಕನು ಹೊಸೂರಿನ ತೇರುಪೇಟೆಯಲ್ಲಿ ಮಂಟಪವನ್ನು[೨] ಕಟ್ಟಿಸಿರುತ್ತಾನೆ. ಪುಲಿವಾಯ್ ಎಂಬ ಸ್ಥಳದಲ್ಲಿ ಮುನೀಶ್ವರ ದೇವಾಲಯದ ಶಾಸನವೊಂದು ಮಹಾಪ್ರಧಾನ ಮಂಚಪದಣ್ಣಾಯಕ ಒಡೆಯರ ಮಕ್ಕಳಾದ ಸಂಗಯ ಮತ್ತು ತಾಯಪ್ಪ ಎಂಬುವರು ಮಹಾಮುನೀಶ್ವರ ದೇವರಿಗೆ ಮಂಟಪವೊಂದನ್ನು[೩] ಪುನರ್ ನಿರ್ಮಾಣ ಮಾಡಿರುವ ವಿವರವನ್ನು ನೀಡುತ್ತದೆ. ಕಂಚಿಯ ಏಕಾಂಬರೇಶ್ವರ ದೇವಾಲಯದ ಸಾವಿರ ಕಂಬದ ಮಂಟಪದ ಹತ್ತಿರವಿರುವ ಶಾಸನವು ವಿಜಯನಗರದರಸು ವಿಜಯರಾಯ ಮಹಾರಾಯನದಾಗಿದ್ದು, ತಾಂಡವದೇವ ಮತ್ತು ತ್ರಯಂಬಕೇಶ್ವರ ದೇವಾಲಯಗಳ ಮುಂದೆ ಹದಿನಾರು ಕಂಬಗಳ ಚಿತ್ರಮಂಟಪವನ್ನು[೪] ಕಟ್ಟಿಸಿದ ವಿವರವಿದ್ದು, ಅದು ರಾಜನ ಮಗಳಾದ ತ್ರಯಂಬಕದೇವಿಯ ಸೇವೆಯೆಂದು ತಿಳಿಸುತ್ತದೆ. ಜಿಂಜಿ ತಾಲೂಕಿನ ಮೇಲ್‌ಶೇಯ್ಯೂರ್ ಸ್ಥಳದ ವೀರಭದ್ರೇಶ್ವರ ದೇವಾಲಯದ ಮಂಟಪದ[೫] ಪೀಠದಲ್ಲಿರುವ ಶಾಸನವು ಶಕ ೧೩೪೨ರ ವಿಕೃತಿ ಸಂವತ್ಸರದಲ್ಲಿ (ಕ್ರಿ.ಶ. ೧೪೨೦) ಅದನ್ನು ಅಣ್ಣಮರಸನೆಂಬುವನು ಕಟ್ಟಿಸಿದನೆಂದು ತಿಳಿಸುತ್ತದೆ.

---

೧. ಡಿ.ಎನ್.ಶಾನಭಾಗ, ಗಂಗಾದೇವಿಯ ಮಧುರವಿಜಯ ಧಾರವಾಡ, ೧೯೮೪ ಪು.೫೪.
೨. *ARIE*, 1970-71, B 496, B 494
೩. ಅದೇ. 1923, C 160
೪. ಅದೇ. 1939-40, B 348
೫. *SII*, Vol.XVII, No. 242

ಕ್ರಿ.ಶ. ೧೫೭೨ರ ಸುಮಾರಿನಲ್ಲಿ ತಿರುವಣ್ಣಾಮಲೆ ಅರುಣಾಚಲೇಶ್ವರ ದೇವಾಲಯದ ಪೂರ್ವ ಗೋಪುರವನ್ನು[೬] 'ತಿಮ್ಮಭೂಪನ ಕುಟುಂಬ ಚೆನ್ನಚ್ಚವ್ವೆ' ಎಂಬುವರು ಕಟ್ಟಿಸಿಳುತ್ತಾರೆ. ಚಿಕ್ಕ ಕಂಚಿಯ ವರದರಾಜದೇವರಿಗೆ ಕೃಷ್ಣದೇವರಾಯ ಮಹಾರಾಯರು, ತಮ್ಮ ತಂದೆ ನರಸಣ್ಣನಾಯಕ ಒಡೆಯರಿಗೆ ತಾಯಿ ನಾಗಲಾದೇವಿ ಅಮ್ಮನವರಿಗೂ ಧರ್ಮವಾಗಿ ಪುಣ್ಯಕೋಟಿಯ ವಿಮಾನದ[೭] ಲೋವೆ(ವೇದಿ)ಯಿಂದ ಮೇಲೆ ಕಳಸ ಪರಿಯಂತರ ಅಪರಂಜಿ ಚಿನ್ನದಲ್ಲಿ ಹೊದಿಕೆಯನ್ನು ಹಾಕಿಸಿದ ವಿವರ ಕ್ರಿ.ಶ. ೧೫೧೪ರ ಶಾಸನದಲ್ಲಿ ಬಂದಿದೆ.

ತಿರುಕೋಯಲೂರು ತಾಲೂಕಿನ ಕಾನ್ದಲ್ವಾಡಿ ಸ್ಥಳದ ಆಂಜನೇಯ ದೇವಾಲಯದಲ್ಲಿರುವ ಶಾಸನವು ಚೆಂಡಿಕೆಯ ನರಸಯ್ಯನ ಪೌತ್ರ ಕೇಶವಣ್ಣನು ಕಾಂದಲವಾಡಿಯ ಲಕ್ಷ್ಮೀನಾರಾಯಣ ದೇವರಿಗೆ ಗರುಡಗಂಬವನ್ನು[೮] ಮಾಡಿಸಿದ ವಿವರ ನೀಡುತ್ತದೆ. ಅದೇ ಶಾಸನದಲ್ಲಿ ನಾರಾಯಣಪುರದಲ್ಲಿನ ದೇವಾಲಯವನ್ನು ಕಳಸಯ್ಯ ತಿಮ್ಮಪ್ಪನ ಮಗ ಇರಿಯಪ್ಪಯ್ಯ ಮಾಡಿಸಿದನೆಂದು ಉಲ್ಲೇಖಿಸುತ್ತದೆ. ದಣ್ಣಾಯಕನಕೋಟೆಯ ವೀರಭದ್ರೇಶ್ವರ ದೇವಾಲಯದ ಧ್ವಜಸ್ತಂಭದ ಮೇಲಿನ ಶಾಸನವು ಆ ದೀಪದ ವೃಷಭಸ್ತಂಭವನ್ನು[೯] ಶಕ ೧೬೬೯ (ಕ್ರಿ.ಶ. ೧೭೪೭)ರಲ್ಲಿ ಸ್ಥಾಪಿಸಿದ ಬಗ್ಗೆ ತಿಳಿಸುತ್ತದೆ. ಡೆಂಕಣಿಕೋಟೆ ತಾಲೂಕು ಚಿಕ್ಕಮದಗೊಂಡಹಳ್ಳಿ ಬಸವಣ್ಣನ ದೇವಾಲಯದ ಮುಂದಿರುವ ಕಂಬವನ್ನು[೧೦] ಶ್ರೀಗಿರಿಸೆಟ್ಟಿಯ ಮಗ ಚಿಕ್ಕಣ್ಣಸೆಟ್ಟಿ ಸ್ಥಾಪಿಸಿದನೆಂದು ಅಲ್ಲಿನ ಶಾಸನದಿಂದ ತಿಳಿಯುತ್ತದೆ. ಕ್ರಿ.ಶ. ಸು.೧೭ನೇ ಶತಮಾನಕ್ಕೆ ಸೇರಿದ ಶಾಸನವೊಂದು ಅವಿನಾಶಿ ದೇವಾಲಯದ ಮುಂದಿನ ದೀಪಮಾಲೆ ಮಂಟಪದ ಮೇಲಿದ್ದು, ಆ ಮಂಟಪವು ಆದಿಯಣ್ಣ ಎಂಬುವನ ಧರ್ಮವೆಂದು ದಾಖಲಿಸುತ್ತದೆ.

ಹೊಸೂರು ಬೆಟ್ಟದ ದೇವಾಲಯದ ಪ್ರಾಕಾರವನ್ನು[೧೧] ಕೋಟಿನಾಯಕನ ಮಗನಾದ ಮುದಿಯ ಎಂಬುವನು ಮಾಡಿಸಿದನೆಂಬ ವಿವರ ಕ್ರಿ.ಶ. ೧೬ನೇ ಶತಮಾನದ ಶಾಸನದಿಂದ ಗೊತ್ತಾಗುತ್ತದೆ.

ವಿಟುಪುರಂ ಜಿಲ್ಲೆಯ ದಿಂಡಿವನಂ ತಾಲೂಕಿನ ಪೆರುಮುಕ್ಕಲ್ ಸ್ಥಳದ ಶಾಸನವು ಪಡೈವೀಡಿನ ಚಿಕ್ಕಕೋನಿನಾಯಕನ ಮಗ ಲಿಂಗಪ್ಪ ಎಂಬುವನು ಅಲ್ಲಿನ ಬೆಟ್ಟಕ್ಕೆ ಮೆಟ್ಟಿಲುಗಳನ್ನು[೧೨] ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.

ಕೊಯಮುತ್ತೂರು ಜಿಲ್ಲೆಯ ಅವಿನಾಶಿ ಸ್ಥಳದ ಅವಿನಾಶೀಶ್ವರ ದೇವಾಲಯದ ಮಾಣಿಕ್ಕವಾಚಕರ ಬಿಂಬದ ಪೀಠದಲ್ಲಿರುವ[೧೩] ಶಾಸನ ಕನ್ನಡ ಭಾಷೆ ಮತ್ತು ನಾಗರೀ ಲಿಪಿಯಲ್ಲಿದ್ದು

---

೬. *ARIE*, 1928-29, B 424
೭. *SII*, Vol.IX, No.499
೮. *ARIE*, 1936-37, B 272
೯. ಅದೇ, 1906 / 446 & *TLIMP*, 264
೧೦. ಅದೇ, 1971-72, B 191
೧೧. ಅದೇ, 1969-70, B 264
೧೨. *TLIMP*, 419-38 / 1905
೧೩. *ARIE*, 1963-64, B 202

ಅವಿನಾಶಿದೇವರ್, ಗೋದಾವರಿದೇವಿ, ಶ್ರೀಭುವನೇಶ್ವರಿದೇವಿ, ನವರತ್ನಮಂಟಪ ಇತ್ಯಾದಿಗಳನ್ನು ಉಲ್ಲೇಖಿಸುತ್ತದೆಯಾದರೂ ವಿವರ ಅಸ್ಪಷ್ಟ. ತಿರುವಳ್ಳೂರ್ ಜಿಲ್ಲೆಯ ಪೊನ್ನೇರಿ ತಾಲೂಕು ತಿರುಪ್ಪಾಲೈವನಂನ ತಿರುಪಾಲೇಶ್ವರ ದೇವಾಲಯದ ಲೋಹದ ನಟರಾಜನ ಬಿಂಬದ ಪೀಠದ ಮೇಲಿರುವ ಶಾಸನವು ಉದಯಗಿರಿಯ ಪ್ರಧಾನಿ ತಿಮ್ಮಣ್ಣನ ಮಗ ಅವಸರಂ ಬ್ರಹ್ಮನಾಯಕನೆಂಬುವನು ಆ ನಟರಾಜನ ಪೀಠವನ್ನು[೧೪] ಮಾಡಿಸಿಕೊಟ್ಟಂತೆ ತಿಳಿಸುತ್ತದೆ. ಆ ಶಾಸನದ ಕಾಲ ಕ್ರಿ.ಶ. ೧೪೪೦.

ಹೊಸೂರಿನ ತೇರುಪೇಟೆಯಲ್ಲಿನ ತೇರಿನ ಹಿಂದಿನ ಮರದ ತೊಲೆಯ ಮೇಲಿರುವ[೧೫] 'ರಥ' ಎಂಬ ಬರಹವು ಕ್ರಿ.ಶ. ೧೫-೧೬ನೇ ಶತಮಾನದ ಲಿಪಿಯಲ್ಲಿದೆ. ಅದೇ ಸ್ಥಳದಲ್ಲಿರುವ ಇನ್ನೊಂದು ತೇರಿನ ಮುಂದಿನ ತೊಲೆಯ ಮೇಲಿನ ಶಾಸನವು[೧೬] ಕ್ರಿ.ಶ.೧ ೮೪೫ಕ್ಕೆ ಸೇರಿದ್ದು, 'ಹೊಸರಥ' ಎಂಬ ಬರಹವಿದೆ.

ಕಾಂಚೀಪುರಂ ಜಿಲ್ಲೆಯ ಚೆಯ್ಯೂರ್ ತಾಲೂಕಿನ ತಿರುವತ್ತಿಯೂರಿನ ವೇದಪುರೀಶ್ವರ ದೇವಾಲಯದ ನಟರಾಜನ ಮಂಟಪದಲ್ಲಿರುವ ಶಾಸನವು ವಿಜಯನಗರದ ಅರಸು ಸಾಳ್ವನರಸಿಂಹನದಾಗಿದೆ. ಕ್ರಿ.ಶ.ಸು. ೧೫೦೦ರಲ್ಲಿ ಆ ಗ್ರಾಮ ಮತ್ತು ದೇವಾಲಯದ ಭೂಮಿಗಳು ಪ್ರವಾಹದಿಂದ ನಾಶವಾದಾಗ, ರಾಜನು ೧೫೦ ಹೊನ್ನನ್ನು ನೀಡಿ ಭೂಮಿಗಳ ಒಡ್ಡನ್ನು ಸರಿಪಡಿಸಲು ಮತ್ತು ದೇವಾಲಯದ ಜೀರ್ಣೋದ್ಧಾರ[೧೭] ಹಾಗೂ ಉತ್ಸವಗಳ ಆಚರಣೆಗೆ ಆದೇಶ ನೀಡಿರುವುದು ಕಂಡುಬರುತ್ತದೆ. ಮಾದಿರಾಜ ಚೆನ್ನಯ್ಯ ಮತ್ತು ಚೊಕ್ಕನಾಯನಾರ್ ಎಂಬ ಅಧಿಕಾರಿಗಳ ಪ್ರಸ್ತಾಪವು ಈ ಶಾಸನದಲ್ಲಿ ಬಂದಿದೆ.

ಕ್ರಿ.ಶ. ೧೫೩೪ರ ಅಚ್ಯುತರಾಯನ ಶಾಸನ ಶ್ರೀರಂಗಂನಲ್ಲಿದ್ದು, ಸಜ್ಜಾಗೃಹದ ಬಾಗಿಲವಾಡಕ್ಕೆ ಚಿನ್ನದ ಬಣ್ಣವನ್ನು ಹಾಕಿಸಿದ ತಾಮ್ರದ ಹೊದಿಕೆಯನ್ನು[೧೮] ಜೋಡಿಸಿರುವ ವಿವರವನ್ನು ನೀಡುತ್ತದೆ. ಇಂತಹ ಎಷ್ಟೋ ವಿವರಗಳು ತಮಿಳುನಾಡಿನಲ್ಲಿರುವ ಕನ್ನಡ ಶಾಸನಗಳಲ್ಲಿ ಕಂಡುಬರುವುದು ಗಮನ ಸೆಳೆಯುತ್ತದೆ.

ದೇವಾಲಯಗಳಲ್ಲಿ ನಡೆಯುವ ಹಬ್ಬ, ಜಾತ್ರೆ, ಉತ್ಸವಗಳಾದ 'ತಿರುನಾಳು ಅವಸರ', ತಿರುವಳೆಯಾಟಂ', ಏಕಾಂತ ಅವಸರ, ವಸಂತ ತಿರುನಾಳು, ಧ್ವಜಾರೋಹಣ, ಪಲ್ಲಕ್ಕಿ ಉತ್ಸವ, ರಥೋತ್ಸವದ ತಿರುನಾಳುಗಳ ಸಂದರ್ಭಗಳಲ್ಲಿ ನಡೆಯಿಸುವ ಅಂಗರಂಗ ವೈಭೋಗ, ಅಮೃತಪಡಿ ಇತ್ಯಾದಿಗಳಿಗೆ ಸಂಬಂಧಿಸಿದ; ದೇವರ ನೈವೇದ್ಯ ಪ್ರಸಾದಾದಿಗಳಾದ 'ಅಪ್ಪ', 'ಅತಿರಸ', ತಿರುವತ್ತಿಸಾಮ, ಮೇಲೋಗರ, ದಧ್ಯೋದನ (ದಧ್ಯನ್ನ) ಮುಂತಾದವುಗಳನ್ನು ತಯಾರಿಸಲು ಬೇಕಾದ ಪದಾರ್ಥಗಳ ಪಟ್ಟಿ ಗಮನ ಸೆಳೆಯುತ್ತದೆ. ತುಪ್ಪ, ಸಕ್ಕರೆ, ಬಾಳೆಹಣ್ಣು, ತೆಂಗಿನಕಾಯಿ, ಎಲೆ, ಗಂಧ, ಹಾಲು

---

೧೪. *ARIE*, 1963-6, B 202
೧೫. ಅದೇ, 1970-71, B 496, B 495
೧೬. ಅದೇ, 1970-71, B 497
೧೭. *ARIE*, 1939-40, B 127
೧೮. *SII*, Vol. XXIV, No.417

ಮುಂತಾದವು ಏಕಾಂತ ಅವಸರದ ನೈವೇದ್ಯ ತಯಾರಿಸಲು ಅವಶ್ಯಕವಾದ ಪದಾರ್ಥಗಳಾಗಿವೆ. ದಧ್ಯೋದನ ತಯಾರಿಸಲು ರಾಜಾನ್ನದಕ್ಕಿ, ಮೊಸರು, ಶುಂಠಿ, ಅರಿಶಿನ, ಏಲಕ್ಕಿ, ಸಾಸುವೆ ಮುಂತಾದವುಗಳು ಬೇಕಾಗುತ್ತಿದ್ದವು. ತಿರುವತ್ತಿಸಾಮ ತಯಾರಿಸಲು ಅಕ್ಕಿ, ತುಪ್ಪ, ಸಕ್ಕರೆ, ಬಾಳೆಹಣ್ಣು, ತೆಂಗಿನಕಾಯಿಗಳು ಬೇಕಾಗುತ್ತಿದ್ದವು. ಇಂತಹ ಎಷ್ಟೋ ವಿವರಗಳು ತಮಿಳುನಾಡಿನ ದೇವಾಲಯಗಳಲ್ಲಿನ ಕನ್ನಡ ಶಾಸನಗಳಲ್ಲಿ[೧೯] ಉಲ್ಲೇಖವಾಗಿವೆ.

ನಂದಾದೀವಿಗೆ, ದೇವರಪೂಜೆಗಾಗಿ ತೋಟ, ಚಿನ್ನದ ಹರಿವಾಣ, ಬಟ್ಟಲುಗಳು ಮುಂತಾದವುಗಳನ್ನು ವಿಜಯನಗರದ ಅರಸರು ಮತ್ತು ಅಧಿಕಾರಿ ವರ್ಗದವರು ವಿಪುಲವಾಗಿ ದಾನ ಕೊಟ್ಟಿರುತ್ತಾರೆ. 'ರಥೋತ್ಸವ ಸೇವೆ'ಗೆ, ಪಂಜಿಗೆ ಎಣ್ಣೆ, ಉತ್ಸವಕ್ಕೆ ಆನೆ, ಆ ಸಂದರ್ಭದಲ್ಲಿ ಭಾಗವಹಿಸಲು ರಾಹುತರು, ವಾದ್ಯದವರು, ಬೋಯರು, ಊಳಿದಗವರು, ಕೂಟದವರು ಮುಂತಾದವರ ಪ್ರಸ್ತಾಪ ಹಲವು ಶಾಸನಗಳಲ್ಲಿ[೨೦] ಕಂಡುಬರುತ್ತದೆ.


ಸಾಮಾನ್ಯವಾಗಿ ದೇವದಾನಕ್ಕೆ ಸಂಬಂಧಿಸಿದ ಕರ್ನಾಟಕದ ಶಾಸನಗಳಲ್ಲಿ ಅಂಗರಂಗ ವೈಭೋಗ, ನೈವೇದ್ಯ, ನಂದಾದೀವಿಗೆ, ಅಮೃತಪಡಿ, ತಪೋಧನರ ಆಹಾರ ದಾನ ಇತ್ಯಾದಿಗಳಿಗೆ ದತ್ತಿ ಬಿಟ್ಟಿರುವುದು ಕಂಡುಬರುತ್ತದೆ. ಆದರೆ ದಾನದ ವಿನಿಯೋಗದ ಬಗ್ಗೆ ಸ್ಪಷ್ಟ ನಿರ್ದೇಶನಗಳಿರುವುದಿಲ್ಲ. ಅದು ಪಾರಂಪರಿಕವಾಗಿ ನಡೆದುಕೊಂಡು ಬಂದ ರೀತಿಯಲ್ಲೇ ಮುಂದುವರೆದು, ಅದರಲ್ಲೇನೂ ಅರೆಕೊರೆಗಳುಂಟಾಗಲಾರವು ಎಂಬ ದೃಢನಂಬಿಕೆ ದಾನಿಗಳಲ್ಲಿ ಎದ್ದು ಕಂಡರೆ, ತಮಿಳುನಾಡಿನ ಇಂತಹ ದೇವದಾನಕ್ಕೆ ಸಂಬಂಧಿಸಿದ ಶಾಸನಗಳು ದಾನ ವಿನಿಯೋಗದ ಬಗ್ಗೆ ಕಟ್ಟುನಿಟ್ಟಾದ ನಿರ್ದೇಶನಗಳನ್ನು ನೀಡುವುದರ ಮೂಲಕ, ದೇವಾಲಯದ ಸ್ಥಾನಿಕರು ಮತ್ತು ಊಳಿಗದವರು; ನೀಡಿರುವ ದತ್ತಿಗಳನ್ನು ಎಲ್ಲಿ ದುರುಪಯೋಗಪಡಿಸಿಕೊಳ್ಳುವರೊ ಎಂಬ ಸಂದೇಹವನ್ನು ವ್ಯಕ್ತಪಡಿಸಿರುವಂತೆ ಭಾಸವಾಗುತ್ತದೆ. ಆದರೆ ಈ ವಿವರಗಳು ಸಮಕಾಲೀನ ಪೂಜಾಪದ್ಧತಿ, ಆರ್ಥಿಕಸ್ಥಿತಿ ಇತ್ಯಾದಿ ಎಷ್ಟೋ ಮೌಲಿಕವಾದ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಆದ್ದರಿಂದ ತಮಿಳುನಾಡಿನ ಇಂತಹ ದೇವದಾನ ಉಲ್ಲೇಖಗಳೂ ನಿರ್ವಿವಾದವಾಗಿ ಹೆಚ್ಚು ಸಾಂಸ್ಕೃತಿಕ ಮಹತ್ವವುಳ್ಳವಾಗಿವೆ.

* * *

---

೧೯. ಅದೇ, Vol. IX, Nos. 547, 437 ಮುಂತಾದವು; *ARIE*, 1938-39, B 38; 1949-50, B 326; 1914 / 8

೨೦. *SII*, Vol. XXIV, No.330, 417, 562, 644, XXIV, No.330 ಮುಂತಾದವು *ARIE*, 1938-39, B 23, B 106



ಧರ್ಮಪುರಿಯ ಮಹೇಂದ್ರವರ್ಮನ ಶಾಸನ

೨.೧ ಕೃಷಿ, ನೀರಾವರಿ

'ಜೀವಂಗಳಿಗೆಲ್ಲಾ ಉದಕವೇ ಪ್ರಾಣ' ಎಂಬ ಮಾತು ಶಾಸನವೊಂದರಲ್ಲಿ[೧] ಬಂದಿದೆ. ಕೃಷಿ ಪ್ರಧಾನವಾದ ದೇಶ ನಮ್ಮದು. ನೀರಾವರಿಯ ಅನುಕೂಲವಿಲ್ಲದ ಬಯಲು ಪ್ರದೇಶದಲ್ಲಿ ಮಳೆಯ ಆಶ್ರಯದಲ್ಲಿಯೇ ಬೆಳೆಗಳನ್ನು ಬೆಳೆಯಬೇಕಾಗುತ್ತದೆ. ಇಂತಹ ಭೂಮಿಯನ್ನು ಶಾಸನಗಳು ದೇವಮಾತೃಕೆಗಳೆಂದು ಕರೆದಿವೆ. ಮಾನವ ತನ್ನ ನಾಗರಿಕತೆಯ ಹಂತಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ಹಾಗೂ ಅಂತರ್‌ಜಲವನ್ನು ಮೇಲೆತ್ತಿ ನೀರಾವರಿ ಸೌಲಭ್ಯವೇರ್ಪಡಿಸಿಕೊಳ್ಳಲು ಮಾಡಿಕೊಂಡ ಪ್ರಯತ್ನದ ಫಲಗಳೇ ಕೆರೆ, ಅಣೆಕಟ್ಟು, ಕುಂಟೆ ಮುಂತಾದವುಗಳಾಗಿವೆ. ಈ ದಿಸೆಯಲ್ಲಿ ಕೆರೆ, ಅಣೆಕಟ್ಟು, ಕುಂಟೆ ಮುಂತಾದವುಗಳ ರಚನೆ ನಿರ್ವಹಣೆಗೆ ಸಂಬಂಧಿಸಿದ ಹಲವು ವಿಷಯಗಳನ್ನು ಶಾಸನಗಳನ್ನು ಪ್ರತಿಬಿಂಬಿಸುತ್ತವೆ.

ಕ್ರಿ.ಶ. ೯ನೇ ಶತಮಾನದ ಹೊಸೂರಿನ ಶಾಸನದಲ್ಲಿ ಪೊಲೆತಮ್ಮನೆಂಬುವನಿಂದ ಕೆರೆಯೊಂದಕ್ಕೆ 'ಬಿತ್ತುವಾಟ' ಎಂಬ ದತ್ತಿಯನ್ನು[೨] ಬಿಟ್ಟಿರುವ ವಿವರವಿದೆ. ಬಿತ್ತುವಾಟ ಎಂಬುದು ಕೆರೆಗಳ ದುರಸ್ತಿಗಾಗಿ ಬಿಟ್ಟ ದತ್ತಿಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ.

ಧರ್ಮಪುರಿಯಲ್ಲಿರುವ ನೊಳಂಬ ಮಹೇಂದ್ರನ ಶಾಸನ ಕ್ರಿ.ಶ. ೮೭೮ಕ್ಕೆ ಸೇರಿದ್ದು ಕೆರೆಯೊಂದನ್ನು[೩] ಕಟ್ಟಿಸಿರುವ ವಿವರ ಬಂದಿದೆ. ಚೋಳರ ಮೊದಲ ರಾಜೇಂದ್ರನ ೧೪ನೇ ಆಡಳಿತ ವರ್ಷದ ಹೊಸೂರು ಶಾಸನವು ಸಾಲೆವೂರಿಗೆ ಸೇರಿದ ವ್ಯಕ್ತಿಯೊಬ್ಬನ ಹೆಂಡತಿ ಕೆರೆಯೊಂದನ್ನು[೪] ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ವಿಜಯಗರದ ಹರಿಹರನ ಕಾಲಕ್ಕೆ ಸೇರಿದ ೧೫ನೇ ಶತಮಾನದ ಶಾಸನವೊಂದು ಹೊಸೂರು ತಾಲೂಕು ಕೂಸ್ತನಹಳ್ಳಿಯಲ್ಲಿದ್ದು ಚೋಡಜೀಯನ ಮಗ ಚೆಂಬಿಜೀಯನೆಂಬ ಚೆಂಬಿನಾಯಕ, ಸಾಕಿಜೀಯನ ಮಗ ಮಾರಪ್ಪ ಹಾಗೂ ಸಣಿಜೀಯನ ಮಗ ವೀರಪ್ಪ ಎಂಬುವರು ಹೊಸದಾಗಿ ಕೆರೆಯೊಂದನ್ನು[೫] ಕಟ್ಟಿಸಿದ ವಿವರ ನೀಡುತ್ತದೆ. ಈ ಶಾಸನದ ವೀರಪ್ಪ ತನ್ನ ದೈನಂದಿನ ಆಹಾರ ಭಿಕ್ಷೆ ಬೇಡುವಾಗ ಹೊಸಕೆರೆಯ ರಚನೆಗಾಗಿ ೩೦೦ ಹೊನ್ನನ್ನು ಸಂಗ್ರಹಿಸಿ, ತನ್ನ ಸ್ವಂತ ಉಳಿತಾಯದ ೨೦೦ ಹೊನ್ನನ್ನು ಸೇರಿಸಿ, ಒಟ್ಟು ಕೊಡುಗೆಯಾಗಿ ೫೦೦ ಹೊನ್ನನ್ನು ದತ್ತಿ ನೀಡಿರುವುದು ವಿಶಿಷ್ಟ ಸಂಗತಿಯಾಗಿದೆ. ಗುಮ್ಮಳಾಪುರದಲ್ಲಿರುವ ದೇವರಾಯನ ಕಾಲದ ಶಾಸನ ಹಲವು ಸೆಟ್ಟಿವರ್ತಕರು ಸೇರಿ ಕೆರೆಕುಂಟೆಯೊಂದನ್ನು[೬] ನಿರ್ಮಾಣ ಮಾಡಿಸಿದ ಬಗ್ಗೆ ತಿಳಿಸುತ್ತದೆ. ಹೊಸೂರು ತಾಲೂಕು ದೊಡ್ಡಬೇಲೂರಿನ ಸ್ಥಳೀಯ ಅಣೆಕಟ್ಟೆ ಮೇಲಿರುವ ಶಾಸನವು

---

೧. ಎ.ಎಂ.ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ, (ಸಂ.) ಶಾಸನ ಸಂಗ್ರಹ, ಬೆಂಗಳೂರು, ೧೯೮೨ (ದ್ವಿ.ಮು.) ಪು. ೯೭

೨. *ARIE*, 1970-71, B 485

೩. *SII*, Vol. VII No.580

೪. *ARIE*, 1969-70, B 270

೫. *ARIE*, 1970-71, B 508

೬. ಅದೇ, 1971-72, B 196

ಮೈಸೂರು ದೊರೆ ಚಿಕ್ಕದೇವರಾಯನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. ೧೬೭೩) ದಳವಾಯಿ ಕುಮಾರರಾಯನು ಆ ಅಣೆಕಟ್ಟನ್ನು[೭] ಕಟ್ಟಿಸಿದನೆಂದು ತಿಳಿಸುತ್ತದೆ. ಅದೇ ಚಿಕ್ಕದೇವರಾಯನ ಕಾಲದಲ್ಲಿ ಕ್ರಿ.ಶ. ೧೬೭೪ರ ತೊರಹಳ್ಳಿ ಶಾಸನವು ತಿರುವಿಚಿಹಳ್ಳಿಯ ಸಮೀಪದಲ್ಲಿ 'ನಂಜರಾಯಸಮುದ್ರ' ಎಂಬ ಅಣೆಕಟ್ಟನ್ನು[೮] ದಳವಾಯಿ ನಂಜರಾಜಯ್ಯನು ತನ್ನ ಗುರು, ಅಣ್ಣ, ತಂದೆ, ತಾಯಿ, ಕಿರಿಯ ಸೋದರ ಹಾಗೂ ತನ್ನ ಸ್ವಂತಮಕ್ಕಳ ಕಲ್ಯಾಣಾರ್ಥವಾಗಿ ಮಾಡಿಸಿರುವುದಾಗಿ ತಿಳಿಸುತ್ತದೆ. ಉಪ್ಪಾರಹಳ್ಳಿಯ ತ್ರುಟಿತ ಶಾಸನವೊಂದರಲ್ಲಿ ಚಾಮರಾಜ ಒಡೆಯ ಮತ್ತು ನರಸಿಂಗರಾಯ ಒಡೆಯರ ಉಲ್ಲೇಖವಿದ್ದು, ಕೆರೆಯೊಂದನ್ನು[೯] ನಿರ್ಮಿಸಿರುವ ಬಗ್ಗೆ ವಿವರವಿದೆ. ಚಿನ್ನಟ್ಟಿಯ ಶಾಸನ ಎರಡು ಕೆರೆಗಳ ನಿರ್ಮಾಣದ ಬಗ್ಗೆ ದಾಖಲಿಸುತ್ತದೆ.

ಹೊಸದಾಗಿ ಕೆರೆಯೊಂದನ್ನು ಕಟ್ಟಿಸುವಷ್ಟೇ ಮುಖ್ಯವಾದುದು ಅದರ ನಿರ್ವಹಣೆ. ಸಾಮಾನ್ಯವಾಗಿ ಕೆರೆಯನ್ನು ಕಟ್ಟಿಸುವಾಗಲೇ ಅದರ ನಿರ್ವಹಣೆಗೂ ದತ್ತಿಗಳನ್ನು ಬಿಟ್ಟಿರುವುದುಂಟು. ಹಾಗೇ ಕಾಲಾಂತರದಲ್ಲಿ ಹಾಳಾದ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಿರುವ ಬಗ್ಗೆಯು ಶಾಸನಗಳು ಬೆಳಕು ಚೆಲ್ಲುತ್ತವೆ.

ವಿಟುಪುರಂ ಜಿಲ್ಲೆಯ ತಿರುಕೊಯ್ಲೂರು ತಾಲೂಕಿನ ತಿರುವೆಣ್ಣೈನಲ್ಲೂರು ಸ್ಥಳದ ಕೃಪಾಪುರೀಶ್ವರ ದೇವಾಲಯದಲ್ಲಿನ ಶಾಸನವು ವಿಜಯನಗರದ ಅರಸು ವಿರೂಪಾಕ್ಷನದಾಗಿದ್ದು, ಆತನ ಮಂತ್ರಿಯಾದ ನಂಜಣ್ಣನ ಅಣ್ಣನಾದ ವಿರುಪಣ್ಣ ಎಂಬುವನು ದೇವಾಲಯದ ದಕ್ಷಿಣಕ್ಕಿರುವ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದನೆಂದು[೧೦] ಉಲ್ಲೇಖಿಸುತ್ತದೆ.

ಹೊಸೂರು ತಾಲೂಕು ಬುಕ್ಕಸಾಗರ ಗ್ರಾಮದ ಶಾಸನ, ಕೆರೆಯಿಂದ ಕಾಲುವೆಯನ್ನು[೧೧] ತೋಡಿಸಿದಂತೆ ಉಲ್ಲೇಖಿಸುತ್ತದೆ. ಹೀಗೆ ಕನ್ನಡ ಅರಸುಮನೆತನಗಳವರು ತಾವು ಆಡಳಿತ ನಡೆಸಿದ ಪ್ರದೇಶಗಳಲ್ಲಿ ಅನೇಕ ಕೆರೆ, ಅಣೆಕಟ್ಟೆಗಳನ್ನು ಕಟ್ಟಿರುವುದಲ್ಲದೆ, ಅವುಗಳ ಜೀರ್ಣೋದ್ಧಾರ ಕಾರ್ಯಗಳಿಗೂ ನೆರವಾಗಿರುವುದು ಕಂಡುಬರುತ್ತದೆ. ಜೊತೆಗೆ ಕೃಷಿಗೆ ಅನುಕೂಲವಾಗುವಂತೆ ಕಾಲುವೆಗಳನ್ನು ಮಾಡಿಸಿ ಕೃತಾರ್ಥರಾಗಿರುತ್ತಾರೆ.

* * *

---

೭. *TLIMP*, - **Antiquities** Vol. I, p.194
೮. *ARIE*, 1971-72, B 207
೯. ಅದೇ, B 209
೧೦. *ARIE*, 1921-22, B 474
೧೧. ಅದೇ, 1970-71 B 482

೮.೦ ವಾಣಿಜ್ಯ

ಜೀವನಾವಶ್ಯಕ ವಸ್ತು ಮತ್ತು ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿದ್ದ ಮಾನವನ ಆರಂಭದ ವೃತ್ತಿಗಳು ಹೆಚ್ಚು ನೈಸರ್ಗಿಕವಾಗಿದ್ದವು. ಕಾಲಕ್ರಮದಲ್ಲಿ ನಿಸರ್ಗ ಜೀವಿಯಾದ ಮಾನವನು ಸಮಾಜ ಜೀವಿಯಾಗಿ ಬೆಳೆದಂತೆ ನೈಸರ್ಗಿಕ ವೃತ್ತಿಗಳೊಂದಿಗೆ ಅನೇಕ ಸಾಮಾಜಿಕ ವೃತ್ತಿಗಳೂ ಹುಟ್ಟಿಕೊಂಡವು. ಇಂತಹ ವೃತ್ತಿಗಳಲ್ಲಿ ಪ್ರಧಾನತಃ ವಿನಿಮಯ ಪ್ರಕ್ರಿಯೆಯನ್ನೊಳಗೊಂಡಿರುವುದು 'ವರ್ತಕ' ವೃತ್ತಿಯಾಗಿದೆ. ಈ ವೃತ್ತಿಯ ಕಾರ್ಯಚಟುವಟಿಕೆಗಳ ಹರವು ಶಾಸನಗಳಿಂದ ತಿಳಿದು ಬರುತ್ತದೆ.

ಕೃಷ್ಣಗಿರಿ ತಾಲೂಕಿನ ತೀರ್ಥಂ ಸ್ಥಳದ ಕ್ರಿ.ಶ. ೧೪೭೨ರ ಶಾಸನ ಅಮರನಾಯಕ ತಿಪ್ಪರಾಜನು ಅಲ್ಲಿ ಸಂತೆ ನಡೆಸುವುದಕ್ಕೆ ವಾರ್ಷಿಕ ಸರ್ವಮಾನ್ಯವನ್ನು ದತ್ತಿ ನೀಡಿರುವ ಉಲ್ಲೇಖವಿದೆ.. ಧರ್ಮಪುರಿ ತಾಲೂಕು ಅಧಮಾನಕೋಟೆಯ ಕ್ರಿ.ಶ. ೧೫೩೦ರ ಅಚ್ಯುತರಾಯನ ಶಾಸನದ 'ಶ್ರೀ ಭೈರವದೇವರ ಸಂನಿಧಿಯ ಸಂತೆ ಖಿಲವಾಗಿರಲಾಗಿ, ಪ್ರತಿಹುಟ್ಟಿಸಿ, ಅಳ್ಳು ಅಡಿಕಾಸು ಸಹ ದ್ರವ್ಯ ಮುಖದಿಂ ಬರುವ ಸಂತೆಯಾದಾಯವನ್ನು[೧] ದೇವರ ದೀಪಾರಾಧನೆಗೆ' ದತ್ತಿಬಿಟ್ಟಿರುವ ಉಲ್ಲೇಖದಿಂದ ಖಿಲವಾದ ಸಂತೆಗಳನ್ನು ಮತ್ತೆ ಜೀರ್ಣೋದ್ಧಾರ ಮಾಡಿಸುತ್ತಿದ್ದ ವಿಷಯ ಸ್ಪಷ್ಟವಾಗುತ್ತದೆ. ಇಂತಹ ಸಂತೆಗಳು ಸೇರಬೇಕಾದರೆ ಸೆಟ್ಟಿವರ್ತಕರ ಸಹಕಾರ ತೀರಾ ಅಗತ್ಯ. ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಸೆಟ್ಟಿವರ್ತಕರ ಹೆಸರುಗಳು ಉಲ್ಲೇಖವಾಗಿದೆ. ಗುಮ್ಮಳಾಪುರದ ಶಾಸನವೊಂದರಲ್ಲಿ[೨] ಹಾಮ್‌ನಿಸೆಟ್ಟಿಯ ಮಗ ಪಟ್ಟಣಸ್ವಾಮಿ ಕರಡಿಸೆಟ್ಟಿಯ ಉಲ್ಲೇಖ ಬಂದಿದೆ. ಕ್ರಿ.ಶ. ೧೫೧೮ರ ಗಂಗನಹಳ್ಳಿ ಶಾಸನವು ನಾಗಮಂಗಲದ ವೀರಭದ್ರದೇವನ ಪ್ರಿಯಪುತ್ರರಾದ ಗುಮ್ಮಳಾಪುರದ ರಾಜಬೆವಹಾರಿಗಳ ಪ್ರಸ್ತಾಪವನ್ನು ಮಾಡುತ್ತದೆ. ಅಕ್ಕಲಚೆನ್ನಿಸೆಟ್ಟಿಯ ಪ್ರಸ್ತಾಪ ಗುಮ್ಮಳಾಪುರ[೩] ಹಾಗೂ ತಳಿಯ ಶಾಸನಗಳಲ್ಲಿ[೪] ಕಂಡು ಬಂದಿದೆ. ಗಿರಿಸೆಟ್ಟಿಯ ಮಗ ಚಿಕ್ಕಣ್ಣಸೆಟ್ಟಿಯ ಉಲ್ಲೇಖ ಚಿಕ್ಕಮದಗೊಂಡಹಳ್ಳಿ ಶಾಸನದಲ್ಲಿದೆ.[೫]

ಧರ್ಮಪುರಿ ನೊಳಂಬರ ಕಾಲದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದ ವಾಣಿಜ್ಯ ಕೇಂದ್ರವಾಗಿದ್ದಿತು. ಅಲ್ಲಿನ ಶಾಸನಗಳಲ್ಲಿ ಅನೇಕ ವರ್ತಕರ ಉಲ್ಲೇಖಗಳು ಕಂಡುಬಂದಿವೆ. ಅಲ್ಲಿನ ಶಾಸನವೊಂದರಲ್ಲಿ[೬] ಮೆಳಸು (ಮೆಣಸು), ಎಲೆ ಮುಂತಾದ ಪದಾರ್ಥಗಳ ಮೇಲಿನ ಸುಂಕವನ್ನು ದೇವದಾನವಾಗಿ ದತ್ತಿ ಬಿಟ್ಟಿರುವ ಉಲ್ಲೇಖಗಳಿಂದಲೂ, ವೀಸ, ಚಮರಿಯಮಳವೆ, ಪೇಜು, ಕಟ್ಟು ಮುಂತಾದ ಅಳತೆಯ ಮಾನಗಳ ಪ್ರಸ್ತಾಪದಿಂದಲೂ ಅಂದಿನ ವಾಣಿಜ್ಯ ಪದಾರ್ಥಗಳು ಮತ್ತು ಅವುಗಳ ವಿನಿಮಯಕ್ಕಾಗಿ ಬಳಸುತ್ತಿದ್ದ ಮಾನಗಳ ಬಗ್ಗೆ ಅರಿವುಂಟಾಗುತ್ತದೆ.

---

೧. *SII*, Vol. IX, No. 532
೨. *ARIE*, 1971-72, B 196
೩. ಅದೇ, B 193
೪. ಅದೇ, 1955-56, B 310
೫. ಅದೇ, 1971-72, B 191
೬. *SII*, Vol.VII, No. 580

ಹೊನ್ನು ವಿಜಯನಗರ ಕಾಲದ ಶಾಸನಗಳಲ್ಲಿ ಕಂಡು ಬರುವ ಒಂದು ಮುಖ್ಯ ನಾಣ್ಯವಾಗಿದೆ. ಕಂಚಿ ಮತ್ತು ಶ್ರೀರಂಗಂ ಸ್ಥಳದ ಶಾಸನಗಳಲ್ಲಿ ಕಳಂಜು, ಗದ್ಯಾಣಗಳು ಪ್ರಸ್ತಾಪಗೊಂಡಿವೆ. ಮೈಸೂರು ಅರಸರ ಶಾಸನಗಳಲ್ಲಿ *ವರಹ, ರಾಜಗೋಪಾಲವರಹ, ರಾಜಗೋಪಾಲ ಚಕ್ರವರಹ* ಎಂಬ ನಾಣ್ಯಗಳು ಉಕ್ತವಾಗಿವೆ. ಚಿನ್ನವನ್ನು ಚಕ್ರತೂಕ ಗದ್ಯಾಣ, ಚಕ್ರಹಾಗ ಎಂಬ ಮಾನಗಳಿಂದ ಗಣಿಸುತ್ತಿದ್ದರು. ಹಲ(ಪಲಂ) ಎಂಬ ತೂಕಕ್ಕೆ ಸಂಬಂಧಿಸಿದ ಮಾನ ಬಳಕೆಯಲ್ಲಿತ್ತು.

ಅಳ್ಳು, ಅಡಿಕಾಸು, ಕಾಣಿಕೆ, ಸುವರ್ಣಾದಾಯ, ಸಮುದಾಯ, ಬಂಡಿವಣ ಮುಂತಾದ ಸುಂಕ / ಕರಗಳು ಶಾಸನೋಕ್ತವಾಗಿವೆ. ಭೂಮಿಯನ್ನು ಖಣ್ಡುಗ ಎಂಬ ಬೀಜವರಿ ಪ್ರಮಾಣದಲ್ಲಿ ಗಣಿಸುತ್ತಿದ್ದರು. ಕಲಂ, ರೇಖೆ, ಕಾಣಿ, ಕುಟಿ ಮುಂತಾದ ಭೂಮಾಪನ ಮಾನಗಳ ಬಳಕೆ ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ.

ತಮಿಳುನಾಡಿನ ಕೆಲವು ಕನ್ನಡ ಶಾಸನಗಳಲ್ಲಿ ಕಂಡು ಬರುವ ಜೋಡಿ, ಸೂಲವರಿ, ಪಟ್ಟಡೈ, ನೂಲಾಯಂ ಮುಂತಾದ ತೆರಿಗೆ ಸುಂಕಗಳು, ನಂಜೆ, ಪುಂಜೆ, ವಾನ್‌ಪಯಿರು, ಪುನ್‌ಪಯಿರು, ಕಾಣಿಯಾಚಿ ಮುಂತಾದ ದತ್ತಿ ಬಿಟ್ಟಿರುವ ಭೂಮಿಯ ವಿವರಗಳು ಹಾಗೂ ದೇವಾಲಯಗಳಲ್ಲಿ ಆಚರಿಸುವ ಆಚರಣೆಗಳ ವಿವರಗಳನ್ನು ಗಮನಿಸಿದರೆ ಸ್ಥಳೀಯ ಭಾಷೆಯ ಪ್ರಭಾವ ಕನ್ನಡ ಶಾಸನಗಳ ಮೇಲೆ ಆಗಿರುವುದನ್ನು ಕಾಣಬಹುದಾಗಿದೆ.



ನಪಿಲ್ಸೈ ಸ್ಥಳ (ಚಿನ್ನಗಾವುಂಡಪಟ್ಟಿ)ದ ವೀರಗಲ್ಲು

೯.೦ ವೀರ ಪರಂಪರೆ

ಕರ್ನಾಟಕ ದೀರ್ಘವಾದ ವೀರಪರಂಪರೆಯ ಇತಿಹಾಸವನ್ನು ಹೊಂದಿದೆ. ಕರ್ನಾಟಕದಲ್ಲಿ ದೊರೆಯುವಷ್ಟು ವೈವಿಧ್ಯಮಯ ವೈಶಿಷ್ಟಪೂರ್ಣ ವೀರಗಲ್ಲುಗಳು ನಮ್ಮ ರಾಷ್ಟ್ರದ ಬೇರೆ ಯಾವ ರಾಜ್ಯದಲ್ಲೂ ದೊರೆತಿಲ್ಲವೆಂಬುದು ತಿಳಿದ ವಿಷಯವೇ ಆಗಿದೆ. ವೀರಮೌಲ್ಯದ ಪ್ರತೀಕವಾದ ಈ ವೀರಗಲ್ಲು ಶಾಸನಗಳು ಕರ್ನಾಟಕ ಸಂಸ್ಕೃತಿಯ ಅವಿಭಾಜ್ಯ ಅಂಶ. ಅಂತೆಯೇ ಇಂದಿನ ತಮಿಳುನಾಡಿನ ಭಾಗವಾಗಿ ಹೋಗಿರುವ ಸಹಜಕನ್ನಡ ಪ್ರದೇಶದಲ್ಲೂ ಅವು ವಿಶೇಷವಾಗಿ ಕಂಡುಬಂದಿದ್ದು, ಯುದ್ಧ, ತುರುಗಾಳೆಗ, ಪೆಣ್ಬುಯಲ್, ಕಳ್ಳರೊಡನೆ ಹೋರಾಟ, ಹುಲಿಬೇಟೆ ಮುಂತಾದ ಪ್ರಕಾರಗಳಿಗೆ ಸೇರಿದವಾಗಿವೆ. ಇಲ್ಲಿನ ವೀರಗಲ್ಲು ಶಾಸನಗಳು ಎಲ್ಲ ರೀತಿಯಲ್ಲೂ ಕರ್ನಾಟಕದ ವೀರಗಲ್ಲುಗಳಂತೆಯೇ ಇರುತ್ತವೆಯಲ್ಲದೆ, ಬಹಳಷ್ಟು ಸಂಖ್ಯೆಯವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿಯೇ ಲಿಖಿತವಾಗಿದ್ದು ಗಮನ ಸೆಳೆಯುತ್ತವೆ. ಗಂಗ, ಬಾಣ, ನೊಳಂಬ ಮತ್ತು ವಿಜಯನಗರ ಅರಸರ ಕಾಲಕ್ಕೆ ಸೇರಿದ ನೂರಾರು ಶಾಸನರಹಿತ ವೀರಗಲ್ಲುಗಳು ಅನೇಕ ಸ್ಥಳಗಳಲ್ಲಿ ಕಂಡುಬಂದಿವೆಯಲ್ಲದೆ, ಅಲ್ಲಲ್ಲೆ ವೀರಗಾರರ ಗುಡಿಗಳೂ ಇವೆ.

೯.೧ ಯುದ್ಧ

ನೇರವಾಗಿ ಯುದ್ಧಕ್ಕೆ ಸಂಬಂಧಿಸಿದ ವೀರಗಲ್ಲೊಂದು ರಾಯಕೋಟೆಯಲ್ಲಿದ್ದು[೧], ಮಹಾಬಲಿ ಬಾಣರಸನ ಆಳ್ವಿಕೆಯ ಕಾಲಕ್ಕೆ ಸೇರಿದುದಾಗಿದೆ. ಕಂಚಿಯ ಮೇಲೆ ನಡೆದ ಯುದ್ಧವೊಂದರಲ್ಲಿ ತೇಕಲ್ನಾಡೆಳ್ಪತ್ತನ್ನು ಆಳುತ್ತಿದ್ದ ಕೀರ್ತಿಲಮ್ಮರಸನ ಮಗ ಎರೆಗಂಗನೆಂಬ ವೀರನು ವೀರಮರಣವನ್ನಪ್ಪುತ್ತಾನೆ. ಆಗ ಬಾಣರಸನು ಎರೆಗಂಗನ ವಂಶೀಯರಿಗೆ ದತ್ತಿ ಬಿಟ್ಟಿರುತ್ತಾನೆ. ಸಿಂಗೇರಿಪಟ್ಟಿ ಗ್ರಾಮದ ವೇಡಿಯಪ್ಪನ್ ದೇವಾಲಯದಲ್ಲಿರುವ ವೀರಗಲ್ಲು ವೀರನೊಳಂಬನ ಆಳ್ವಿಕೆಯಲ್ಲಿ ಪೆರಸ್ಥಿ ಕುನ್ನಾಯದ ಮೇಲಿನ ಯುದ್ಧವನ್ನು ಪ್ರಸ್ತಾಪಿಸುತ್ತದೆ.

೯.೨ ತುರುಗಾಳೆಗ

ಹೊಸೂರು ತಾಲೂಕು ಮಾಚಿನಾಯಕನಹಳ್ಳಿಯ ಸುಮಾರು ಕ್ರಿ.ಶ. ಒಂಬತ್ತನೆಯ ಶತಮಾನದ ವೀರಗಲ್ಲು,[೨] ಗಂಗ ಶಿವಮಾರನ ಆಳಿಕೆಯನ್ನು ಸೂಚಿಸುತ್ತದೆಯಲ್ಲದೆ ವೈದುಂಬ ವಂಶದ ರಾಮರಾಜರಸನೆಂಬುವನು ಆತನ ಮಾಂಡಲಿಕನಾಗಿದ್ದ ಅಂಶ ತಿಳಿಸುತ್ತದೆ. ರಾಮರಾಜರಸನು ಕೈಗೊಂಡ ತುರುಗಾಳೆಗವೊಂದರಲ್ಲಿ ವೀರನೊಬ್ಬನು ಮಡಿದ ವಿವರ ಬಂದಿದೆ. ಅದೇ ಸ್ಥಳದ ಇನ್ನೊಂದು ವೀರಗಲ್ಲು[೩] ನೊಳಂಬದೊರೆ ಮಹೇಂದ್ರನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಮುಗನಲ್ಲೂರು ಸ್ಥಳದ

---

೧. *SII*, Vol. VII, No. 2

೨. *ARIE*, 1970-71 B 509, ೯–೧೦ನೇ ಶತಮಾನಕ್ಕೆ ಸೇರಿದ ವೀರಗಲ್ಲೊಂದು ಧರ್ಮಪುರಿ ಜಿಲ್ಲೆಯ ಪಾಲವಾಡಿಯಲ್ಲಿದ್ದು ವಿವರಗಳು ಅಸ್ಪಷ್ಟ – ಅದೇ, 1977-78, B 243

೩. ಅದೇ, B 150

ಸಮೀಪದಲ್ಲಿ ನಡೆದ ತುರುಗಾಳೆಗದಲ್ಲಿ ವೆಂತುರಗಾಮಣ್ಣನು ಮಡಿದ ವಿಷಯ ಹಾಗೂ ಆತನ ಮಗ ದುರುಗ ಎಂಬುವನು ವೀರಗಲ್ಲನ್ನು ನಿಲ್ಲಿಸಿದ ಬಗ್ಗೆ ತಿಳಿಸುತ್ತದೆ. ಉತ್ತಂಗೆರೆ ತಾಲೂಕಿನ ಕುಂದಪಲ್ಲಿಯ ವೀರಗಲ್ಲು ಇದೇ ಅರಸನದಾಗಿದ್ದು, ತುರುಗಾಳೆಗದಲ್ಲಿ ವೀರನೊಬ್ಬ ಮಡಿದ ವಿವರವಿದೆ. ಪಾಲವಾಡಿ, ವೇಲನ್‌ಪಟ್ಟಿ, ಪೊಮ್ಮುಡಿ ಮುಂತಾದ ಸ್ಥಳಗಳಲ್ಲಿ ತುರುಗಾಳೆಗಕ್ಕೆ ಸಂಬಂಧಿಸಿದ ಅನೇಕ ವೀರಗಲ್ಲುಗಳಿವೆ. ಮುತ್ತನೂರು ವೇಡಿಯಪ್ಪನ್ ದೇವಾಲಯದಲ್ಲಿರುವ ಬಾಣರಸರ ಕಾಲದ ಕನ್ನಡ ವೀರಗಲ್ಲು ತುರುಗಾಳೆಗಕ್ಕೆ ಸಂಬಂಧಿಸಿದುದಾಗಿದೆ. ಕೃಷ್ಣಗಿರಿ ತಾಲೂಕಿನ ಗಂಗಾವರಂ, ಚೆನ್ನಸಂದ್ರ, ಪೆರಿಯಮುಕ್ಕುಲಂ, ವಡಮಂಗಲಂ, ಡೆಂಕಣಿಕೋಟೆ ತಾಲೂಕಿನ ಸೆಟ್ಟಿಹಳ್ಳಿ, ಸಂದನಹಳ್ಳಿ, ಧರ್ಮಪುರಿ ತಾಲೂಕಿನ ಬೆಲರಾಂಪಟ್ಟಿ ಮುಂತಾದೆಡೆಗಳಲ್ಲೂ ತುರುಗಾಳೆಗದ ವೀರಗಲ್ಲುಗಳಿವೆ. ಕೃಷ್ಣಗಿರಿ ತಾಲೂಕು ಕನ್ನಡಹಳ್ಳಿಯಲ್ಲಿ ದೊರೆತ ತುರುಗಾಳಗದ ವೀರಗಲ್ಲಿನಲ್ಲಿ[೪] ಪೊಱೆಯಂಗಾಡು ಎಂಬಲ್ಲಿ, ಸಂಭವಿಸಿದ ತುರುಗಾಳಗದಲ್ಲಿ ಪಲರೊಡೆಯ ಗಂಡನೆಂದು ಖ್ಯಾತನಾಗಿದ್ದ ವೀರನೊಬ್ಬನು ವೀರಮರಣವನ್ನಪ್ಪಿದ ವಿವರ ಬಂದಿದೆ.

೯.೩ ಪೆಣ್ಬುಯಲ್

ಹರೂರು ತಾಲೂಕು ನವಿಲ್ಯೆ ಸ್ಥಳದ ನೊಳಂಬರ ವೀರನೊಳಂಬನ ವೀರಗಲ್ಲೊಂದು[೫] ಪೆಣ್‌ಬುಯಲಿಗೆ ಸಂಬಂಧಿಸಿದ್ದು, 'ಪುಳಿಯಣ್ಣ ನವಿಲೂರನಾಳುತ್ತಿದೆ ಆತನಾ ಮಗ ಪ್ರಿತುವ ಪೆಣ್ಡಿರಾ ಉಡೆಯನುಟ್ಟುವಲ್ಲಿ ಕಾದಿ ಕೊಂದು ಸತ್ತ' ಎಂಬ ವಿವರ ನೀಡುತ್ತದೆ. ಇಲ್ಲಿ ನವಿಲ್ಯೆಯನ್ನು 'ನವಿಲೂರು' ಎಂದು ಕರೆದು ಆ ಸ್ಥಳದ ಪೂರ್ವನಾಮರೂಪ ಬಿಂಬಿತವಾಗಿರುವುದು ಗಮನಾರ್ಹ.

೯.೪ ಕಳ್ಳರೊಡನೆ ಹೋರಾಟ

ನವಿಲ್ಯೆ ಸ್ಥಳಕ್ಕೆ ಸೇರಿದ ಇನ್ನೊಂದು ವೀರಗಲ್ಲಿನಲ್ಲಿ ಪುನ್ನಾಗನೆಂಬುವನು ಕಳ್ಳರೊಡನೆ ಹೋರಾಡುತ್ತ ಮಡಿದಿರುವ ವಿವರ ಬಂದಿದೆ.[೬] ಆತನ ಅಳಿಯ ಕಲ್ಲನ್ನು ನಿಲ್ಲಿಸಿರುತ್ತಾನೆ. ಗೋಪಿಚೆಟ್ಟಿಪಾಳ್ಯ ತಾಲೂಕಿನ ಎರಗನಹಳ್ಳಿಯಲ್ಲಿರುವ ವಿಜಯನಗರ ಅರಸರ ಕಾಲದ ಮೂರು ಹಂತಗಳುಳ್ಳ ವೀರಗಲ್ಲೊಂದು[೭] ಎರಗನಹಳ್ಳಿಯ ಕಲ್ಲಿಗೌಡನ ಮಗ ಚಿಕ್ಕತಮ್ಮನು ಮೂಡಣ ಬೆಟ್ಟದಲಿ ಅಸಹಾಯ ಶೂರನಾಗಿ ಕೊಡಲಿಯಲ್ಲಿ ಕಳ್ಳರ ಹುಯ್ದು ಕೆಡುಹಿ ತಾನೂ ಬಿದ್ದು ಸತ್ತಾಗ ಆತನ ತಮ್ಮ ಕೇತಯ್ಯನು ವೀರಗಲ್ಲು ಹಾಕಿಸಿದ್ದನ್ನು ದಾಖಲಿಸಿದೆ.

೯.೫ ಇತರ ಸ್ಮಾರಕ ಶಾಸನಗಳು

ಹರೂರು ತಾಲೂಕಿನ ಸಲವಲಸ್ಯೆಗ್ರಾಮದ ವೀರಗಲ್ಲು ಊರಳಿವಿಗೆ ಸಂಬಂಧಿಸಿದೆ. ನೊಳಂಬರ ಕಾಲದ ಈ ಸ್ಮಾರಕಶಿಲೆಯು ಪುರಮಾ ಎಂಬ ವೀರನ ಮರಣವನ್ನು ದಾಖಲಿಸಿದೆ. ನಾಮಕ್ಕಲ್ ಸ್ಥಳದ ವೀರಗಲ್ಲಿನ[೮] ಮೇಲೆ ವೀರನೋರ್ವನು ಹುಲಿಯೊಂದಿಗೆ ಹೋರಾಡುತ್ತಿರುವ ಶಿಲ್ಪವಿದ್ದು, ಕುರುಬರ ಕಾಳಪ್ಪನನ್ನು ಉಲ್ಲೇಖಿಸುತ್ತದೆ. ಉತ್ತಂಗೆರೆ ತಾಲೂಕಿನ ಕುಂದಪಲ್ಲಿಯ ವೀರಗಲ್ಲು

---

೪. Madhava N. Katti, *A Kannada Herostone Inscription in Madras*, ***JESI***, Vol. 5 (1978) p.103

೫. *ARIE*, 1968-69 B 175

೬. *ARIE*, 1967-68 B 242

೭. *SII*, Vol. IX No.420

೮. *ARIE*, 1980-81 B 246

ಪಂಡೆಗ ಎಂಬ ವೀರನು ಹುಲಿಯನ್ನು ಕೊಂದು ಸತ್ತದ್ದನ್ನು ದಾಖಲಿಸಿದೆ. ಸೇಲಂನ ಮ್ಯೂಸಿಯಂನಲ್ಲಿರುವ [೯], ಮೂಲತಃ ಸೆಂದಮಂಗಲಂ ಸ್ಥಳಕ್ಕೆ ಸೇರಿದ ಹದಿನಾರನೇ ಶತಮಾನದ ಶಾಸನವೊಂದು ಕಾಳಪ್ಪನ ಮಗ ಮಾಳಪ್ಪನನ್ನು ಪ್ರಸ್ತಾಪಿಸುತ್ತದೆ. ಇದು ಕೂಡ ಒಂದು ವೀರಗಲ್ಲಾಗಿರುವಂತೆ ತೋರುತ್ತದೆ. ಹೊಸೂರು ತಾಲೂಕಿನ ಬುಕ್ಕಸಾಗರದ ಶಾಸನವೊಂದು[೧೦] 'ನೆತ್ತರು ಕೊಡಿಗೆ' ದತ್ತಿಯನ್ನು ತಿಳಿಸುತ್ತದೆ.

ಕಾಂಚೀಪುರಂ ಜಿಲ್ಲೆಯ ಮಧುರಾಂತಕಂ ತಾಲೂಕಿನ ಒರತ್ತಿಸ್ಥಳದ ಕನ್ನಡ ಶಾಸನವು[೧೧] ರಾಷ್ಟ್ರಕೂಟ ಮುಮ್ಮಡಿ ಕನ್ನರದೇವನ (ಕೃಷ್ಣ III) ಆಳ್ವಿಕೆಗೆ ಸೇರಿದ್ದು, ರಾಜನ ಖಜಾನೆಯ ಅಧಿಕಾರಿ ಕಾಂಚಯನೆಂಬುವನ ಸಂಬಂಧಿಯೋರ್ವನು ಒರತ್ತಿಯ ಮಾಚೇಶ್ವರ ದೇವರಿಗೆ ತನ್ನ ತಲೆಯನ್ನು ಅರ್ಪಿಸಿ (ಧಾರ್ಮಿಕ) ಆತ್ಮಬಲಿಯಾಗಿರುವ ವಿಷಯವನ್ನು ತಿಳಿಸುತ್ತದೆ.

ಈ ಇಪ್ಪತ್ತನೆಯ ಶತಮಾನದಲ್ಲೂ ಅಂದರೆ ಕ್ರಿ.ಶ. ೧೯೧೦ರಲ್ಲಿ ಒಬ್ಬ ಕುದುರೆ–ವೀರನ ಜ್ಞಾಪಕಾರ್ಥವಾಗಿ ಹಾಕಿಸಿರುವ ಸ್ಮಾರಕ ಶಿಲೆಯೊಂದು[೧೨] ಗುಮ್ಮಳಾಪುರ ಗ್ರಾಮದಲ್ಲಿದ್ದು ಗಮನ ಸೆಳೆಯುತ್ತದೆ. "ಸನ್ ೧೯೧೦ರ ಜನವರಿ ತಿಂಗಳು ಹೊನ್ನಗಿರಿ ಹನುಮಂತಣನ ಸೊಸೆ ಮಾದಮ್ಮ ಮಗ ಹನುಮಂತ ಕುದುರೆ ಮೇಲಿಂದ ಬಿದ್ದು ಮೃತಪಟ್ಟ ಸ್ಥಳವಿದು" ಎಂಬ ಪಾಠವಿರುವ ಈ ಶಿಲೆಯ ಮೇಲ್ಭಾಗದಲ್ಲಿ ಕುದುರೆ ಮೇಲೆ ಸವಾರಿ ಮಾಡುತ್ತಿರುವ ವೀರನ ಉಬ್ಬು ಶಿಲ್ಪವಿದೆ. ಕುದುರೆಯ ಕೆಳಗೆ ಮನುಷ್ಯ ಸತ್ತು ಬಿದ್ದಿದ್ದು, ಆ ದೇಹದ ಪಕ್ಕದಲ್ಲಿ ಒಬ್ಬ ಸ್ತ್ರೀ ನಿಂತಿರುವಂತೆ ಶಿಲ್ಪವಿದೆ. ಈ ಶತಮಾನದ ಆದಿಭಾಗದಲ್ಲಿ ಗುಮ್ಮಳಾಪುರದ ನೆರೆಹೊರೆಯ ಪ್ರದೇಶದಲ್ಲಿ ಸರದಾರನಂತೆ ಮೆರೆದ ಕುದುರೆಸವಾರಿ, ವ್ಯಭಿಚಾರ ಮತ್ತು ಜೂಜಾಟಗಳಲ್ಲಿ ಕುಪ್ರಸಿದ್ಧನಿದ್ದ ಹನುಮಂತ ಒಮ್ಮೆ ಕುದುರೆಯ ಮೇಲೆ ಬಹಳ ವೇಗವಾಗಿ ಬರುತ್ತಿದ್ದಾಗ ಮಾರಮ್ಮನ ಗುಡಿಯ ಸಮೀಪದ ಸಿಡಿಗಂಭಕ್ಕೆ ಬಡಿದು ಸ್ಥಳದಲ್ಲೆ ಮೃತನಾದನೆಂದು ಸ್ಥಳೀಯರು ಮಾಹಿತಿ ನೀಡುತ್ತಾರೆ.

ಇತರ ಶಾಸನಗಳ ಗುಂಪಿಗೆ ಸೇರಿಸಬಹುದಾದ ಒಂದು ಶಾಸನ[೧೩] ಹೊಸೂರು ತಾಲೂಕು ಮುತ್ತುಗಾನಹಳ್ಳಿ ಗ್ರಾಮದ್ದಾಗಿದೆ. ಆ ಗ್ರಾಮದ ಬಂಡಿಯೊಂದರ ಚಕ್ರದ ಮೇಲಿನದಾಗಿದ್ದಿರಬಹುದಾದ ಶಾಸನ ಕಾಲವನ್ನು ಕ್ರಿಸ್ತಶಕ ಹಾಗೂ ಶಾಲಿವಾಹನ ಶಕೆಯಲ್ಲೂ ನೀಡಿದ್ದು ಯಾರೋ ಒಬ್ಬ ಮುಸಲ್ಮಾನ್ ವ್ಯಕ್ತಿ ಬಂಡಿಗಳನ್ನು ಮಾಡಿದ ಎಂದು ತಿಳಿಸುವುದರೊಂದಿಗೆ ಶಿಲ್ಪಿ ರಾಮಾಚಾರಿ ಎಂಬುವನನ್ನು ಉಲ್ಲೇಖಿಸುತ್ತದೆ. ಶಾಸನ ಸ್ವಲ್ಪಮಟ್ಟಿಗೆ ತ್ರುಟಿತವಿದ್ದು ವಿವರಗಳು ಅಸ್ಪಷ್ಟ. ಶಾಸನದ ಕಾಲ 'ಸನ್ ೧೯೦೩ನೇ ಇಸವಿ ಡಿಸೆಂಬರು ತಾರೀಕು ೪ನೇ ಬೃಗುವಾರ'ವಾಗಿರುತ್ತದೆ. ಈ ಶತಮಾನದ ಆದಿಯಲ್ಲೂ ಗಡಿಪ್ರದೇಶದಲ್ಲಿ ಕನ್ನಡ ಭಾಷೆ ವ್ಯಾಪಕವಾಗಿ ಬಳಕೆಯಾಗುತ್ತಿದ್ದುದರ ಸ್ಪಷ್ಟ ಕುರುಹು ಇದಾಗಿದೆ.

* * *

---

೯. ಅದೇ, 1968-69 B 237


೧೦. ಅದೇ, 1970-71 B 480

೧೧. ಅದೇ, 1970-71 / 211

೧೨. ವೇಮಗಲ್ ಸೋಮಶೇಖರ್, ಸ್ಟಾಂಗ್ ಇಂಡಿಯಾ (ಪಾಕ್ಷಿಕ), ಆಗಸ್ಟ್ ೧೬–೩೧, ೧೯೮೨ (ಈ ಶಾಸನಶಿಲ್ಪದ ಛಾಯಾಚಿತ್ರ ಹಾಗೂ ಮಾಹಿತಿಯನ್ನು ಒದಗಿಸಿದ ಶ್ರೀ ಸೋಮಶೇಖರ್ ಅವರಿಗೆ ಲೇಖಕ ಋಣಿ)

೧೩. ಎಚ್.ಎಸ್. ಗೋಪಾಲರಾವ್, ಧರ್ಮಪುರಿ ಜಿಲ್ಲೆಯ ಮೂರು ಶಾಸನಗಳು, ಇತಿಹಾಸದರ್ಶನ ಸಂ.೧೧, ಬೆಂಗಳೂರು ೧೯೯೬, ಪು.೧೧೨.

5



ಗುಮ್ಮಳಾಪುರದಲ್ಲಿರುವ ೨೦ನೇ ಶತಮಾನದ ಕುದುರೆವೀರನ ಶಾಸನಶಿಲ್ಪ

೧೦.೦ ವ್ಯಕ್ತಿನಾಮಗಳು–ಸ್ಥಳನಾಮಗಳು

ಪ್ರಾಚೀನ ಇತಿಹಾಸವನ್ನು ಅರಿಯಲು ವ್ಯಕ್ತಿನಾಮ ಹಾಗೂ ಸ್ಥಳನಾಮಗಳು ಬಹು ಮುಖ್ಯ ಆಧಾರಗಳೆಂದು ವಿದ್ವಾಂಸರು ಇತ್ತೀಚೆಗೆ ಭಾವಿಸಿದ್ದಾರೆ. ಯಾವುದೇ ಪ್ರಾಂತ್ಯದ ಮೇಲೆ ಅರಸರ ಪ್ರಭುತ್ವ ಆಗಾಗ ಬದಲಾಗಬಹುದು. ಆದರೆ ಸ್ಥಳೀಯರ ಭಾಷೆಯ ಭಾಗವಾಗಿರುವ ವ್ಯಕ್ತಿ–ಗ್ರಾಮಗಳಿಗೆ ಹೆಸರನ್ನಿಡುವ ಪದ್ಧತಿ ತೀವ್ರ ಬದಲಾಗದು. ಜನತೆಯ ಸಂಸ್ಕೃತಿಯ ಘಟಕವಾಗಿರುವ ಈ ಪದ್ಧತಿ ಬಹುಕಾಲ ಗಟ್ಟಿಯಾಗಿ ನಿಲ್ಲುತ್ತದೆ; ಮಾಯವಾಗುವುದಾದರೂ ಆ ಕ್ರಿಯೆ ತೀರ ಮಂದವಾಗಿ ಜರುಗುತ್ತದೆ. ಅಂತೆಯೇ ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ವ್ಯಕ್ತಿ–ಸ್ಥಳನಾಮಗಳ ಒಂದು ಸ್ಥೂಲ ಅವಲೋಕನವನ್ನು ಇಲ್ಲಿ ಮಾಡಬಹುದಾಗಿದೆ.

೧೦.೧ ವ್ಯಕ್ತಿನಾಮ

ವ್ಯಕ್ತಿಯನ್ನು ಸಮೂಹದಿಂದ ಗುರುತಿಸಿಕೊಡುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು, ಪ್ರಮುಖವಾದುದು. ವ್ಯಕ್ತಿನಾಮಗಳೆಲ್ಲ ಅಂಕಿತನಾಮಗಳೇ ಆಗಿರುವುದರಿಂದ, ಅವುಗಳನ್ನು ಅಂಕಿತಗೊಳಿಸಿದವರ ವೈಯಕ್ತಿಕ ಬಯಕೆ ಹಾರೈಕೆಗಳೂ ಅವರ ಕೌಟುಂಬಿಕ ಪರಂಪರೆಗಳೂ ಅವುಗಳ ಒಡಲಲ್ಲಿ ಅಡಗಿರುತ್ತವೆ. ವ್ಯಕ್ತಿನಾಮ ಸಾಮಾನ್ಯವಾಗಿ ಎರಡು ಘಟಕಗಳನ್ನೊಳಗೊಂಡಿರುತ್ತದೆ. ಅವುಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕ ಘಟಕಗಳೆಂದು ಕರೆಯಬಹುದು. ನಿರ್ದಿಷ್ಟ ಘಟಕಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿಯ ಸಾಂಸ್ಕೃತಿಕ ಹಿನ್ನೆಲೆ ಚೆನ್ನಾಗಿ ಬಿಂಬಿತವಾಗಿರುತ್ತದೆ. ವ್ಯಕ್ತಿಯ ನಂಬಿಕೆ, ಆಶಯ, ಆದರ್ಶ ಹಾಗೂ ಪರಂಪರೆಯ ಕುರುಹುಗಳು ಅಲ್ಲಿ ಒಳಗೊಂಡಿರುತ್ತದೆ ಎನ್ನಬಹುದು. ಹೀಗಾಗಿ ಎಲ್ಲಾ ಕಾಲಕ್ಕೂ ವ್ಯಕ್ತಿನಾಮಗಳಲ್ಲಿನ ನಿರ್ದಿಷ್ಟ ಘಟಕ ವೈವಿಧ್ಯಮಯವಾಗಿರುತ್ತದೆಯಲ್ಲದೆ, ಕಾಲದಿಂದ ಕಾಲಕ್ಕೆ ತಮ್ಮ ಮೇಲೆ ಉಂಟಾದ ಸಂಸ್ಕೃತಿಯ ಪ್ರಭಾವಗಳ ಸೂಚಕಗಳು ಆಗಿರುತ್ತವೆಯೆಂದರೂ ತಪ್ಪಾಗಲಾರದು.

ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಕಂಡು ಬರುವ ಬಹಳಷ್ಟು ವ್ಯಕ್ತಿನಾಮಗಳು ಕನ್ನಡ ಮೂಲದವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಪೂರ್ವಘಟ್ಟಗಳ ಪಶ್ಚಿಮ ಭಾಗಗಳೆಲ್ಲವೂ ಪ್ರಾಚೀನ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದವು. ಘಟ್ಟಗಳ ಹೊರಗಿನ ಭಾಗಗಳಲ್ಲಿ ದೊರೆತಿರುವ ಕನ್ನಡ ಶಾಸನಗಳಾದರೂ ಕರ್ನಾಟಕದ ಅರಸರ ಶೌರ್ಯ, ಸಾಹಸ, ಔದಾರ್ಯಗಳ ಪ್ರತೀಕಗಳು ಆಗಿರುವುದು ಸರಿಯಷ್ಟೆ; ಆ ಶಾಸನಗಳಲ್ಲಿ ಪ್ರಸ್ತಾಪಿತವಾಗಿರುವ ದೇವರು, ಸ್ಥಾನಿಕ ಇತ್ಯಾದಿಗಳ ಹೆಸರುಗಳಲ್ಲಿ ಮಾತ್ರ ಸ್ಥಳೀಯ ಭಾಷೆಯ ಪ್ರಭಾವವನ್ನು ಗುರುತಿಸಬಹುದಷ್ಟೆ. ಉದಾಹರಣೆಗೆ: ವರದರಾಜಪೆರುಮಾಳ್, ತಿರುವದಿ ಮುದಲೀಶ್ವರಮೊಡೆಯ ನಾಯನಾರ್, ವೇದಗಿರಿಪೆರುಮಾಳ್, ಚೊಕ್ಕನಾಯನಾರ್, ಕಾಕ್ಕುನಾಯನಾರ್, ಉತ್ತಮನಂಬಿ, ಪೊನ್ನಂಬಳನಾಥ, ವೇಂಗಳಯ್ಯ, ಎತಿರಾಜನ್ ಇತ್ಯಾದಿ.

ಬಹು ಜನಪ್ರಿಯವಾದ ರಾಜರ ಹಾಗೂ ದೇವರುಗಳ ಹೆಸರುಗಳನ್ನು ಹೊರತುಪಡಿಸಿ, ಇಲ್ಲಿನ ಕನ್ನಡ ಶಾಸನಗಳಲ್ಲಿ ಕಂಡುಬರುವ ಕನ್ನಡ ಸಂಬಂಧಿವಾಚಿ ವಾರ್ಗಿಕ ಘಟಕಗಳಾದ ಅಪ್ಪ, ಅಣ್ಣ, ಅಮ್ಮ, ಅಬ್ಬೆಗಳನ್ನೊಳಗೊಂಡ ಮಾರಪ, ರಟ್ಟಪ, ಕಾಳಪ್ಪ, ಗಿರಿಯಪ್ಪ, ಬೊಮ್ಮಯ್ಯಪ್ಪ, ಕಾಮಿಯಪ್ಪ, ಮಾಳಪ್ಪ, ವೀರಪ್ಪ, ಅಚಲಪ್ಪ; ಚಂಡಿಯಣ್ಣ, ನಿಧಿಯಣ್ಣ, ನಾಗಿಯಣ್ಣ, ಕಂಪಣ, ಹನುಮಂತಂಣ, ದುಗ್ಗಣ, ವಿರುಪಣ್ಣ, ಕೇಶವಣ್ಣ; ಮಾರಮ್ಮ, ಜಾಯಬ್ಬೆ ಗಾಮಬ್ಬೆ, ಮಾಂಕಬ್ಬೆ, ಅತ್ತಿಯಬ್ಬೆ, ಪೊಲ್ಲಬ್ಬೆ ಮುಂತಾದವುಗಳನ್ನು ಉದಾಹರಿಸಬಹುದು.

ಕನ್ನಡ ವೃತ್ತಿವಾಚಿ ವಾರ್ಗಿಕ ಘಟಕಗಳಾದ ಗಾವುಂಡ–ಗೌಡ, ಸೆಟ್ಟಿ, ಓಜ–ಆಚಾರಿ, ಇತ್ಯಾದಿಗಳನ್ನು ಒಳಗೊಂಡಿರುವ ವ್ಯಕ್ತಿನಾಮಗಳಿಗೆ ಉದಾಹರಣೆಯಾಗಿ ಕೊಳ್ಳಗಾವುಂಡ, ವಿಕ್ರಮಚೋಳಗಾವುಂಡ, ಹೊನ್ನಣಗಉಡ ಕೆಂಪೇಗೌಡ; ಪೋಚಿಲಸೆಟ್ಟಿ, ಗಿರಿಸೆಟ್ಟಿ, ಚಿಕ್ಕಣ್ಣಸೆಟ್ಟಿ, ಕೊಂಡೋಜ, ನೊಳಂಬಾಚಾರಿ, ಶಿಲ್ಪಿರಾಮಾಚಾರಿ ಎಂಬುವು ಇಲ್ಲಿನ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

ಅಧಿಕಾರ ಸೂಚಕಗಳಾದ ಅರಸ, ಒಡೆಯ, ನಾಯಕ ಎಂಬ ವಾರ್ಗಿಕ ಘಟಕಗಳನ್ನು ಒಳಗೊಂಡ ಕೆಲವು ವ್ಯಕ್ತಿನಾಮಗಳು ಹೀಗಿವೆ: ತಿಪ್ಪರಸ ಒಡೆಯ, ಲಕ್ಷ್ಮೀಕಾಂತರಸ, ನಂಜರಾಜ ಒಡೆಯ, ಬದ್ದೆರಸ, ಪರವತ ಒಡೆಯ, ಕಂಪಣ ಒಡೆಯ, ಬಪ್ಪನಾಯಕ, ಚೆಂಬಿನಾಯಕ, ಚೆಂನಮನಾಯಕ, ರಾಮನಾಯಕ, ವೀರನಾಯಕ ಇತ್ಯಾದಿ.

ಅಯ್ಯ, ಆಚಾರ್ಯ, ಶಾಸ್ತ್ರೀ, ದೀಕ್ಷಿತ, ಭಟ್ಟ, ಭಟಾರ, ಜೀಯರ್ ಇತ್ಯಾದಿ ಗೌರವ ಸೂಚಕ ವಾರ್ಗಿಕಗಳನ್ನು ಒಳಗೊಂಡ ಅನೇಕ ವ್ಯಕ್ತಿನಾಮಗಳೂ ಇವೆ. ಉದಾ: ಅಗರಯ್ಯ, ಮಾರೆಯ, ಚಿಕ್ಕಯ, ಚೆನ್ನಯ್ಯ, ಕಳಸಯ್ಯ, ಗಿರಿಯಪ್ಪಯ್ಯ, ಲೋಕಯ್ಯ, ತಿಪ್ಪರಸಯ್ಯ, ನಂಜನಾಥಯ್ಯ, ಮುದ್ದಯ್ಯ, ಕುಪ್ಪಯ್ಯ, ನಂಜೇದೇವರು ಅಯ್ಯ; ಶ್ರೀನಿವಾಸಾಚಾರ್ಯ, ವೆಂಕಟೇಶಶಾಸ್ತ್ರೀ, ಸುಬ್ಬಾಶಾಸ್ತ್ರೀ, ಶೋಣಾದ್ರಿ ದೀಕ್ಷಿತ, ಅಮ್ಮಣ ಭಟ್ಟ, ವಿನಯಸೇನ ಸಿದ್ಧಾಂತ ಭಟಾರ, ಕನಕಸೇನ ಸಿದ್ಧಾಂತ ಭಟಾರ ರಾಮಾನುಜಜೀಯರ್ ಇತ್ಯಾದಿ.

ಮೊಲೆತಮ್ಮ, ಪುನ್ನಾಗ, ಎರೆಗಂಗ, ಪೆರಮ, ಅಣ್ಣಿಗ, ಮಾಚ ಮುಂತಾದ ಪ್ರಾಚೀನ ಅಚ್ಚಗನ್ನಡದ ವ್ಯಕ್ತಿನಾಮಗಳೂ ಇಲ್ಲಿನ ಶಾಸನಗಳಲ್ಲಿ ಉಕ್ತವಾಗಿವೆ.

೧೦.೨ ಸ್ಥಳನಾಮ

ವ್ಯಕ್ತಿನಾಮಕ್ಕಿಂತ ಸ್ಥಳನಾಮ ತುಂಬ ಹಳೆಯದಾಗಿರುತ್ತದೆ. ಗ್ರಾಮ(ಸ್ಥಳ) ಹುಟ್ಟುವಾಗಲೇ ಅಲ್ಲಿಯ ಜನರು ತಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ಬಿಂಬಿಸುವ ಹೆಸರುಗಳನ್ನು ಅದಕ್ಕೆ ಇಟ್ಟಿರುತ್ತಾರೆ. ಆದುದರಿಂದ ಗ್ರಾಮನಾಮಗಳ ಅಧ್ಯಯನದಿಂದ ಆ ಜನರ ಭಾಷೆ ಯಾವುದು? ಆ ಪ್ರದೇಶದ ಸಂಸ್ಕೃತಿ ಏನು? ಎಂಬುದನ್ನು ಸರಿಯಾಗಿ ತೀರ್ಮಾನಿಸಬಹುದಾಗಿದೆ. ಆದರೆ ಹೀಗೆ ತೀರ್ಮಾನಿಸುವಲ್ಲಿ ಗಮನಿಸಬೇಕಾದುದು ಸ್ಥಳದ ಈಗಿನ ರೂಪವನ್ನಲ್ಲ; ಪ್ರಾಚೀನ ರೂಪವನ್ನು. ಇಂಥ ಪ್ರಾಚೀನ ರೂಪಗಳನ್ನು ಒದಗಿಸುವ ಪ್ರಾಮಾಣಿಕ ಗಣಿಗಳೆಂದರೆ ಶಾಸನಗಳು.

ಗ್ರಾಮನಾಮ ಯಾರೊಬ್ಬರ ವೈಯಕ್ತಿಕ ಆಸ್ತಿಯಲ್ಲದಿರುವುದರಿಂದ ಉಪೇಕ್ಷೆ; ಅನೇಕರ ಬಾಯಿಗೆ ಸಿಗುವಿಕೆಯ ಕಾರಣವಾಗಿ ಅವು ತೀವ್ರ ರೂಪಾಂತರಕ್ಕೆ ಗುರಿಯಾಗುತ್ತವೆ. ಈ ಕ್ರಿಯೆ ಸ್ಥಳನಾಮದ ನಿರ್ದಿಷ್ಟ ಭಾಗವಾದ ಪೂರ್ವಘಟಕದ ಮೇಲೆ ವಿಶೇಷವಾಗಿ ಆಗುವುದುಂಟು.

ಇಂದು ಪ್ರಚಲಿತವಿರುವ ತಮಿಳುನಾಡಿನ ಗಡಿಪ್ರಾಂತ್ಯದ ಅನೇಕ ಸ್ಥಳನಾಮಗಳಲ್ಲಿ ಪೂರ್ವಘಟಕಗಳಿಗಿಂತ ಉತ್ತರಘಟಕಗಳು ಅಂದರೆ ನಿರ್ದಿಷ್ಟಗಳಿಗಿಂತ ವಾರ್ಗಿಕಗಳು ಪರಭಾಷಾ ಆಕ್ರಮಣಕ್ಕೆ ಈಡಾಗಿರುವುದನ್ನು ಕಾಣಬಹುದು. ಅಂತಹ ವಾರ್ಗಿಕಗಳಲ್ಲಿ ಹಳ್ಳಿ>ಪಲ್ಲಿ, ಪಳ್ಳಿ, ಕೋಟೆ>ಕೋಟ್ಟಾ, ಕೋಟ್ಟೈ, ಪಾಳ್ಯ>ಪಾಳಿಯಂ, ಸಮುದ್ರ, ಸಂದ್ರ>ಸಂದಿರಮ್, ಪುರ>ಪುರಮ್, ಮಂಗಲ>ಮಂಗಲಂ, ದುರ್ಗ>ದುರ್ಗಂ, ಕೊಳ>ಕೊಳಮ್ ಎಂದು ರೂಪಾಂತರ ಹೊಂದಿ ಬಳಕೆಯಲ್ಲಿವೆಯೇ ಹೊರತು, ಪೂರ್ವ ಆಕೃತಿಮಾ ಅಂದರೆ ನಿರ್ದಿಷ್ಟದಲ್ಲಿ ಕನ್ನಡ ರೂಪ ಬಹಳಮಟ್ಟಿಗೆ ಹಾಗೇ ಉಳಿದಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಇಲ್ಲಿನ ಶಾಸನೋಕ್ತ ಕನ್ನಡ ಸ್ಥಳನಾಮಗಳನ್ನು ಅವಲೋಕಿಸಬಹುದು.

ಸ್ಥಳನಾಮದ ನಿರ್ದಿಷ್ಟ ಘಟಕಗಳನ್ನು ಸಾಮಾನ್ಯವಾಗಿ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ನಿರ್ಮಾಣವಾಚಿ, ಆದರ್ಶವಾಚಿ ಎಂದು ವಿಂಗಡಿಸಿಕೊಳ್ಳಬಹುದಾಗಿದೆ. ನಿಸರ್ಗವಾಚಿಗೆ ಮಣ್ಣೂರು, ಆನೆಮಲೆ, ಹೊನ್ನಹಳ್ಳಿ, ನವಿಲೂರು, ಮಲ್ಲಿಗೆಕೋಟೆ ಮುಂತಾದವುಗಳನ್ನು ಉದಾಹರಿಸಬಹುದು. ಬೆಸ್ತರಪಾಳ್ಯ, ಪಾಪಾರಪಟ್ಟಿ, ಆಚಾರಹಳ್ಳಿ ಮುಂತಾದವು ಜನಾಂಗ ವಾಚಿಗಳನ್ನೊಳಗೊಂಡ ಸ್ಥಳನಾಮಗಳಾಗಿವೆ. ವ್ಯಕ್ತಿವಾಚಿಗಳಾಗಿ ಎರಗನಹಳ್ಳಿ, ತಿರುಮಲೆಸೆಟ್ಟಿಪಾಳ್ಯ, ವಿರುಪರಾಯಪೇಟೆ, ಗಂಗವರ, ವೀರಭದ್ರದುರ್ಗ ಇತ್ಯಾದಿಗಳು ಶಾಸನೋಕ್ತವಾಗಿವೆ. ಕೆರೆಯೂರು, ಕೊಳತ್ತೂರು ಮುಂತಾದವುಗಳು ನಿರ್ಮಾಣವಾಚಿ ನಿರ್ದಿಷ್ಟ ಘಟಕಗಳನ್ನು ಪಡೆದ ಸ್ಥಳನಾಮಗಳಿಗೆ ಉದಾಹರಣೆಯಾಗಿವೆ. ಆದರ್ಶವಾಚಿ ಸ್ಥಳನಾಮಗಳಿಗೆ ಸತ್ಯಮಂಗಲ, ವೀರಮಂಗಲ ಹಾಗೂ ಅವಿನಾಶಿಗಳನ್ನು ಉದಾಹರಿಸಬಹುದು.

ತಮಿಳುನಾಡಿನ ಕನ್ನಡ ಶಾಸನಗಳಲ್ಲಿ ಉಕ್ತವಾಗಿರುವ ಸ್ಥಳನಾಮಗಳನ್ನು ವಾರ್ಗಿಕ ಘಟಕಗಳ ಹಿನ್ನೆಲೆಯಲ್ಲಿ, ನಿಸರ್ಗವಾಚಿ, ವಸತಿವಾಚಿ ಹಾಗೂ ನಿರ್ಮಾಣವಾಚಿಗಳಾಗಿ ವಿಂಗಡಿಸಿಕೊಳ್ಳಬಹುದು. ಪುರಮಲೆ, ಆನೆಮಲೆ, ಉತ್ತುಕಾಡು, ಪೆರಿಯಂಗಾಡು, ಹೊನ್ನಗಿರಿ, ಶಂಖಗಿರಿ, ಪಾಕಳಂಪಾಕ್ಕಂ, ಮಣಿಪಾಕ, ಕೊಡೆಯಾಳ ಮುಂತಾದವು ನಿಸರ್ಗವಾಚಿ ವಾರ್ಗಿಕಗಳನ್ನೊಳಗೊಂಡ ಸ್ಥಳನಾಮಗಳಾಗಿವೆ. ತಗಡೂರು, ಬೂದುಗೂರು, ಪೊಸೂರು, ಮೂಲಪಳ್ಳಿ, ಹೊನ್ನಹಳ್ಳಿ, ಗುಮ್ಮಳಾಪುರ, ನಾರಾಯಣಪುರ, ಪಾಪಾರಪಟ್ಟಿ, ವೆಳಗೌಡನಪಟ್ಟಿ, ಅಮ್ಮಾಪಾಳ್ಯ, ಬೆಸ್ತರಪಾಳ್ಯ, ಕೂತಪಾಡಿ, ಕಾರಿಮಂಗಲ, ವೀರಮಂಗಲ ಮುಂತಾದುವು ವಸತಿವಾಚಿ ವಾರ್ಗಿಕಗಳನ್ನುಳ್ಳ ಸ್ಥಳನಾಮಗಳಾಗಿವೆ. ನಿರ್ಮಾಣವಾಚಿ ಸ್ಥಳನಾಮಗಳಿಗೆ; ರಾಯದುರ್ಗ, ರಾಯಸಮುದ್ರ, ಗೋಪಾಲಸಮುದ್ರ, ಡೆಂಕಣಿಕೋಟೆ, ಮಲ್ಲಿಗೆಕೋಟೆ, ಉಳಗುಡಿ, ತೇಂಗುಡಿ, ವಿರುಪರಾಯಪೇಟೆ ಮುಂತಾದವನ್ನು ಉದಾಹರಿಸಬಹುದು.

ಇಂದು ಪ್ರಚಲಿತವಾದ ಅನೇಕ ಸ್ಥಳನಾಮಗಳಿಗೆ ಹಿಂದೆ ಅಸ್ತಿತ್ವದಲ್ಲಿದ್ದ ಆ ಸ್ಥಳಗಳ ನಿಜ ಹೆಸರುಗಳ ಬಗ್ಗೆ ಶಾಸನಗಳು ಬೆಳಕು ಚೆಲ್ಲುತ್ತವೆ. ಕೃಷ್ಣಗಿರಿ ತಾಲೂಕಿನ ನವಿಲ್ಯೈ ಗ್ರಾಮದ ಪೂರ್ವನಾಮ 'ನವಿಲೂರು' ಎಂಬುದಾಗಿತ್ತು. ಈರೋಡ್ ಜಿಲ್ಲೆಯ ಬಸ್ತರಪಾಳಿಯಂ ಗ್ರಾಮದ ಶಾಸನೋಕ್ತ ಹಿಂದಿನ ರೂಪ 'ಬೆಸ್ತರಪಾಳ್ಯ'ವಾಗಿದೆ. ಇಂದಿನ ಧರ್ಮಪುರಿಯ ಪೂರ್ವನಾಮ 'ತಗಡೂರು' ಎಂಬುದು ಸರ್ವವಿದಿತ. ಕೊಯಮತ್ತೂರು ಸಮೀಪದ ಅನ್ಸಿಮಲ್ಯೈಯ ಶಾಸನೋಕ್ತ ರೂಪ 'ಆನೆಮಲೆ'. ಧರ್ಮಪುರಿ ಜಿಲ್ಲೆ ಪೆನ್ನಾಗರಂನ ಪೂರ್ವರೂಪ ಪೆಣ್ಣಾಗರ. ಶಾಲ್ಯ ಎಂಬುದು ಸೇಲಂ ಎಂದು, ಡೆಂಕಣಿಕೋಟೆ ಎಂಬು ತೇಂಕಣಿಕೋಟ್ಟೈ ಎಂದು ಈಗ ವ್ಯವಹಾರವಾಗುತ್ತಿರುವುದನ್ನು ಕಾಣಬಹುದಾಗಿದೆ.

* * *



ವಳ್ಳಿಮಲೆಯಲ್ಲಿರುವ ಗಂಗ ರಾಚಮಲ್ಲನ ಕನ್ನಡ ಭಾಷೆ, ಗ್ರಂಥ ಲಿಪಿಯಲ್ಲಿರುವ ಶಾಸನ

ಶಾಸನಪಾಠ

೧ ಸ್ವಸ್ತಿ ಶ್ರೀ ಶಿವಮಾರಾತ್ಮಜವರನಾ ಪ್ರವರ ಶ್ರೀಪುರುಷ ನಾಮ
೨ ನಾತನ ತನಯಂ ಭುವನೀಶಂ ರಣವಿಕ್ರಮನವನ ಮಗನ್ರಾ
೩ ಜಮಲ್ಲನಮಲಿನ ಚರಿತನ್ ಕಣ್ಣು ಗಿರಿವರಮನಾ ಭೂಮ
೪ ಣ್ಡಲಪತಿ ರಾಜಮಲ್ಲನಭಯನುದಾರಂ ಪಣ್ಡಿತ ಜನ
೫ ಪ್ರಿಯಂ ಕೈಯ್ ಕೊಣ್ಡಾನ್ಕೊನ್ಡಂತೆ ವಸತಿಯಮ್ಮಾಡಿ
೬ ಸಿದಾನ್

೧೧.೦ ಸಾಹಿತ್ಯ, ಭಾಷೆ, ಲಿಪಿ

ಕರ್ನಾಟಕದ ಗಡಿ ಜಿಲ್ಲೆಯ ಶಾಸನಗಳಂತೆ, ತಮಿಳುನಾಡಿನ ಕನ್ನಡ ಶಾಸನಗಳು ಕೂಡ ಅಷ್ಟೇನು ಸಾಹಿತ್ಯಿಕ ಮಹತ್ವವುಳ್ಳವಾಗಿಲ್ಲ. ಆದರೆ ಕ್ರಿ.ಶ. ಒಂಬತ್ತು–ಹತ್ತನೆಯ ಶತಮಾನದಷ್ಟು ಹಿಂದಿನ ಕಾಲಕ್ಕೆ ಸೇರಿದ ಧರ್ಮಪುರಿ ಹಾಗೂ ವೆಲ್ಲೂರು ಜಿಲ್ಲೆಯ ವಳ್ಳಿಮಲೆಯ ಶಾಸನಗಳು ಸ್ವಲ್ಪಮಟ್ಟಿಗೆ ಮಹತ್ವವುಳ್ಳವಾಗಿದ್ದು ಗಮನ ಸೆಳೆಯುತ್ತವೆ.

ಸಾಹಿತ್ಯ ಕೃತಿಗಳನ್ನು ಅಳೆಯುವ ಮಾನದಂಡಗಳಿಂದ ಶಾಸನಕಾರರ ರಚನೆಗಳಿಗೆ ಬೆಲೆ ಕಟ್ಟುವುದು ಅಷ್ಟು ಸಮಂಜಸವಾಗಲಾರದು. ಪ್ರಾಯಶಃ ಶಾಸನಗಳ ರಚಕರಿಗೆ, ಸ್ವತಂತ್ರ ಕಾವ್ಯಗಳನ್ನು ರಚಿಸುವ ಅವಕಾಶ ದೊರೆತ್ತಿದ್ದರೆ, ಅವರು ಅಪೂರ್ವ ಕೃತಿಗಳನ್ನು ನೀಡುವ ಪ್ರತಿಭೆಯುಳ್ಳವರಂತು ಆಗಿದ್ದರು. ಆದರೂ, "ಅವರು ಉತ್ತಮ ಕಾವ್ಯಗಳಲ್ಲಿ ಕಂಡುಬರುವ ಶೈಲಿ, ಉಪಮೆ, ಶ್ಲೇಷೆ ಮುಂತಾದ ಅಲಂಕಾರಿಕ ಪರಿಕರಗಳನ್ನು ತಮ್ಮ ಸೀಮಿತ ಅವಕಾಶದಲ್ಲಿ ಸುಂದರವಾದ ಕಲ್ಪನೆಗಳೊಡನೆ ಬೆರಸಿ ಸಾಹಿತ್ಯದ ಮೆರುಗು ನೀಡಿರುವುದು ಗಮನಾರ್ಹ ಸಂಗತಿ" ಎಂಬ ಶಾಸನ ಸಾಹಿತ್ಯದ ಬಗೆಗಿನ ವಿದ್ವಾಂಸರ[೧] ಅಭಿಪ್ರಾಯ ಇಲ್ಲಿನ ಶಾಸನಗಳಿಗೂ ಅನ್ವಯವಾಗುತ್ತದೆಯೆಂದರೆ ತಪ್ಪಾಗಲಾರದು.

ನೊಳಂಬರ ಆಳ್ವಿಕೆಯ ಕಾಲದಲ್ಲಿ ಇಂದಿನ ಧರ್ಮಪುರಿಗೆ 'ತಗಡೂರು' ಎಂಬ ಹೆಸರಿದ್ದಿತು. ಆ ಊರು, ಹಲವು ದೇವಾಲಯಗಳಿಂದ, ಜಲಾಶಯ, ನಂದನವನ ಹಾಗೂ ಪ್ರಾಕಾರಗಳಿಂದ ಕೂಡಿ ಪಡಿಚಂದವಾಗಿದ್ದಿತು. ಲಾಕುಳಾಗಮಿಕರೂ, ಶಿವಜ್ಞಾನ ಕರ್ಮ್ಮನಿರತರೂ ಆದ ವಿದ್ದೆರಾಶಿ ಯತಿವರೇಣ್ಯರಿಂದ ಆ ಸ್ಥಾನವು ಪುನೀತವಾಗಿದ್ದಿತು ಎಂದು ಮುಂತಾಗಿ ವರ್ಣಿಸುವ ಶಾಸನ ಪದ್ಯಗಳು ಮತ್ತೇಭವಿಕ್ರೀಡಿತ, ಉತ್ಪಲಮಾಲಾ ಹಾಗೂ ಕಂದಪದ್ಯಗಳಿಂದ ಕೂಡಿ ಹೃದಯಂಗಮವಾಗಿವೆ. 'ದಿವಾಕರ'ನೆಂಬ ಶಾಸನ ಕವಿ ಇದರ ಕರ್ತೃವಾಗಿದ್ದಾನೆ.

ಕಲಿಚೋರೇಶ್ವರ ಪಲ್ಲವೇಶ್ವರ ಮಹಾ ಭೋಗೇಶ್ವರೋತ್ತುಂಗ ನಿ
ರ್ಮ್ಮಲ ನನ್ನೇಶ್ವರ ಕೀರ್ತ್ತಿ ಶಾಸನಲಸಕ್ಕಾಇಷ್ಟೇ ಭುಜಂಗೇಶ್ವರಾ ।
ವಲಿಕನ್ನೇರವ ಕೂಪ ನನ್ದನವನ ಪ್ರಾಕಾರ ಸಂಸ್ಥಾನದಿ
ನ್ನೆಲಕೆಲ್ಲಂ ಪಡೆಚನ್ದಮಾಯ್ತು ತಗಡೂರೀ ವಿದ್ದೆರಾಶೀನ್ದ್ರರಿಂ ॥

ಅಕ್ಕರಿಗಂಗೆ ಬೇಡಿದ ನರಂಗೆ ತಪಸ್ವಿಗೆ ದೇಸಿಗಂಗೆ ಕ
ಟ್ಟಿಕ್ಕಲಿಗಂಗೆ ದೀನ ನಟ ಪಾಠಕ ವನ್ದಿ ಜನಕ್ಕೆ ರಾಗದಿ ।
ನ್ನ ಕ್ಕೊಡೆನಿನ್ದು ನೋಡಿದೊಡೆ ಮೆಚ್ಚಿದೊಡೋ ತೊ
ಡೆ ಕೂರ್ತ್ತೊಡೀಗಳುಮ್ಮಿಕ್ಕಡರ್ವೀವೆನಂಬುದಿದು ವೀವ ಗುಣಂ ಸಲೆ ವಿದ್ದೆರಾಶಿಯ ॥

---

೧. ಡಾ। ಆರ್. ಶೇಷಶಾಸ್ತ್ರಿ, 'ಆ ಕಾಲದ ಶಾಸನ ಸಾಹಿತ್ಯ', 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ', ಸಂಪುಟ. ೩. ಪು.೬೪೧.

ಗುರುಗಳುದ್ರೆಬೊಜಂಗರಾ ಗುರು ಗೃಹನ್ತುಂಬೇಶ್ವರನ್ತದ್ಘುಜಂ (?)
ಗರ ಶಿಷ್ಯರ್ವ್ವರ ಲಾಕುಳಾಗಮಿಕ ವಿದ್ಯಾರಾಶಿಗಳ್ಯಾಸನಂ ।
ಬರದೋಂ ಸನ್ದ ದಿವಾಕರನ್ನೆಗಟ್ಟುದೀ ಭೋಗೇಶ್ವರಸ್ಥಾನಮು
ರ್ವ್ವರೆಗಿನ್ತೊನ್ದಜಿನೊನ್ದು ಪೂಜೆಮಿದನಿನ್ನೇವಣ್ಣಿಪೋಂ ಬಣ್ಣಿಪೋಂ ॥

ಶ್ರೀ ಶಿವಪೂಜೆಯೊಳೊಂದು ಸ
ದಾ ಶಿವಯೋಗದೊಳದೊಂದು ರೂಪಮಲ್ತಿರೆನಾ ।
ರಾಶಿವ್ರತಧರೆಗೆ ವಿದ್ಯಾ
ರಾಶಿ ಶಿವಜ್ಞಾನ ಕರ್ಮ್ಮನಿರ್ಮ್ಮಿತರಾದರ್ ॥

ವಳ್ಳಿಮಲೆಯಲ್ಲಿ ಜೈನ ಗುಹಾಬಸದಿಯನ್ನು ಮಾಡಿಸಿದ ವಿವರವನ್ನು ನೀಡುವ ಗಂಗ ರಾಚಮಲ್ಲನ ಶಾಸನವು, ಅಜ್ಞಾತ ಕವಿಯೋರ್ವನಿಂಧ ರಚಿತವಾದ ಎರಡು ಕಂದ ಪದ್ಯಗಳಿಂದ ಕೂಡಿದೆ. ರಾಚಮಲ್ಲನ ಪ್ರಶಸ್ತಿ ಹಾಗೂ ವಂಶವೃಕ್ಷವನ್ನು ನೀಡುವ ಆ ಪದ್ಯಗಳು ಇಂತಿವೆ :

ಶಿವಮಾರಾತ್ಮಜವರನಾ
ಪ್ರವರ ಶ್ರೀಪುರುಷ ನಾಮನಾತನ ತನಯಂ ।
ಭುವನೀಶಂ ರಣವಿಕ್ರಮ
ನವನ ಮಗನ್ರಾಜಮಲ್ಲನಮಲಿನ ಚರಿತನ್ ॥

ಕಣ್ಡು ಗಿರಿವರಮನಾ ಭೂ
ಮಣ್ಡಲಪತಿ ರಾಜಮಲ್ಲನಭಯನುದಾರಂ ।
ಪಣ್ಡಿತ ಜನ ಪ್ರಿಯಂ ಕೈಯ್
ಕೊಣ್ಡಾನ್ಕೊಣ್ಡಂತೆ ವಸತಿಯಮ್ಮಾಡಿಸಿದಾನ್ ॥

ಉದಾರ ಸ್ವಭಾವದವನೂ, ಪಂಡಿತಜನ ಪ್ರಿಯನೂ ಆದ ಭೂಮಂಡಲಪತಿ ರಾಚಮಲ್ಲನು ಶ್ರೇಷ್ಠವಾದ ಗಿರಿಯನ್ನು ವೀಕ್ಷಿಸಿ ಅಲ್ಲೊಂದು ಬಸದಿಯನ್ನು ಮಾಡಿಸಿದಂತೆ ವರ್ಣಿಸುವ ಈ ಕಂದ ಪದ್ಯ ರಾಚಮಲ್ಲನ ಗುಣ, ಔದಾರ್ಯಗಳನ್ನು ಸಶಕ್ತವಾಗಿಯೇ ನಿರೂಪಿಸಿದೆ.

ಭಾಷಾ ದೃಷ್ಟಿಯಿಂದ ತಮಿಳುನಾಡಿನ ಕನ್ನಡ ಶಾಸನಗಳು ಸಮಕಾಲೀನ ಕರ್ನಾಟಕದ ಗಡಿ ಪ್ರಾಂತ್ಯದ ಶಾಸನಗಳಲ್ಲಿನ ಭಾಷೆಯನ್ನು ಬಹುಮಟ್ಟಿಗೆ ಹೋಲುತ್ತದೆ. ವಿಶೇಷವಾಗಿ ಪೂರ್ವಘಟ್ಟಗಳ ಪೂರ್ವಕ್ಕಿರುವ ಶಾಸನಗಳಲ್ಲಿ ಮಾತ್ರ ತಮಿಳು ಭಾಷೆಯ ಪ್ರಭಾವ ಕಂಡುಬಂದಿದೆ. ಭೂಮಿಯ ವಿಧ, ಭೂ ಅಳತೆ, ತೂಕ, ನಾಣ್ಯ, ಪೂಜಾ ಕೈಂಕರ್ಯಗಳ ವಿವರಗಳನ್ನು ನೀಡುವಾಗ ಉಲ್ಲೇಖವಾಗಿರುವ ನಂಜೆ, ಪುಂಜೆ, ವಾನ್‌ಪಯಿರು, ಪುನ್‌ಪಯರು, ಕುಳಿ, ನಾಳಿ, ಕಾಸು, ತಿರುನಂದಾವೆಳಕು, ತಿರುವತ್ತಿಸಾಮು, ಅಮುದುಪಡಿ, ಸಾತ್ತುಪಡಿ ಇತ್ಯಾದಿ ಪ್ರಯೋಗಗಳು ಗಮನಾರ್ಹ. ಹಾಗೆ ಜೋಡಿ, ಸೂಲವರಿ, ಪಟ್ಟಡೈ, ನೂಲಾಯಂ ಮಂತಾದ ತೆರಿಗೆ ಸುಂಕಗಳು, ಕಾಣಿಯಾಚೆ ಎಂಬ ಭೂದಾನ ಪ್ರಕಾರ ಇತ್ಯಾದಿ ಗಮನಾರ್ಹವಾಗಿವೆ.

ಲಿಪಿ ದೃಷ್ಟಿಯಿಂದ ಹೇಳುವುದಾದರೆ, ಸಮಕಾಲೀನ ಕರ್ನಾಟಕ ಅರಸುಮನೆತನದವರು ಬಳಸುತ್ತಿದ್ದ' ರೀತಿ ಮತ್ತು ವಿನ್ಯಾಸಗಳಲ್ಲೆ ಇಲ್ಲಿನ ಕನ್ನಡ ಶಾಸನ ಲಿಪಿಗಳು ಲಿಖಿತವಾಗಿವೆ. ಕನ್ನಡ ಭಾಷೆಗೆ ಗ್ರಂಥ ಲಿಪಿಯನ್ನು ಕೆಲವು ಪ್ರಾಚೀನ ಕನ್ನಡ ಶಾಸನಗಳಿಗೆ ಬಳಸಿದ್ದಾರೆ. ವಿಜಯನಗರ ಕಾಲದ ಹಲವು ಕನ್ನಡ ಶಾಸನಗಳನ್ನು ಕನ್ನಡ ಲಿಪಿಯ ಜೊತೆಗೆ ಗ್ರಂಥ ಮತ್ತು ನಾಗರೀ ಲಿಪಿಯಲ್ಲೂ ಲಿಪ್ಯಂತರಿಸಿರುವುದು ಕಂಡು ಬರುತ್ತದೆ. ಈ ತೆರನಾದ ಶಾಸನಗಳೆಲ್ಲವೂ ಪೂರ್ವಘಟ್ಟಗಳ ಪೂರ್ವಕ್ಕಿರುವ ಪ್ರದೇಶಗಳಲ್ಲಿ ಲಭ್ಯವಾದವು ಎಂಬುದು ಗಮನಾರ್ಹ. ಘಟ್ಟಗಳ ಪಶ್ಚಿಮ ಭಾಗವು ಭೌಗೋಳಿಕವಾಗಿ ಕರ್ನಾಟಕಕ್ಕೆ ಹೊಂದಿಕೊಂಡಂತಿದ್ದು ಈ ಶಾಸನಗಳಲ್ಲಿ ಇಂತಹ ಯಾವುದೇ ವೈಪರಿತ್ಯಗಳು ಕಂಡುಬಂದಿಲ್ಲ.

* * *



ಮೊದಕೇರಿ ಶಾಸನ

ಶಾಸನಪಾಠ

ಮೊದಲ ಭಾಗ	ಎರಡನೆ ಭಾಗ	ಮೂರನೇ ಭಾಗ
೧ [ರಾಜ]	೮	೧೫ . . . ಇಮ್ಮಣ್ಣಂ ಪ
೨ ಕ್ಯ ಕೊಂಗುಣಿವರ್ಮ್ಮ ಧ[ರ್ಮ್ಮ]	೯ ಹಾದೇವಿಯರ್ಗ್ಗೆ ಪುಟ್ಟಿದ	೧೬ ಡೆದು ಕೊಟ್ಟರು ನಾಲ್ಕು ಕ
೩ ಮಹಾರಾಜಾಧಿರಾಜ ನ	೧೦ ಸಮಧಿಗತ ಪಞ್ಚಮ	೧೭ ಲ್ಲನ್ನಿಜೆಸ ಇದಕೆ
೪ ನ್ದಿಗಿರಿನಾಥ ಕೊವಳಾಲ	೧೧ ಹಾಶಬ್ದಪಲ್ಲವಾನ್ವಯ	೧೮ ಸಾಕ್ಷಿ ನಾಲ್ಕು ಸಮಯಿ
೫ ಪುರವರೇಶ್ವರ ಶ್ರೀ ರಾಚಮ	೧೨ ಶ್ರೀಪೃಥುವಿಬಲ್ಲಭ	೧೯ ಗಳು ನಕರ ಮುನ್ನಾಡು ॥
೬ ಲ್ಲ ಪೆಮ್ಮಾಡಿಗಳ್ಗಂ ಮಹಾದೇ	೧೩ ಪಲ್ಲವ ಕುಲತಿಲಕ ನ	೨೦ ವಸುಭಿರ್ವ್ವಸುಧಾಭು[ಕ್ತಾ]
೭ . . . [ಪದಿದ]ಳಖಿಳ	೧೪ ನ್ನಿಗಾಶ್ರಯ ಶ್ರೀಮದಯ್ಯ	೨೧ ರಾಜ[ಭಿ] . . . . . .

ನಾಲ್ಕನೇ ಭಾಗ

೨೨ [ಈ] ಅಕ್ಷರಮ ನೊಟಿ

೨೩ ಮ್ಮಾಚಾರಿ ಬರೆದಂ

೧೨.೦ ಉಪಸಂಹಾರ

ಈ ಬರಹದ ಆರಂಭದಲ್ಲೆ ಸೂಚಿಸಿರುವಂತೆ ಈವರೆಗೂ ತಮಿಳುನಾಡಿನಲ್ಲಿ ಪತ್ತೆಯಾಗಿರುವ ಕನ್ನಡ ಶಾಸನಗಳ ಒಂದು ಸ್ಥೂಲ ಚಿತ್ರವನ್ನು ಮಾತ್ರ ಇಲ್ಲಿ ಕೊಡಲೆತ್ನಿಸಿದೆ. ಇಲ್ಲಿ ಬಳಸಿಕೊಂಡಿರುವ ಅನೇಕ ಶಾಸನಗಳ ಮೂಲಪಾಠಗಳು ಇನ್ನೂ ಪ್ರಕಟವಾಗಿಲ್ಲ. ಜೊತೆಗೆ ಕನ್ನಡ ಶಾಸನಗಳು ದೊರೆಯಬಹುದಾದ ಪ್ರದೇಶಗಳಲ್ಲಿ ಶಾಸನ ಪರಿವೀಕ್ಷಣಾಕಾರ್ಯ ಸಮಗ್ರವಾಗಿ ನಡೆದಿಲ್ಲ. ಸುಮಾರು ೧೫೦ ಶಾಸನಗಳ ಪೂರ್ಣಪಾಠಗಳು ಮಾತ್ರ ಈವರೆಗೂ ಪ್ರಕಟವಾಗಿವೆ. ಉಳಿದ ಶಾಸನಗಳ ಪಾಠಗಳು, ಹಾಗೂ ಇನ್ನೂ ಶೋಧವಾಗದೆಯಿರುವ ಶಾಸನಗಳ ಅನ್ವೇಷಣಾಕಾರ್ಯ ತ್ವರಿತವಾಗಿ ಆಗಬೇಕಾದ ಕೆಲಸವಾಗಿದೆ. ಹೀಗಾದಲ್ಲಿ ಮಾತ್ರ ತಮಿಳುನಾಡಿನ ಗಡಿಪ್ರದೇಶದ ನೈಜವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಇನ್ನೂ ಹೆಚ್ಚು ನಿಖರವಾಗಿ ತಿಳಿಯಲು ಸಾಧ್ಯವಾಗುತ್ತದೆ. ಕರ್ನಾಟಕದ ಪ್ರಮುಖ ರಾಜಮನೆತನಗಳಾದ ಗಂಗ, ಬಾಣ, ನೊಳಂಬ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಶಾಸನಗಳೇ ಪ್ರಧಾನವಾಗಿರುವ ಗಡಿನಾಡಿನಲ್ಲಿ ರಾಜಕೀಯ, ಸಾಂಸ್ಕೃತಿಕ ಅಂಶಗಳನ್ನು ಕುರಿತು ಇಲ್ಲಿನ ಅವಲೋಕನವು ಈ ಪ್ರದೇಶವು ಹಿಂದೊಮ್ಮೆ ಕರ್ನಾಟಕದ ಅವಿಭಾಜ್ಯ ಅಂಗವೇ ಆಗಿದ್ದಿತೆಂಬ ಅಂಶವನ್ನು ದೃಢಪಡಿಸುತ್ತದೆ.

ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಚೋಳರ ಆಕ್ರಮಣ ನಡೆದು ಸುಮಾರು ಒಂದು ನೂರು ವರ್ಷಗಳಿಗೂ ಹೆಚ್ಚುಕಾಲ ಪರಾಧೀನವಾಗಿದ್ದ ಗಡಿಪ್ರದೇಶಗಳನ್ನು, ದಕ್ಷಿಣ ಮಧ್ಯಕರ್ನಾಟಕದಲ್ಲಿ ತಲೆಯೆತ್ತಿದ ಹೊಯ್ಸಳರು ಚೋಳರನ್ನು ಓಡಿಸುವುದರ ಮೂಲಕ ಮುಕ್ತಗೊಳಿಸಿದರು. ಮುಂದೆ ಕರ್ನಾಟಕಧೀಶರೆನಿಸಿದ ವಿಜಯನಗರ ಸಾಮ್ರಾಟರ ಮತ್ತು ಮೈಸೂರು ಒಡೆಯರ, ಹೈದರ್, ಟಿಪ್ಪುರವರ ಆಳ್ವಿಕೆ ಅವಿರತವಾಗಿ ಗಡಿ ಪ್ರದೇಶದಲ್ಲಿ ನಡೆದಿರುವುದನ್ನು ಶಾಸನಗಳು ದೃಢಪಡಿಸಿವೆ. ಮೈಸೂರಿನ ಹುಲಿಯೆನಿಸಿದ್ದ ಟಿಪ್ಪು ಬ್ರಿಟಿಷರೊಡನೆ ನಡೆಸಿದ ಹೋರಾಟದಲ್ಲಿ ಮಡಿದಾಗ, ಬ್ರಿಟಿಷರು ಮತ್ತು ಮೈಸೂರು ಅರಸುಮನೆತನದವರ ಮಧ್ಯೆ ಏರ್ಪಟ್ಟ ಒಪ್ಪಂದದಿಂದಾಗಿ ಶತಶತಮಾನಗಳ ಕಾಲದಿಂದಲೂ ಅಚ್ಚಗನ್ನಡ ಪ್ರದೇಶವಾಗಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದ ಸಹಜ ಕನ್ನಡ ಪ್ರದೇಶ ರಾಜಕೀಯವಾಗಿ ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಪ್ರದೇಶ ಮುಂದೆ ಭಾರತಕ್ಕೆ ಸ್ವಾತಂತ್ರ್ಯ ಬಂದು ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗಲೂ, ಕರ್ನಾಟಕದ ಹೊರಗೇ ಉಳಿದದ್ದು ಒಂದು ವಿಪರ್ಯಾಸ.

ಗಡಿ ಪ್ರದೇಶದ ಸ್ಥಳನಾಮಗಳು, ವ್ಯಕ್ತಿನಾಮಗಳು ಮತ್ತು ಪ್ರಚಲಿತವಿರುವ ಜಾನಪದ ಆಚರಣೆಗಳು ಇಂದಿಗೂ ಬಹಳಷ್ಟು ಮಟ್ಟಿಗೆ ಕನ್ನಡ ಮೂಲದವವಾಗಿದ್ದು ಅವುಗಳ ಪ್ರತ್ಯೇಕ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

ರಾಜಕೀಯ ಒತ್ತಡದ ಹಿನ್ನೆಲೆಯಲ್ಲಿ ಕ್ರಿ.ಶ. ೧೧ ರಿಂದ ೧೪ನೇ ಶತಮಾನದ ಅವಧಿಯಲ್ಲಿ ಕರ್ನಾಟಕದ ಮೈಸೂರು, ಬೆಂಗಳೂರು, ಮಂಡ್ಯ ಮತ್ತು ಕೋಲಾರ ಜಿಲ್ಲಾ ಪ್ರದೇಶಗಳಲ್ಲಿ ಸುಮಾರು ಒಂದು ಸಾವಿರದಷ್ಟು ತಮಿಳು ಶಾಸನಗಳು ಹುಟ್ಟಿಕೊಂಡವು, ಆದರೆ ತಮಿಳುನಾಡಿನ ಸಹಜ ಕನ್ನಡ ಪ್ರದೇಶದಲ್ಲಿ ಕ್ರಿ.ಶ. ೭ನೇ ಶತಮಾನದಿಂದ ೨೦ನೇ ಶತಮಾನದವರೆಗೂ ಸಂಖ್ಯಾದೃಷ್ಟಿಯಿಂದ ಕಡಿಮೆಯಾದರೂ ಅವ್ಯಾಹತವಾಗಿ ಕನ್ನಡ ಶಾಸನಗಳು ಮೂಡಿಬಂದು ತನ್ನ ನೈಜತೆಯನ್ನು ದೃಢಪಡಿಸಿರುತ್ತದೆ. ಈ ಅಂಶವನ್ನು ಈ ಪ್ರದೇಶದ ಸ್ಥಳನಾಮಗಳು ಮತ್ತೂ ಸ್ಪಷ್ಟಪಡಿಸುತ್ತವೆ.


ಒಟ್ಟಾರೆ, ಕನ್ನಡ ಭಾಷಾ ಪ್ರದೇಶದ ದಕ್ಷಿಣದ ಎಲ್ಲೆಯು ಪೂರ್ವ ಪಶ್ಚಿಮ ಘಟ್ಟಗಳು ಸಂಧಿಸುವ, ಕಾವೇರಿ ನದಿಯ ಪಾತ್ರದವರೆಗೆ ಅಂದರೆ ಶಾಲ್ಯ (ಸೇಲಂ)ದ ದಕ್ಷಿಣಕ್ಕಿರುವ ಪಚ್ಚಿಮಲೆ ಬೆಟ್ಟಗಳ ತಪ್ಪಲಿನವರೆಗೆ ಇದ್ದಿತು. ಇದೇ ಕವಿರಾಜಮಾರ್ಗಕಾರನು ಹೇಳಿರುವ ಕನ್ನಡ ನಾಡಿನ ದಕ್ಷಿಣದ ಎಲ್ಲೆ. ಘಟ್ಟದ ಪ್ರದೇಶಗಳು ಪ್ರಾಯಶಃ ದ್ವಿಭಾಷಾ ಪ್ರದೇಶವಾಗಿದ್ದಿರಬೇಕು. ಅದರ ಆಚೆನ ಪ್ರದೇಶಗಳಲ್ಲಿ ಕಂಡುಬರುವ ಕನ್ನಡ ಶಾಸನಗಳು ಚಲುಕ್ಯ, ಗಂಗ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸರ 'ರಾಜಭಾಷೆ' ಎಂಬ ಕಾರಣಕ್ಕಾಗಿಯೇ ಹುಟ್ಟಿಕೊಂಡವು ಎಂದು ಹೇಳಬಹುದು.

ತಮಿಳುನಾಡಿನ ಸಿಂಹಪಾಲು ಕನ್ನಡ ಶಾಸನಗಳ ಒಡೆಯರಾದ ಕರ್ಣಾಟಕಧೀಶರೆನಿಸಿದ್ದ ವಿಜಯನಗರ ಅರಸರು, ತಮ್ಮ ಶೌರ್ಯ, ಸಾಹಸ, ಔದಾರ್ಯ, ಧರ್ಮಸಮನ್ವಯ ಮುಂತಾದ ಗುಣಗಳನ್ನು ಸಹಜಕನ್ನಡ ಮತ್ತು ಅದರ ಹೊರಗಿನ ಪ್ರದೇಶಗಳಲ್ಲೂ ಮೆರೆದು ರಾಷ್ಟ್ರದ ಭಾವೈಕ್ಯತೆಯನ್ನು ಕಾಪಾಡಿದ್ದರು.

ಕನ್ನಡ ಭಾಷೆಯ ಪ್ರದೇಶ ಹಾಗೂ ಕನ್ನಡತನ ಈ ಸಾವಿರ ವರ್ಷಗಳಲ್ಲಿ ಬಹಳವಾಗಿ ಕುಗ್ಗಿದೆ ಎಂಬ ವಿಷಾದಕರ ಸಂಗತಿಯನ್ನು ಈ ಅಧ್ಯಯನವು ತೋರಿಸಿಕೊಟ್ಟಿದೆ. ಸಹಜಕನ್ನಡ ಪ್ರದೇಶದ ಶಾಸನಗಳ ಹಿನ್ನೆಲೆಯಲ್ಲಿ ಈ ಪ್ರದೇಶದ ಸ್ಥಳನಾಮಗಳ ಆಳವಾದ, ವೈಜ್ಞಾನಿಕ ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಹಾಗೇ ಪಾರಂಪರಿಕ ಜಾನಪದೀಯ ಆಚರಣೆಗಳನ್ನೂ ಸೂಕ್ಷ್ಮ ಅಧ್ಯಯನಕ್ಕೆ ಅಳವಡಿಸಿದರೆ ಈ ಪ್ರದೇಶದ ನೈಜಸ್ವರೂಪ ಇನ್ನೂ ಖಚಿತವಾಗುತ್ತದೆ.

* * *

ತಮಿಳುನಾಡಿನ ಜಿಲ್ಲಾವಾರು ನಕ್ಷೆ



ಅನುಬಂಧ – ೧

ತಮಿಳುನಾಡಿನ ಕನ್ನಡ ಶಾಸನಗಳು

ಶಾಸನ ಸೂಚಿ

ಕೃಷ್ಣಗಿರಿ ಜಿಲ್ಲೆ

ಕೃಷ್ಣಗಿರಿ ತಾಲೂಕು

೧

೧. ಗಂಗಾವರಂ, ಊರ ಹೊರವಲಯದಲ್ಲಿರುವ ವೀರಗಲ್ಲು

ರಾಜಮನೆತನ : ಗಂಗ   **ರಾಜ** : ಶಿವಮಾರ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೫   **ಕಾಲ** : ಕ್ರಿ.ಶ.ಸು. ೮–೯ನೇ ಶತಮಾನ

ಗಂಗವುರ ತುರುಗೋಳ್ಗೊಳು ನಿಜರೊಳಿಗಾವುಣ್ಡರ ಮಗ ಇಬ್ಬುಲಿ ಪಸೂಣ್ಡೆಯ ಎಂಬುವನು ಕಾದಾಡಿ ಮಡಿದ. ಕಲಿಪುಳ ಎಂಬುವನ ಅಕ್ಷರಗಳು.

೨

೨. ಕನ್ನಡಹಳ್ಳಿ, ಗ್ರಾಮದಿಂದ ತಂದು, ಈಗ ಮದ್ರಾಸ್ ಕಲಾಕ್ಷೇತ್ರ ಆವರಣದಲ್ಲಿ ಇರಿಸಿರುವ ವೀರಗಲ್ಲು

ರಾಜಮನೆತನ : ---   **ರಾಜ** : ---

ಆಕರ : *JESI,* Vol.V (1978) p.103   **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಪೊರೆಯಂಗಾಡು ಎಂಬಲ್ಲಿ ನಡೆದ ತುರುಗಾಳೆಗವೊಂದರಲ್ಲಿ ಪೊಲರೊಡೆಯಗಂಡನೆಂದು ಖ್ಯಾತನಾಗಿದ್ದ ವೀರನೋರ್ವನು ಮಡಿದ ವಿವರ.

೩

೩. ರಾಯಕೋಟೆ, ಕೋಟೆಯ ಕಲ್ಲಿನ ಮೇಲಿರುವ ಶಾಸನ

ರಾಜಮನೆತನ : ಬಾಣ   **ರಾಜ** : ಮಹಾಬಲಿ ಬಾಣರಸ (ಜಯಮೇರು?)

ಆಕರ : *SII,* Vol.VII, No.2   **ಕಾಲ** : ಕ್ರಿ.ಶ.ಸು. ೮೪೭

ಗಂಗೆನಾಡು, ಪೊರೆಮಲೆನಾಡು ಮುಂತಾದ ಹಲವು ನಾಡುಗಳನ್ನು ಉಲ್ಲೇಖಿಸುವ ಈ ಶಾಸನದಲ್ಲಿ ಕಂಚಿ, ಮಣ್ಣೆಯಪಡೆ, ವೈದುಂಬ, ಮಹಾಬಲಿ ವಾಣರಾಜರ ಪ್ರಸ್ತಾಪ ಬಂದಿದೆ. ತೇಕಲ್ನಾಡೆಳ್ಪತ್ತನಾಳುವ ಕೀರ್ತಲಮ್ಮರಸನ ಮಗ ಎರೆಗಂಗ ಕಾಳೆಗದಲ್ಲಿ ಮಡಿದಾಗ ಬಾಣರಸರು ದತ್ತಿ ಬಿಟ್ಟಿರುವಂತಿದೆ.

೪

೪. ತವಳಂ, ಪೊನ್ನೈನದಿಯ ತಳದ ಬಂಡೆಯೊಂದರ ಮೇಲೆ

ಆಕರ : *ARIE*, 1967-68, B 247 **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಇದನ್ನು ಕೊಳ್ಗಾಮಣ್ಣನು ಕೊಟ್ಟನೆಂದು ಉಲ್ಲೇಖಿಸುತ್ತದೆ. ಶಾಸನದ ಆಶಯ ತಿಳಿಯುವುದಿಲ್ಲ.

೫

೫. ತವಳಂ, ಗ್ರಾಮದ ಹೊಲವೊಂದರಲ್ಲಿ

ಆಕರ : *ARIE*, 1967-68, B 246 **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಹಾಳಾಗಿದೆ. ರಾಮರಸ ಎಂಬುವನ ಹೆಸರನ್ನು ಪ್ರಸ್ತಾಪಿಸುತ್ತದೆ.

೬

೬. ಚೆನ್ನಸಂದ್ರ ಊರ ಹೊರವಲಯದಲ್ಲಿರುವ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೬ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ತಳರ ಗಂಡರಾದಿತ್ಯ, ಬಗನೂರ ಅಯ್ಯ, ಬೇವೂರ ಎಂಬ ಉಲ್ಲೇಖಗಳಿದ್ದು, ವಿವರ ಸ್ಪಷ್ಟವಾಗುವುದಿಲ್ಲ.

೭

೭. ಅದೇ ದೇವಾಲಯದ ಅದೇ ಸ್ಥಳದಲ್ಲಿನ ಇನ್ನೊಂದು ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೭ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಶಾಸನ ತ್ರುಟಿತವಿದ್ದು, ವಿವರ ಅಸ್ಪಷ್ಟ. ಅಂಕದಾ ಸಾಮ್ಮಯ ಎಂಬುನ ಉಲ್ಲೇಖವಿದೆ.

೮

೮. ಪೆರಿಯಮುಕ್ಕುಲಂ ಕೆರೆಯ ಕೊನೆಗೆ ನೆಟ್ಟ ಕಲ್ಲಿಗೆ ಸಮೀಪದ ಬಂಡೆಯ ಮೇಲೆ

ರಾಜಮನೆತನ : ನೊಳಂಬ **ರಾಜ** : ನೊಳಂಬಾಧಿರಾಜ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೦ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ತುರುಗೋಳಿಗೆ ಸಂಬಂಧಿಸಿದ ವೀರಗಲ್ಲಾಗಿದ್ದು, ತ್ರುಟಿತವಿರುವುದರಿಂದ ವಿವರ ಅಸ್ಪಷ್ಟ.

೯

೯. ವಡಮಂಗಲಂ ಗ್ರಾಮದ ವಿಷ್ಣುದೇವಾಲಯದ ದಕ್ಷಿಣಕ್ಕಿರುವ ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ನೊಳಂಬ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೨ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಮುಂಗಿಲದ ಇಳ್ಳೋಜನ ಮಗ ಸವಗೊಂಡನ್ ಎಂಬುವನು ತುರುಗೋಳ್‌ವೊಂದರಲ್ಲಿ ಮಡಿದ ವಿವರ.

೧೦

೧೦. ಅದೇ ಸ್ಥಳದ ಇನ್ನೊಂದು ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ಬೀರನೊಳಂಬ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೩ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಗೋರಾಸಿಮಂಗಲದ ಇಳ್ಳೋಜಳ ಮಾರರ್ ಮನೆಮಗ ಮೈನಗ ಎಂಬುವನು ತುರುಗೋಳದಲ್ಲಿ ಮಡಿದ.

೧೧

೧೧. ಸತ್ಯನಾಥಪುರಂನ ಈಶ್ವರ ದೇವಾಲಯದ ಮುಂದಿರುವ ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೫ **ಕಾಲ** : ಕ್ರಿ.ಶ.ಸು. ---

ತ್ರುಟಿತ. ಅಸ್ಪಷ್ಟ. ...ನಾಡ ಗೋಸಿಗ ಸತ್ತದನ್ನು ಉಲ್ಲೇಖಿಸುತ್ತದೆ.

೧೨

೧೨. ಕುಪ್ಪಂ ಊರಿನ ಉತ್ತರಕ್ಕಿರುವ ಬಂಡೆ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಪ್ರೌಢದೇವರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೩ **ಕಾಲ** : ಕ್ರಿ.ಶ. ೨೮–೬–೧೪೪೬

ಲಖಂಣರಸರು ...ಭಟರ ಮಕ್ಕಳು ಅವಧಾನಿ ಶ್ರೀಕಂಠಭಟ್ಟರಿಗೆ ಮಂಟಪ ಕಟಿಸಿಕೊಟ್ಟು ದೇವರಾಯಸಮುದ್ರದ ಕೆಳಗೆ ಅಡಕೆಯ ಮರ, ಬಿತ್ತುವಾಟ ದತ್ತಿಯನ್ನು ಪ್ರಸ್ತಾಪಿಸುತ್ತದೆ.

೧೩

೧೩. ಕುಪ್ಪಂ ಊರಿನ ಉತ್ತರಕ್ಕಿರುವ ಬಂಡೆಯ ಮೇಲಿರುವ ಮತ್ತೊಂದು ಶಾಸನ

ರಾಜಮನೆತನ : ವಿಜಯನಗರ **ರಾಜ** : ಪ್ರೌಢದೇವರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೪ **ಕಾಲ** : ಕ್ರಿ.ಶ.ಸು. ೧೪೮೬

ಪ್ರಾಯಶಃ ಇದು ಮೇಲಿನ ಶಾಸನದ ಮುಂದಿನ ಭಾಗವಿದ್ದಂತಿದೆ. ಹತ್ತುಕೊಳಗ ಗದ್ದೆಯ ಸರ್ವಮಾನ್ಯ, ಲಖಂಣ ಒಡೆಯ, ಗದ್ದೆಯನ್ನು ಅಳೆದು ಕೊಟ್ಟದ್ದು ಹಾಗೂ ನಾಯ್ಕರ ಭಾವ ಕೇಶವನಾಥದೇವ ಎಂಬ ಉಲ್ಲೇಖವಿದೆ.

೧೪

೧೪. ಕುಡಪಲ್ಲಿ, (ಕುಯ್ದಪಲ್ಲೆ). ಗ್ರಾಮದ ಹೊಲವೊಂದರಲ್ಲಿ ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕನ್ನಡಪ್ರಭ, ಜನವರಿ ೧, ೧೯೯೩, ಪು.೯, ೩ನೇ ಕಾಲಂ, ಪ್ರಜಾವಾಣಿ, ಜನವರಿ ೧, ೧೯೯೩ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ವೀರಗಲ್ಲು, ವಿವರಗಳು ಅಲಭ್ಯ.

೧೫

೧೫. ನರಿಮೇಡು ಗ್ರಾಮದ ಹೊರವಲಯದಲ್ಲಿ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೮ **ಕಾಲ** : ಕ್ರಿ.ಶ.ಸು. ೧೫ನೇ ಶತಮಾನ

ತ್ರುಟಿತ. ವಿವರಗಳು ಅಸ್ಪಷ್ಟ. ಎಲ್ಲಾರಿಯ ಹೊಯ್ಸವರು, ಮಾಲೆಯ ಮಾದಯ್ಯ ಎಂಬ ಹೆಸರುಗಳ ಉಲ್ಲೇಖವಿದೆ.

೧೬

೧೬. ಸಪ್ಪನಿಪಟ್ಟಿ ಗ್ರಾಮದ ದೇವಾಲಯದ ಹೊರಬದಿಯಲ್ಲಿ ನೆಟ್ಟ ಕಲ್ಲು

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೪ **ಕಾಲ** : ಕ್ರಿ.ಶ.ಸು. ೧೫೧೯ ?

ತ್ರುಟಿತ. ವಿವರಗಳು ಅಸ್ಪಷ್ಟ. ...ಮಂಟಿಕೆ . ನವರ ಧರ್ಮ ಎಂಬ ಉಲ್ಲೇಖ ಕಂಡುಬರುತ್ತದೆ.

೧೭

೧೭. ಪೆರಿಯಮುಕ್ಕುಲಂ ಸ್ಥಳದ ಕೆರೆಯ ಕೊನೆಗೆ ನೆಟ್ಟ ಕಲ್ಲಿಗೆ ಸಮೀಪದ ಬಂಡೆಯ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೯ **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ

'ಕಲ್ಪ ಪೂರ್ನ ಸಮಾಧಿ ಕಾಷ್ಟಂ' ಎಂಬ ಬರಹವಿದ್ದು, ಶಾಸನದ ಮೊದಲ ಮತ್ತು ೫ನೇ ಸಾಲಿನಲ್ಲಿ ಕೆಲವು ಅಂಕೆಗಳಿವೆ.

ಹೊಸೂರು ತಾಲೂಕು

೧೮

೧. ಹೊಸೂರು, ಗೊಲ್ಲಪೇಟೆಯಲ್ಲಿ ಬಿದ್ದಿರುವ ಚಪ್ಪಡಿಯ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE* 1970-71, B 485 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಪೊಲೆತಮ್ಮ ಎಂಬುವನಿಂದ ಕೆರೆಯೊಂದಕ್ಕೆ ಬಿಟ್ಟುಪಾಠ (ಬಿತ್ತುವಾಟ) ದತ್ತಿ ಬಿಟ್ಟ ವಿವರವಿದೆ.

೧೯

೨. ಹೊಸೂರು ರಾಮನಾಯಕನಕೆರೆಯಲ್ಲಿರುವ ಗಂಗಮ್ಮನಗುಡಿಯ ಚಪ್ಪಡಿ ಮೇಲೆ

ರಾಜಮನೆತನ : ಗಂಗ **ರಾಜ** : ಮಾರಸಿಂಹ II

ಆಕರ : *ARIE* 1969-70, B 307 **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಅಸ್ಪಷ್ಟ. ಮೊರಸುನಾಡು ಮತ್ತು ಪೊಳಲಸೆಟ್ಟಿಯನ್ನು ಉಲ್ಲೇಖಿಸುತ್ತದೆ.

೨೦

೩. ಕೊತ್ತಗೊಂಡಹಳ್ಳಿ ಊರ ಬಾಗಿಲ ಬಳಿ ಇರುವ ಮಂಟಪದಲ್ಲಿ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೪ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಈ ಅಸಮಗ್ರ ತುಂಡುಶಾಸನ ಅಸ್ಪಷ್ಟವಾಗಿದೆ. ಎರೆಗಂಗ ಮತ್ತು ಅಂಬಾಲವೃತ್ತಿ ಎಂಬುವು ಉಕ್ತವಾಗಿವೆ.

೨೧

೪. ಹೊಸೂರು, ಬೆಟ್ಟದ ಮೇಲಿನ ಚೂಡೇಶ್ವರ ದೇವಾಲಯದ ಆವರಣದಲ್ಲಿರುವ ಸುಬ್ರಹ್ಮಣ್ಯಸ್ವಾಮಿ ಗುಡಿಯ ಮುಂದಿರುವ ತುಲಾಭಾರ ಕಂಬದ ಉತ್ತರ ಮುಖದಲ್ಲಿ

ರಾಜಮನೆತನ : ಚೋಳ **ರಾಜ** : ರಾಜೇಂದ್ರದೇವ I

ಆಕರ : *ARIE* 1969-70, B 270 **ಕಾಲ** : ಕ್ರಿ.ಶ.ಸು.೧೦೧೮

ಚೋಳರಾಜೇಂದ್ರದೇವನ ೧೪ನೇ ವರ್ಷದಲ್ಲಿ ಪೊಲಮುಂದನಾಡಿನ ವಿಕ್ರಮ ಚೋಳಗಾಮುಂಡನನ್ನು ಉಲ್ಲೇಖಿಸುತ್ತದೆ. ಸಾಲೆವೂರಿಗೆ ಸೇರಿದ ಓರ್ವನ ಮಡದಿ ಕೆರೆಯೊಂದನ್ನು ನಿರ್ಮಿಸಿದ ಬಗ್ಗೆ ತಿಳಿಸುತ್ತದೆಯಲ್ಲದೆ, ಅದು ಗಾವುಂಡನ ಕೊಡಿಗೆ ಎಂದು ತಿಳಿಸಿ ದೇವರಿಗೆ ದತ್ತಿಬಿಟ್ಟ ಅಸ್ಪಷ್ಟ ವಿವರ.

೨೨

೫. ಸರಕನಹಳ್ಳಿ, ಆಂಜನೇಯ ದೇವಾಲಯದ ಮರವೊಂದರ ಕೆಳಗಿನ ಚಪ್ಪಡಿ ಮೇಲೆ

ಆಕರ : *ARIE*, 1970-71, B 204 **ಕಾಲ** : ಕ್ರಿ.ಶ.ಸು. ೧೨ನೇ ಶತಮಾನ.

ತ್ರುಟಿತ ಶಾಸನ. ಸರಕಿಹಳ್ಳಿ ಮತ್ತು ಬಚಣ ಎಂಬ ವ್ಯಕ್ತಿಯನ್ನು ಪ್ರಸ್ತಾಪಿಸುತ್ತದೆ. 'ಅಷ್ಟಮಿ' ಉಲ್ಲೇಖವಿದೆ.

೨೩

೬. ಸರಕನಹಳ್ಳಿ, ಅದೇ ಸ್ಥಳದಲ್ಲಿರುವ ಇನ್ನೊಂದು ಕಲ್ಲಿನಲ್ಲಿ

ಆಕರ : *ARIE*, 1971-72, B 206 **ಕಾಲ** : ಕ್ರಿ.ಶ.ಸು. ೧೨ನೇ ಶತಮಾನ.

ತ್ರುಟಿತ. ದೇವರಿಗೆ ದತ್ತಿಬಿಟ್ಟ ವಿವರವಿದ್ದಂತಿದೆ. ಶಾಪಾಶಯದ ಸಾಲುಗಳು ಇದೆ.

೨೪

೭. ಹೊಸೂರು, ಬೆಟ್ಟದ ದೇವಾಲಯದ ಆವರಣದಲ್ಲಿ ಬಿದ್ದಿರುವ ಕಲ್ಲಿನ ಚಪ್ಪಡಿಯ ಮೇಲೆ

ರಾಜಮನೆತನ : ಹೊಯ್ಸಳ **ರಾಜ** : ವೀರಬಲ್ಲಾಳ III

ಆಕರ : *ARIE*, 1969-70, B 298 **ಕಾಲ** : ಕ್ರಿ.ಶ.ಸು. ೧೪ನೇ ಶತಮಾನ.

ತ್ರುಟಿತ ಶಾಸನ. ದಣ್ಣಾಯಕ ಅಚಲಪ್ಪ ಎಂಬುವನಿಂದ ಚೂಡನಾಥದೇವರ ಪೂಜಾ ಕೈಂಕರ್ಯಗಳಿಗಾಗಿ ಎರಮಂಡಲ(ನಾಡಿನ) ಕಂದಾಯದ ಅರ್ಧಭಾಗವನ್ನು ದತ್ತಿಬಿಟ್ಟ ವಿವರ.

೨೫

೮. ಹೊಸೂರು, ತೇರುಪೇಟೆಯ ಕಲ್ಯಾಣಮಂಟಪದ ದ್ವಾರಬಂಧದ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಕಂಪಣ ಒಡೆಯ

ಆಕರ : *ARIE,* 1970-71, B 493 **ಕಾಲ** : ಕ್ರಿ.ಶ.೧೩೭೦

ಮಹಾಮಂಡಳೇಶ್ವರ ವೀರಕಂಪಣ ಒಡೆಯನ ಮಹಾಪ್ರಧಾನ ಸೋವಪ್ಪ ದಂಣಾಯಕನ ಕೊಡುಗೆಯ ಮಂಟಪ ಎಂದು ಉಲ್ಲೇಖಿಸುತ್ತದೆ.

೨೬

೯. ಅದೇ ಕಲ್ಯಾಣಮಂಟಪದ ಛಾವಣಿಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಕಂಪಣ ಒಡೆಯ

ಆಕರ : *ARIE,* 1970-71, B 494 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ವೀರಕೋಠಿ ಶಿವ ಕಂಪಣ ಒಡೆಯನ ಪ್ರಸ್ತಾವ ಹಾಗೂ ಸೋಮಪ್ಪ ಒಡೆಯನ ಧರ್ಮ – ಆ ಮಂಟಪ ಎಂಬ ಉಲ್ಲೇಖ.

೨೭

೧೦. ಅದೇ ಮಂಟಪದ ಛಾವಣಿಯ ಮತ್ತೊಂದು ಕಡೆ

ರಾಜಮನೆತನ : ವಿಜಯನಗರ **ರಾಜ** : ಕಂಪಣ ಒಡೆಯ

ಆಕರ : *ARIE,* 1970-71, B 492 **ಕಾಲ** : ಕ್ರಿ.ಶ.ಸು. ೧೩೭೦

ತ್ರುಟಿತ. ಕೊಮಾರಕಂಪಣ ಒಡೆಯನ ಪ್ರಧಾನಿ ಸೋವಪ್ಪ ಒಡೆಯನ ಧರ್ಮವನ್ನು ಉಲ್ಲೇಖಿಸುತ್ತದೆ.

೨೮

೧೧. ಹೊಸೂರು, ಬೆಟ್ಟದ ಗುಡಿಯ ಗೋಪುರದ ಪೂರ್ವಗೋಡೆ ಮೊದಲ ಪ್ರವೇಶದ್ವಾರದ ಎಡಭಾಗದಲ್ಲಿ

ರಾಜಮನೆತನ : ವಿಜಯನಗರ **ರಾಜ** : ಹರಿಹರ II

ಆಕರ : *ARIE,* 1969-70, B 293 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಅಸ್ಪಷ್ಟ. ಮಹಾಪ್ರಧಾನ ಕುಪ್ಪೆಯ ದಂಣಾಯಕನನ್ನು ಪ್ರಸ್ತಾಪಿಸುತ್ತದೆ. ಚೂಡನಾಥದೇವರ ಸೇವೆಗೆ ಹಲವು ದತ್ತಿಗಳನ್ನು ಬಿಟ್ಟ ವಿವರ.

೨೯

೧೨. ಪೆಯರಪ್ಪಲ್ಲಿ (ಪೇರಂಡಳ್ಳಿ ?) ಊರಿನ ಪಕ್ಕದ ಒಬ್ಬರ ಮನೆಯ ಕಲ್ಲಿನ ಹಂಡೆಯ ಮೇಲಿನ ಶಾಸನ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೭ **ಕಾಲ** : ಕ್ರಿ.ಶ.ಸು. ೧೪ನೇ ಶತಮಾನ

ಪ್ರಾಯಶಃ ಹನೆರಡು ಕೊಳಗ ಪ್ರಮಾಣದ ಆ ಹಂಡೆ ಅದೆಂದು ಸೂಚಿಸುವ ಬರಹವಿದ್ದಂತಿದೆ.

೩೦

೧೩. ಮುಗಳೂರು, ಪಿಲ್ಲಯ್ಯನ ಮಳಿಗಂಡನಬಾವಿಯ ಹೊಲದಲ್ಲಿ ನಿಲ್ಲಿಸಿರುವ ಕಲ್ಲು

ರಾಜಮನೆತನ : ವಿಜಯನಗರ **ರಾಜ** : ಬುಕ್ಕಣ್ಣ ಒಡೆಯ

ಆಕರ : *ARIE*, 1970-71, B 513 **ಕಾಲ** : ಕ್ರಿ.ಶ.ಸು. ---

ಪಾರ್ಶ್ವವಾಗಿ ಸವೆದಿದೆ. ಅಪೂರ್ಣ, ರಾಜನ ಮಾಂಡಲಿಕನೋರ್ವನನ್ನು (ಹೆಸರು ಸವೆದಿದೆ) ಮತ್ತು ಚೆಂನಮನಾಯಕನನ್ನು ಒಳಗೊಂಡಂತೆ ಹಲವರನ್ನು ಪ್ರಸ್ತಾಪಿಸುತ್ತದೆ.

೩೧

೧೪. ಹೊಸೂರು, ಬೆಟ್ಟದ ದೇವಾಲಯದ ಗೋಪುರದ ಪೂರ್ವಗೋಡೆಯ ಬಲಕ್ಕೆ ದ್ವಾರಬಂಧದಲ್ಲಿ

ರಾಜಮನೆತನ : ವಿಜಯನಗರ **ರಾಜ** : ಹರಿಹರ II

ಆಕರ : *ARIE*, 1969-70, B 294 **ಕಾಲ** : ಕ್ರಿ.ಶ. ೧೩೭೮

ಅಪೂರ್ಣ, ರಾಜನ ಮಗ ಬುಕ್ಕಣ್ಣ ಒಡೆಯನ ಉಲ್ಲೇಖದ ನಂತರದ ಭಾಗವನ್ನು ಅಳಿಸಿಹಾಕಲಾಗಿದೆ.

೩೨

೧೫. ಹೊಸೂರಿನ ಚಂದ್ರಚೂಡೇಶ್ವರ ದೇವಾಲಯದ ಪ್ರವೇಶದ್ವಾರದ ಬಳಿ

ರಾಜಮನೆತನ : ವಿಜಯನಗರ **ರಾಜ** : ಹರಿಹರ ಒಡೆಯ (ಹರಿಹರ II)

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೨೯ **ಕಾಲ** : ಕ್ರಿ.ಶ. ೧-೧-೧೩೭೯

ಮಹಾಪ್ರಧಾನ ಮುದೆಯ ದಂಡನಾಯಕ, ಮುಳವಾಯ ರಾಜ್ಯದ ಪ್ರಧಾನ ತ . ಡಪ್ಪಗಳ ಪ್ರಸ್ತಾಪವಿದ್ದು, ಸ್ವಸ್ತಿ ಹಾಡುವ ಶಾಂತಿನಾಥ, ಶ್ರೇಯನಾಥ ಶ್ರೀಭೂತನಾಥದೇವರ ಅಂಗರಂಗಭೋಗಕ್ಕೆ ಹಾಗೂ ಹೊದಲಿ ಕೇಶವದೇವರ ಬಿಂದವಲ್ಲದೇವರ್ಗೆ ಭೂತನಾಥ ದೇವರಿಗೆ ಎಂಬ ತ್ರುಟಿತ ಉಲ್ಲೇಖಗಳಿದ್ದು, ಅಸ್ಪಷ್ಟವಾಗಿದೆ.

೩೩

೧೬. ಬನ್ನಿಕಲ್ ಗ್ರಾಮದ ಮಧ್ಯದಲ್ಲಿಯ ಒಂಟಿಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೨೦ **ಕಾಲ** : ಕ್ರಿ.ಶ. ೧೪೦೧/೧೪೬೧?

ಅಸ್ಪಷ್ಟ. ಬಹುವಾಗಿ ಸವೆದಿರುವ ಈ ಶಾಸನದಲ್ಲಿ ಪಟ್ಟಣಸ್ವಾಮಿ, ಅಗಸವೃತ್ತಿ, ಆವನಿನಾಡು, ಮಂಟಪ, ಕಂಚುಗೆಗ್ರಾಮ ಎಂಬ ಉಲ್ಲೇಖಗಳು ಕಾಣಸಿಗುತ್ತವೆ.

೩೪

೧೭. ಕೂಸ್ತನಹಳ್ಳಿ, ಗ್ರಾಮದ ದಕ್ಷಿಣಕ್ಕೆ ಒಂದು ಫರ್ಲಾಂಗ್ ದೂರದ ಹೊಲದಲ್ಲಿರುವ ಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಹರಿಹರ II

ಆಕರ : *ARIE*, 1970-71, B 508 **ಕಾಲ** : ಕ್ರಿ.ಶ. ೧೪೦೪

ಹಾಳಾಗಿದೆ. ಈ ಶಿಲಾಶಾಸನವನ್ನು ಸ್ಥಾಪಿಸಿದ, ಹೊಸದಾಗಿ ಕೆರೆಯೊಂದನ್ನು ಕಟ್ಟಿದ ಹಾಗೂ ೩೦೦ ಹೊನ್ನು ಎಂಬ ಉಲ್ಲೇಖವನ್ನು ಒಳಗೊಂಡಿದ್ದು ಚೂಡಜೀಯನ ಮಗನಾದ ಚೆಂಬಿನಾಯಕ ಎಂಬ ಚೆಂಬಿಜೀಯನು, ಸಣಿಜೀಯನ ಮಗ ವೀರಪ್ಪ, ಸಾಕಜೀಯನ ಮಗ ಮಾರಪ್ಪ ಎಂಬುವರನ್ನು ಉಲ್ಲೇಖಿಸುತ್ತದೆ.

೩೫

೧೮. ಬನಿಕ್ಕಲ್ ಗ್ರಾಮದ ಮಧ್ಯದಲ್ಲಿರುವ ಒಂಟಿ ಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ I

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೯ **ಕಾಲ** : ಕ್ರಿ.ಶ. ೧೨-೧೨-೧೪೧೨

ಅಸ್ಪಷ್ಟವಾಗಿರುವ ಈ ಶಾಸನದಲ್ಲಿ ಒಂಬತ್ತು ನಾಡುಗಳೊಳಗಿನ್ನ ಸಿರಿಯನಾಡು, ಮೊರಸನಾಡು ಹಾಗೂ ಮುಲುವಾಯಿ, ಪಲಮಸೀಮೆ ಮುಂತಾದ ತೆಂಕಣನಾಡ ಸಮಸ್ತ ಪ್ರಜೆಗಳ ಮರಿಯಾದೆ ಎಂಬ ಉಲ್ಲೇಖವಿದೆ.

೩೬

೧೯. ಹೊಸೂರು, ತೇರುಪೇಟೆಯಲ್ಲಿರುವ ತೇರಿನ ಮುಂದಿನ ಮರದ ತೊಲೆಯ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE* 1970-71, B 495 **ಕಾಲ** : ಕ್ರಿ.ಶ.೧೪೯೪

ಹಾಳಾಗಿದೆ ಮತ್ತು ಅಪೂರ್ಣ, ಶಾಸನದ ಆಶಯ ಅಸ್ಪಷ್ಟ.

೩೭

೨೦. ವನ್ನಲವಾಡಿ ಗ್ರಾಮದ ಮುಂದಿನ ರಸ್ತೆ ಬದಿಯಲ್ಲಿನ ಒಂಟಿಕಲ್ಲಿನ ಮೇಲೆ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೨೪ **ಕಾಲ** : ಕ್ರಿ.ಶ.ಸು. ೧೫ನೇ ಶತಮಾನ

ತ್ರುಟಿತ. ವಿವರಗಳು ಅಸ್ಪಷ್ಟ.

೩೮

೨೧. ಕಾಟಿನಾಯಕನದೊಡ್ಡಿ, ಪ್ರಾಥಮಿಕ ಶಾಲೆಯ ಮುಂದೆ ನಿಲ್ಲಿಸಿರುವ ಚಪ್ಪಡಿಯ ಮೇಲೆ

ಆಕರ : *ARIE,* 1970-71, B 508 **ಕಾಲ** : ಕ್ರಿ.ಶ. ೧೫೨೩

ಪಾರ್ಶ್ವವಾಗಿ ಹಾಳಾಗಿದೆ ಮತ್ತು ಸವೆದಿದೆ. ಚೂಡೇಗೌಡ ಎಂಬುವನಿಂದ ಭೂಮಿಯ ಮಾರಾಟದ ದಾಖಲೆ ಇದ್ದಂತೆ ತೋರುತ್ತದೆ. ಇತರ ವಿವರಗಳು ಅಸ್ಪಷ್ಟ.

೩೯

೨೨. ಹೊಸೂರು, ಬೆಟ್ಟಕ್ಕೆ ಹತ್ತುವ ಹಳೆಯ ಮೆಟ್ಟಿಲುಗಳ ಪ್ರವೇಶದ ಬಲಕ್ಕೆ ಇರುವ ಬಂಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *ARIE,* 1969-70, B 304 **ಕಾಲ** : ಕ್ರಿ.ಶ. ೧೫೨೭

ಹಾಳಾಗಿದೆ. ಆಶಯ ಅಸ್ಪಷ್ಟ. ಮೂರನೆಯ ಸಾಲಿನಲ್ಲಿ 'ಕಾಣಿಯಾಚಿ' ಎಂಬ ಪದ ಬರುತ್ತದೆ.

೪೦

೨೩. ಹೊಸೂರಿನ ಚಂದ್ರಚೂಡೇಶ್ವರ ದೇವಾಲಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ. ೧೩೦ **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಬಹಳವಾಗಿ ತ್ರುಟಿತವಾಗಿರುವ ಈ ಶಾಸನದಲ್ಲಿ ಗುಡಿಗೆ ೩೦೦ ಖಂಡುಗ ನೆಲ್ಲನ್ನು ದತ್ತಿ ಬಿಟ್ಟಿರುವಂತೆ ತೋರುತ್ತದೆ. ಅಧಿಕಾರಿ, ಸ್ಥಾನಿಕ, ಚೂಡವಾಡಿ ಎಂಬ ಪ್ರಸ್ತಾಪಗಳಿವೆ.

೪೧

೨೪. ಬುಕ್ಕಸಾಗರ, ರಸ್ತೆ ಬದಿಯ ಬಂಡೆಗಲ್ಲಿನ ಮೇಲೆ

ಆಕರ : *ARIE,* 1970-71, B 480 **ಕಾಲ** : ಕ್ರಿ.ಶ.ಸು. ೧೫೩೪

ಪಾರ್ಶ್ವವಾಗಿ ಸವೆದಿದೆ, ವೀರನೋರ್ವನ ಸ್ಮಾರಕವಾಗಿ ನೆತ್ತರುಕೊಡುಗೆ ದತ್ತಿಬಿಟ್ಟ ವಿವರ. ಗೌಡ (ಹೆಸರು ಸವೆದಿದೆ)ನೋರ್ವನ ಉಲ್ಲೇಖ.

೪೨

೨೫. ಹೊಸೂರು, ಬೆಟ್ಟದಲ್ಲಿ ಮುಖ್ಯ ದೇವಾಲಯದ ಉತ್ತರ ಗೋಡೆ ಮೇಲಿನ ಮತ್ತು ಕೆಳಗಿನ ಅಧಿಷ್ಠಾನದ ಪಟ್ಟಿಕಗೆಳಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE*, 1969-70, B 255 **ಕಾಲ** : ಕ್ರಿ.ಶ.ಸು. ೧೫೩೫

ಅಪೂರ್ಣ, ಮಹಾಮಂಡಳೇಶ್ವರ ತಿರುಮಲದೇವನ ಕಾರ್ಯಕ್ಕೆ ಕರ್ತನಾದ ರಾಮನಾಯಕನು ಚೋಡೆಯಲಿಂಗ ದೇವರಿಗೆ ಹಾಗೂ ಸ್ಥಾನಿಕರಾದ ಕುಪ್ಪೆಯ ಮತ್ತು ಚೂಡೇಅಳ್ವನ ಮಗ ಚೂಡಪ್ಪ ಎಂಬುವರಿಗೆ ಗ್ರಾಮವೊಂದನ್ನು ದತ್ತಿಬಿಟ್ಟ ವಿವರ.

೪೩

೨೬. ಹೊಸೂರು, ತೇರುಪೇಟೆಯ ತೇರಿನ ಹಿಂದಿನ ತೊಲೆಯ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE*, 1969-70, B 496 **ಕಾಲ** : ಕ್ರಿ.ಶ.ಸು. ೧೫–೧೬ನೇ ಶತಮಾನ.

ಹಾಳಾಗಿದೆ, ಅಪೂರ್ಣವಾಗಿದೆ. 'ರಥ' ಎಂಬ ಬರಹವಿದೆ.

೪೪

೨೭. ಹೊಸೂರು, ಬೆಟ್ಟದ ದೇವಾಲಯದ ಉತ್ತರ ಗೋಡೆಯ ಮಧ್ಯದ ಪಟ್ಟಿಕೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE*, 1969-70, B 283 **ಕಾಲ** : ಕ್ರಿ.ಶ.೧೫೩೮

ಅಸ್ಪಷ್ಟ ಮತ್ತು ಅಪೂರ್ಣ. ಹದಿನೆಂಟು ದೇವಾಲಯಗಳಲ್ಲಿನ ಋಷಿಗಳ ಬಗ್ಗೆ ಉಲ್ಲೇಖಿಸುತ್ತದೆ.

೪೫

೨೮. ಬಾಗೇಪಲ್ಲಿ, ವೆಂಕಟರಮಣ ದೇವಾಲಯದಲ್ಲಿ ನಿಲ್ಲಿಸಿರುವ ಚಪ್ಪಡಿಕಲ್ಲಿನಲ್ಲಿ

ರಾಜಮನೆತನ : ವಿಜಯನಗರ **ರಾಜ** : ಸದಾಶಿವರಾಯ

ಆಕರ : *ARIE*, 1970-71, B 469 **ಕಾಲ** : ಕ್ರಿ.ಶ.ಸು. ೧೫೭೨

ಹಾಳಾಗಿದೆ ಮತ್ತು ಪಾರ್ಶ್ವವಾಗಿ ಸವೆದಿದೆ. ವಿರು...ಣ್ಣಗಳು, ಒಬ್ಬ ಗೌಡ (ನಾಯಕ) ಮುಂತಾದವರ ಉಲ್ಲೇಖ.

೪೬

೨೯. ನಾಗಂಡಹಳ್ಳಿ, ರಸ್ತೆಯ ಪಶ್ಚಿಮಕ್ಕೆ ಪಕ್ಕದಲ್ಲಿರುವ ಕಲ್ಲಿನ ಮೇಲೆ ಸಪ್ಪಲಮ್ಮನ ಗುಡಿ ಎದಿರು

ಆಕರ : *ARIE*, 1970-71, B 515 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಪೂರ್ಣವಾಗಿ, ಸವೆದಿದೆ, ಆಶಯ ಅಸ್ಪಷ್ಟ.

೪೭

೩೦. ಹೊಸೂರು, ಬೆಟ್ಟದ ದೇವಾಲಯದ ದಕ್ಷಿಣ ಗೋಡೆಯ ತ್ರಿಪಟ್ಟದ ಮೇಲೆ

ಆಕರ : *ARIE*, 1969-71, B 281 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಹಾಳಾಗಿದೆ ಮತ್ತು ಅಪೂರ್ಣ, ಸುವರ್ಣಾದಾಯ, ಸಮುದಾಯ ಮುಂತಾದವುಗಳನ್ನು ಸಂಗ್ರಹಿಸುವ ಹಕ್ಕನ್ನು ನೀಡಿರುವ ದಾಖಲೆಯಂತಿದೆ.

೪೮

೩೧. ಅದೇ ಸ್ಥಳದ ಎರಡನೇ ದ್ವಾರದ ಪೂರ್ವಗೋಡೆಯ ಮೇಲೆ

ಆಕರ : *ARIE*, 1969-70, B 295 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಹಾಳಾಗಿದೆ ಮತ್ತು ಮುರಿದಿದೆ. ಹೊನ್ನಿನ ದತ್ತಿಯನ್ನು ದಾಖಲಿಸಿರುವಂತೆ ತೋರುತ್ತದೆ.

೪೯

೩೨. ಅದೇ ಸ್ಥಳದ ಪ್ರವೇಶದ್ವಾರದ ಬಲಭಾಗದಲ್ಲಿ

ಆಕರ : *ARIE*, 1969-70, B 278 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಅಸ್ಪಷ್ಟ. ಬತ್ತದ ಮಾರಾಟವನ್ನು ಪ್ರಸ್ತಾಪಿಸಿ, ಅರಸರು, ಅಧಿಕಾರಿಗಳು ಮುಂತಾದವರನ್ನು ಶಾಪಾಶಯದ ಭಾಗದಲ್ಲಿ ಉಲ್ಲೇಖಿಸುತ್ತದೆ.

೫೦

೩೩. ಅದೇ ಸ್ಥಳದ ಚೂಡೇಶ್ವರಸ್ವಾಮಿ ದೇವಾಲಯದ ದಕ್ಷಿಣದ ಗೋಡೆಯಲ್ಲಿ

ಆಕರ : *ARIE*, 1969-70, B 264 **ಕಾಲ** : ಕ್ರಿ.ಶ.ಸು. ೧೫೯೧

ಅಸ್ಪಷ್ಟ, ಕೋಟಿನಾಯಕನ ಮಗ ಮುದಿಯ ಎಂಬುವನು ದೇವಾಲಯದ ಪ್ರಾಕಾರ ಗೋಡೆಯನ್ನು ಕಟ್ಟಿಸಿ ಶಿಲಾಶಾಸನವನ್ನು ನಿಲ್ಲಿಸಿದ ಬಗ್ಗೆ ವಿವರ.

೫೧

೩೪. ಕಗ್ಗನೂರು, ಬಸವಣ್ಣನ ದೇವಾಲಯದ ಹಿಂದಿನ ಗರುಡಗಂಭದ ಬುಡದ ಬೋದಿಗೆಯಲ್ಲಿ

ಆಕರ : *ARIE*, 1970-71, B 503 **ಕಾಲ** : ಕ್ರಿ.ಶ.ಸು. ೧೬೫೮

ಪಾರ್ಶ್ವವಾಗಿ ಸವೆದಿದೆ, ದಾಸ ಹಾಗೂ ಸೀಮೆಯೊಂದರ ಉಲ್ಲೇಖ ಬಂದಿದೆ.

೫೨

೩೫. ತೊರಹಳ್ಳಿ, ರುದ್ರಪಾದಗಳ ಬಂಡೆಯಲ್ಲಿ

ರಾಜಮನೆತನ : ಮೈಸೂರು **ರಾಜ** : ಚಿಕ್ಕದೇವರಾಜ ಒಡೆಯ

ಆಕರ : *ARIE*, 1971-72, B 207 **ಕಾಲ** : ಕ್ರಿ.ಶ.ಸು. ೧೬೭೪

ಹೊಸೂರನ್ನು ಆಳುತ್ತಿದ್ದ ದಳವಾಯಿ ಕೊಮಾರೈಯನ ಕಿರಿಯ ಸೋದರ ಹಾಗೂ ಆತನ ಕಾರ್ಯಕ್ಕೆ ಕರ್ತನಾದ ನಂಜರಾಜಯ್ಯನು ಭದ್ರಗಿರಿಯ ತ್ರಿಕೂಟೇಶ್ವರಸ್ವಾಮಿ (ಶ್ರೀಚೂಡೇಶ್ವರಸ್ವಾಮಿ) ದೇವಾಲಯದ ಪೂರ್ವಕ್ಕೆ ಪಿನಾಕಿನಿ ನದಿಗೆ ಅಡ್ಡಲಾಗಿ ನಂಜರಾಜಸಮುದ್ರವೆಂಬ ಅಣೆಕಟ್ಟನ್ನು ಕಟ್ಟಿಸಿದ ವಿವರ. ತನ್ನ ಗುರು ಸ್ವಾಮಿಕೆರೆ ಪದ್ಮರಸದೇವ, ಅಣ್ಣ ಮಲ್ಲರಾಜಯ್ಯ, ತನ್ನ ತಂದೆ ನಂಜರಾಜಯ್ಯ, ತಾಯಿ ಲಿಂಗಪಾದಮ್ಮ, ಕಿರಿಯ ಸೋದರ ವೀರರಾಜಯ್ಯ ಹಾಗೂ ಅರಳದ ಮಲ್ಲಿಕಾರ್ಜುನ ಮತ್ತು ನಂಜನಗೂಡಿನ ನಂಜುಂಡೇಶ್ವರ ದೇವರುಗಳ ಪ್ರಸ್ತಾಪ ಹಾಗೂ ಶ್ರೇಯೋಭಿವೃದ್ಧಿಯ ಕೋರಿಕೆಯನ್ನೊಳಗೊಂಡಿದೆ.

೫೩

೩೬. ತೊರಹಳ್ಳಿ ಅಗ್ರಹಾರ ಕೆರೆಯ ಬಳಿ ನೆಟ್ಟ ಕಲ್ಲು

ರಾಜಮನೆತನ : ಮೈಸೂರು **ರಾಜ** : ಚಿಕ್ಕದೇವರಾಜ ಒಡೆಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ. ೧೧೬ **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ

ತ್ರುಟಿತವಿದ್ದು, ವೀರರಾಜಯ್ಯ, ಅಪ್ಪಾಜಿ ನಂಜರಾಜಯ್ಯ, ಭದ್ರಗಿರಿ ಚೂಡೇಶ್ವರಸ್ವಾಮಿ ಮತ್ತು ನಂಜರಾಯ ಸಮುದ್ರವೆಂಬ ಅಣೆಕಟ್ಟೆಯ ರಚನೆಯನ್ನು ಉಲ್ಲೇಖಿಸುವಂತಿದೆ.

(ಇದು ಮೇಲಿನ ಶಾಸನದ ನಕಲು ಇರಬೇಕೇ ?)

೫೪

೩೭. ಬುಕ್ಕಸಾಗರ, ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟದ ಇಳಿಜಾರಿನಲ್ಲಿ

ಆಕರ : *ARIE*, 1970-71, B 482 **ಕಾಲ** : ಕ್ರಿ.ಶ.ಸು. ೧೬೭೫

ಕೆರೆಯೊಂದರಿಂದ ಕಾಲುವೆಯನ್ನು ತೋಡಿಸಿದ ಉಲ್ಲೇಖ.

೫೫

೩೮. ಅದೇ ಸ್ಥಳ, ಗ್ರಾಮದ ಉತ್ತರಕ್ಕಿರುವ ಬೆಟ್ಟದ ಬುಡದಲ್ಲಿ

ಆಕರ : *ARIE*, 1970-71, B 481 **ಕಾಲ** : ಕ್ರಿ.ಶ.ಸು. ೧೬-೧೭ನೇ ಶತಮಾನ.

ಪದ್ಮನಾಯಕ, ಅಲ್ಲಪ್ಪನಾಯಕ, ಸಾಕಪ್ಪನಾಯಕ ಮತ್ತು ಕೆಂಪಣ್ಣಗೌಡ ಅವರಿಂದ ತಿರುಮೋಜ ಎಂಬುವನಿಗೆ ಮಾನ್ಯವಾಗಿ ಗದ್ದೆಭೂಮಿಯ ದತ್ತಿ ನೀಡಿರುವ ಬಗೆಗಿನ ದಾಖಲೆ.

೫೬

೩೯. ಬೆಗ್ಗಲಿ ಗ್ರಾಮದ ದಕ್ಷಿಣಕ್ಕೆ ಬೆಟ್ಟದ ಬುಡದಲ್ಲಿರುವ ದೊಣೆಯ ಬಳಿ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೮ **ಕಾಲ** : ಕ್ರಿ.ಶ. ೭-೧-೧೭೮೩ ?

ಬೆಗ್ಗಲಿಗ್ರಾಮದ ಮಾರಾಂಡೆಯ ಮಗ ಮಲೆಯಾಂಡ ಕೆರೆಯ ಕೋಡಿ ಮತ್ತು ಕಾಲುವೆಗೆ ಕಲ್ಲನ್ನು ಒದಗಿಸಿರುವಂತೆ ತಿಳಿಸುತ್ತದೆ.

೫೭

೪೦. ಹೊಸೂರು, ತೇರುಪೇಟೆಯ ತೇರಿನ ಮುಂದಿನ ತೊಲೆಯಲ್ಲಿ

ರಾಜಮನೆತನ : --- **ರಾಜ** : ---

ಆಕರ : *ARIE*, 1970-71, B 497 **ಕಾಲ** : ಕ್ರಿ.ಶ.ಸು. ೧೮೪೫

'ಹೊಸರಥ' ಎಂಬ ಉಲ್ಲೇಖ.

ಡೆಂಕಣಿಕೋಟೆ ತಾಲೂಕು

೫೮

೧. ಮಾಚಿನಾಯಕನಹಳ್ಳಿ, ಗ್ರಾಮದ ಪೂರ್ವಕ್ಕೆ ನಾರಾಣಪ್ಪನ ಹೊಲದಲ್ಲಿ ನಿಲ್ಲಿಸಿರುವ ಚಪ್ಪಡಿ ಮೇಲೆ

ರಾಜಮನೆತನ : ಗಂಗ **ರಾಜ** : ಶಿವಮಾರ

ಆಕರ : *ARIE*, 1970-71, B 509; ಇತಿಹಾಸ ದರ್ಶನ, ಸಂ.೧೧ (೧೯೯೬), ಪು.೧೧೦.

ಕಾಲ : ಕ್ರಿ.ಶ.ಸು. ೯ನೇ ಶತಮಾನ.

ರಾಜನ ಮಾಂಡಲಿಕನಾದ ಬೈದುಂಬ 'ರಾಮರಾಜ ಅರಶನ' ಉಲ್ಲೇಖ ಮತ್ತು (ನಾಡು) ಮುಖ್ಯನಿಂದ ಏರ್ಪಾಟಾದ ತುರುಗಾಳೆಗದಲ್ಲಿ ವೀರನ ಮರಣವನ್ನು ದಾಖಲಿಸುತ್ತದೆ.

೫೯

೨. ಅದೇ ಗ್ರಾಮದ ಪೂರ್ವಕ್ಕೆ ಮುನಿಸ್ವಾಮಿಯ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಜಮನೆತನ : ನೊಳಂಬ **ರಾಜ** : ಮಹೇಂದ್ರ

ಆಕರ : *ARIE*, 1970-71, B 510 **ಕಾಲ** : ಕ್ರಿ.ಶ.ಸು. ೯ನೇ 'ಶತಮಾನ.

ಮುಗನಲ್ಲೂರು ಎಂಬಲ್ಲಿ ನಡೆದ ತುರುಗಾಳೆಗದಲ್ಲಿ ಗಾಮುಂಡನೋರ್ವನ ಮಗ ವೆಂತುರಗಾಮುಂಡ ಎಂಬುವನು ಮಡಿದ ವಿವರ. ಮಡಿದ ವೀರನ ಮಗನಾಗ ದುರುಗ ಎಂಬುವನು ಶಾಸನವನ್ನು ನಿಲ್ಲಿಸಿದನೆಂದು ತಿಳಿಸುತ್ತನೆ.

೬೦

೩. ಹಳೆನತ್ತಂ ಗ್ರಾಮದ ಮುಂದಿನ ಮರವೊಂದರ ಕೆಳಗೆ

ರಾಜಮನೆತನ : ಗಂಗ **ರಾಜ** : ನೀತಿಮಾರ್ಗ ಗಂಗ ಪೆರ್ಮಾನಡಿ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೨೨ **ಕಾಲ** : ಕ್ರಿ.ಶ. ೯೯೯

ವೀರಗಲ್ಲು ? ಅರಲ . ಣದಣಗು ಚಣ್ಣಯ್ಯ ಕತಿಣ್ಣ ಚ . ರಣಿ ಮಗ ಮಾಬ . ತ್ತಿ ಮಗ ಎಂಬ ತ್ರುಟಿತ ಉಲ್ಲೇಖವಿದ್ದು ಪ್ರಾಯಶಃ ಕತಿಣ್ಣ ಎಂಬುವ ಮಡಿದಂತೆ ತಿಳಿಯುತ್ತದೆ.

೬೧

೪. ಹೆಚ್.ಶೆಟ್ಟಿಪಲ್ಲಿ ಗ್ರಾಮದ ಹೊರಬದಿಯಲ್ಲಿ ನೆಟ್ಟಿರುವ ವೀರಗಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೨೩ **ಕಾಲ** : ಕ್ರಿ.ಶ. ೧೦ನೇ ಶತಮಾನ

ಕೊಳನೂರಿನ ತುರುಗಾಳೆಗದಲ್ಲಿ ಪಳ್ಳಿಯ ಸಿನ್ದರ ತಮ್ಮನೋರ್ವನು ಮಡಿದ ಅಸ್ಪಷ್ಟ ವಿವರ.

೬೨

೫. ಚಂತನಪಲ್ಲಿ ಗ್ರಾಮದ ಗುಂಡಮ್ಮನ ದೇವಾಲಯದಲ್ಲಿ

ರಾಜಮನೆತನ : ಚೋಳ **ರಾಜ** : ರಾಜೇಂದ್ರಚೋಳ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೬೪ **ಕಾಲ** : ಕ್ರಿ.ಶ. ೧೦೩೪

ವೀರಗಲ್ಲು ? ಗಂಗ ಮತ್ತು ಕವೇರ (ಕಾವೇರಿ)ಗಳನ್ನು ಗೆದ್ದ ರಾಜೇಂದ್ರಚೋಳನ ಆಳ್ವಿಕೆಯ ಕಾಲದ ಈ ಶಾಸನ ತ್ರುಟಿತವಿದ್ದು, ವಸಂತನ ಮಗ ಕಾಳಿಯರ ಎಂಬುವವನನ್ನು ಉಲ್ಲೇಖಿಸುತ್ತದೆ.

೬೩

೬. ಚೆನ್ನಟ್ಟಿ ಗ್ರಾಮದ ಕೋಟೆಯ ಪಕ್ಕದಲ್ಲಿರುವ ನೃತ್ಯೇಂದ್ರನ್ ದೇವಾಲಯದಲ್ಲಿರುವ ವೀರರ ಗುಡಿಯಲ್ಲಿ

ರಾಜಮನೆತನ : ಚೋಳ **ರಾಜ** : ರಾಜೇಂದ್ರ ಚೋಳ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೬೫ **ಕಾಲ** : ಕ್ರಿ.ಶ.ಸು. ೧೧ನೇ ಶತಮಾನ

ಆನೆಗೂಡಲ್-೧೨ರ ಪ್ರಸ್ತಾಪ. ಅನೇಕ ಬಿರುದುಗಳೊಂದಿಗೆ ರಾಜೇಂದ್ರಚೋಳನನ್ನು ವರ್ಣಿಸುವ ಈ ಶಾಸನದಲ್ಲಿ ರಕ್ಕಸಗಂಗ ಎಂಬುವನ ಪ್ರಸ್ತಾಪ, ಬಿಯಳರನ ಸಾವು, ಎರಡು ಕೆರೆಗಳ ನಿರ್ಮಾಣ, ವಲ್ಲಯನ ಮಗ ವೀರ (ಹೆಸರು ಅಸ್ಪಷ್ಟ) ಮತ್ತು ಅವನ ಹೆಂಡತಿ ಕೆಲೆಬ್ಬೆಯ ಉಲ್ಲೇಖಗಳು ಬಂದಿವೆ.

೬೪

೭. ಅತ್ತಿವೆಟ್ಟಂ ಊರಿನ ಪಶ್ಚಿಮಕ್ಕಿರುವ ಹೊಲವೊಂದರಲ್ಲಿರುವ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೬ **ಕಾಲ** : ಕ್ರಿ.ಶ.ಸು. ೧೧ನೇ ಶತಮಾನ

ತ್ರುಟಿತವಿರುವ ಈ ಶಾಸಮದಲ್ಲಿ ಪೊನ್ನಮ್ಮ ಎಂಬುವ ವ್ಯಕ್ತಿಯ ಉಲ್ಲೇಖವಿದೆ.

೬೫

೮. ಮಲ್ಲಹಳ್ಳಿಗ್ರಾಮ, ಪಾಲಕೋಡು ರಸ್ತೆಯ ಪಕ್ಕ ಮಾವಿನಮರದ ಹೊಲದಲ್ಲಿನ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೦ **ಕಾಲ** : ಕ್ರಿ.ಶ.ಸು. ---

ಸವೆದಿದೆ, ಅಸ್ಪಷ್ಟ.

೬೬

೯. ಅದೇ ಗ್ರಾಮದ ಬಸವಣ್ಣನ ದೇವಾಲಯದ ಹತ್ತಿರವಿರುವ ಚಪ್ಪಡಿ ಮೇಲೆ

ಆಕರ : *ARIE*, 1970-71, B 511 **ಕಾಲ** : ಕ್ರಿ.ಶ.ಸು. ೧೩ನೇ ಶತಮಾನ.

ಬಹಳವಾಗಿ ಸವೆದಿದೆ, ವ್ಯಕ್ತಿಯೋರ್ವನನ್ನು ಉಲ್ಲೇಖಿಸುತ್ತದೆ (ಹೆಸರು ಸವೆದಿದೆ).

೬೭

೧೦. ಗುಮ್ಮಳಾಪುರ, ವಿನಾಯಕಸ್ವಾಮಿ ದೇವಾಲಯದ ಪ್ರಾಂಗಣದಲ್ಲಿರುವ ಚಪ್ಪಡಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *ARIE*, 1971-72, B 196 **ಕಾಲ** : ಕ್ರಿ.ಶ. ೧೪೦೭

ಹಾಳಾಗಿದೆ, ರಾಜನ ಅಧೀನ ಅಧಿಕಾರಿಯಾದ ಸಾರರಿಯ ನಾಗಿಯನಾಯಕನ ಮಗ ಹಿರಿಯ ಪೆಮ್ಮಯನಾಯಕ ಮತ್ತು ಹಾಮ್ಮಿಸೆಟ್ಟಿಯ ಮಗ ಪಟ್ಟಣಸ್ವಾಮಿ ಕರಡಿಸೆಟ್ಟಿ ಎಂಬುವರು ಕುಂಟೆ(ಕೆರೆ?)ಯೊಂದನ್ನು ಕಟ್ಟಿಸಿದ ಉಲ್ಲೇಖ.

೬೮

೧೧. ಉಳಮಾರನಹಳ್ಳಿ, ಕುಂದನಿಯಪ್ಪನ ಹೊಲದಲ್ಲಿರುವ ಕಲ್ಲಿನಲ್ಲಿ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *ARIE*, 1971-72, B 208 **ಕಾಲ** : ಕ್ರಿ.ಶ.ಸು. ೧೪೨೭

ಹಾಳಾಗಿದೆ, ಮುಳುವಾಯಿ ರಾಜ್ಯವನ್ನು ಆಳುತ್ತಿದ್ದ ಲಕ್ಕಣ್ಣನು ಮೊರಸುನಾಡಿನ ಗೌಡ ಸಾಲಯನ ದಂಡಿಗೆಜೀವಿತಕ್ಕೆ ಸಂಬಂಧಿಸಿದ ದೇವರಾಜಸಮುದ್ರದ ಒಂದರ್ಧ ಭೂಮಿಯನ್ನು ಆ ಗ್ರಾಮದಲ್ಲಿರುವ ದೇವರಾಜದೇವರ ಅಮುದುಪಡಿ (ಅಮೃತಪಡಿ)ಗಾಗಿ ಸರ್ವಮಾನ್ಯವಾಗಿ ದತ್ತಿ ಬಿಟ್ಟ ವಿವರ.

೬೯

೧೨. ಬಳಕ್ಕೇರಿಪ್ಪಳ್ಳಿ ಗ್ರಾಮದ ನರಸಿಂಹಸ್ವಾಮಿ ದೇವಾಲಯದ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೬೮ **ಕಾಲ** : ಕ್ರಿ.ಶ. ೧೧-೧೨-೧೪೪೧

ಮೂರು ತುಂಡುಗಳಾಗಿರುವ ಈ ಶಾಸನ ವೀರನಾಯಕನೆಂಬುವನು ಲಕ್ಷ್ಮೀನಾರಾಯಣ ದೇವರಿಗೆ, ಆಬ್ಬಣವಾಡಿಯ ಗದ್ದೆಯನ್ನು ದತ್ತಿ ಬಿಟ್ಟ ವಿವರ. 'ಮಾಧವ ದಾಸರ' ಎಂಬ ಉಲ್ಲೇಖವಿದೆ. ಇದರಲ್ಲಿನ 'ಪುರಕೇರಿಯ ಧರ್ಮ' ಎಂಬುದು ಪುರಧರ್ಮದ ಉಲ್ಲೇಖವಿದ್ದಂತಿದೆ. ಸೂರ್ಯ, ಚಂದ್ರ ಮತ್ತು ಚಕ್ರದ ಚಿಹ್ನೆಗಳನ್ನು ಕೆತ್ತಲಾಗಿದೆ.

೭೦

೧೩. ಮದಗೊಂಡಹಳ್ಳಿಯ ಈಶ್ವರ ದೇವಾಲಯದ ಮಂಟಪದಲ್ಲಿ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೬೯ **ಕಾಲ** : ಕ್ರಿ.ಶ. ೧೩-೧೨-೧೪೬೦

ಅಂಕನಾಥದೇವರ ಸಾಲೆಯನು ಅಲ್ಲಿಯ ಸಮಸ್ತರು ಮಾಡಿಸಿದ ವಿವರ.

೭೧

೧೪. ಮುದುಗಾನಹಳ್ಳಿ, ರಸ್ತೆಬದಿಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE*, 1970-71, B 512 **ಕಾಲ** : ಕ್ರಿ.ಶ.ಸು. ೧೫ನೇ ಶತಮಾನ.

ಬ್ರಹ್ಮದೇಯವನ್ನು ಉಲ್ಲೇಖಿಸಿರುವಂತೆ ತೋರುತ್ತದೆ.

೭೨

೧೫. ಕೆಲಮಂಗಲ, ರಾಯಕೋಟೆ ರಸ್ತೆಯ ದಕ್ಷಿಣಕ್ಕೆ ಜಿ.ಬಿ. ಪದ್ಮನಾಭಯ್ಯನವರ ಹೊಲದಲ್ಲಿ

ರಾಜಮನೆತನ : ವಿಜಯನಗರ **ರಾಜ** : ಕುಮಾರದೇವರಾಯ ಮಲ್ಲಿಕಾರ್ಜುನಮಹಾರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೮ **ಕಾಲ** : ಕ್ರಿ.ಶ. ೩೦-೧೧-೧೪೪೧

ಶ್ರೀಮತೆ ರಾಮಾನುಜಾಯ ನಮಃ ಎಂದು ಪ್ರಾರಂಭವಾಗುವ ಈ ಶಾಸನ ಶ್ರೀಮಲ್ಲಿಕಾರ್ಜುನ ಮಹಾರಾಯನ ಅರಸುತನವನ್ನು ಪ್ರಸ್ತಾಪಿಸಿ ನಾರಾಯಣದೇವರ, ಆಪಸ್ತಂಭಸೂತ್ರ, ವೀರಪ್ಪಣ್ಣಗೌಡ ಎಂಬ ತ್ರುಟಿತ ಉಲ್ಲೇಖಗಳಿವೆ.

೭೩

೧೬. ಗುಮ್ಮಳಾಪುರದ ಬ್ರಾಹ್ಮಣ ಕುಟುಂಬವೊಂದರಲ್ಲಿದ್ದ ತಾಮ್ರಶಾಸನ

ರಾಜಮನೆತನ : ವಿಜಯನಗರ **ರಾಜ** : ನರಸಿಂಹದೇವ

ಆಕರ : ಶರಣ ಸಾಹಿತ್ಯ ಸಂ.೨೧-೨, ೩ (ಮೇ-ಜೂನ್ ೧೯೫೮) **ಕಾಲ** : ಕ್ರಿ.ಶ.೧೪೭೪

ಶರಣ ವೀರಣ್ಣದೇವರು, ಶಾಂತದೇವರು, ಬಿಟ್ಟಮಂಡೆಪ್ರಭು, ಪ್ರಸಾದದೇವ ಮುಂತಾದ ಅಶೇಷ ವೀರಮಾಹೇಶ್ವರರು ಸ್ಥಳದ ಪ್ರಭುಗಳಾದ ಚಿಕ್ಕರಾಯನಿಂದ ರಾಯಸಮುದ್ರ ಮತ್ತು ತಮ್ಮಾಪುರಗ್ರಾಮಗಳನ್ನು ಕಾಲಕ್ರಯಕ್ಕೆ ಕೊಂಡು ಪೌರುಕುತ್ಸ ಗೋತ್ರದ ಆಪಸ್ಥಂಬಸೂತ್ರದ ಯಜುಶಾಖಾಧ್ಯಾಯಿಗಳಾದ ವೆಂಕಟೇಶ್ವರ ಉಪಾಧ್ಯಾ ಎಂಬುವರಿಗೆ ನೀಡಿದ ಭೂದಾನ ಧರ್ಮಶಾಸನ.

೭೪

೧೭. ಕುಮ್ಮಲಂ ಊರಿನ ನಡುವೆ ನೆಟ್ಟ ಕಲ್ಲು

ರಾಜಮನೆತನ : ವಿಜಯನಗರ **ರಾಜ** : ಪ್ರತಾಪ ದೇವರಾಯ (ಮಲ್ಲಿಕಾರ್ಜುನ)

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೭ **ಕಾಲ** : ಕ್ರಿ.ಶ. ೪-೩-೧೪೮೭

ದೇವರಾಜಸಮುದ್ರದ ದೇವರಾಜದೇವರ ಅಂಗಭೋಗ, ಅಮೃತಪಡಿ ಮುಂತಾದ ಪೂಜಾಕೈಂಕರ್ಯಗಳಿಗೆ ಸರ್ವಮಾನ್ಯವಾಗಿ ದತ್ತಿ ನೀಡಲಾಗಿದೆ. ಗೌಡ ಆದಂಣನ ದಂಡಿಗ ಜೀವಿತಕ್ಕೆ ದೇವರಾಯಸಮುದ್ರ ಸಂದಿದ್ದಿತೆಂದು, ಅದು ಲಖಂಣಗಳು ಮುಳವಾಯಿರಾಜ್ಯವನ್ನು ಆಳುವ ಕಾಲದಲ್ಲಿ ಆಯಿತೆಂದು ತಿಳಿಯುತ್ತದೆ.

೭೫

೧೮. ಕೆಲಮಂಗಲ, ರಾಯಕೋಟೆ ರಸ್ತೆಯ ದಕ್ಷಿಣಕ್ಕೆ ಜಿ.ಬಿ.ಪದ್ಮನಾಭಯ್ಯನವರ ಹೊಲದ ಹುಣಸೆಮರದ ಕೆಳಗೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೫೯ **ಕಾಲ** : ಕ್ರಿ.ಶ.ಸು. ೧೫ನೇ ಶತಮಾನ

ಈ ಶಾಸನದ ಮೇಲುಭಾಗ, ಒಡೆದಿದ್ದು ಕಳೆದುಹೋಗಿದೆ. ಪ್ರಾಯಶಃ ಮೇಲಿನ ಕ.ವಿ.ಶಾ.ಸಂಪುಟದ ೫೮ರ ಮುಂದಿನ ಭಾಗವಾಗಿರಬಹುದು, ಬಹುತೇಕ ಒಂದು ಗ್ರಾಮವನ್ನು ತೋಟತುಡುಕೆ, ಯೇತ, ಎರೆಯಲು, ಕೆಳಕೋಠಾರ, ಸಿದ್ದಾಯ, ಸುಂಕ ಮನೆದೆರೆ, ಮಗ್ಗದೆರೆ ಮತ್ತು ಅಷ್ಟಭೋಗಗಳ ಸಹಿತ ದತ್ತಿ ಬಿಟ್ಟಿದ್ದು ಶ್ರೀಚೆನ್ನಕೇಶವದೇವರು ಎಂಬ ವೊಪ್ಪವಿದ್ದು, ಶ್ರೀಮತೇರಾಮಾನುಜಾಯ ನಮಃ ಎಂಬ ಸ್ಮರಣೆ ಇದೆ.

೭೬

೧೯. ಗಂಗನಹಳ್ಳಿ, ಗೊಲ್ಲನದೊಡ್ಡಿ ಶಂಕರಪ್ಪನಿಗೆ ಸೇರಿದ ಹೊಲದಲಿ ನಿಂತಿರುವ ಚಪ್ಪಡಿಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *ARIE*, 1971-72, B 193 **ಕಾಲ** : ಕ್ರಿ.ಶ. ೧೫೧೮

ಅಪೂರ್ಣ. ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರಾದ ಗುಮ್ಮಳಾಪುರದ ರಾಜಬೆವಹಾರಿಗಳನ್ನು ಉಲ್ಲೇಖಿಸುತ್ತದೆ.

೭೭

೨೦. ಗುಮ್ಮಳಾಪುರ, ವೆಂಕಟರಮಣ ದೇವಾಲಯದ ಸಮೀಪದ ಚಪ್ಪಡಿ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *ARIE*, 1971-72, B 194 **ಕಾಲ** : ಕ್ರಿ.ಶ. ೧೫೨೭

ಅಪೂರ್ಣ, ನಾಗಮಂಗಲದ ವೀರಭದ್ರದೇವರ ಪ್ರಿಯಪುತ್ರರಾದ ಗುಮ್ಮಳಾಪುರದ ಅಕ್ಕಲಚೆನ್ನಿಸೆಟ್ಟಿ ಎಂಬುವನನ್ನು ಪ್ರಸ್ತಾಪಿಸುತ್ತದೆ.

೭೮

೨೧. ತಳಿ, ಕೆರೆಯ ಕಟ್ಟೆಯ ಮೇಲೆ ಒಡೆದು ಬಿದ್ದಿರುವ ಕಲ್ಲಿನಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE*, 1955-56, B 310 **ಕಾಲ** : ಕ್ರಿ.ಶ. ೧೫೩೦

ನಾಗಮಂಗಲದ ಅಕ್ಕನಚೆನ್ನಿಸೆಟ್ಟಿಯ ಮೊಮ್ಮಗ, ಹೊನ್ನಸೆಟ್ಟಿಯ ಮಗ ಹೊನ್ನಹಲಗಿಸೆಟ್ಟಿಯು ಹೊನ್ನಾಂಬುಧಿ ಎಂಬ ಕೆರೆಯನ್ನು ಕಟ್ಟಿಸಿ, ಕೆರೆಯ ನಿರ್ವಹಣೆಗೆ ನಲ್ಲಸಮುದ್ರ ಎಂಬಲ್ಲಿ ದತ್ತಿ ಹಾಗೂ ಕೆರೆಯ ನೀರಿನ ಆಶ್ರಯವಿರುವ ಸೆಟ್ಟಿಹಳ್ಳಿಯನ್ನು ಅಗ್ರಹಾರವನ್ನಾಗಿಸಿ ದೇವರಿಗೆ, ಬ್ರಾಹ್ಮಣರಿಗೆ, ಜಂಗಮರಿಗೆ ಹಾಗೂ ವಿದ್ವಾಂಸರಿಗೆ ದತ್ತಿ ಬಿಟ್ಟ ವಿವರ.

೭೯

೨೨. ಡೆಂಕಣಿಕೋಟೆ, ಬೇಟೆರಾಯಸ್ವಾಮಿ ದೇವಾಲಯದ ಪ್ರಾಂಗಣದಲ್ಲಿ ಬಿದ್ದಿರುವ ಸುದರ್ಶನ ಕಂಬದ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE*, 1975-76, B 214 **ಕಾಲ** : ಕ್ರಿ.ಶ. ೧೫೭೩

ಅಪೂರ್ಣ. ರಾಮರಾಜ ಒಡೆಯನ ನಿರೂಪದ ಮೇರೆಗೆ ಮಹಾಮಂಡಳೇಶ್ವರ ಹುಲಿಯ ರಾಮಯ್ಯದೇವ ಮಹಾಅರಸುಗಳ ಶಿರಃಪ್ರಧಾನ ಶಿಕ್ಕರಸ್ಸನು ಡೆಂಕಣಿಕೋಟೆಯಲ್ಲಿ ಭೂದಾನ ನೀಡಿದ ವಿವರ. ನರಸಿಂಗರಾಜ ಒಡೆಯನಿಂದ ರಾಮರಾಜ ಒಡೆಯನಿಗೆ ಮೊರಸುನಾಡಿನ ಡೆಂಕಣಿಕೋಟೆ ಸ್ಥಳದ ಡೆಂಕಣಿಕೋಟೆ ಗ್ರಾಮವನ್ನು ಅಮರನಾಯಕರ ದತ್ತಿಯೆಂದು ನೀಡಲಾಗಿದ್ದಿತ್ತೆಂದು ಹೇಳಲಾಗಿದೆ.

೮೦

೨೩. ಡೆಂಕಣಿಕೋಟೆ, ಬೇಟೇರಾಯಸ್ವಾಮಿ ದೇವಾಲಯದಲ್ಲಿರುವ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೬೭ **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ

ತ್ರುಟಿತ. ಕರಣಿಕ ಶ್ರೀಮಪ ಅಯ್ಯನವರ ಸ್ತಾನಪತಿ ಲಖಯನ ಸೇವೆ ಎಂಬ ಅಸ್ಪಷ್ಟ ವಿವರವಿದೆ.

೮೧

೨೪. ಗುಮ್ಮಳಾಪುರ, ಗೌರಮ್ಮನ ಗುಡಿಯ ಮುಂದಿರುವ ಚಪ್ಪಡಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ವೆಂಕಟಪತಿದೇವರಾಯ

ಆಕರ : ಇತಿಹಾಸ ದರ್ಶನ, ಸಂ.೫ (೧೯೯೦) ಪು.೩೧ **ಕಾಲ** : ಕ್ರಿ.ಶ. ೧೬೭೯

ಎಲಹಂಕ ನಾಡಪ್ರಭು ಕೆಂಪೇಗೌಡನು ಗುಂಮಳಾಪುರದ ಸಿಂಹಾಸನಕ್ಕೆ ಕರ್ತನಾದ ನಂಜೇದೇವ ಅಯ್ಯನವರ ಪೌತ್ರರಾದ ಚೆನ್ನಮಲ್ಲಿಕಾರ್ಜುನದೇವರ ಪುತ್ರರಾದ ನಂಜೇದೇವರು ಅಯ್ಯನವರಿಗೆ ಮೇಲೂರಿಗೆ ಸೇರಿದ ಗುಮ್ಮಳಾಪುರವನ್ನು ದತ್ತಿ ಬಿಟ್ಟ ವಿವರವಿದೆ.

೮೨

೨೫. ಹಿರೀಮದಗೊಂಡಹಳ್ಳಿ, ಹನುಮಾನ್ ದೇವಾಲಯದ ಮುಂದಿನ ಚಪ್ಪಡಿ ಮೇಲೆ

ರಾಜಮನೆತನ : ಮೈಸೂರು **ರಾಜ** : ಕಂಠೀರವ ನರಸರಾಜ?

ಆಕರ : *ARIE*, 1971-72, B 198 **ಕಾಲ** : ಕ್ರಿ.ಶ. ೧೬೪೪

ಬಹಳವಾಗಿ ಸವೆದಿದೆ, ಪ್ರಾಯಶಃ ಮೈಸೂರು ಅರಸರಿಗೆ ಸಂಬಂಧಿಸಿದಂತೆ ತೋರುತ್ತದೆ. ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಎಂಬ ಬಿರುದಾವಳಿ ಭಾಗ ಗೋಚರಿಸುತ್ತದೆ.

೮೩

೨೬. ದೊಡ್ಡಬೇಗೂರು, ಸ್ಥಳೀಯ ಅಣೆಕಟ್ಟೆಯ ಮೇಲಿನ ಶಾಸನ

ರಾಜಮನೆತನ : ಮೈಸೂರು **ರಾಜ** : ಚಿಕ್ಕದೇವರಾಯ

ಆಕರ : *TLIMP, Sewell List* p.194 **ಕಾಲ** : ಕ್ರಿ.ಶ. ೧೬೭೨

ಚಿಕ್ಕದೇವರಾಯನ ಆಳ್ವಿಕೆಯ ಕಾಲದಲ್ಲಿ ದಳವಾಯಿ ಕುಮಾರರಾಜನು ಶಕ ೧೫೯೫ರಲ್ಲಿ ಅಣೆಕಟ್ಟೆಯನ್ನು ಕಟ್ಟಿಸಿದ ವಿವರ.

೮೪

೨೭. ಉಪ್ಪಾರಹಳ್ಳಿ, ಸೊಣ್ಣಪ್ಪನ ಹೊಲದಲ್ಲಿರುವ ಬಂಡೆಯ ಮೇಲೆ

ರಾಜಮನೆತನ : ಮೈಸೂರು **ರಾಜ** : ಚಾಮರಾಜ

ಆಕರ : *ARIE*, 1971-72, B 209 **ಕಾಲ** : ಕ್ರಿ.ಶ.ಸು. ೧೮ನೇ ಶತಮಾನ.

ಹಾಳಾಗಿದೆ ಮತ್ತು ಸವೆದಿದೆ. ಚಾಮರಾಜ ಒಡೆಯ, ನರಸಿಂಹರಾಜ ಒಡೆಯರನ್ನು ಪ್ರಸ್ತಾಪಿಸುತ್ತದೆ. ಪ್ರಾಯಶಃ ಉಪ್ಪಾರಹಳ್ಳಿಗ್ರಾಮದಲ್ಲಿ ಕೆರೆಯೊಂದನ್ನು ಕಟ್ಟಿಸಿದ ಬಗ್ಗೆ ವಿವರವಿದ್ದಂತೆ ತೋರುತ್ತದೆ.

೮೫

೨೮. ತಳಿ, ಗೋಪಾಲಸ್ವಾಮಿ ದೇವಾಲಯದ ಬಳಿ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ II

ಆಕರ : *TLIMP, 113* **ಕಾಲ** : ಕ್ರಿ.ಶ. ೧೭೪೨

ಗೋಪಾಲಸ್ವಾಮಿ ದೇವಾಲಯವನ್ನು ಮೈಸೂರಿನ ಅರಸು ಕೃಷ್ಣರಾಜ ಒಡೆಯ ಅವರು ಕಟ್ಟಿಸಿದ ವಿವರ.

೮೬

೨೯. ಮಲ್ಲೇಶ್ವರಂ / ಹಳೇಯೂರು (ಉಳಮಾರನಹಳ್ಳಿಯ ದಾಖಲೆ ಗ್ರಾಮ), ಪಾಪಣ್ಣನ ಹೊಲದಲ್ಲಿ ನಿಂತಿರುವ ಚಪ್ಪಡಿಯ ಮೇಲೆ. ಈಗ ಗ್ರಾಮದ ದೇವಾಲಯದ ಬಳಿ ತಂದು ನೆಟ್ಟಿರುವಂತಿದೆ.

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ II

ಆಕರ : *ARIE*, 1971-72, B 197; **ಕಾಲ** : ಕ್ರಿ.ಶ. ೩೧-೧-೧೭೬೩
ಕ.ವಿ.ಶಾ.ಸಂ. ೪, ಶಾಸನ ಸಂ. ೭೧

7

ಹಾಳಾಗಿದೆ, ಉಳಿಮಾರನಹಳ್ಳಿ, ಹುರುಳಿಬೀರನಹಳ್ಳಿ, ಹೊನ್ನಳ್ಳಿ ಹಾಗೂ ಉಪ್ಪಾರನಹಳ್ಳಿ ಎಂಬ ನಾಲ್ಕು ಗ್ರಾಮಗಳನ್ನು ಸಾಂಬಶಿವ ವೃತ್ತಿಯಾಗಿ ಶ್ರೀರಂಗಪಟ್ಟಣದ ಅಮ್ಮಣಭಟ್ಟನ ಪುತ್ರ ಕವಿ ವೆಂಕಟ ಎಂಬುವನಿಗೆ ದಳವಾಯಿಕ್ಷತ್ರಿಯ ವಂಶದ ಕಳಲೆ ನಂಜರಾಜ ಒಡೆಯನು ದತ್ತಿ ನೀಡಿರುವುದು. ದತ್ತಿ ನೀಡಿರುವ ಗ್ರಾಮಗಳು ಪೊಸೂರು ಸೀಮೆಗೆ ಸೇರಿದ ಗುಮ್ಮಳಾಪುರ ಹೋಬಳಿಗೆ ಸೇರಿದವೆಂದು ತಿಳಿಯುತ್ತದೆ. (ದೇವರಾಜಮ್ಮನವರ ಪುಣ್ಯದಿನದಂದು ಚೂಡಪುರವನ್ನು) ಸಾಂಬಶಿವಾಯವಾಗಿ ಭೂದಾನ ನೀಡಿದ ವಿವರ.

೮೭

೩೦. ಚಿಕ್ಕಮದಗೊಂಡಹಳ್ಳಿ, ಬಸವಣ್ಣ ದೇವಾಲಯದ ಮುಂದಿರುವ ಕಂಬದಲ್ಲಿ

ಆಕರ : *ARIE,* 1971-72 B 191 **ಕಾಲ** : ಕ್ರಿ.ಶ. ೧೭೭೯?

ಶ್ರೀ ಗಿರಿಸೆಟ್ಟಿಯ ಮಗ ಚಿಕ್ಕಣಸೆಟ್ಟಿಯಿಂದ ಕಂಬವನ್ನು ಸ್ಥಾಪಿಸಿದ ವಿವರ.

೮೮

೩೧. ಕೊಡಿಯಾಲ, ಬಸವಣ್ಣನ ದೇವಾಲಯದ ಮುಂದೆ ಬಿದ್ದಿರುವ ಚಪ್ಪಡಿಯ ಮೇಲೆ

ಆಕರ : *ARIE,* 1970-71, B 506 **ಕಾಲ** : ಕ್ರಿ.ಶ.ಸು. ೧೮-೧೯ನೇ ಶತಮಾನ.

ಬಹಳವಾಗಿ ಹಾಳಾಗಿದೆ ಮತ್ತು ಸವೆದಿದೆ. ಕೆಲವು ಅಳತೆ ಪ್ರಮಾಣಗಳ ಉಲ್ಲೇಖ (ವಿವರಗಳು ನಷ್ಟವಾಗಿವೆ).

೮೯

೩೨. ತಳಿ, ಕೆರೆಯ ಕಟ್ಟೆಯ ಮೇಲೆ ಮುರಿದು ಬಿದ್ದಿರುವ ಕಲ್ಲಿನ ಮೇಲೆ

ರಾಜಮನೆತನ : ಬ್ರಿಟಿಷ್ **ರಾಜ** : ---

ಆಕರ : *ARIE,* 1955-56, B 311 **ಕಾಲ** : ಕ್ರಿ.ಶ. ೧೭೯೯

ಕಲೆಕ್ಟರ್ ಹಾಮಿಲ್ಟನ್‌ನನ್ನು ಪ್ರಸ್ತಾಪಿಸುವ ಈ ಶಾಸನ ಸಿದ್ಧಾರ್ಥಿ, ಚೈತ್ರ, ಬ.೩೦ ಶನಿವಾರದಂದು ಮಧ್ಯಾಹ್ನದಲ್ಲಿ ಶ್ರೀರಂಗಪಟ್ಟಣವು ಕುಂಪಣಿ (East India Company)ಯವರ ವಶವಾದ ವಿವರ.

೯೦

೩೩. ಮುತ್ತಗಾನಹಳ್ಳಿ, ಪ್ರಾಯಃ ಬಂಡಿಯ ಚಕ್ರದ ಮೇಲೆ ಕೊರೆದಿರುವ ಶಾಸನ

ರಾಜಮನೆತನ : --- **ರಾಜ** : ---

ಆಕರ : ಇತಿಹಾಸ ದರ್ಶನ, ಸಂ.೧೧ (೧೯೯೬) ಪು. ೧೧೧ **ಕಾಲ** : ಕ್ರಿ.ಶ. ೧೯೦೩

ಸನ್ ೧೯೦೩ನೆಯ ಇಸವಿ ಡಿಸೆಂಬರ್ ತಾರೀಖು ೪, ಸಾಬರು ಮಾಡಿದ ಬಂಡಿಗಳು ಹಾಗೂ ಶಕ ವರ್ಷ ೧೮೨೫ರ ಉಲ್ಲೇಖ ಮತ್ತು ಶಿಲ್ಪಿರಾಮಾಚಾರಿಯ ಪ್ರಸ್ತಾಪವಿರುವ ತ್ರುಟಿತ ಶಾಸನ.

೯೧

೩೪. ಗುಮ್ಮಳಾಪುರ, ಮಾರಮ್ಮನ ಗುಡಿ ಸಮೀಪದಲ್ಲಿರುವ ಕಲ್ಲು

ಆಕರ : ವೇ.ಬು. ಸೋಮಶೇಖರ್., ಸ್ಟಾಂಗ್ ಇಂಡಿಯಾ, ಪಾಕ್ಷಿಕ, ಆಗಸ್ಟ್ ೧೬–೩೧, ೧೯೮೨

ಕಾಲ : ಕ್ರಿ.ಶ.ಸು. ೧೯೧೦

ಸನ್ ೧೯೧೦ರಲ್ಲಿ ಹೊನ್ನಗಿರಿ ಹನುಮಂತಂಣನ ಸೊಸೆ ಮಾದಮ್ಮ ಮತ್ತು ಮಗ ಹನುಮಂತ ಕುದುರೆ ಮೇಲಿಂದ ಬಿದ್ದು ಮೃತಪಟ್ಟ ವಿವರ.

ಉತ್ತಂಗರೈ ತಾಲೂಕು

೯೨

೧. ಮುತ್ತನೂರು, ವೇಡಿಯಲ್ಲಿನ ದೇವಾಲಯದಲ್ಲಿ ನೆಟ್ಟ ಕಲ್ಲು

ರಾಜಮನೆತನ : ಮಹಾಬಲಿ? **ರಾಜ** : ಬಾಣಯ್ಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೧ **ಕಾಲ** : ಕ್ರಿ.ಶ.ಸು. ೯ನೇ ಶತಮಾನ

ಬಾಣಯ್ಯ ರಾಜ್ಯವಾಳುತ್ತಿರುವಾಗ ನಿಜರಾಮಯ್ಯನ ಅಳಿಯ ನಿಂ(ಗ)ಯ ತುರುಗಾಳೆಗದಲ್ಲಿ ಮಡಿದ, ವಿವರ ಅಸ್ಪಷ್ಟ..

೯೩

೨. ಕುಂದಪಲ್ಲಿ ಊರಿನ ಚೋಳಕ್ಕೋಳಿಯ ನಡುವೆ ಇರುವ ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ಬೀರನೊಳಿಪಯ್ಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೩೮ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಪಂಡೆಗ ಎಂಬ ವೀರನು ಹುಲಿಯನ್ನು ಕೊಂದು ಮಡಿದ ವಿವರವಿದೆ.

೯೪

೩. ಅದೇ ಊರಿನ ಕೆಳಕೋಟೆಯ ಬಳಿ

ರಾಜಮನೆತನ : ನೊಳಂಬ/ಗಂಗ **ರಾಜ** : ಮಹೇಂದ್ರ/ರಾಚಮಲ್ಲ II

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ. ೩೯ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಮಹೇಂದ್ರ ಆಳ್ವಿಕೆಯಲ್ಲಿ ಇಮ್ಮಡಿ ರಾಚಮಲ್ಲನು ನಾಡಾಳುತ್ತಿರುವಾಗ ವೀರನೊರ್ವನು ತುರುಗಾಳೆಗದಲ್ಲಿ ಹೋರಾಡಿ ಮಡಿದ ವಿವರ.

೯೫

೪. ಕುನ್ನತ್ತೂರು ಊರಿನ ದೇವಾಲಯದ ಪಕ್ಕದ ಪಾಳುಭೂಮಿಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಪ್ರೌಢದೇವರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೪೦ **ಕಾಲ** : ಕ್ರಿ.ಶ. ೧-೯-೧೪೪೯

ನಾಗಂಣ, ದೇವಂಣ, ಸಿವಂಣ, ತಿಂಮಂಣ, ವಿರುಪಂಣ, ಚಂದಪ, ರಾಮಕೃಷ್ಣಭಟ್ಟ, ಕೋನೇನಿಭಟ್ಟ, ವಿರೂಪಾಕ್ಷಭಟ್ಟ, ವಿಜೆಯಂಣ, ತಿರುಮಲಿನಾಥಭಟ್ಟರನ್ನೊಳಗೊಂಡ ಮಹಾಜನಗಳಿಗೆ ಲಯಕೊಯಂತೂರ ಗ್ರಾಮವನ್ನು ಪ್ರಾಯಶಃ ಪುರಧರ್ಮವಾಗಿ ಸರ್ವಮಾನ್ಯವಾಗಿ ದತ್ತಿಯನ್ನು ಉಲ್ಲೇಖಿಸಿರುವಂತಿದೆ. ಶಾಸನದ ಕೊನೆ ಭಾಗ ನಶಿಸಿದೆ.

೯೬

೫. ಕಲ್ಲಾವಿ, ರೈಲ್ವೆಹಾದಿಯ ೧೫೭ನೇ ಮೈಲಿಕಲ್ಲಿನ ಸಮೀಪದ ಬಂಡೆ ಮೇಲೆ

ಆಕರ : *TLIMP*, 204-213 / 1910 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಪರವತಮುಡೆಯನೆಂಬುವನು ಲಿಂಗಾಯತ ಮಠವನ್ನು ಕಟ್ಟಿಸಿದ, ತೋಟದ ಭೂಮಿಯ ಲಿಂಗಮುದ್ರೆ ಕಲ್ಲು – ಅದೆಂದು ತಿಳಿಯುತ್ತದೆ.

ಧರ್ಮಪುರಿ ಜಿಲ್ಲೆ

ಧರ್ಮಪುರಿ ತಾಲೂಕು

೯೭

೧. ಪಾಲವಾಡಿ, ಪೆರುಮಾಳ್ ದೇವಾಲಯದ ಸಮೀಪದ ಹೊಲದಲ್ಲಿರುವ ವೀರಗಲ್ಲುಗಳಲ್ಲಿ ಒಂದು

ಆಕರ : *ARIE*, 1977-78, B 243 **ಕಾಲ** : ಕ್ರಿ.ಶ.ಸು. ೮-೯ನೇ ಶತಮಾನ.

ಬಹಳವಾಗಿ ಹಾಳಾಗಿದೆ. ಆಶಯ ಅಸ್ಪಷ್ಟ.

೯೮

೨. ಅಣ್ಣಸಂದ್ರಂ ಗ್ರಾಮದ ಪೆರುಮಾಳ್ ದೇವರಗುಡಿಯ ಮುಂದೆ ನೆಟ್ಟಿರುವ ವೀರಗಲ್ಲು

ರಾಜಮನೆತನ : --- **ರಾಜ** : ಬಿಯಳಚೋರ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೪ **ಕಾಲ** : ಕ್ರಿ.ಶ.ಸು. ೯ನೇ ಶತಮಾನ

ಆಚ ಎಂಬ ವೀರನು ತುರುಗಾಳೆಗವೊಂದರಲ್ಲಿ ಹೋರಾಡಿ ತುರುಗಳನ್ನು ಮಗುಳ್ಚಿ ಮಡಿದ ವಿವರ. ಈತ ಜಡೆಯ್ಯನ ಮಗನೆಂದು ಉಕ್ತವಾಗಿದೆ.

೯೯

೩. ಕಲ್ಲಪ್ಪಂಪಾಡಿ ಊರಿನ ಸಮೀಪದ ಹೊಲದಲ್ಲಿರುವ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೯ **ಕಾಲ** : ಕ್ರಿ.ಶ.ಸು. ೯ನೇ ಶತಮಾನ

ಬಿಜಯನ ಮಗ ಮರಮ್ಮ ಎಂಬುವನು ಕಲ . ಪಾಡಿ ಗ್ರಾಂದ ಪುಯಲ್‌ನಲ್ಲಿ ಹೋರಾಡಿ ಮಡಿದ ವಿವರ.

೧೦೦

೪. ಚೆಕ್ಕೋಡಿ ಗ್ರಾಮದ ಚೆಲಿಯಪ್ಪನ್ ದೇವಾಲಯದಲ್ಲಿರುವ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೮೪ **ಕಾಲ** : ಕ್ರಿ.ಶ.ಸು. ೯ನೇ ಶತಮಾನ

ಅಸ್ಪಷ್ಟ, ಕಗುತ್ತಪೊಳ್ಳಿ ಎಂಬುವನು ಹೋರಾಟವೊಂದರಲ್ಲಿ ಮಡಿದ ವಿವರ.

೧೦೧

೫. ಧರ್ಮಪುರಿ, ಕೋಟೆಯಲ್ಲಿರುವ ಮಾರಿಯಮ್ಮನ ದೇವಾಲಯದಲ್ಲಿ ಒಡೆದು ಬಿದ್ದಿರುವ ಕಲ್ಲಿನ ಕಂಬದ ಮೇಲೆ

ರಾಜಮನೆತನ : ನೊಳಂಬ **ರಾಜ** : ಮಹೇಂದ್ರ

ಆಕರ : *SII*, Vol. VII, No.580 **ಕಾಲ** : ಕ್ರಿ.ಶ. ೮೭೮

ಮಾರಪ, ರಟ್ಟಪ, ಶಿವನಾಗ, ಸಾಮದೇವ, ಅಗರೆಯ, ಮಾರೆಯಸೆಟ್ಟಿ ಚಂದಿಯಣ್ಣ, ಜಕ್ಕೆಯ, ಕಾಮದೇವ, ನಾಗಿಯಣ್ಣ, ಬದ್ದೆರಸ... ಚರುವೆಯ ಮುಂತಾದ ವ್ಯಕ್ತಿಗಳ ಉಲ್ಲೇಖವಿದೆ. ವೀಸ, ಚಮರಿಯ ಮಳವೆ ಎಲೆಯ ಪೇರು ಮುಂತಾದ ಅಳತೆಪ್ರಮಾನಗಳ; ಮೆಣಸು, ಎಲೆ ಮುಂತಾದ ವಸ್ತುಗಳ ಮೇಲಿನ ತೆರಿಗೆಗಳನ್ನು ನಕರವರ್ಗದವರು ದೇವದಾನವಾಗಿ ದತ್ತಿಬಿಟ್ಟ ವಿವರ, ನೊಳಂಬ ಮಹೇಂದ್ರನು ಕೆರೆಯನ್ನು ಕಟ್ಟಿಸಿ ೫ ಖಂಡುಗ ಭೂಮಿಯನ್ನು ಧಾರಾಪೂರ್ವಕವಾಗಿ ದತ್ತಿಬಿಟ್ಟ ವಿವರ.

೧೦೨

೬. ಧರ್ಮಪುರಿ, ಮಲ್ಲಿಕಾರ್ಜುನ ದೇವಾಲಯದ ಮುಂದಿನ ಮಂಟಪದಲ್ಲಿರುವ ಕಂಬದ ನಾಲ್ಕು ಮುಖಗಳಲ್ಲಿ

ರಾಜಮನೆತನ : ನೊಳಂಬ **ರಾಜ** : ಮಹೇಂದ್ರ

ಆಕರ : *EI*, Vol. X. p.54-70 **ಕಾಲ** : ಕ್ರಿ.ಶ. ೮೯೨

ನಿಧಿಯಣ್ಣ ಮತ್ತು ಚಂಡಿಯಣ್ಣ ಎಂಬುವರು ರಾಜನಿಂದ ಮೂಲಪಳ್ಳಿ ಗ್ರಾಮವನ್ನು ಪಡೆದು ಮೂಲಸಂಘದ ಸೇನಾನ್ವಯದ ಪೊಗರಿಯಗಣದ ವಿನಯಸೇನ ಸಿದ್ಧಾಂತ ಭಟಾರರ ಶಿಷ್ಯ ಕನಕಸೇನಸಿದ್ಧಾಂತ ಭಟಾರರಿಗೆ ಬಸದಿಯ ಜೀರ್ಣೋದ್ಧಾರಕ್ಕೆ ನಾಲ್ಕು ಸಮಯಗಳ, ಅಧಿಕಾರಿಗಳ ಸಾಕ್ಷಿಗಳ ಸಮ್ಮುಖದಲ್ಲಿ ದತ್ತಿ ಬಿಡಲಾಗಿದೆ.

೧೦೩

೭. ಮೊದಕೇರಿ ಗ್ರಾಮಕ್ಕೆ ಸೇರಿದ ಶಾಸನ

ರಾಜಮನೆತನ : ನೊಳಂಬ **ರಾಜ** : ಅಯ್ಯಪದೇವ

ಆಕರ : ಇತಿಹಾಸದರ್ಶನ, ಸಂ.೧೧, ಪು.೧೧೦. **ಕಾಲ:** ಕ್ರಿ.ಶ.ಸು. ೯ನೇ ಶತಮಾನ.

ತ್ರುಟಿತ. ಗಂಗವಂಶದ ರಾಚಮಲ್ಲನ ಮಗಳ (ಗಾಮಬ್ಬೆ – ನೊಳಂಬ ಮಹೇಂದ್ರನ ಹೆಂಡತಿ?) ಮಗ ಅಯ್ಯಪದೇವನು ನಾಲ್ಕು ಸಮಯಗಳು, ನಕರ ಮುನ್ನಾಳುಗಳು ಮುಂತಾದವರ ಸಾಕ್ಷಿಯಲ್ಲಿ ಭೂಮಿಯನ್ನು (ಕ್ರಯಕ್ಕೆ?) ಪಡೆದು ಕಲ್ಲನಿರಿಸಿ ದತ್ತಿ ನೀಡಿರುವ ಉಲ್ಲೇಖ.

೧೦೪

೮. ಅದೇ ದೇವಾಲಯದ ಕಂಬವೊಂದರಲ್ಲಿ

ರಾಜಮನೆತನ : ನೊಳಂಬ **ರಾಜ** : ಅಯ್ಯಪದೇವ

ಆಕರ : *EI,* Vol. X. p.65-67 **ಕಾಲ** : ಕ್ರಿ.ಶ.ಸು. ೯೨೦

ತ್ರುಟಿತ. ನನ್ನಿಗಾಶ್ರಯನಾದ ಶ್ರೀಮದ್ ಅಯ್ಯಪದೇವನ ಆಳಿಕೆಯ ಕಾಲದಲ್ಲಿ ಭೂಮಿಯೊಂದನ್ನು ಪಡೆದು ನಾಲ್ಕು ಸಮಯಿಗಳು ನಕರ ಮುನ್ನಾಳುಗಳ ಸಾಕ್ಷಿಯಲ್ಲಿ ದತ್ತಿಯೊಂದನ್ನು ನೀಡಿದ ಅಸ್ಪಷ್ಟ ವಿವರ.

೧೦೫

೯. ಅದೇ ದೇವಾಲಯದ ಮುಂದಿರುವ ಮಂಟಪದಲ್ಲಿರುವ ಕಂಬದಲ್ಲಿ

ರಾಜಮನೆತನ : ನೊಳಂಬ **ರಾಜ** : ಅಯ್ಯಪದೇವ

ಆಕರ : *SII,* Vol. VII. No.530 **ಕಾಲ** : ಕ್ರಿ.ಶ. ೯೨೦

ವೀರಮಹೇಂದ್ರನ ಮಗ ಅಯ್ಯಪದೇವನ ಆಳಿಕೆಯಲ್ಲಿ ಬಸದಿಯೊಂದಕ್ಕೆ ಬೂದುಗೂರು ಎಂಬ ಗ್ರಾಮವನ್ನು ಲೋಕಯ್ಯ ಎಂಬ ವ್ಯಕ್ತಿ ದತ್ತಿ ಬಿಟ್ಟ ವಿವರ. ನಿಧಿಯಣ್ಣ ಉಲ್ಲೇಖಿತನಾಗಿದ್ದಾನೆ.

೧೦೬

೧೦. ಧರ್ಮಪುರಿ, ತಾಲೂಕು ಕಛೇರಿಯ ಆವರಣದಲ್ಲಿ ಬಿದ್ದಿರುವ ಕಂಬದ ಮೇಲೆ

ರಾಜಮನೆತನ : ನೊಳಂಬ **ರಾಜ** : ಇರುಳಚೋರ

ಆಕರ : *SII,* IX, No.23 **ಕಾಲ** : ಕ್ರಿ.ಶ. ೯೨೯

ಅಪೂರ್ಣ. ಗಂಗ ರಾಚಮಲ್ಲನ ಮಗಳು ಜಾಯಬ್ಬರಸಿ, ನೊಳಂಬ ವೀರಮಹೇಂದ್ರ, ಗಂಗರ ಮಗಳು ಗಾಮಬ್ಬೆ, ನೊಳಂಬ ಅಯ್ಯಪದೇವ, ಗಂಗರ ಪೊಲ್ಲಬ್ಬರಸಿ, ಚಳುಕಿಯರ ಮಗಳು

ಅತ್ತಿಯಬ್ಬರಸಿ, ನೊಳಂಬ ಇರುಳಚೋರ ಇವರುಗಳು ಪ್ರಸ್ತಾಪ ಹಾಗೂ ತಗಡೂರ ಪಡುವಣ ದೇಹಾರು ಮಾಂಕಬ್ಬೆ ಕಂತಿಯ ಉಲ್ಲೇಖ.

೧೦೭

೧೧. ಧರ್ಮಪುರಿ, ವಿರೂಪಾಕ್ಷಪುರಂನಲ್ಲಿ ಬಿದ್ದಿರುವ ಗ್ರಾನೈಟ್ ಕಂಬದ ಮೇಲೆ

ರಾಜಮನೆತನ : ನೊಳಂಬ — **ರಾಜ** : ಇರುಳಚೋರ

ಆಕರ : *TLIMP,* 82-192/1910 — **ಕಾಲ** : ಕ್ರಿ.ಶ. ೯೩೧

ತ್ರುಟಿತ. ಮೇಲಿನ ಶಾಸನದಂತೆ ವಿವರವಿದ್ದು, ದತ್ತಿ ಭಾಗ ಸವೆದಿದ್ದು, ಆಶಯ ಅಸ್ಪಷ್ಟ.

೧೦೮

೧೨. ಕೊಲಗಟ್ಟೂರು, ಈಶ್ವರಯ್ಯನ ಮನೆಯಲ್ಲಿ ಬಿದ್ದಿರುವ ಕಂಬದ ಮೇಲೆ

ರಾಜಮನೆತನ : ನೊಳಂಬ — **ರಾಜ** : ಇರುಳಚೋರ

ಆಕರ : *SII,* IX, No.38 — **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಶಾಸನವು ನೊಳಂಬ ವಂಶದ ಪ್ರತಿಯೊಬ್ಬ ರಾಜನ ಸಾಧನೆಗಳ ವಿವರಗಳನ್ನು ವರ್ಣಿಸಿ, ಪುರಮಲೆನಾಡು ಮತ್ತು ಪಿರಿಬೆಳ್ಳೊಲೆಗಳ ಎಲ್ಲೆಗಳನ್ನು ಪ್ರಸ್ತಾಪಿಸುತ್ತದೆ.

೧೦೯

೧೩. ಧರ್ಮಪುರಿ, ಕೆರೆಯ ಕಟ್ಟೆಯ ಮೇಲೆ ನಿಲ್ಲಿಸಿರುವ ಚಪ್ಪಡಿಯ ಮೇಲೆ

ಆಕರ : *SII,* Vol. No.535 — **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

'ವಿದ್ಧೆರಾಶಿ' ಎಂಬ ಲಾಕುಳಾಗಮಿಕ ಶೈವಪಂಥದ ಸ್ಥಾನಿಕನ ವರ್ಣನೆ ಹಾಗೂ ಕಲಿಚೋರೇಶ್ವರ, ಪಲ್ಲವೇಶ್ವರ, ಮಹಾಭೋಗೇಶ್ವರ, ಉತ್ತುಂಗ ನಿರ್ಮಲ ನನ್ನೇಶ್ವರ, ಕಾಂಚಿ ಭುಜಂಗೇಶ್ವರ ದೇವಾಲಯಗಳ ಪ್ರಸ್ತಾಪ, ನಂದನವನ ಪ್ರಾಕಾರಗಳಿಂದ ಮತ್ತು ವಿದ್ಧೆರಾಶೀಂದ್ರರಿಂದ ತಗಡೂರು ಪಡಿಚಂದಮಾಯ್ತೆಂದು ಹೇಳಲಾಗಿದೆ.

೧೧೦

೧೪. ಧರ್ಮಪುರಿ, ಮಲ್ಲಿಕಾರ್ಜುನ ದೇವಾಲಯದ ಉತ್ತರಕ್ಕೆ ಒಡೆದ ಕಂಬದಲ್ಲಿ

ರಾಜಮನೆತನ : --- — **ರಾಜ** : ---

ಆಕರ : *SII,* Vol.VII, No.532 — **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಭೈರವಶಕ್ತಿ ಭಟಾರರ ಕಾಲಂಕಳ್ಚಿ ಉದಕಪೂರ್ವಕವಾಗಿ ದತ್ತಿ ನೀಡಿರುವ ಉಲ್ಲೇಖ (ವಿವರಗಳು ಅಸ್ಪಷ್ಟ).

೧೧೧

೧೫. ವೇಲನ್‌ಪಟ್ಟಿ (ವೆಲ್ಲಾಳಪಟ್ಟಿ ?) ಗ್ರಾಮದ ಗದ್ದೆ ಬಯಲಿನಲ್ಲಿರುವ ದೇವಾಲಯದಲ್ಲಿನ ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೯೭ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಮಾಂಡಲನೆಂಬ ವೀರ ತುರುಗೋಳ್‌ನಲ್ಲಿ ಮಡಿದ ವಿವರ.

೧೧೨

೧೬. ಚೆಕ್ಕೋಡಿ ಗ್ರಾಮದ ಚೆಲಿಯಪ್ಪನ ದೇವಾಲಯದಲ್ಲಿರುವ ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೮೭ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಅಪೂರ್ಣ. ಅಸ್ಪಷ್ಟ.

೧೧೩

೧೭. ಚೆಕ್ಕೋಡಿ ಗ್ರಾಮದ ಚೆಲಿಯಪ್ಪನ್ ದೇವಾಲಯದಲ್ಲಿರುವ ಇನ್ನೊಂದು ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೮೬ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಕಟ್ಟಿವುರ ಮಾದಯ್ಯ ಪ್ರಾಯಶಃ ಬಿಳಿನೂರ ಊರಳಿವಿಗೆ ಹೋರಾಡಿ ಮಡಿದಂತಿದೆ.

೧೧೪

೧೮. ಅದೇ ಸ್ಥಳದಲ್ಲಿ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪ ಶಾಸನ ಸಂ.೮೫ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಬಿಲ್ಲಮುದ್ದಯ್ಯ ಎಂಬುವನ ಸಾವನ್ನು ದಾಖಲಿಸುತ್ತದೆ.

೧೧೫

೧೯. ಒಟ್ಟುಪಾಳ್ಯಂ ಗ್ರಾಮದ ರಸ್ತೆಬದಿಯಲ್ಲಿ ನಿಲ್ಲಿಸಿರುವ ವೀರಗಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೭ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ತ್ರುಟಿತ. ವಿವರ ಅಸ್ಪಷ್ಟ.

೧೧೬

೨೦. ಕೂತ್ತಪಾಡಿ, ಗ್ರಾಮದ ಒಂದು ಕಲ್ಲುಚಪ್ಪಡಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಸಾಳುವ ವೀರ ಭುಜಬಲರಾಯ

ಆಕರ : *SII*, Vol. VII, No.15 **ಕಾಲ** : ಕ್ರಿ.ಶ. ೩೧-೮-೧೫೧೯.

ತಿಪ್ಪರಸಯ್ಯನ ಕಾರ್ಯಕ್ಕೆ ಕರ್ತರಾದ ಸಿರಿಯಪ್ಪಯ್ಯನ ಪ್ರಸ್ತಾಪ, ಮುಳುವಾಗಿಲು ಚಾವಡಿಯ ಡೆಂಕಣಿಕೋಟೆಯ ನಾಯಕತನಕ್ಕೆ ಸಲ್ಲುವ ಮಂಜಿನಾಡ ಪೆಣ್ಣಾಗರದ ಸೀಮೆಯ ಕೂತಪಾಡಿ ಗ್ರಾಮವನ್ನು ಏಕಭೋಗ್ಯ ಸರ್ವಮಾನ್ಯವಾಗಿ ತಿಮ್ಮರಸಯ್ಯನಿಗೆ ನೀಡಿರುವ ಗ್ರಾಮದಾನ.

೧೧೭

೨೧. ಅಧಮಾನಕೋಟೆ, ಅಂಕಮ್ಮನ ದೇವಾಲಯದ ಮುಂದೆ ಇರುವ ಚಪ್ಪಡಿಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII*, Vol.IX.No.532 **ಕಾಲ** : ಕ್ರಿ.ಶ. ೧೫೩೦

ಬಸಪ್ಪನಾಯಕನ ಮಗ ಮದ್ದೆಬೊಮ್ಮಯ್ಯಪ್ಪ, ಅವನ ಮಗ ಕಾಮಿಯಪ್ಪ ನಾಯಕರು ಕಟ್ಟಳೆಯನ್ನು ಮಾಡಿ ಆಳು ಮತ್ತು ಅಡಿಗಾಸು ಎಂಬ ಸುಂಕಗಳನ್ನು ಭೈರವದೇವರ ದೀಪಾರಾಧನೆಗೆ ದತ್ತಿ ಬಿಟ್ಟ ವಿವರ ಹಾಗೂ ಶ್ರೀ ಭೈರವದೇವರ ಸನ್ನಿಧಿಯ ಸಂತೆ ಖಿಲವಾಗಿರಲು ಅದನ್ನು ಪ್ರತಿಹುಟ್ಟಿಸಿದ ವಿವರ.

೧೧೮

೨೨. ಕಾರಿಮಂಗಲ ಗ್ರಾಮದ ಅರುಣೇಶ್ವರ ದೇವಾಲಯದ ಗರ್ಭಗೃಹದ ಅಧಿಷ್ಠಾನದ ಪಟ್ಟಿಯ ಮೇಲೆ

ರಾಜಮನೆತನ : ವಿಜಯನಗರ ? **ರಾಜ** : ದೇವರಾಯ ?

ಆಕರ : ಕ.ವಿ.ಶಾ.ಸಂ. ೪, ಶಾಸನ ಸರ್ಂ೯ **ಕಾಲ** : ಕ್ರಿ.ಶ. ೧೪೯೮ ?

ಅಸ್ಪಷ್ಟ. ವಣ್ಣನಾಥದೇವರ ಗ್ರಾಮ ಎಂಬ ಅಸ್ಪಷ್ಟ ಉಲ್ಲೇಖ ಕಂಡುಬರುತ್ತದೆ.

೧೧೯

೨೩. ಕಾರಿಮಂಗಲಂ, ವೀರಭದ್ರಸ್ವಾಮಿ ದೇವಾಲಯದ ಮುಂದೆ ಇರುವ ಬಂಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಸದಾಶಿವರಾಯ

ಆಕರ : *SII*, Vol.VII.No.5 **ಕಾಲ** : ಕ್ರಿ.ಶ. ೧೫೫೮

ಮಹಾಮಂಡಳೇಶ್ವರ ಅಳಿಯ ರಾಮರಾಜಯ್ಯನವರು ಕಾರಿಮಂಗಲದ ಸೀಮೆಯ ಪೆಂಣಾಗರದ ಒಳಗಾದ ನಾಯಿಂದರಿಗೆ ದತ್ತಿ ಬಿಟ್ಟ ವಿವರ. ಕಾಣೋಜ, ಕೊಂಡೋಜ ಮುಂತಾದವರ ಉಲ್ಲೇಖ.

೧೨೦

೨೪. ಹಳೇಪುರ (ಪೆನ್ನಾಗರದ ಸಮೀಪ) ನರಸಿಂಹ ದೇವಾಲಯದ ಧ್ವಜಸ್ತಂಭದ ಸಮೀಪದಲ್ಲಿ ನಿಲ್ಲಿಸಿರುವ ಕಲ್ಲಿನ ಚಪ್ಪಡಿಯ ಮೇಲೆ

ರಾಜಮನೆತನ : --- **ರಾಜ** : --

ಆಕರ : *SII*, Vol. VII, No. 14 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಹಳೆಯಪುರದ ಶ್ರೀನಾರಾಸಿಂಹದೇವರಿಗೆ ವಿರುಪನಾಯ್ಕರ ಮಕ್ಕಳು ಪಾಲೆಯ ನಾಯಕರು ವಿಶೇಷ ನೈವೇದ್ಯ ದೀಪ ಮಾಡಿದಂಥ ವಿವರ.

೧೨೧

೨೫. ಕಡಗತ್ತೂರು ಗ್ರಾಮದ ರಸ್ತೆ ಬದಿಗೆ ಬಿದ್ದಿರುವ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೮ **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ

'ನಮೋ ನಾರಾಯ(ಣಾ)ಯ' ಎಂಬ ಯಂತ್ರದ ಕಲ್ಲನ್ನು ಕೊಂನರಸ್ಯೆ ಎಂಬುವನು ನಿಲ್ಲಿಸಿದೆ. ಅರಕೆರೆಯ ಸಂಗಯ್ಯ ಎಂಬುವನು ಉಲ್ಲೇಖಗೊಂಡಿದ್ದಾನೆ.

೧೨೨

೨೬. ಎರ್ರಕೊಳನೂರು ಗ್ರಾಮದಲ್ಲಿ ಊಮಯ್ಯನ ಹೊಲದಲ್ಲಿರುವ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೭೬ **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ

ಅಗ್ರಹಾರ ಪುರವರ್ಗ್ಗವನ್ನು ಪ್ರಸ್ತಾಪಿಸುವ ಶಾಸನ ತ್ರುಟಿತವಿದ್ದು ಶಾಪಾಶಯ ಭಾಗ ಉಳಿದಿದೆ.

೧೨೩

೨೭. ಧರ್ಮಪುರಿ, ವಿರೂಪಾಕ್ಷಪುರದ ಬೀದಿಯಲ್ಲಿರುವ ಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಶ್ರೀರಂಗರಾಯ

ಆಕರ : *TLIMP*, 81A **ಕಾಲ** : ಕ್ರಿ.ಶ. ೧೬೧೯

ಸ್ಥಳೀಯ ಪಾಳೆಯಗಾರನು ಗ್ರಾಮವೊಂದನ್ನು ದತ್ತಿಬಿಟ್ಟ ದಾಖಲೆ, ಶ್ರೀರಂಗರಾಯ ಪೆನುಗೊಂಡೆಯಿಂದ ಆಳುತ್ತಿದ್ದ ವಿವರವಿದೆ.

೧೨೪

೨೮. ಪಾಪ್ಪಾರಪಟ್ಟಿ, ವರದರಾಜ ಪೆರುಮಾಳ್ ದೇವಾಲಯದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಜಮನೆತನ : ಮೈಸೂರು — **ರಾಜ** : ಕೃಷ್ಣರಾಜ ಒಡೆಯ II

ಆಕರ : *SII*, Vol. IX, *No.*704 — **ಕಾಲ** : ಕ್ರಿ.ಶ. ೧೭೧೭

ರಾಜ ಶ್ರೀರಂಗಪಟ್ಟಣದಿಂದ ಆಳುತ್ತಿದ್ದಾಗ, ಕಂಚಿಯ ವರದರಾಜಸ್ವಾಮಿ ಸನ್ನಿಧಿಯಲ್ಲಿ ಅಳಘಿಯಮನವಾಳ ರಾಮಾನುಜ ಜೀಯರವರ ಕೋರಿಕೆಯ ಮೇರೆಗೆ ಶಾಶ್ವತವಾಗಿ ಪೂಜಾಕೈಂಕರ್ಯ ನಡೆಸಲು ವೀರಭದ್ರದುರ್ಗದ ಸೀಮೆಯ ಕುಂನೆಕೊಳದ ಹೋಬಳಿಯ ಪಾಪರಪಟ್ಟಿ ಮುಂತಾದ ೧೨ ಗ್ರಾಮಗಳನ್ನೂ ಒಂದು ಕೆರೆಯನ್ನು ದತ್ತಿಬಿಟ್ಟ ವಿವರ.

೧೨೫

೨೯. ಇಂದೂರು, ಪ್ರಸನ್ನ ವೆಂಕಟೇಶ ಪೆರುಮಾಳ ದೇವಾಲಯದಲ್ಲಿರುವ ಶಾಸನ

ರಾಜಮನೆತನ : ವಿಜಯನಗರ — **ರಾಜ** : ಕೃಷ್ಣದೇವರಾಯ

ಆಕರ : *TLIMP*, *p.*87-13/1900 — **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಬಹಳವಾಗಿ ಹಾಳಾಗಿದೆ.

ಹರೂರು ತಾಲೂಕು

೧೨೬

೧. ಪೊಮ್ಮುಡಿ ಗ್ರಾಮದ ಸಮೀಪದಲ್ಲಿರುವ ವೀರಗಲ್ಲು

ರಾಜಮನೆತನ : --- — **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೯ — **ಕಾಲ** : ಕ್ರಿ.ಶ.ಸು. ೮–೯ನೇ ಶತಮಾನ

ವಿವರ ಅಸ್ಪಷ್ಟ. ತುರುಗಾಳೆಗವೊಂದರಲ್ಲಿ ಮಾಚಯ್ಯನ ದಂಡಿನ ನಾಯಕನಾದ ಹೆಮ್ಮರಸ ಕೂಗಮ ಮತ್ತು ಮಾದ ಎಂಬುವರು ಮಡಿದ ದಾಖಲೆ ಇದ್ದಂತಿದೆ.

೧೨೭

೨. ಅದೇ ಗ್ರಾಮ ಮತ್ತು ಅದೇ ಸ್ಥಳದಲ್ಲಿನ ಇನ್ನೊಂದು ವೀರಗಲ್ಲು

ರಾಜಮನೆತನ : --- — **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೭ — **ಕಾಲ** : ಕ್ರಿ.ಶ.ಸು. ೯ನೇ ಶತಮಾನ

ಕಾಂಚಿವರ ಕೊದವೂರ ತಿಯುಗಾವುಂಡರ ವಲಯಮ್ಮನ ಮಗ ಚಿಣ್ಣಮ್ಮ ಎಂಬುವನು ಬಿಳಲದ ತುರುಗಾಳೆಗದಲ್ಲಿ ಹೋರಾಡಿ ಮಡಿದ.

೧೨೮

೩. ಅದೇ ಸ್ಥಳದಲ್ಲಿನ ಮತ್ತೊಂದು ವೀರಗಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೬ **ಕಾಲ** : ಕ್ರಿ.ಶ.ಸು. ೯-೧೦ನೇ ಶತಮಾನ

ಐಗ್ಗಲ ಇರುಗನ ಮಗ ಎಳುಗ ಮಂಡುಲದ ತುರುಗಾಳೆಗದಲ್ಲಿ ಹೋರಾಡಿ ಮಡಿದ.

೧೨೯

೪. ಅದೇ ಸ್ಥಳದಲ್ಲಿನ ಇನ್ನೊಂದು ವೀರಗಲ್ಲು –

ರಾಜಮನೆತನ : ನೊಳಂಬ **ರಾಜ** : ನೊಳಂಬಾಧಿರಾಜ ಜಗದೇಕಮಲ್ಲ ಬೆಳಚೋರದೇವನ ಮಗ ಸುಭತುಂಗದೇವ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೮ **ಕಾಲ** : ಕ್ರಿ.ಶ.ಸು. ೯-೧೦ನೇ ಶತಮಾನ

ಸರಸತ್ತಿ ಕರಕನ್ನದ ಪೊಚಯ್ಯನ ಮಗ ಮಾಚಯ್ಯ ಅರಸರ ತುರುವ ಕೊಂಡೊಯ್ಯುವಾಗ ಹೋರಾಡಿ ಮಡಿಯುತ್ತಾನೆ. ತಯಲವದ ಬಿಳಲಮ ಎಂಬುವನು ಕಲ್ಲು ನೆಟ್ಟು ಕೊಟ್ಟ.

೧೩೦

೫. ಧಲಪ್ಪಳ್ಳಂ ಗ್ರಾಮದ ವಣ್‌ವುಕ್ಕರಾಯನ ಗುಡಿಸಲಿನ ಪಕ್ಕ

ರಾಜಮನೆತನ : ನೊಳಂಬ **ರಾಜ** : ಅಣ್ಣಿಗ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೪ **ಕಾಲ** : ಕ್ರಿ.ಶ.೯೬೫

ಪಲ್ಲವಕುಲದ ಬಿಯಳಪಾರನ ಆಳ್ವಿಕೆಯಲ್ಲಿ ಆತನ ಅಣ್ಣ ಕಲಿಚೋರನ ಮಗ ಬಿಯಳಚೋರ ಎಂಬುವನಿಗೆ ಬಿಳಿಯನೂರನ್ನು ಅಚಂದ್ರಾರ್ಕವಾಗಿ ಕಲ್ನಾಟ್ಟು ದತ್ತಿ ಬಿಟ್ಟ ವಿವರ. ಬಿಳಿಯನೂರು > ಧವಳಪಾಡು > ಧವಳಪಳ್ಳಂ > ಧಲಪ್ಪಳ್ಳಂ?

೧೩೧

೬. ನವಿಲೈ, (ಚಿನ್ನಗೌವುಂಟನಪಟ್ಟಿ) ಗ್ರಾಮದ ಹೊಲವೊಂದರಲ್ಲಿರುವ ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ವೀರನೊಳಂಬ

ಆಕರ : *ARIE*, 1968-69, B 175; ಕ.ವಿ.ಶಾ.ಸಂ. ೪, ಶಾಸನ ಸಂ.೧೦೨ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ಪುಳಿಯಣ್ಣ ನವಿಲೂರನ್ನು ಆಳುತ್ತಿರುವಾಗ ಆತನ ಮಗ ಪ್ರಿತುವ ಎಂಬುವನು ಪೆಣ್ಣುರಾಉಡೆಯನುಳ್ಳುವಲ್ಲಿ ಕಾದಿ ಕೊಂದು ಸತ್ತ ವಿವರ.

೧೩೨

೭. ನವಿಲೈ, ವಿಕ್ಕಲೇರಿ ಎಂಬ ಕೊಳದ ತಳದ ಕಟ್ಟೆಯ ಮೇಲೆ ನಿಲ್ಲಿಸಿದ ಕಲ್ಲು

ರಾಜಮನೆತನ : ನೊಳಂಬ **ರಾಜ** : ವೀರನೊಳಂಬ

ಆಕರ : *ARIE*, 1967-68, B 242 **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ.

ತಗಡೂರನ್ನು ಉಲ್ಲೇಖಿಸುವ ಈ ವೀರಗಲ್ಲು ಶಾಸನದಲ್ಲಿ ಪುನ್ನಾಗ ಎಂಬುವನು ಕಳ್ಳರೊಡನೆ ಹೋರಾಡಿ ಮಡಿದಾಗ ಅವನ ಅಳಿಯನು ಸ್ಮಾರಕ ಶಿಲೆಯನ್ನು ನಿಲ್ಲಿಸುತ್ತಾನೆ.

೧೩೩

೮. ಸಿಂಗೇರಿಪಟ್ಟಿ, ಸಮೀಪ ದಕ್ಷಿಣ ಪಿನಾಕಿನಿ ನದಿಯ ದಡದಲ್ಲಿರುವ ವೇಡಿಯಪ್ಪನ್ ದೇವಾಲಯದಲ್ಲಿರುವ ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ಬೀರನೊಳಂಬ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೧ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ತ್ರುಟಿತ. ಪೆರ್ನಿ ಕುನ್ದಾಯುಚಲನ್ ಅನ್ನು ಗೆದ್ದಾಗ ಕೆಲವು ವೀರರು ಮಡಿದದ್ದನ್ನು ದಾಖಲಿಸುವಂತಿದೆ.

೧೩೪

೯. ಸಲವಸ್ಸೈ ಗ್ರಾಮದ ರಸ್ತೆಯ ಬದಿಯಲ್ಲಿರುವ ವೀರಗಲ್ಲು

ರಾಜಮನೆತನ : ನೊಳಂಬ **ರಾಜ** : ಅಯ್ಯಪದೇವ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೧೦ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ತ್ರುಟಿತ: ಊರಳಿವಿನಲ್ಲಿ ಪುರಮಾ ಎಂಬ ವೀರ ಮಡಿದದ್ದನ್ನು ದಾಖಲಿಸಿದೆ.

೧೩೫

೧೦. ನಾಡೂರು, ಊರ ಹೊರಭಾಗದಲ್ಲಿ ರಸ್ತೆಯ ಬದಿಯಲ್ಲಿ ನೆಟ್ಟಕಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೫ **ಕಾಲ** : ಕ್ರಿ.ಶ.ಸು. ೧೧ನೇ ಶತಮಾನ

ತುಂಡಾಗಿದೆ. ಅಸ್ಪಷ್ಟ.

೧೩೬

೧೧. ತೀರ್ಥಂ, (ತೀರ್ಥಮಲೈ) ಕೋಟೆಯ ಬಂಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ ವಿರೂಪಾಕ್ಷರಾಯ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೩ **ಕಾಲ** : ಕ್ರಿ.ಶ. ೩೦–೪–೧೪೭೨

ಮಹಾಮಂಡಳೇಶ್ವರ ಮೇದಿನಿ ಮೀಸರಗಂಡ ಕಠಾರಿ ಸಾಳುವ ನರಸಿಂಗರಾಯ ಮಹಾಅರಸುಗಳ ಕಾರ್ಯಕ್ಕೆ ಕರ್ತರಾದ ಈಶ್ವರನಾಯಕರ ಅಮರನಾಯಕ ತಿಪ್ಪರಾಜ ತೀರ್ಥಸ್ಥಳದಲ್ಲಿ ಸಂತೆಯ ನಡೆಸುವುದಕ್ಕೆ ವರ್ಷಂಪ್ರತಿ ನೀಡಿದ ದಾನವನ್ನು ಉಲ್ಲೇಖಿಸಿದೆ.

ಪಾಲಕೋಡು ತಾಲೂಕು

೧೩೭

೧. ತಿಂಡಲ್ ಗ್ರಾಮದ ಶಾಲೆಯ ಪಕ್ಕ ಪಾಳುದೇವಾಲಯದ ಮುಂದೆ ನೆಟ್ಟಿರುವ ಕಲ್ಲು

ರಾಜಮನೆತನ : ನೊಳಂಬ **ರಾಜ** : ಪೊಳಲ್‌ಚೊರ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೦ **ಕಾಲ** : ಕ್ರಿ.ಶ. ೯೯೧

ಬಹುತೇಕ ಶಾಸನವು ಅಪೂರ್ಣವಾಗಿದ್ದು, ಮಧ್ಯದ ಭಾಗವು ನಷ್ಟವಾಗಿರುವಂತಿದೆ.

೧೩೮

೨. ಬೆಲರಾಂಪಟ್ಟಿ ಗ್ರಾಮದ ವೀರಣ್ಣನ ಕಟ್ಟೆಯ ಮೇಲೆ ನೆಟ್ಟ ಕಲ್ಲು

ರಾಜಮನೆತನ : --- **ರಾಜ** : ---

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೦೧ **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಪಳಂಪೋರಿ ಮಣಿಗ ಎಂಬುವ ವೀರನ ಸಾವನ್ನು ದಾಖಲಿಸಿದೆ.

ಈರೋಡ್ ಜಿಲ್ಲೆ

ಈರೋಡ್ ತಾಲೂಕು

೧೩೯

೧. ಈರೋಡ್, ಆರ್ದ್ರಕಪಾಲೇಶ್ವರ ದೇವಾಲಯದ ಮುಂದಿನ ಮಂಟಪದ ಪ್ರವೇಶದಲ್ಲಿನ ದ್ವಾರಪಾಲಕ ಬಿಂಬದ ಬಲಕ್ಕೆ

ರಾಜಮನೆತನ : ಮೈಸೂರು **ರಾಜ** : ಕಂಠೀರವ ನರಸರಾಜ ಒಡೆಯ

ಆಕರ : *SII*, Vol.IX, No.705 **ಕಾಲ** : ಕ್ರಿ.ಶ. ೧೬೫೫

ಶ್ರೀ ಮಹಿಸೂರ ಕಂಠೀರವ ನರಸರಾಜ ಒಡೆಯರ ಕಾರ್ಯಕ್ಕೆ ಕರ್ತರಾದ ದಳವಾಯಿ ಹಂಪಯ್ಯನ ಪ್ರಸ್ತಾಪ ಹಾಗೂ ಮಧುರೆಯ ಉಲ್ಲೇಖವಿದ್ದು ಶಾಸನ ಸವೆದಿದೆ.

ಗೋಪಿಚೆಟ್ಟಿಪಾಳ್ಯ ತಾಲೂಕು

೧೪೦

೧. ಎರಗನಹಳ್ಳಿ, ಗ್ರಾಮದ ಅರಳೀಮರದ ಸಮೀಪದಲ್ಲಿರುವ ಮೂರು ಹಂತಗಳ ವೀರಗಲ್ಲು

ರಾಜಮನೆತನ : ವಿಜಯನಗರ **ರಾಜ** : ಹರಿಹರ

ಆಕರ : *SII*, IX, No.420 **ಕಾಲ** : ಕ್ರಿ.ಶ. ೧೩೮೬

ಎರಗನಹಳ್ಳಿಯ ಕಲ್ಲಿಗೌಡನ ಮಗ ಚಿಕ್ಕತಮ್ಮನು ಮೂಡಣ ಬೆಟ್ಟದಲ್ಲಿ ಅಸಹಾಯ ಶೂರವಾಗಿ ಕೊಡಲಿಯಲ್ಲಿ ಕಳ್ಳರ ಹುಯ್ಲು ಕೆಡುಹಿ ತಾನೂ ಬಿದ್ದ ಕಾರಣಕ್ಕೆ ಆತನ ತಮ್ಮ ಕೇತಣ್ಣ ವೀರಗಲ್ಲು ಸ್ಥಾಪಿಸಿದ ವಿವರ.

೧೪೧

೨. ಅದೇ ಗ್ರಾಮದ ಮಧ್ಯದಲ್ಲಿ ಬಿದ್ದಿರುವ ಚಪ್ಪಡಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII*, Vol.IX, No.545 **ಕಾಲ** : ಕ್ರಿ.ಶ. ೧೫೩೨

ಕಾಣಿಕೆಯ ಕಂಪದೇವರಸಂಣನವರ ನಿರೂಪದ ಮೇರೆಗೆ ಎಂಟು ಹಳ್ಳಿಗಳ ಸ್ಥಾನಿಕರು, ಗಾಜನೂರು ಸ್ಥಳದ ಪಾರುಪತ್ಯಗಾರ, ಸೇನಬೋವ, ಬಡಗಕೊಂಗನಾಡ ಸ್ಥಳದ ಗವುಡಗಳು ಸೇರಿ ನಂಜನಗೂಡಿನ ನಂಜುಂಡೇಶ್ವರದೇವರ ಸನ್ನಿಧಿಯಲ್ಲಿ ನಡೆವಂಥ ಜಂಗಮಛತ್ರ ಹಾಗೂ ಬ್ರಾಹ್ಮಣಛತ್ರಗಳಿಗೆ ಎರಗನಹಳ್ಳಿ ಗ್ರಾಮವನ್ನು ಹಸಿಗೆಯ ವಿವರದೊಂದಿಗೆ ದತ್ತಿ ಬಿಡಲಾಗಿದೆ.

೧೪೨

೩. ಅದೇ ಗ್ರಾಮದ ಪಶ್ಚಿಮಕ್ಕೆ ಇರುವ ಕುಂಟೆಯ ಹತ್ತಿರ ನಿಲ್ಲಿಸಿರುವ ಚಪ್ಪಡಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII*, Vol.IX, No.596 **ಕಾಲ** : ಕ್ರಿ.ಶ. ೧೫೩೨

ಕಾಣಿಕೆಯ ಕಂಪದೇವರಸಂಣನವರ ನಿರೂಪದ ಮೇರೆಗೆ ಹದಿನಾಲ್ಕು ಸ್ಥಾನಿಕರ ಮುಂದಿಟ್ಟು ಗಾಜನೂರ ಸ್ಥಳದ ಪಾರುಪತ್ಯಗಾರ, ಸೇನಬೋವ ಮುಂತಾದವರ ಸಮ್ಮುಖದಲ್ಲಿ ನಂಜನಗೂಡಿನ ನಂಜುಂಡೇಶ್ವರ ದೇವರ ಸನ್ನಿಧಿಯಲ್ಲಿ ನಡೆಯುವ ಛತ್ರಕ್ಕೆ ದತ್ತಿ.

೧೪೩

೪. ಅದೇ ಗ್ರಾಮದ ಮಧ್ಯದಲ್ಲಿ ಬಿದ್ದಿರುವ ಚಪ್ಪಡಿ ಮೇಲಿನ ಇನ್ನೊಂದು ಶಾಸನ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII*, Vol.IX, No.596 **ಕಾಲ** : ಕ್ರಿ.ಶ. ೧೫೩೯

ಪ್ರಧಾನ ಮಲ್ಲಪಯ್ಯ ಮುಂತಾದವರು ಮಹಾದೇವ ದೇವೋತ್ತಮ ಶ್ರೀನಂಜುಂಡೇಶ್ವರ ದೇವರ ಸನ್ನಿಧಿಯಲ್ಲಿ ಬ್ರಾಹ್ಮಣ ಜಾತಿ ಜಂಗಮದೇವರಿಗೆ ಎರಗನಹಳ್ಳಿ ಸ್ಥಳದ ಒಳಗಾದ ಗ್ರಾಮ ಪುರಗಳಿಗೆ ಸಲ್ಲುವ ಯಾವುದೋ ದತ್ತಿ ನೀಡಿರುವ ವಿವರ.

೧೪೪

೫. ದಣ್ಣಾಯಕನಕೋಟೆ, ವೀರಭದ್ರೇಶ್ವರ ದೇವಾಲಯದ ಧ್ವಜಸ್ಥಂಬದ ಮೇಲೆ

ಆಕರ : *TLIMP*, 264-446 / 1906 **ಕಾಲ** : ಕ್ರಿ.ಶ. ೧೭೪೭

ಶಕ ೧೬೭೯ ಗತ ಪ್ರಭವದಲ್ಲಿ ದೀಪದ ವೃಷಭ ಸ್ತಂಭವನ್ನು ಸ್ಥಾಪಿಸಿದ ಬಗ್ಗೆ.

ಸತ್ಯಮಂಗಲ ತಾಲೂಕು

೧೪೫

೧. ಬಸ್ತರಪಾಳ್ಯಂ ಗ್ರಾಮದ ದಕ್ಷಿಣಕ್ಕಿರುವ ಮಹಾದೇವ ದೇವಾಲಯದ ಕಲ್ಲಿನ ಮೇಲೆ ಭವಾನಿ ನದಿಯ ಉತ್ತರಕ್ಕೆ

ರಾಜಮನೆತನ : ಮೈಸೂರು **ರಾಜ** : ದೇವರಾಜ ಒಡೆಯ

ಆಕರ : *TLIMP*, 306 **ಕಾಲ** : ಕ್ರಿ.ಶ. ೧೬೬೯

ದೇವರಾಜ ಒಡೆಯರಿಂದ ಕೋಮರೀ ಎಂಬ ಗ್ರಾಮವನ್ನು ದತ್ತಿಬಿಟ್ಟ ವಿವರ.

೧೪೬

೨. ಶಿವಯ್ಯಪಾಳ್ಯಂ, ಭವಾನಿ ನದಿಗೆ ಹೋಗುವ ದಾರಿಯಲ್ಲಿನ ಬೇವಿನಮರದ ಅಡಿಯಲ್ಲಿ, ಕಲ್ಲಿನ ಮೇಲೆ

ರಾಜಮನೆತನ : ಮೈಸೂರು **ರಾಜ** : ದೇವರಾಜ ಒಡೆಯ

ಆಕರ : *SII*, Vol. IX, No.703 **ಕಾಲ** : ಕ್ರಿ.ಶ. ೧೬೭೦

ಯೇಣೂರು ಕಣಿವೆಯ ಕೆಳಗಣ ಉಡವಂಕನಾಡ ಸತ್ಯಮಂಗಲ ಸ್ಥಳಕ್ಕೆ ಸಲ್ಲುವ ಕರವಳಿ ಹೋಬಳಿ ಬೆಸ್ತರಪಾಳ್ಯಕ್ಕೆ ಪ್ರತಿನಾಮವಾದ ಕೊಮಾರಪುರ ಗ್ರಾಮವನ್ನು ಧವಳಗಿರಿ ಕೊಮಾರಸ್ವಾಮಿಯ ಸೇವೆಗೆ ಗ್ರಾಮದಾನ ಬಿಟ್ಟ ವಿವರ.

೧೪೭

೩. ವಿನ್ನಪಳ್ಳಿ, ಅಗ್ರಹಾರ ಪೂರ್ವಕ್ಕಿರುವ ಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಜ ಒಡೆಯ

ಆಕರ : *TLIMP*, 309 **ಕಾಲ** : ಕ್ರಿ.ಶ. ೧೬೭೧

(ದೊಡ್ಡ) ದೇವರಾಜ ಒಡೆಯರವರು ಗ್ರಾಮವೊಂದನ್ನು ೬೪ ಭಾಗಗಳಾಗಿ ವಿಭಾಗಿಸಿ ೬೪ ಜನ ಬ್ರಾಹಣರಿಗೆ ದತ್ತಿ ಬಿಟ್ಟ ವಿವರ.

೧೪೮

೪. ಸತ್ಯಮಂಗಲ, ಮಹಾದೇವಯ್ಯನವರ ಮಗ ಪೊಮ್ಮಂಚ ಈಶ್ವರೀಶಾಸ್ತ್ರಿಯವರ ಬಳಿ ಇರುವ ತಾಮ್ರಶಾಸನ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *TLIMP*, 303 **ಕಾಲ** : ಕ್ರಿ.ಶ. ೧೭೬೦

ಗುಡ್ಡನಾಯಕನಪಾಳ್ಯ ತಿರುಮಲೆಶೆಟ್ಟಿಪಾಳ್ಯ ಮುಂತಾದವುಗಳನ್ನು ೭,೯೨೦ ಹೊನ್ನಿಗೆ ರಾಮಾವಧಾನಿ ಮತ್ತು ಇತರ ಇಬ್ಬರು ಬ್ರಾಹ್ಮಣರಿಗೆ ಕ್ರಯದಾನ ನೀಡಿರುವ ವಿವರ.

೧೪೯

೫. ಅದೇ ಊರಿನ ಸುಬ್ಬಾದೀಕ್ಷಿತರ ಮಗ ಯಗ್ನಶಾಸ್ತ್ರಿಯ ಬಳಿಯಿರುವ ತಾಮ್ರಪಟ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *TLIMP*, 304 **ಕಾಲ** : ಕ್ರಿ.ಶ. ೧೭೬೧

ಸುಬ್ಬಾಶಾಸ್ತ್ರಿ ಮತ್ತು ರಾಮಾಶಾಸ್ತ್ರಿ ಎಂಬ ಇಬ್ಬರು ಬ್ರಾಹ್ಮಣರಿಗೆ ಕೃಷ್ಣರಾಜ ಒಡೆಯರ್‌ರವರು ೧೧೧೦ ಹೊನ್ನಿಗೆ ಗೋಪಾಲಸಮುದ್ರಂ ಎಂಬ ಗ್ರಾಮವನ್ನು ಕ್ರಯದಾನ ನೀಡಿದ ವಿವರ.

೧೫೦

೬. ಅದೇ ಊರಿನ ಕುಪ್ಪಾಚಾರ್ಯರ ಮಗ ಶ್ರೀನಿವಾಸಾಚಾರ್ಯರ ಬಳಿ ಇರುವ ತಾಮ್ರಪಟ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *TLIMP*, 305 **ಕಾಲ** : ಕ್ರಿ.ಶ. ೧೭೬೨

ಕೃಷ್ಣರಾಜ ಒಡೆಯರ್‌ರವರಿಂದ ಕುಪ್ಪಾಚಾರ್ಯ ಎಂಬುವರಿಗೆ ಲವಗುಮ್ಮಾಳಯಂ ಎಂಬ ಸ್ಥಳವನ್ನು ಕ್ರಯದಾನ ನೀಡಿರುವ ದಾಖಲೆ.

೧೫೧

೭. ಅದೇ ಸ್ಥಳ, ಸ್ಥಳೀಯ ಶಿವದೇವಾಲಯದಲ್ಲಿದ್ದ ತಾಮ್ರಶಾಸನ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *TLIMP*, 307 **ಕಾಲ** : ---

ರಾಜದತ್ತಿ ಬಿಟ್ಟಿರುವ ವಿವರ (ದೇವಾಲಯ?).

ಧಾರಾಪುರಂ ತಾಲೂಕು

೧೫೨

೧. ಧಾರಾಪುರಂ, ಕೃಷ್ಣಸ್ವಾಮಿ ದೇವಾಲಯದ ದಕ್ಷಿಣ ಗೋಡೆಯ ಕಿತ್ತ ಕಲ್ಲಿನ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಸದಾಶಿವರಾಯ

ಆಕರ : *SII*, Vol. IX, No.634 **ಕಾಲ** : ಕ್ರಿ.ಶ. ೧೫೪೯

ನಂಜಯ ಲಿಂಗರಸರು ಶಿವನಪ್ಪ ಪಂಡಿತರ ಪುತ್ರ ವೀರಾಪಂಡಿತರಿಗೆ ಕೊಟ್ಟ ಗ್ರಾಮದಾನ – ಅಪೂರ್ಣ.

೧೫೩

೨. ಅದೇ ಊರಿನ ಕೋಟೆಯಲ್ಲಿರುವ ವೀರರಾಘವವ ಪೆರುಮಾಳ್ ದೇವಾಲಯದ ಹದಿನಾರು ಕಂಬಗಳ ಮಂಟಪದ ಉತ್ತರ ಗೋಡೆಯ ಕಿತ್ತಕಲ್ಲುಗಳ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಸದಾಶಿವರಾಯ

ಆಕರ : *SII*, Vol.IX, No.644 **ಕಾಲ** : ಕ್ರಿ.ಶ. ೧೫೫೧

ಕಂದಾಚಾರದ ತಿಮ್ಮರಸಯ್ಯನವರ ಮಕ್ಕಳು ನಂಜಪ್ಪಯ್ಯನವರು ರಾಘವದೇವರ ಪಲ್ಲಕ್ಕಿಯ ಸೇವೆಗಾಗಿ ಧಾರಾಪುರದ ಚಾವಡಿಗೆ ಸಲ್ಲುವ ೨೪ ನಾಡುಗಳೊಳಗಿನ ನಾಯಕಮಗ, ಯಟ್ಟಿಗರು, ಬಿಲ್ಲಹೆಗಡೆ ಮುಂತಾದವರು ಒಪ್ಪಿ ಬಂಡಿಹಣವನ್ನು ಪಲ್ಲಕ್ಕಿಸೇವೆಗೆ ದತ್ತಿ ಬಿಟ್ಟ ವಿವರ.

ಕೊಯಮತ್ತೂರ ಜಿಲ್ಲೆ

ಅವಿನಾಶಿ ತಾಲೂಕು

೧೫೪

೧. ಅವಿನಾಶಿ, ಅವಿನಾಶೀಶ್ವರ ದೇವಾಲಯದ ಗೋಪುರದ ಮುಂದೆ ಇರುವ ಶಿಲಾಫಲಕ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *TLIMP*, 32-201/1909 **ಕಾಲ** : ಕ್ರಿ.ಶ. ೧೭೫೬

ಶ್ರೀರಂಗಪಟ್ಟಣದಿಂದ ಮೈಸೂರು ಕೃಷ್ಣರಾಜ ಒಡೆಯರು ರಾಜ್ಯಭಾರ ಮಾಡುತ್ತಿದ್ದಾಗ, ಅವಿನಾಶಿಯ ಅವಿನಾಶೀಶ್ವರ ದೇವಾಲಯದ ಬೇರೆ ಬೇರೆ ಭಾಗಗಳನ್ನು ಜೀರ್ಣೋದ್ಧಾರ ಮಾಡಿಸಿದ ವಿವರ. ದಳವಾಯಿ ದೇವರಾಜಯ್ಯನ ಕಾರ್ಯಕ್ಕೆ ಕರ್ತನಾದ ಶಂಕರಯ್ಯನು ಕೊಯಮತ್ತೂರಿನ ಗುರಿಕಾರನಾಗಿದ್ದನು. ಆತನು ದೇವಾಲಯದ ಆಗ್ನೇಯ ಮೂಲೆಯಲ್ಲಿ ಶಂಕರೇಶ್ವರ ಲಿಂಗವನ್ನು ಸ್ಥಾಪಿಸಿದ.

೧೫೫

೨. ಅದೇ ದೇವಾಲಯದ ಮಾಣಿಕ್ಯವಾಚಕರ ಬಿಂಬದ ಪೀಠದಲ್ಲಿ

ಆಕರ : *ARIE*, 1963-64, B 202 **ಕಾಲ** : ಕ್ರಿ.ಶ.ಸು. ೧೮ನೇ ಶತಮಾನ

ಭಾಷೆ : ಕನ್ನಡ **ಲಿಪಿ** : ನಾಗರಿ

ಅವಿನಾಶಿದೇವರ ಆಶೀರ್ವಾದವನ್ನು ಬಯಸಿ ಮಹಾರಾಯರ ಮಗಳಾದ ಭುವನೇಶ್ವರಿದೇವಿಯ ವಿವಾಹವನ್ನು ನವರತ್ನ ಮಂಟಪದಲ್ಲಿ ಏರ್ಪಡಿಸಿ ಗೋದಾವರಿದೇವಿ ಎಂಬುವರು ಉತ್ಸವಕ್ಕೆ ವ್ಯವಸ್ಥೆ ಮಾಡಿರುವ ಬಗ್ಗೆ, ಆಶಯ ಅಸ್ಪಷ್ಟ?

೧೫೬

೩. ಪುದುಪಾಳಿಯಂ ಊರಿನ ಪೂರ್ವಕ್ಕಿರುವ ಕಲ್ಲಿನ ಮೇಲೆ

ಆಕರ : *TLIMP*, 43 **ಕಾಲ** : ---

ಮನೂರು ಗ್ರಾಮದಲ್ಲಿ ೪೦ ೩/೪ ಪ್ರಮಾಣದ ಭೂಮಿಯನ್ನು ರಾಮಲಿಂಗಶಾಸ್ತ್ರಿ ಎಂಬ ಬ್ರಾಹ್ಮಣನಿಗೆ ದತ್ತಿ ಬಿಟ್ಟ ವಿವರ.

೧೫೭

೪. ಗಣಪತಿ ಸ್ಥಳ, ವೇಣುಗೋಪಾಲಸ್ವಾಮಿ ದೇವಾಲಯದ ಮುಂದಿನ ಮಂಟಪ ಪಶ್ಚಿಮ ಗೋಡೆಯಲ್ಲಿರುವ ಕಲ್ಲಿನಲ್ಲಿ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ?

ಆಕರ : *ARIE*, 1961-62, B 235 **ಕಾಲ** : ಕ್ರಿ.ಶ. ೧೭೬೪

ತೆರಕಣಾಂಬಿಯ ಮದನಯ್ಯ (ಮಾದಯ್ಯ ?) ಮೊಮ್ಮಗ ಶಂಕರಯ್ಯನ ಮಗ ಮಾದಯ್ಯ ಎಂಬುವನು ದೇವರಿಗೆ ನೀಡಿದ ಸೇವೆಯ ವಿವರ.

೧೫೮

೫. ಅವಿನಾಶಿ, ಅವಿನಾಶೀಶ್ವರ ದೇವಾಲಯದ ಮುಂದಿರುವ ಮಂಟಪದ ಕಂಬವೊಂದರ ಮೇಲಿರುವ ಬರಹ.

ಆಕರ : ಲೇಖಕ ೧೯೯೦ ಜೂನ್ ೧೭ರಂದು ಸ್ಥಳಕ್ಕೆ ಭೇಟಿ ನೀಡಿದ್ದಾಗ ಗಮನಿಸಿ ದಾಖಲಿಸಿಕೊಂಡ ಕಣ್ಣಕಲು (ಅಪ್ರಕಟಿತ)

ಕಾಲ : ಕ್ರಿ.ಶ.ಸು. ೧೮ನೇ ಶತಮಾನ

ಹಲವನಹಳ್ಳಿಯ ಆದಿಯಣ್ಣ ನಾಯಕನು ಮಾಡಿದ ದೀಪಮಾಲೆಕಂಬದ ಮಂಟಪದ ಧರ್ಮ ಎಂಬ ವಿವರ.

ಪೊಲ್ಲಾಚಿ ತಾಲೂಕು

೧೫೯

೧. ಅನಿಮಲೆ, ಅಯ್ಯಸ್ವಾಮಿಗುರುಕ್ಕಲ್ ಅವರಿಂದ ಬಂದ ತಾಮ್ರಪಟ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1927-28, A 7 **ಕಾಲ** : ಕ್ರಿ.ಶ. ೧೬೮೫

ಮಾದಯ್ಯ ಎಂಬ ಕೊಯಮತ್ತೂರಿನ ಅಧಿಕಾರಿ ಮಾಧವಪುರ ಎಂಬ ಅಗ್ರಹಾರವನ್ನು ಆನೆಮಲೆಗೆ ಪಶ್ಚಿಮದಲ್ಲಿ ಸ್ಥಾಪಿಸಿ ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಭೂಮಿಯನ್ನು ದತ್ತಿ ನೀಡಿರುವ ವಿವರ.

ಸೇಲಂ ಜಿಲ್ಲೆ

ಸೇಲಂ ತಾಲೂಕು

೧೬೦

೧. ಸೇಲಂ, ಸುಕನೇಶ್ವರ ದೇವಾಲಯದ ಪ್ರಾಕಾರದಲ್ಲಿ ದೊರೆತ ತಾಮ್ರಪಟಗಳು

ರಾಜಮನೆತನ : ಗಂಗ **ರಾಜ** : ಶ್ರೀಪುರುಷ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೪೫ **ಕಾಲ** : ಕ್ರಿ.ಶ. ೭೭೧

ಕೊಂಗುಣಿ ಮಹಾರಾಜ ಶ್ರೀಪುರುಷನ ಸಾಮಂತ ದುರ್ಗಮಾರನು ನೀಲಕಂಠಶರ್ಮನಿಗೆ ಕೆರೆಯ ಪಶ್ಚಿಮಕ್ಕಿದ್ದ ಭೂಮಿಯನ್ನು ದಾನ ನೀಡಿದ ವಿವರ.

೧೬೧

೨. ಸೇಲಂ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿರುವ ಕಲ್ಲಿನ ಮೇಲೆ (ಮೂಲತಃ ನಾಮಕ್ಕಲ್ ತಾಲೂಕು ಸೆಂದಮಂಗಲಂ ಗ್ರಾಮಕ್ಕೆ ಸೇರಿದ್ದು)

ಆಕರ : *ARIE*, 1980-81, B 246 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಕಾಳಪ್ಪನ ಮಗ ಮಾಳಪ್ಪ ಎಂಬುವನನ್ನು ಪ್ರಸ್ತಾಪಿಸುತ್ತದೆ.

೧೬೨

೩. ಅಮ್ಮಾಪಾಳ್ಯಂ, ಬೀದಿಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯರ್

ಆಕರ : *ARIE*, 1933-34, B 155 **ಕಾಲ** : ಕ್ರಿ.ಶ. ೧೬೮೧

ಇದು ತಾಮ್ರಶಾಸನದ ನಕಲೆಂದು ತಿಳಿಸಿ, ಹೈದರಾಲಿಯಿಂದ ಖಜಾನೆಗೆ ಹಣ ತುಂಬಿ, ಅಕಾವಲ್ಲಸಾಹೇಬು ಎಂಬುವರಿಗೆ ದರ್ಗಾವನ್ನು ನಿರ್ವಹಣೆ ಮಾಡಲು ಅಮ್ಮಪಾಳ್ಯ ಮತ್ತು ಇತರ ಗ್ರಾಮಗಳನ್ನು ರಾಜನಿಂದ ದತ್ತಿ ಬಿಡಿಸಿರುವುದು.

ಓಮಲೂರು ತಾಲೂಕು

೧೬೩

೧. ಮಲ್ಲಿಕೋಟೆ, ಧ್ವಜಸ್ತಂಭದ ಮೇಲೆ

ರಾಜಮನೆತನ : ಮೈಸೂರು   **ರಾಜ** : ದೇವರಾಜ ಒಡೆಯ

ಆಕರ : *ARIE*, 1955-56, B 317   **ಕಾಲ** : ಕ್ರಿ.ಶ. ೧೬೬೯

ವಾಮಲೂರು ಸ್ಥಳದ ಮಲ್ಲಿಗೆಕೋಂಟೆಗೆ ಸೇರಿದ ವೆಂಟರಪಟ್ಟಿ, ವೆಳಗೌಡನಪಟ್ಟಿ, ಮತ್ತು ಮಲವರಾಯಪಟ್ಟಿ ಗ್ರಾಮಗಳನ್ನು ದೇವರಾಜನ ಮಗನಾದ ದೇವರಾಜ ಒಡೆಯನು ನಂಜನಗೂಡಿನ ನಂಜುಂಡೇಶ್ವರ ದೇವರಿಗೆ ದತ್ತಿ ಬಿಟ್ಟ ವಿವರ ಹಾಗೂ ವಾಮಲೂರು ಸ್ಥಳವನ್ನು ತನ್ನ ಸ್ವಸಾಮರ್ಥ್ಯದಿಂದಲೇ ಸಾಧಿಸಿದಂತೆ ಉಲ್ಲೇಖಿಸುತ್ತದೆ.

೧೬೪

೨. ವನವಾಸಿ, ಗ್ರಾಮದಲ್ಲಿನ ತಾಮ್ರಪತ್ರ

ರಾಜಮನೆತನ : ಮೈಸೂರು   **ರಾಜ** : ವೀರರಾಜ ಒಡೆಯ II

ಆಕರ : *TMILP*, 135 C.P. No.195, Sewell's List   **ಕಾಲ** : ಕ್ರಿ.ಶ. ೧೭೭೬

ಮೈಸೂರು ರಾಜ್ಯದ ವಂಜಿನಾಡಿನ ವನವಾಸಿಯಲ್ಲಿನ ಶಿವದೇವಾಲಯಕ್ಕೆ ಮೈಸೂರಿನ ಇಮ್ಮಡಿ ವೀರರಾಜ ಒಡೆಯನ ಆಳಿಕೆಯ ಕಾಲದಲ್ಲಿ ಖಾಸಗಿ ವ್ಯಕ್ತಿಯೋರ್ವನು ತೋಟವನ್ನು ದತ್ತಿ ಬಿಟ್ಟಿರುವ ಉಲ್ಲೇಖ.

ತಿರುಚೆಂಗೋಡು ತಾಲೂಕು

೧೬೫

೧. ಶಂಖಗಿರಿ, ಸೋಮೇಶ್ವ ದೇವಾಲಯದ ದಕ್ಷಿಣ ಗೋಡೆಯ ಮೇಲೆ

ರಾಜಮನೆತನ : ವಿಜಯನಗರ   **ರಾಜ** : ಸದಾಶಿವರಾಯ

ಆಕರ : *ARIE*, 1929-30, B 510   **ಕಾಲ** : ಕ್ರಿ.ಶ.ಸು. ೧೫೪೦

ಬಹಳವಾಗಿ ತ್ರುಟಿತ, ನಾಯಿಂದರ ಮೇಲೆ ತೆರಿಗೆಗಳ ವಿನಾಯತಿ.

೧೬೬

೨. ಶಂಖಗಿರಿ, ಚೆನ್ನಕೇಶವ ದೇವಾಲಯದ ಹಿಂಬದಿಯ ಬಂಡೆಯ ಮೇಲೆ

ರಾಜಮನೆತನ : ಮೈಸೂರು **ರಾಜ** : ಚಿಕ್ಕದೇವರಾಯ

ಆಕರ : *ARIE*, 1929-30, B 512 **ಕಾಲ** : ಕ್ರಿ.ಶ. ೧೬೭೮

ಮುದ್ದಳಕಾದ್ರಿ ನಾಯಕನ ಅಧೀನಕ್ಕೊಳಪಟ್ಟಿದ್ದ ನಂಜನಾಥಯ್ಯನ ಕಾರ್ಯಕ್ಕೆ ಕರ್ತನಾದ ಮುದ್ದಯ್ಯ ಎಂಬುವನು ರಾಯದುರ್ಗ ಎಂಬ ಕನ್ನತೂರು ದುರ್ಗದಲ್ಲಿ ಚೆನ್ನರಾಯ ಪೆರುಮಾಳದೇವರ ದ್ವಾರಪಾಲಕರನ್ನು ಮಾಡಿಸಿಕೊಟ್ಟ ವಿವರ.

೧೬೭

೩. ಅದೇ ದೇವಾಲಯದ ಮೆಟ್ಟಿಲುಗಳ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE*, 1929-30, B 511 **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ.

ಬಹಳವಾಗಿ ಹಾಳಾಗಿದೆ, ಮುರಿದಿದೆ.

೧೬೮

೪. ಕುಮಾರಪಾಳ್ಯದ ಹಿರಿಯ ಇನಾಂದಾರರಿಂದ ತಿರುಚೆಂಗೋಡು ತಾಲೂಕಿನ ತಹಸಿಲ್ದಾರರ ಮೂಲಕ ಬಂದ ತಾಮ್ರಶಾಸನ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1942-43 A 9 **ಕಾಲ** : ಕ್ರಿ.ಶ. ೧೭೬೦

ಶಂಖಗಿರಿ ಹೋಬಳಿಗೆ ಸೇರಿದ ತಗುಡಪ್ಪಾಡಿ ಮತ್ತು ಅದಕ್ಕೆ ಸೇರಿದ ೧೪ ಸಹ ಗ್ರಾಮಗಳನ್ನು ಕ್ರಯದಾನವಾಗಿ ನಾಲ್ಕು ಜನ ಬ್ರಾಹ್ಮಣರಿಗೆ ೫೦,೦೦೦ ರಾಜಗೋಪಾಲ ವರಹಗಳಿಗೆ ನೀಡಿರುವ ವಿವರ.

೧೬೯

೫. ಪಾಲ್‌ಮೇಡು, ಈಶ್ವರ ದೇವಾಲಯದ ದಕ್ಷಿಣಕ್ಕಿರುವ ಹೊಲದಲ್ಲಿ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1959-60, B 345 **ಕಾಲ** : ಕ್ರಿ.ಶ. ೧೭೬೧

ಅಹೋಬಲದ ಲಕ್ಷ್ಮೀನರಸಿಂಹಸ್ವಾಮಿಯ ಸೇವೆಗೆ ಹಾಗೂ ಶ್ರೀಪರಾಂಕುಶ ರಾಮಾನುಜ ಜೀಯರ್ ಮಠಕ್ಕೆ ಶ್ರೀವೈಷ್ಣವರ ಆಹಾರಕ್ಕಾಗಿ (ಶ್ರೀರಾಮಾನುಜ ಕೂಟ?) ಪಾಲ್‌ಮೇಡು ಸ್ಥಳವನ್ನು ೧೦೦೦ ವರಹಗಳಿಗೆ, ಗೇಣಿಗೆ ಬಿಟ್ಟ ವಿವರ.

೧೭೦

೬. ಮೆಟ್ಟೂರು ಮಿ। ಆರ್.ಎಫ್. ಸ್ಟೋನಿ, ಉದಕಮಂಡಲ ಅವರಿಂದ ಬಂದ ತಾಮ್ರಶಾಸನ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1947-48, A 2 **ಕಾಲ** : ಕ್ರಿ.ಶ. ೧೭೬೨

ಸಾಂಬಳ್ಳಿಯ ರಾಮಸಮುದ್ರದ ಕೆರೆಯ ಕೆಳಗೆ ಸ್ವಲ್ಪ ಭೂಮಿಯನ್ನು ೧೦೭೦ ವರಹಗಳಿಗೆ ಕ್ರಯ ಭೂದಾನವಾಗಿ ೧೦೭ ವರಹಗಳ ಶ್ರೋತ್ರೀಯಂ, ಆಯವಿರುವುದನ್ನು ವೆಂಕಟರಮಣಾಚಾರಿ ಮತ್ತು ಇತರರಿಗೆ ದತ್ತಿ ನೀಡಿದ ದಾಖಲೆ.

೧೭೧

೭. ಅದೇ ಊರಿನದು, ಮಿ।ಆರ್.ಎಫ್.ಸ್ಟೋನಿ, ಲ್ಯಾನ್ಸ್‌ಡಾನ್, ಉದಕಮಂಡಲ, ಅವರಿಂದ ಬಂದ ತಾಮ್ರಪಟ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1947-48, A 1 **ಕಾಲ** : ಕ್ರಿ.ಶ. ೧೭೬೨

೧೪೮೪ ೧/೨ ವರಹಗಳ ಆದಾಯವುಳ್ಳ ಸಾಂಬಳ್ಳಿ ಮತ್ತು ಅದಕ್ಕೆ ಸೇರಿದ ೭ ಉಪಗ್ರಾಮಗಳನ್ನು ೧೪,೮೪೫ ರಾಜಗೋಪಾಲ ವರಹಗಳಿಗೆ ಕ್ರಯ ದಾನವಾಗಿ ವೆಂಕಟೇಶಶಾಸ್ತ್ರಿ, ಸುಬ್ಬಾಶಾಸ್ತ್ರಿ, ವೆಂಕಟರಮಣಾಚಾರಿ ಮತ್ತು ಇತರರಿಗೆ ದತ್ತಿ ಬಿಟ್ಟ ವಿವರ.

ಅತ್ತೂರು ತಾಲೂಕು

೧೭೨

೧. ಎತ್ತಪ್ಪೂರ್. ಮಾರಿಯಮ್ಮನ ದೇವಾಲಯದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಆಕರ : *ARIE*, 1927-28, B 232 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಸಾಂಬಸದಾಶಿವಸ್ವಾಮಿ ಮತ್ತು ಒಬ್ಬ ಬೋಯರನನ್ನು ಉಲ್ಲೇಖ ಮಾಡುತ್ತದೆ.

ನಾಮಕ್ಕಲ್ ಜಿಲ್ಲೆ

ನಾಮಕ್ಕಲ್ ತಾಲೂಕು

೧೭೩

೧. ನಾಮಕ್ಕಲ್, ಪ್ರವಾಸಿ ಬಂಗಲೆಯ ಆವರಣದಲ್ಲಿಟ್ಟಿರುವ ವೀರಗಲ್ಲು

ಆಕರ : *ARIE*, 1968-69, B 237 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಹುಲಿಯೊಂದಿಗೆ ಹೋರಾಟ ಮಾಡುತ್ತಿರುವಂಥ ವೀರನ ಶಿಲ್ಪವುಳ್ಳ ವೀರಗಲ್ಲು ಕುರುಂಬ ಕಾಳಪ್ಪನನ್ನು ಉಲ್ಲೇಖಿಸುತ್ತದೆ.

೧೭೪

೨. ನಾಮಕ್ಕಲ್, ದೇವಾಲಯವೊಂದರ ಪೂರ್ವಗೋಡೆಯಲ್ಲಿ

ಆಕರ : *TILMP,* 208-6, 1906 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಗಜಪತಿ ವಿಭಾಳ ತಿಪ್ಪರಸ ಒಡೆಯನ ಮಗ ಲಕ್ಷ್ಮೀಕಾಂತರಸನ ಉಲ್ಲೇಖ.

ವೆಲ್ಲೂರು ಜಿಲ್ಲೆ

ವೆಲ್ಲೂರು ತಾಲೂಕು

೧೭೫

೧. ವಿರಿಂಜಿಪುರ, ದೇವಾಲಯದ ಪ್ರವೇಶಗೋಪುರದ ದ್ವಾರದ ಬಳಿ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *ARIE,* 1939-40, B 210 **ಕಾಲ** : ಕ್ರಿ.ಶ.೧೪೫೦

ದೇವಾಲಯದಲ್ಲಿ ಪೂಜಾ ಪುನಸ್ಕಾರಗಳಿಗಾಗಿ ಜೋಡಿ ಮತ್ತು ಸೂಲವರಿ ಕರಗಳನ್ನು ದತ್ತಿ ಬಿಟ್ಟ ವಿವರ.

ವಲಝು ತಾಲೂಕು

೧೭೬

೧. ತಿರುಮಲೈಚ್ಚೇರಿ, ಹಾಳಾದ ಈಶ್ವರ ದೇವಾಲಯವೊಂದರ ತಳಪಾಯಕ್ಕೆ ಸೇರಿಸಿರುವ ಎರಡು ಚಪ್ಪಡಿಕಲ್ಲುಗಳ ಮೇಲೆ

ರಾಜಮನೆತನ : ರಾಷ್ಟ್ರಕೂಟ **ರಾಜ** : ಮುಮ್ಮಡಿಕೃಷ್ಣ/ಶುಭತುಂಗ

ಆಕರ : *JESE,* Vol. XXIII, (1997) p.105-109 **ಕಾಲ** : ಕ್ರಿ.ಶ. ೯೪೮

ರಾಷ್ಟ್ರಕೂಟ ಶುಭತುಂಗದೇವನು ದಕ್ಷಿಣ ದಿಗ್ವಿಜಯದಲ್ಲಿ ಚೋಳಕ ವಿಷಯವನ್ನು ಉಂಡಿಗೆ ಜೀವಿತಮ್ಮಾಡಿ ರಾಜ್ಯವಾಳುತ್ತಿರುವಾಗ ಕಂದಲೂರಿನ ಕೀರ್ತಿಮಾರ್ತಂಡನೆಂಬ ಕಾಳಪ್ರಿಯದೇವರ ದೇಗುಲವನ್ನೆತ್ತಿಸಿದ ವಿವರ. ಶಿವಸೆಟ್ಟಿ, ಎಡಚಾಯ್ಲುಸೆಟ್ಟಿ, ಪಣ್ಡರಚಾಲುಣ್ಣಸೆಟ್ಟಿ, ಕೊಣ್ಣಸೆಟ್ಟಿಗ, ಬಳಂಜುಗಳ ಉಲ್ಲೇಖ. ತೊಣ್ಡೆನಾಡು ನಾಲವತ್ತೆಣ್ಚಾಸಿರದ ಸುಂಕಗಳನ್ನು ದೇವರಿಗೆ ದತ್ತಿ ಬಿಟ್ಟ ವಿವರ.

೧೭೭

೨. ಆಸನಂಪಟ್ಟು, ಊರಿನ ಆಚೆ ರಸ್ತೆ ಬದಿಯಲ್ಲಿ ನೆಟ್ಟ ಕಲ್ಲು

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೪೫ **ಕಾಲ** : ಕ್ರಿ.ಶ.ಸು. ---

ತ್ರುಟಿತ. ವಿವರ ಅಸ್ಪಷ್ಟ.

೧೭೮

೩. ಕೊಡಕ್ಕಲ್, ಗ್ರಾಮದ ಉತ್ತರಕ್ಕಿರುವ ಹಾಳುಬಿದ್ದಿರುವ ಗುಡಿಯ ದ್ವಾರಬಂಧದಲ್ಲಿ

ಆಕರ : *ARIE,* 1967-68, B 255 **ಕಾಲ** : ಕ್ರಿ.ಶ. ೧೭೩೬

ಜಡೆಶಾಂತೇಶ್ವರ ದೇವರಿಗೆ ಹಲವು ಭಕ್ತರ ಭಕ್ತಿ ನಿವೇದನೆ.

೧೭೯

೪. ಅದೇ ಹಾಳು ಬಿದ್ದಿರುವ ಗುಡಿಯ ಮಂಟಪದ ಹೊರಗಿರುವ ಕಲ್ಲಿನ ಮೇಲೆ

ಆಕರ : *ARIE,* 1967-68, B 257 **ಕಾಲ** : ಕ್ರಿ.ಶ. ೧೭೪೩

ತ್ರುಟಿತ. ಆಶಯ ಅಸ್ಪಷ್ಟ.

೧೮೦

೫. ಅದೇ ಮಂಟಪದ ಹಿಂದಿನ ಗೋಡೆಯ ಮೇಲೆ

ಆಕರ : *ARIE,* 1967-68, B 256 **ಕಾಲ** : ಕ್ರಿ.ಶ. ೧೭೪೬

ದೇವಾರ ಜನಾಂಗಕ್ಕೆ ಸೇರಿದ ಮೂವರು ವ್ಯಕ್ತಿಗಳ ಹೆಸರುಗಳು (ಹೆಸರುಗಳು ಅಸ್ಪಷ್ಟ)

ತಿರುಪತ್ತೂರ್ ತಾಲೂಕು

೧೮೧

೧. ಪಾರಂಡಪಲ್ಲಿ, ೬೩೪/೩ನೇ ಸರ್ವೆನಂಬರಿನ ಹೊಲದಲ್ಲಿರುವ ಚಪ್ಪಡಿಯಲ್ಲಿ

ಆಕರ : *ARIE,* 1975-76, B 251 **ಕಾಲ** : ---

ಬಹಳವಾಗಿ ಹಾಳಾಗಿದೆ ಮತ್ತು ಸವೆದಿದೆ. ಭೂಮಿ ದತ್ತಿಯನ್ನು ಸೂಚಿಸುವಂತಿದೆ.

ತಿರುವಣ್ಣಾಮಲೆ ಜಿಲ್ಲೆ

ತಿರುವಣ್ಣಾಮಲೆ ತಾಲೂಕು

೧೮೨

೧. ತಿರುವಣ್ಣಾಮಲೆ, ಅರುಣಾಚಲೇಶ್ವರ ದೇವಾಲಯದ ಗೋಪುರದಲ್ಲಿ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *TLIMP,* 525. 569 / 1902 **ಕಾಲ** : ಕ್ರಿ.ಶ. ೧೪೩೭

ಭೂಮಿ ದತ್ತಿ ಬಿಟ್ಟ ವಿವರ.

೧೮೩

೨. ಅದೇ ದೇವಾಲಯದ ಪೂರ್ವ ಗೋಪುರದಲ್ಲಿ

ರಾಜಮನೆತನ : ವಿಜಯನಗರ **ರಾಜ** : ---

ಆಕರ : *ARIE*, 1928-29, B 424 **ಕಾಲ** : ಕ್ರಿ.ಶ. ೧೫೭೨

ಸ್ವಲ್ಪ ತ್ರುಟಿತ, ತಿಮ್ಮಭೂಪನ ಕುಟುಂಬ ಚಿನ್ನಚ್ಚೆವ್ವ ಎಂಬುವರು ಅರುಣಗಿರಿಯಲ್ಲಿ ಗೋಪುರ ಕಟ್ಟಿಸಿದ ವಿವರ.

೧೮೪

೩. ಅದೇ ದೇವಾಲಯದ ಪೂರ್ವ ಗೋಪುರದಲ್ಲಿ

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ III

ಆಕರ : *ARIE*, 1952-53, A 11 **ಕಾಲ** : ಕ್ರಿ.ಶ. ೧೮೧೬

ತಿರುವಣ್ಣಾಮಲೆಯ ಅರುಣಾಚಲೇಶ್ವರ ದೇವರ (ನಿಂತುಹೋಗಿದ್ದ) ಪೂಜಾಕೈಂಕರ್ಯಗಳ ನವೀಕರಣಕ್ಕಾಗಿ ಜೋಷಿ ಶ್ರೀನಿವಾಸಾಚಾರ್ಯ ಹಾಗೂ ಶೋಣಾದ್ರಿ ದೀಕ್ಷಿತ ಎಂಬುವರನ್ನು, ನೇಮಿಸಿ ಅವರಿಗೆ ೨೦೧ ವರಹ ನೀಡಲು, ಬೆಂಗಳೂರು ತಾಲೂಕು ಅಧಿಕಾರಿಗೆ ಸನ್ನದನ್ನು ನೀಡಿರುವುದು.

ವಂದವಾಸಿ ತಾಲೂಕು

೧೮೫

೧. ವಳ್ಳಿಮಲೆ, ಸಮೀಪದ ಬೆಟ್ಟದ ಪೂರ್ವಕ್ಕಿರುವ ಇಳಿಜಾರಿನ ಬಂಡೆಯ ಮೇಲೆ ಕೊರೆದಿರುವ ಜೈನ ಬಿಂಬಗಳ ಬಳಿ

ರಾಜಮನೆತನ : --- **ರಾಜ** : ---

ಆಕರ : *ARIE*, 1895, B 9 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಬಾಲಚಂದ್ರ ಭಟಾರರ್ ಮಾಡಿಸಿದ ಪ್ರತಿಮೆ ಎಂಬ ವಿವರ.

೧೮೬

೨. ಅದೇ ಸ್ಥಳ

ರಾಜಮನೆತನ : --- **ರಾಜ** : ---

ಆಕರ : *ARIE*, 1895, B 8; *EI*, Vol. IV, p.141 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಆರ್ಯನಂದಿನ್ ಎಂಬ ಜೈನ ಸನ್ಯಾಸಿಯು ಜಿನಬಿಂಬವನ್ನು ಹಾಗೂ ದೇವಸೇನರ ಮೂರ್ತಿಯನ್ನು ಸ್ಥಾಪಿಸಿದನೆಂದು ತಿಳಿಸುತ್ತದೆ.

೧೮೭

೩. ಅದೇ ಸ್ಥಳ

ರಾಜಮನೆತನ : ಬಾಣ **ರಾಜ** : –––

ಆಕರ : *ARIE,* 1895, B 7; *EI*, IV, p.142 **ಕಾಲ** : ಕ್ರಿ.ಶ.ಸು. ೯ನೇ ಶತಮಾನ.

ಭಾಷೆ : ಕನ್ನಡ **ಲಿಪಿ** : ಗ್ರಂಥ

ಬಾಣರಾಜನು ಗುರು ಮತ್ತು ಭವನಂದಿಯವರ ಶಿಷ್ಯರಾದ ದೇವಸೇನರ ಮೂರ್ತಿಯನ್ನು ರಾಯು ಸ್ಥಾಪಿಸಿದ ವಿವರ.

೧೮೮

೪. ಅದೇ ಸ್ಥಳ

ರಾಜಮನೆತನ : ಗಂಗ **ರಾಜ** : ರಾಚಮಲ್ಲ

ಆಕರ : *EI,* Vol. IV p.141; *ARIE,* 1895, B 6 **ಕಾಲ** : ಕ್ರಿ.ಶ.ಸು. ೮೩೦

ಭಾಷೆ : ಕನ್ನಡ **ಲಿಪಿ** : ಗ್ರಂಥ

ಶಿವಮಾರನ ಮರಿಮೊಮ್ಮಗ, ಶ್ರೀ ಪುರುಷನ ಮೊಮ್ಮಗ, ರಣವಿಕ್ರಮನ ಗಂಗ ರಾಚಮಲ್ಲನ ಬಸದಿಯನ್ನು ತೋಡಿಸಿಸ ಎಂಬ ಉಲ್ಲೇಖ.

೧೮೯

೫. ವೆಂಕುವುರ ಬೆಟ್ಟದ ಕೆಳಗೆ ನಿಲ್ಲಿಸಿರುವ ಚಪ್ಪಡಿಕಲ್ಲಿನ ಮೇಲೆ

ರಾಜಮನೆತನ : ಮರಾಠ **ರಾಜ** : ಕಾನ್ಹೋಜಿ

ಆಕರ : ಕ.ವಿ.ಶಾ.ಸಂ. ೪, ಶಾಸನ ಸಂ.೧೪೩; *ARIE,* 1900, B.72 **ಕಾಲ** : ಕ್ರಿ.ಶ. ೧೬೯೭

ಭಾಷೆ : ಸಂಸ್ಕೃತ **ಲಿಪಿ** : ಕನ್ನಡ

ಈ ಶಾಸನದಲ್ಲಿ ಜ್ಞಾನೇಶ್ವರನು ವಿಠ್ಠಲನ ಗುರುವೆಂದೂ, ವಿಠ್ಠಲನ ವಂಶದ ಕಾನ್ಹೋಜಿಯ ಹಳೇಬೀಡಿನ ಬಲ್ಲಾಳನ ಅಧಿಕಾರಿಯಾಗಿದ್ದನೆಂದು ಸೂಚಿಸುತ್ತದೆ. ಕಾನ್ಹೋಜಿಯ ತಾಯಿ ಮಂಟಪವೊಂದನ್ನು ನಿರ್ಮಾಣ ಮಾಡಿಸಿದ ಬಗ್ಗೆ ಶಾಸನ ದಾಖಲಿಸಿದೆ.

ವಿಲುಪುರಂ ಜಿಲ್ಲೆ

ಜಿಂಜಿ ತಾಲೂಕು

೧೯೦

೧. ಚಿತ್ತಾಮೂರ್, ಜೈನ ದೇವಾಲಯದ ಮಾನಸ್ತಂಭದ ಪೀಠದಲ್ಲಿ

ಆಕರ : *ARIE,* 1937-38, B 518 **ಕಾಲ** : ಕ್ರಿ.ಶ. ೧೫೭೮

ಭಾಷೆ : ಕನ್ನಡ **ಲಿಪಿ** : ಸಂಸ್ಕೃತ

ಮಹಾನಾಗಕುಲದ ಭೂಶ್ರೇಷ್ಠಿ ಈ ಮಾನಸ್ತಂಭವನ್ನು ನಿಲ್ಲಿಸಿದ ಎಂಬ ವಿವರ.

೧೯೧

೨. ಮೇಲ್ವೇವೂರ್, ವೃಷಭಪುರೀಶ್ವರ ದೇವಾಲಯದ ಮುಂದಿನ ಮಂಟಪದ ಅಧಿಷ್ಠಾನದ ಪಶ್ಚಿಮ ಮುಖದಲ್ಲಿ

ಆಕರ : *SII*, Vol. XVII, No.242 **ಕಾಲ** : ಕ್ರಿ.ಶ. ೧೪೭೦

ದಲವಾನಲ್ಲೂರಪಟ್ಟಿನ ಬೇವೂರ ಶೈವಸ್ಥಾನದ ಏರಿಂಗಳುಯಿಂದ (ಠಳಿಯ) ನಾಯನಾರಿಗೆ ಕೋರಾಊಳನೂ? ಜೀರ್ಣೋದ್ಧಾರವನು ಮಾಡಿ ದಿನಂಪ್ರತಿ ಸಾಯಂಕಾಲದಲ್ಲಿ ೬೦ ದೀಪವನ್ನು, ತಿರುಪಣಿಯನ್ನು ಏರ್ಪಡಿಸಿದ ವಿವರ.

೧೯೨

೩. ಮೇಲ್‌ಶೇಯೂರು, ವೀರಭದ್ರೇಶ್ವರ ದೇವಾಲಯದ ಮಂಟಪದ ಪೀಠದಲ್ಲಿ

ಆಕರ : *TLIMP*, 317-220 / 1904 **ಕಾಲ** : ಕ್ರಿ.ಶ. ೧೪೭೦

ಅಣ್ಣಮರಸನ ಸಹಿ ಇರುವ ಈ ದಾಖಲೆ ಶಕ ೧೩೯೨ರ ವಿಕೃತಿ ಸಂವತ್ಸರದಲ್ಲಿ (ಪ್ರಾಯಶಃ ಮಂಟಪದ) ಮಧ್ಯಭಾಗವನ್ನು ಕಟ್ಟಿಸಿದ ಉಲ್ಲೇಖ.

ದಿಂಡಿವನಂ ತಾಲೂಕು

೧೯೩

೧. ಪೆರುಮುಕ್ಕಲ್, ಗ್ರಾಮದ ಸಮೀಪದ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಎಡಭಾಗದಲ್ಲಿ

ಆಕರ : *TLIMP*, 419-380 / 1905 **ಕಾಲ** : ಕ್ರಿ.ಶ.ಸು. ---

ಪಡೈವೀಡಿನ ಚಿಕ್ಕಕೋವೇರಿನಾಯಕನ ಮಗ ಲಿಂಗಪ್ಪ ಎಂಬುವನು ಮೆಟ್ಟಿಲುಗಳನ್ನು ಕಟ್ಟಿಸಿದ ವಿವರ.

ತಿರುಕೋಯ್ಲೂರು ತಾಲೂಕು

೧೯೪

೧. ತಿರುವೆಣ್ಣೈನಲ್ಲೂರು, ಕೃಪಾಪುರೀಶ್ವರ ದೇವಾಲಯದ ಗೋಪುರವೊಂದರ ಪೂರ್ವಗೋಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ವಿರೂಪಾಕ್ಷ

ಆಕರ : *ARIE*, 1921-22, B 474 **ಕಾಲ** : ಕ್ರಿ.ಶ. ೧೩೯೬

ವಿರೂಪಾಕ್ಷರಾಜನ ಮಂತ್ರಿಯಾದ ನಂಜಣ್ಣನ ಅಣ್ಣನಾದ ವಿರುಪಣನು ದೇವಾಲಯದ ದಕ್ಷಿಣ ಕಡೆ ಇರುವ ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದ ವಿವರ.

೧೯೫

೨. ಕಾನ್ದಲ್ವಾಡಿ, ಆಂಜನೇಯಸ್ವಾಮಿ ದೇವಾಲಯದ ಗೋಡೆಯಲ್ಲಿ

ಆಕರ : *ARIE,* 1936-37, B 272 **ಕಾಲ** : ಕ್ರಿ.ಶ.ಸು. ೧೭ನೇ ಶತಮಾನ.

ಕಾಂದಲವಾಡಿಯ ಲಕ್ಷ್ಮೀನಾರಾಯಣ ದೇವರಿಗೆ ಗರುಡಗಂಬವನ್ನು ಚೆಂಡಿಕೆಯ ನರಸಯ್ಯನ ಪೌತ್ರ ಕೇಶವಣ್ಣನು ಮಾಡಿಸಿದ (ಇದೇ ಶಾಸನದ ಕೆಳಗೆ) ನಾರಾಯಣಪುರದಲ್ಲಿರುವ ದೇವಾಲಯವನ್ನು ಕಳಸಯ್ಯ ತಿಮ್ಮಪ್ಪನ ಮಗ ಗಿರಿಯಪ್ಪಯ್ಯ ಮಾಡಿಸಿದ ವಿವರವಿದೆ.

ಕಡಲೂರು ಜಿಲ್ಲೆ

ಕಡಲೂರು ತಾಲೂಕು

೧೯೬

೧. ತಿರುವದಿ, ತಿರುವೀರಟನೇಶ್ವರ ದೇವಾಲಯದ ತ್ರಿಪುರ ಸಂಹಾರ ಮೂರ್ತಿಯ ಮುಂದಿರುವ ಅಲಂಕಾರ ಮಂಟಪದ ದಕ್ಷಿಣ ಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಬುಕ್ಕಣ್ಣ ಒಡೆಯ

ಆಕರ : *SII,* Vol. IX, No.413 **ಕಾಲ** : ಕ್ರಿ.ಶ. ೧೩೬೦

ಕುಮಾರ ಕಂಪಣ ಒಡೆಯನ ಮನ್ನೆಯ ದುಗ್ಗಣದೇವರು, ಪೂಜಾಕೈಂಕರ್ಯಗಳು ನಿಂತುಹೋಗಿದ್ದ ತಿರುವದಿಯ ಮೊದಲೀಶ್ವರಮೊಡೆಯನಾಯನಾರಿಗೆ ದೇವರ ಅಂಗಭೋಗ, ಅಮೃತಪಡಿ ಕೀಳೈಅಳಿಶುಪಟ್ಟು ಪಟ್ರುವಿನ ಸಾತ್ತಿಪಟ್ಟು ಎಂಬ ನಾಯಪರಿಪಾಲನ ನಲ್ಲೂರ್ ಗ್ರಾಮವನ್ನು ದತ್ತಿ ಬಿಟ್ಟ ವಿವರ.

೧೯೭

೨. ತಿರುಮನಿಕುಳಿ, ವಾಮನಪುರೀಶ್ವರಿ ದೇವಾಲಯದಲ್ಲಿರುವ ಶಾಸನ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *SII,* Vol.VII, No.789 **ಕಾಲ** : ಕ್ರಿ.ಶ. ೧೪೩೭

ತಿರುಪಳಿ, ಅಂಗರಂಗಭೋಗ, ಅಮೃತಪಡಿಗಳನ್ನು, ದೇವರರಾಯ ಮಹಾರಾಯರ ಹೆಸರಿನಲ್ಲಿ ತಿರುನಾಳು ನಡೆಸಿಕೊಂಡು ಬರುವ ಸಲುವಾಗಿ ದತ್ತಿ ನೀಡಿರುವ ವಿವರ.

೧೯೮

೩. ತಿರುವದಿ, ತಿರುವೀರಟನೇಶ್ವರ ದೇವಾಲಯದ ಮಧ್ಯದ್ವಾರದ ಮುಂದಿರುವ ಅಲಂಕಾರ ಮಂಟಪದ ಪೂರ್ವ ಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ನರಸಿಂಹರಾಯ ಒಡೆಯ

ಆಕರ : *SII,* Vol. IX, No. 466 **ಕಾಲ** : ಕ್ರಿ.ಶ. ೧೪೭೨

ಅವರಸರದ ಅಂಣಮರಸಯ್ಯನ ಕಾರ್ಯಕ್ಕೆ ಕರ್ತನಾದ ತಿಮ್ಮನಾಯಕರು ತಿರುವದಿಯ ತಿರುವೀರಟ ದೇವ ಪೂಜಾ ಕೈಂಕರ್ಯಗಳಿಗೆ ಅಣ್ಣಮರಸರ ಅಮರನಾಯಕತನಕ್ಕೆ ಸೇರಿದ ಕೊಳತ್ತೂರು ಗ್ರಾಮವನ್ನು ೧೨೫ ಹೊನ್ನುಗಳಿಗೆ ಗುತ್ತಿಗೆ ನೀಡಿರುವ ವಿವರ ಹಾಗೂ ಹಲವು ತೆರಿಗೆಗಳನ್ನು ಸಹ ದತ್ತಿ ಬಿಟ್ಟಿರುವ ವಿವರ.

೧೯೯

೪. ಅದೇ ಸ್ಥಳದಲ್ಲಿರುವ ಇನ್ನೊಂದು ಶಾಸನ

ರಾಜಮನೆತನ : --- **ರಾಜ** : ---

ಆಕರ : *SII,* Vol. IX, No.467 **ಕಾಲ** : ಕ್ರಿ.ಶ. ೧೪೭೨

ಅಣ್ಣಮರಸಯ್ಯನ ಕಾರ್ಯಕ್ಕೆ ಕರ್ತನಾದ ತಿಂಮಣನಾಯಕರು ವೀರದೇವರ ಗುಡಿಯ ಸ್ಥಾನಿಕರಿಗೆ, ತಾವು ವೀರದೇವರಿಗೆ ಬಿಟ್ಟ ತ್ರಿಭುವನಮಹಾದೇವಿ ಪಟ್ಟಣ ಪೊಸಗುಳತ್ತೂರು ಗ್ರಾಮದಲ್ಲಿ ನಂದಾದೇವಿಗೆಗೆ ನಂಜೆನೆಲವನ್ನು ದತ್ತಿ ಬಿಟ್ಟ ವಿವರ.

ಕಾಂಚೀಪುರಂ ಜಿಲ್ಲೆ

ಕಾಂಜೀವರಂ ತಾಲೂಕು (ಕಂಚಿ ತಾಲೂಕು)

೨೦೦

೧. ಕಂಚಿ ರಾಜಸಿಂಘೇಶ್ವರ (ಕೈಲಾಸನಾಥ) ದೇವಾಲಯದ ಮುಖಮಂಟಪದ ಕಂಬವೊಂದರ ಮೇಲಿರುವ ಶಾಸನ.

ರಾಜಮನೆತನ : ಚಲುಕ್ಯ **ರಾಜ** : ವಿಕ್ರಮಾದಿತ್ಯ

ಆಕರ : *EI,* Vol.III, p.359 **ಕಾಲ** : ಕ್ರಿ.ಶ. ೬೩೭

ಚಲುಕ್ಯ ವಿಕ್ರಮಾದಿತ್ಯನು ಕಂಚಿಯನ್ನು ಗೆದ್ದು, ಅಲ್ಲಿನ ರಾಜಸಿಂಘೇಶ್ವರ ದೇವಾಲಯದ ಐಶ್ವರ್ಯವನ್ನು ಕಂಡು, ಪರಿಶೀಲಿಸಿ ಮತ್ತೆ ದೇವರಿಗೆ ದತ್ತಿ ಬಿಟ್ಟ ವಿವರ. ಈ ಶಾಸನವನ್ನು ವಲ್ಲಭದುರ್ಜಯನ ಅಪ್ಪಣೆಯ ಮೇರೆಗೆ ಅನಿವಾರಿತ ವಲ್ಲಭನು ರಚಿಸಿದನೆಂದು ತಿಳಿಯುತ್ತದೆ.

೨೦೧

೨. ಕಂಚಿ ಏಕಾಂಬರನಾಥಸ್ವಾಮಿ ದೇವಾಲಯದ ಗೋಪುರದ ತಳಪಾಯದ ಸಾವಿರಕಂಬದ ಮಂಟಪದ ಹತ್ತಿರ

ರಾಜಮನೆತನ : ವಿಜಯನಗರ **ರಾಜ** : ವಿಜಯರಾಜ

ಆಕರ : *ARIE,* 1939-40, B 348 **ಕಾಲ** : ಕ್ರಿ.ಶ. ೧೪೫೭

ಭಾಷೆ : ಕನ್ನಡ, ತಮಿಳು

ರಾಜನ ಮಗಳಾದ ತ್ರಯಂಬಕದೇವಿಯು ತಾಂಡವದೇವ (ಕಾಕ್ಕುನಾಏರ್) ಮತ್ತು ತ್ರಯಂಬಕೇಶ್ವರ ಗುಡಿಗಳ ಮುಂದಿನ ೧೭ ಕಂಬಗಳ ಚಿತ್ರಮಂಟಪವನ್ನು ಕೊಡುಗೆಯಾಗಿ ನೀಡಿರುವಂತೆ ಈ ದ್ವಿಭಾಷಾ ಶಾಸನದಿಂದ ತಿಳಿದುಬರುತ್ತದೆ.

೨೦೨

೩. ಚಿಕ್ಕ ಕಂಚಿ, ವರದರಾಜಸ್ವಾಮಿ ದೇವಾಲಯದ ತಳಪಾಯದ ಪೂರ್ವ ದಕ್ಷಿಣ ಮತ್ತು ಪಶ್ಚಿಮಗಳಲ್ಲಿ

ರಾಜಮನೆತನ : ವಿಜಯನಗರ — **ರಾಜ** : ಕೃಷ್ಣದೇವರಾಯ

ಆಕರ : *SII*, Vol. IX, No.499 — **ಕಾಲ** : ಕ್ರಿ.ಶ. ೧೫೧೪

ರಾಜನ ವಂಶಾವಳಿಯನ್ನು ಸಂಸ್ಕೃತ ಭಾಷೆಯಲ್ಲಿ ನೀಡಿದೆ. ರಾಜನು ತನಗಾಗಿ, ತನ್ನ ತಂದೆ ನರಸನಾಯಕ ಹಾಗೂ ತಾಯಿ ನಾಗಲಾದೇವಿ ಅವರುಗಳಿಗೆ ಧರ್ಮವಾಗಬೇಕೆಂದು ವರದರಾಜಸ್ವಾಮಿ ದೇವಾಲಯದ ಪುಣ್ಯಕೋಟಿ ವಿಮಾನಕ್ಕೆ ಲೋವೆಯಿಂದ ಕಳಸದವರೆಗೂ ಅಪರಂಜಿ ಚಿನ್ನದಲ್ಲಿ ಹೊದಿಕೆ ಹಾಕಿಸಿದ ವಿವರ.

೨೦೩

೪. ಅದೇ ದೇವಾಲಯದ ಎರಡನೇ ಪ್ರಾಕಾರದ ಗೋಡೆಯಲ್ಲಿ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *SII*, Vol. IX, No.547 — **ಕಾಲ** : ಕ್ರಿ.ಶ. ೧೫೩೨

ರಾಜ ಅಚ್ಯುತರಾಯ, ರಾಣಿ ವರದರಾಜಮ್ಮ, ರಾಜಕುಮಾರ ವೆಂಕಟಾದ್ರಿ ಅವರುಗಳು ದೇವರ ಸನ್ನಿಧಿಯಲ್ಲಿ ತುಲಾಪುರುಷ ಮಹಾದಾನಗಳನ್ನು ನೆರವೇರಿಸಿ ದೇವರಿಗೆ ಚಿರಪು, ಪುಳಗಾಪು, ಪೀತಾಂಬ್ರ, ಪದಕ, ಪಟ್ಟೆ–ಹಚ್ಚಡ, ಪಟ್ಟೆ ಸೀರೆ, ಮಂಜಿಡಿಕೆಸೀರೆ, ನೈವೇದ್ಯ ಪದಾರ್ಥಗಳು ಹಾಗೂ ರತ್ನಘಟಿತ ಶಂಖು, ಚಕ್ರ, ಅಭಯಹಸ್ತ, ತಿರುನಾಮಗಳನ್ನು ದತ್ತಿ ನೀಡಿರುವ ವಿವರ.

೨೦೪

೫. ಅದೇ ದೇವಾಲಯದ ಎರಡನೇ ಪ್ರಾಕಾರದ ದಕ್ಷಿಣ ಗೋಡೆಯ ಮೇಲೆ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *SII*, Vol.IX, No.552 — **ಕಾಲ** : ಕ್ರಿ.ಶ. ೧೫೩೨

ರಾಜ, ರಾಣಿ ಹಾಗೂ ರಾಜಕುಮಾರ ಅವರುಗಳು ವಿಷ್ಣುಕಂಚಿಗೆ ಬಂದು ಮುತ್ತಿನ ತುಲಾಪುರುಷವನ್ನು ತೂಗಿ, ಭೂದಾನ, ಸಹಸ್ರ ಗೋದಾನವನ್ನು ಮಾಡಿ ವರದರಾಜ ದೇವರಿಗೆ ಚಿಯನವರದ ಸೀಮೆಯ ೩, ಗ್ರಾಮಗಳು, ೧೭ ಸಹ ಗ್ರಾಮಗಳನ್ನು ನೈವೇದ್ಯ, ದಧ್ಯನ್ನ, ತಿರುವತ್ತಿಸಾಮ, ಅತಿರಸ ಇತ್ಯಾದಿಗಳ ತಯಾರಿಕೆ ಹಾಗೂ ವಿತರಣೆಗೆ ದತ್ತಿ ಬಿಟ್ಟ ವಿವರ.

೨೦೫

೬. ಕಂಚಿ, ಕಾಮಾಕ್ಷಿ ಅಮ್ಮನವರ ದೇವಾಲಯದ ಎರಡನೇ ಪ್ರಾಕಾರದ ಉತ್ತರ ಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE,* 1954-55, B 304 **ಕಾಲ** : ಕ್ರಿ.ಶ. ೧೫೩೩

ರಾಜನ ತುಲಾಭಾರ ಮಹಾದಾನದ ಸಂದರ್ಭದಲ್ಲಿ ಕಾಮಾಕ್ಷಿ ಅಮ್ಮನ್‌ದೇವಿ ಸನ್ನಿಧಿಯಲ್ಲಿ ಆಹಾರದಾನ ಇತ್ಯಾದಿ ಕೈಂಕರ್ಯಗಳಿಗೆ ೮ ಗ್ರಾಮಗಳನ್ನು ದತ್ತಿ ಬಿಟ್ಟ ವಿವರ. ಸುಮಂಗಲಿಯರಾದ ಹೆಂಗಸರಿಗೆ ಪ್ರಸಾದದ ನಿರ್ದಿಷ್ಟ ಭಾಗವನ್ನು ವಿತರಣೆ ಮಾಡಲು ಸೂಚಿಸಿ ದತ್ತಿ ನೀಡಲಾಗಿದೆ.

೨೦೬

೭. ಚಿಕ್ಕ ಕಂಚಿ, ವರದರಾಜಸ್ವಾಮಿ ದೇವಾಲಯದ ಎರಡನೆಯ ಪ್ರಾಕಾರದ ದಕ್ಷಿಣ ಗೋಡೆ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII,* Vol.IX, No. 562 **ಕಾಲ** : ಕ್ರಿ.ಶ. ೧೫೩೩

ಅಚ್ಯುತರಾಯನು ತಾನು ಪಟ್ಟಾಭಿಷಿಕ್ತವಾದ ದಿನದಂದು ವರಜರಾಜಸ್ವಾಮಿ ಮತ್ತು ಏಕಾಂಬರನಾಥಸ್ವಾಮಿ ದೇವಾಲಯಗಳಿಗೆ ಸಮಪ್ರಮಾಣದಲ್ಲಿ ಗ್ರಾಮದತ್ತಿಗಳನ್ನು ಏರ್ಪಡಿಸಿದ್ದು, ಅದನ್ನು ಕಾರ್ಯಗತಗೊಳಿಸಲು ನೇಮಿತಗೊಂಡಿದ್ದ ಸಾಳುವ ನಾಯಕನು ಗ್ರಾಮಗಳನ್ನು ಹೆಚ್ಚು ಕುಂದಾಗಿ ಬಿಟ್ಟಿರಲಾಗಿ ಅದನ್ನು ಪರಾಮರಿಸಿ ಗ್ರಾಮಗಳನ್ನು ಸಮವಾಗಿ ಬಿಡಿಸಿ ದೇವರ ನೈವೇದ್ಯ, ಪ್ರಸಾದ ಅತಿರಸ, ದಧ್ಯನ್ನ ತಿರುವತ್ತಿಸಾಮ, ಗಂಧ, ಅಡಿಕೆ, ಎಲೆ ಮುಂತಾದವುಗಳಿಗೆ ದತ್ತಿ ಬಿಟ್ಟ ವಿವರ.

೨೦೭

೮. ಕಂಚಿ, ಕಾಮಾಕ್ಷಿ ಅಮ್ಮನವರ ದೇವಾಲಯದ ಎರಡನೇ ಪ್ರಾಕಾರದ ಋಷಿಗೋಪುರದಲ್ಲಿ

ಆಕರ : *ARIE,* 1954-55, B 320 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ದೇವಿಗೆ ಚಿಕ್ಕವೀರಸೆಟ್ಟಿ ಎಂಬುವನ ಭಕ್ತಿ ಸಮರ್ಪಣೆಯ ದಾಖಲೆ.

ಮದುರಾಂತಕಂ ತಾಲೂಕು

೨೦೮

೧. ಒರತ್ತಿ, ಗ್ರಾಮದ ಶಿವಾಲಯದ ಮುಂದಿರುವ ಕಲ್ಲಿನಲ್ಲಿ

ರಾಜಮನೆತನ : ರಾಷ್ಟ್ರಕೂಟ **ರಾಜ** : ಕನ್ನರದೇವ

ಆಕರ : *ARIE,* 1976-77, B 211 **ಕಾಲ** : ಕ್ರಿ.ಶ.ಸು. ೯೬೩

ವ್ಯಕ್ತಿಯೋರ್ವನು (ಹೆಸರು ತ್ರುಟಿತ) ತನ್ನ ತಲೆಯನ್ನು ಮಾಚೇಶ್ವರ ದೇವರಿಗೆ ಅರ್ಪಿಸಿದ ವಿವರ. ಪ್ರಾಯಶಃ ಕಾಂಚಯನೆಂಬ ಖಜಾನೆಯ ಅಧಿಕಾರಿಯ ಸಂಬಂಧಿ ಇದ್ದಂತೆ ಕಾಣುತ್ತದೆ.

೨೦೯

೨. ಅದೇ ಸ್ಥಳದಲ್ಲಿರುವ ಮತ್ತೊಂದು ಶಾಸನ

ರಾಜಮನೆತನ : ರಾಷ್ಟ್ರಕೂಟ **ರಾಜ** : ಕನ್ನರದೇವ

ಆಕರ : *ARIE*, 197 6-77, B 210 **ಕಾಲ** : ಕ್ರಿ.ಶ.ಸು. ೧೦ನೇ ಶತಮಾನ

ಕಾಂಚಯನ್ ಎಂಬ ಖಜಾನೆ ಅಧಿಕಾರಿ ಉರತ್ತಿಯ ಮಹಾದೇವರ ಅಮೃತಪಡಿ ಹಾಗೂ ಆರಾಧನೆಗಾಗಿ 'ಅರ್ಚ್ಚನಾಭೋಗ' ಎಂಬ ದತ್ತಿಯನ್ನು ಬಿಟ್ಟಿರುವ ವಿವರ.

ಚೆಯ್ಯೂರ್ ತಾಲೂಕು

೨೧೦

೧. ತಿರುವತ್ತಿಯೂರ್, ವೇದಪುರೀಶ್ವರ ದೇವಾಲಯದ ದಕ್ಷಿಣಕ್ಕೆ ನಟರಾಜನ ಮಂಟಪದಲ್ಲಿ

ರಾಜಮನೆತನ : ವಿಜಯನಗರ **ರಾಜ** : ನರಸಿಂಗದೇವ

ಆಕರ : *ARIE*, 1939-40, B 127 **ಕಾಲ** : ಕ್ರಿ.ಶ. ೧೫೦೦

ಅಧಿಕಾರಿಗಳಾದ ಮಾದಿರಾಜ ಚೆನ್ನಯ್ಯ ಮತ್ತು ಚೊಕ್ಕನಾಯನಾರ್ ಎಂಬುವರು, ಪ್ರವಾಹದಿಂದ ಗ್ರಾಮ ಮತ್ತು ದೇವಾಲಯದ ಭೂಮಿಗಳು ಕೊಚ್ಚಿಕೊಂಡು ಹೋಗಿರುವ ಬಗ್ಗೆ ರಾಜನಿಗೆ ಸುದ್ದಿ ನೀಡಿದಾಗ, ರಾಜ ಜೋಡಿ, ಸೂಲವರಿ, ಪಟ್ಟಡೈ ಮತ್ತು ನೂಲಾಯಂಗಳಿಗೆ ಸಂಬಂಧಿಸಿದ, ಗ್ರಾಮ ಮತ್ತು ದೇವಾಲಯದಿಂದ ಬರಬೇಕಾಗಿದ್ದ ಶುಲ್ಕಗಳಲ್ಲಿ ೧೫೦ ಹೊನ್ನನ್ನು ಕೊಟ್ಟು, ದೇವಾಲಯದಲ್ಲಿ ಹಬ್ಬಗಳನ್ನು ಆಚರಿಸಲು ಹಾಗೂ ಒಡ್ಡುಗಳನ್ನು ಜೀರ್ಣೋದ್ಧಾರ ಮಾಡಲು ದತ್ತಿ ಬಿಟ್ಟ ವಿವರ.

ತಿರುವಳ್ಳೂರು ಜಿಲ್ಲೆ

ಪೊನ್ನೇರಿ ತಾಲೂಕು

೨೧೧

೧. ನಾಗಲಾಪುರಂ, ವೇದನಾರಾಯಣಸ್ವಾಮಿ ದೇವಾಲಯದ ಮಧ್ಯ ಗರ್ಭಗೃಹದ ದಕ್ಷಿಣ, ಪೂರ್ವ ಮತ್ತು ಉತ್ತರ ಗೋಡೆಗಳಲ್ಲಿ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *SII*, Vol.IX, No. 526 **ಕಾಲ** : ಕ್ರಿ.ಶ.ಸು. ೧೫೨೯

ತ್ರುಟಿತ. ವೇದಗಿರಿ ಪೆರುಮಾಳ್ ದೇವರ ಪೂಜಾಕೈಂಕರ್ಯಗಳನ್ನು ಆ ಬಗ್ಗೆ ಕೊಟ್ಟಿರುವ ತಾಮ್ರಶಾಸನದಲ್ಲಿ ವಿವರಿಸಿರುವಂತೆ ನಡೆಯಿಸಿಕೊಂಡು ಬರಬೇಕು. ಖರ್ಚು-ವೆಚ್ಚಗಳನ್ನು ಅದಕ್ಕಾಗಿ ನೀಡಿರುವ ಗ್ರಾಮಗಳಿಂದ ಬರಿಸಬೇಕು. ಎಲ್ಲೆಕಲ್ಲುಗಳನ್ನು ಕಿತ್ತುಹಾಕಿದ ದುರ್ಜನರಿಗೆ ತಕ್ಕ ಕಟ್ಟುಮಾಡಿ ಅವರಿಂದ ವಸೂಲು ಮಾಡಿದ ದಂಡವನ್ನೂ ದೇವಾಲಯಕ್ಕೆ ಕೊಡಬೇಕು ಎಂಬ ವಿವರ.

೨೧೨

೨. ಅದೇ ದೇವಾಲಯದ ವೇದವಲ್ಲಿ ತಾಯಿಯವರ ಆಲಯದ ಎರಡನೇ ಗೋಪುರದ ಪ್ರವೇಶದಲ್ಲಿ

ರಾಜಮನೆತನ : ವಿಜಯನಗರ
ರಾಜ : ಕೃಷ್ಣದೇವರಾಯ

ಆಕರ : *SII*, Vol.IX, No.527
ಕಾಲ : ಕ್ರಿ.ಶ. ೧೫೨೯

ಮೇಲಿನ ಶಾಸನದ ಯಥಾ ನಕಲು.

೨೧೩

೩. ಅದೇ ದೇವಾಲಯದ ಎರಡನೇ ಗೋಪುರದ ಎಡಕ್ಕೆ

ರಾಜಮನೆತನ : ವಿಜಯನಗರ
ರಾಜ : ಕೃಷ್ಣದೇವರಾಯ

ಆಕರ : *TLIMP*, 698-626/1904
ಕಾಲ : ಕ್ರಿ.ಶ. ೧೫೨೯

ಭೂಮಿದಾನದ ವಿವರ.

೨೧೪

೪. ತಿರುಪ್ಪಾಲೆವನಂ, ತಿರುಪಾಲೇಶ್ವರ ದೇವಾಲಯದ ಲೋಹದ ನಟರಾಜನ ಪೀಠದ ಮೇಲಿರುವ ಶಾಸನ

ಆಕರ : *ARIE*, 1928-29, B 367
ಕಾಲ : ಕ್ರಿ.ಶ. ೧೪೪೦

ನಟರಾಜನ ಪೀಠವನ್ನು ಉದಯಗಿರಿಯ ಪ್ರಧಾನಿ ತಿಮ್ಮಣ್ಣನ ಮಗ ಅವಸರಂ ಬ್ರಹ್ಮಪ್ಪನಾಯಕನೆಂಬುವನು ಮಾಡಿಸಿಕೊಟ್ಟ ವಿವರ.

ತಿರುಚಿನಾಪಳ್ಳಿ ಜಿಲ್ಲೆ

ತಿರುಚಿನಾಪಳ್ಳಿ ತಾಲೂಕು

೨೧೫

೧. ಶ್ರೀರಂಗ ದೇವಾಲಯ, ನೇಳಿಕೇಟ್ಟಾನ್ ಗೋಪುರದ ಪ್ರವೇಶದ ಬಲಗಡೆ

ರಾಜಮನೆತನ : ಕಲ್ಯಾಣದ ಚಾಲುಕ್ಯ
ರಾಜ : ೬ನೇ ವಿಕ್ರಮಾದಿತ್ಯ

ಆಕರ : *ARIE*, 1941-42, B 204
ಕಾಲ : ಕ್ರಿ.ಶ.ಸು. ೧೧೧೫

ರಾಜನ ಪರವಾಗಿ ದಂಡನಾಯಕ ಮತ್ತು ಕನ್ನಡ ಸಂಧಿವಿಗ್ರಹಿ ಎಂಬ ಅಧಿಕಾರಿಗಳು ದೇವಾಲಯದಲ್ಲಿ ನಂದಾದೀವಿಗೆಗಳ ನಿರ್ವಹಣೆಗೆ ದತ್ತಿ ಬಿಟ್ಟಿರುವ ದಾಖಲೆ.

೨೧೬

೨. ಶ್ರೀರಂಗಂ, ಪಶ್ಚಿಮ ಪ್ರಾಕಾರದ ಭಿತ್ತಿಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ?

ಆಕರ : *ARIE,* 1938-39, B 52 **ಕಾಲ** : ಕ್ರಿ.ಶ.ಸು. ೧೪ನೇ ಶತಮಾನ.

ಅನೇಕ ವ್ಯಕ್ತಿಗಳ ಸಹಿಗಳಿದ್ದು ಅವು ಪ್ರಾಯಶಃ ವಿಜಯನಗರದ ರಾಜಗೃಹಕ್ಕೆ ಸೇರಿದ ವ್ಯಕ್ತಿಗಳದ್ದಿರಬೇಕು.

೨೧೭

೩. ಶ್ರೀರಂಗಂ, ಶ್ರೀರಂಗನಾಥಸ್ವಾಮಿ ದೇವಾಲಯದ ತಾಮ್ರಪಟ

ರಾಜಮನೆತನ : ವಿಜಯನಗರ **ರಾಜ** : ಹರಿಹರ III

ಆಕರ : *EI,* Vol.XVI, p.222 **ಕಾಲ** : ಕ್ರಿ.ಶ. ೧೪೧೪

ದೇವರಾಯರ ಕುಮಾರ ಶ್ರೀಮನ್ಮಹಾಮಂಡಳೇಶ್ವ ಹರಿಹರರಾಯರು, ರಂಗನಾಥ ದೇವಸ್ಥಾನದ ಉತ್ತಮ ನಂಬಿಯರಿಗೆ ಕಾವೇರಿ ತಟದಲ್ಲಿರುವ ಕೆಳಂಗುನಾಡಿನ ರಾಯಪುರ ವೇಂಠೆಯ ನರೂರು ಗ್ರಾಮವನ್ನು ಶ್ರೀರಂಗನಾಥಪುರವೆಂದು ಪ್ರತಿನಾಮವಿಟ್ಟು ಪೂಜಾಕೈಂಕರ್ಯಗಳಿಗೆ ದತ್ತಿ ನೀಡಿರುವ ವಿವರ.

೨೧೮

೪. ಅದೇ ದೇವಾಲಯದ ೨ನೇ ಪ್ರಾಕಾರದ ಪೂರ್ವಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *SII,* Vol. XXIV, No.330; *ARIE,* 1938-39, B 20 **ಕಾಲ** : ಕ್ರಿ.ಶ. ೧೪೩೪

ಅಣ್ಣ ಚೇಉಡಪ್ಪನೆಂಬ ಅಧಿಕಾರಿ ತನ್ನ ತಂದೆ ಆದಿತ್ಯದೇವಗಳ ಹೆಸರಿನಲ್ಲಿ ಶ್ರೀರಂಗನಾಥದೇವರಿಗೆ ಘೃತಫಲಶರ್ಕರಾದಿ ಮಿಶ್ರ ನೈವೇದ್ಯ, ಸಾಂಬಾಳತಳಿ, ಅಪ್ಪ ಮತ್ತು ಅರೋಗಣೆಗೆ, ನಂದಾಬೆಳಕು ಇತ್ಯಾದಿಗಳಿಗಾಗಿ ತಿರುಚಿರಾಪಳ್ಳಿ ಚಾವಡಿಯ ತೇಂಕರ ರಾಜಗಂಭೀರ ವಳನಾಡ ಕೋಡಿಯಾಳ ಗ್ರಾಮ ಹಾಗೂ ರಾಜರಾಜ ಒಳನಾಡ ಮುರಿಯ ಚಿರುದಯಯೂರು ಎಂಬ ಗ್ರಾಮಗಳನ್ನೂ, ೩೦ ಹಸು, ಒಂದು ಆನೆಯನ್ನು ದತ್ತಿ ಬಿಟ್ಟಿರುವ ವಿವರ.

೨೧೯

೫. ಅದೇ ದೇವಾಲಯದ ಎರಡನೇ ಪ್ರಾಕಾರದ ಪೂರ್ವಗೋಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *ARIE*, 1938-39, B 33 **ಕಾಲ** : ಕ್ರಿ.ಶ. ೧೪೪೭

ಭಾಷೆ : ಕನ್ನಡ **ಲಿಪಿ** : ಗ್ರಂಥ

ಮಾದಣ್ಣ ದಣ್ಣಾಯಕ, ತಿರುಪ್ಪರಸ, ಹಿರಿಯ ತಿರುಪ್ಪರಸ, ನಾಗಾಯಮ್ಮ ಮತ್ತು ಅಮ್ಮಕ್ಕ ಮುಂತಾದ ಏಳು ಜನರ ಹೆಸರಿನಲ್ಲಿ ರಂಗನಾಥದೇವರ ಪೂಜಾಕೈಂಕರ್ಯಗಳಿಗೆ ದತ್ತಿ ನೀಡಲಾಗಿದೆ.

೨೨೦

೬. ಅದೇ ದೇವಾಲಯ, ನಾನ್‌ಮುಗನ್ ಗೋಪುರದ ಪ್ರವೇಶದ್ವಾರದ ಬಲಗಡೆ

ರಾಜಮನೆತನ : ವಿಜಯನಗರ **ರಾಜ** : ದೇವರಾಯ

ಆಕರ : *ARIE*, 1937-38, B 121 **ಕಾಲ** : ಕ್ರಿ.ಶ.ಸು. ೧೫ನೇ ಶತಮಾನ.

ಭಾಷೆ : ಕನ್ನಡ **ಲಿಪಿ** : ಗ್ರಂಥ

ರಾಜನ ಹೆಸರಿನಲ್ಲಿ ದೇವಾಲಯದಲ್ಲಿ ಆರಂಭಿಸಲಾದ ಸೇವೆಯೊಂದಕ್ಕೆ ನಾಲ್ಕು ಗ್ರಾಮಗಳನ್ನು ಉತ್ತಮನಂಬಿ ಮತ್ತು ಅವನ ಸೋದರ ಚಕ್ರರಾಯರ ಜವಾಬ್ದಾರಿಗೆ ನೀಡಲಾಯಿತು. ಇವರು ಭತ್ತ ಮತ್ತು ಹಣದ ರೂಪದಲ್ಲಿ ಪರಿಹಾರ ನೀಡಬೇಕಾಗಿತ್ತು.

೨೨೧

೭. ಅದೇ ದೇವಾಲಯದ ಪಾಂಗಲ್‌ಪಟ್ಟ ಮಂಟಪದ ಗೋಡೆಯ ಮೇಲೆ

ಆಕರ : *ARIE*, 1938-39, B 106 **ಕಾಲ** : ಕ್ರಿ.ಶ. ೧೪೪೮

ಭಾಷೆ : ಕನ್ನಡ **ಲಿಪಿ** : ಗ್ರಂಥ

ಶ್ರೀವತ್ಸಗೋತ್ರದ ಕಾರಣಿಕ ಭಾರತೀವಿಟ್ಟಣನ ಮಗ ಕಾರಣಿಕ ಪೊನ್ನಂಬಳನಾಥನು ಎತಿರಾಜನ್ ತೋಟದಲ್ಲಿ ಹೂ, ತೆಂಗಿನಮರ ಮುಂತಾದವುಗಳನ್ನು ಬೆಳೆಸಲು ಭೂಮಿಯನ್ನು ನಾಗಮಂಗಲದ ಅಣ್ಣಪ್ಪ ಒಡೆಯನಿಂದ ತಿರುಕ್ಕೋಯಿಲೂರಿನ ನಲ್ಲೂರು ನಾಯನಾರನು ಪಡೆದಿದ್ದನು. ಈಗ ಅದನ್ನು ಪಡೆದು ದತ್ತಿ ಬಿಡಲಾಯಿತು.

೨೨೨

೮. ಅದೇ ದೇವಾಲಯದ ಎರಡನೇ ಪ್ರಾಕಾರದ ಚಂದನ ಮಂಟಪದಲ್ಲಿ ಪಶ್ಚಿಮ ದ್ವಾರಬಂಧದ ಎಡಕ್ಕೆ

ರಾಜಮನೆತನ : ವಿಜಯನಗರ **ರಾಜ** : ನರಸಿಂಹ II

ಆಕರ : *SII*, Vol. XXIV, No.350 **ಕಾಲ** : ಕ್ರಿ.ಶ. ೧೪೯೨

ರಂಗನಾಥಸ್ವಾಮಿಗೆ ಮೂರೂ ಜಾವಗಳಲ್ಲಿ ಪೂಜಾ ಕೈಂಕರ್ಯ ಹಾಗೂ ೨೦ ಮಂದಿ ಬ್ರಾಹ್ಮಣ ಭೋಜನದ ವ್ಯವಸ್ಥೆಗಾಗಿ ಮಳನಾಡ ಕೆಳಗಣ ಕೋರಮಂಗಲ ಮುಂತಾದ ೪ ಗ್ರಾಮಗಳನ್ನು ಸರ್ವಮಾನ್ಯವಾಗಿ ದತ್ತಿ ಬಿಟ್ಟ ವಿವರ.

೨೨೩

೯. ಅದೇ ದೇವಾಲಯದ ಪ್ರಾಕಾರವೊಂದರ ಬಲಭಾಗದ ಪ್ರವೇಶದ್ವಾರದ ಸಮೀಪ

ಆಕರ : *ARIE*, 1950-51, B 339 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ನಾಯಕನೋರ್ವನ ಮಗ ಚಿಕ್ಕರಸನಾಯಕನೆಂಬುವನು ದೇವರ ಪೂಜಾ ಕೈಂಕರ್ಯಕ್ಕೆ ಹೂಮಾಲೆ, ಫಲ ಮತ್ತು ತೆಂಗಿನಕಾಯಿಗಳಿಗಾಗಿ ೨೫ ವರಹ ದತ್ತಿ ಬಿಟ್ಟಿರುವ ವಿವರ.

೨೨೪

೧೦. ಅದೇ ದೇವಾಲಯದ, ಎರಡನೇ ಪ್ರಾಕಾರದ ಪೂರ್ವಗೋಡೆಯಲ್ಲಿ

ಆಕರ : *SII*, Vol. XXIV, No.358; *ARIE*, 1938-39 / 23 **ಕಾಲ** : ಕ್ರಿ.ಶ. ೧೫೦೨

ಇದು ಮೇಲಿನ ಶಾಸನದ ಇನ್ನೊಂದು ನಕಲಿದ್ದಂತಿದೆ.

೨೨೫

೧೧. ಅದೇ ದೇವಾಲಯದ, ಎರಡನೇ ಪ್ರಾಕಾರದ ಪಶ್ಚಿಮಗೋಡೆಯ ಮೇಲೆ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *ARIE*, 1938-39, B 44 **ಕಾಲ** : ಕ್ರಿ.ಶ. ೧೫೧೫

ಭಾಷೆ : ಕನ್ನಡ **ಲಿಪಿ** : ಗ್ರಂಥ

ರಾಜನ ಆಜ್ಞೆಯ ಮೇರೆಗೆ ದಣ್ಣಾಯಕ ವೀರಯ್ಯನು ೬೩೦ ಹೊನ್ನು ಆದಾಯವುಳ್ಳ ಭೂಮಿಯನ್ನು ತಿರುವಿಡಿಯಾಟ್ಟು (ಸರ್ವಮಾನ್ಯವಾಗಿ) ದತ್ತಿ ಬಿಟ್ಟ ವಿವರ. ಈ ಭೂಮಿಯನ್ನು ಮೇಲೆ ಬೇರೆ ಯಾವುದೇ ತೆರಿಗೆಗಳನ್ನು ಸಂಗ್ರಹಿಸಬಾರದೆಂಬ ಸೂಚನೆಯನ್ನೊಳಗೊಂಡಿದೆ.

೨೨೬

೧೨. ಅದೇ ದೇವಾಲಯದ ಎರಡನೇ ಪ್ರಾಕಾರದ ಪೂರ್ವಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *SII*, Vol. XXIV, No.411 **ಕಾಲ** : ಕ್ರಿ.ಶ. ೧೫೩೩

ತ್ರುಟಿತ. ಅಚ್ಯುತರಾಯನ ಸಾಧನೆಗಳ ಬಿರುದಾವಳಿಗಳಿದ್ದು, ತುಲಾಪುರುಷ ಮಹಾದಾನ, ಸಹಸ್ರಗೋದಾನ, ದೇವರ ನಿತ್ಯಪೂಜಾ ಕೈಂಕರ್ಯಗಳಿಗಾಗಿ ಅಪ್ಪ, ಅತಿರಸ, ಅಮ್ಮಸಾರ, ವಿಳೆಯದೆಲೆ ಮುಂತಾದ ಪೂಜಾಸಾಮಗ್ರಿಗಳಿಗಾಗಿ ಹಲವು ಗ್ರಾಮಗಳನ್ನು ದತ್ತಿಬಿಟ್ಟ ವಿವರ.

೨೨೭

೧೩. ಅದೇ ದೇವಾಲಯದ ಪ್ರಾಕಾರದ ಪಶ್ಚಿಮಗೋಡೆಯಲ್ಲಿ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *SII*, Vol. XXIV, No.417 — **ಕಾಲ** : ಕ್ರಿ.ಶ. ೧೫೩೪

ಅಚ್ಯುತರಾಯರು ದೇವರಿಗೆ ನೈವೇದ್ಯವನ್ನು ಸಮರ್ಪಿಸಲು ಅನುಕೂಲವಾಗುವಂಥ ಚಿನ್ನದ ಹಿರಿಯ ಹರಿವಾಣವನ್ನು, ಪಟ್ಟದದೇವಿ ವರದರಾಜಮ್ಮನವರು ಚಿಕ್ಕ ಹರಿವಾಣವನ್ನು, ರಾಜಕುಮಾರ ಚಿಕ್ಕವೆಂಕಟಾದ್ರಿ, ಹಿರಿಯ ಬಟ್ಟಲನ್ನು ಶ್ರೀರಂಗಂನಲ್ಲಿನ ಪಾರುಪತ್ಯಗಾರ ಅವಸರದ ಮಲ್ಲರಸನ ಮೂಲಕ ಕಳುಹಿಸಿಕೊಟ್ಟಿರುವ ವಿವರ. ಸಜ್ಜಾಗೃಹದ ಬಾಗಿಲವಾಡಕ್ಕೆ ತಾಮ್ರದ ಮೇಲೆ ಚಿನ್ನದ ಬಣ್ಣವನ್ನು ಹಾಕಿಸಲು ವ್ಯವಸ್ಥೆ ಹಾಗೂ ಪೀತಾಂಬರ, ಚಿನ್ನದ ಕಾಳಾಂಜಿ ಮುಂತಾದವುಗಳನ್ನು ಅರ್ಪಿಸಿದ ಬಗ್ಗೆ ವಿವರ.

೨೨೮

೧೪. ಅದೇ ದೇವಾಲಯದ ಎರಡನೇ ಪ್ರಾಕಾರದ ಪೂರ್ವಗೋಡೆಯಲ್ಲಿ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *SII*, Vol. XXIV, No.437; *ARIE*, 1938-39, B 1 — **ಕಾಲ** : ಕ್ರಿ.ಶ. ೧೫೩೯

ಶ್ರೀರಂಗನಾಥ ದೇವರಿಗೆ ಸಮರ್ಪಿಸಿದ ಕಿರೀಟ, ರತ್ನಕುಂಡಲ, ಕರ್ಣಪತ್ರಗಳ ಸೇವೆಯನ್ನು ಉಲ್ಲೇಖಿಸುವ ಶಿಲಾಶಾಸನ. ಇವುಗಳನ್ನು ರಾಜನ ಪರವಾಗಿ ರಾಮಭಟ್ಟಯ್ಯನವರ ರಾಯಸಂ ವೆಂಗಳಯ್ಯನ ಮೂಲಕ ಕಳುಹಿಸಲಾಗಿದೆ.

೨೨೯

೧೫. ಶ್ರೀರಂಗಂ, ಎರಡನೇ ಪ್ರಾಕಾರದ ಪಶ್ಚಿಮಗೋಡೆಯ ಮೇಲೆ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *ARIE*, 1938-39, B 38 — **ಕಾಲ** : ಕ್ರಿ.ಶ. ೧೫೪೦

ದೇವಾಲಯಕ್ಕೆ ರಾಜನಿಂದ ಕೊಡಲ್ಪಟ್ಟ ಚಿನ್ನದ ಒಡವೆಗಳನ್ನು ಹಲ್ಲರಸ, ಲಿಂಗಯ, ದೇವರಾಯ ಅವರು ಇಲ್ಲಿಗೆ ತಂದುಕೊಟ್ಟ ವಿಷಯ.

೨೩೦

೧೬. ಅದೇ ದೇವಾಲಯದ ಎರಡನೇ ಪ್ರಾಕಾರದ ಪಶ್ಚಿಮಗೋಡೆಯಲ್ಲಿ

ರಾಜಮನೆತನ : ವಿಜಯನಗರ — **ರಾಜ** : ಅಚ್ಯುತರಾಯ

ಆಕರ : *SII*, Vol.XXIV, No.450 — **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಅಚ್ಯುತರಾಯರು ಶ್ರೀರಂಗನಾಥ ದೇವರಿಗೆ ಚಿನ್ನದ ಸ್ವರೂಪಗಳನ್ನು ಕಳುಹಿಸಿದ ಬಗ್ಗೆ ನಿರೂಪ ಪ್ರಮಾಣಿಸಲು ಶಿಲಾಶಾಸನವನ್ನು ಬರೆದಂಥಾ ಉಲ್ಲರಸ ಲಿಂಗಯ ದೇವರಾಯರಿಗೆ ಶ್ರೀರಂಗನಾಥದೇವರು ಅಚ್ಯುತ ಭಕ್ತಿ, ಭುಕ್ತಿ ಹಾಗೂ ಮುಕ್ತಿಯನ್ನು ಕೊಟ್ಟು ರಕ್ಷಿಸಲಿ ಎಂದು ಬೇಡಿರುವುದು ಕಂಡುಬರುತ್ತದೆ.

೨೩೧

೧೭. ಅದೇ ದೇವಾಲಯದ ಸೇನೈಮುದಲಿಯರ್ ಗುಡಿಯ ಉತ್ತರದ ಗೋಡೆಯಲ್ಲಿ

ಆಕರ : *ARIE,* 1950-51, B 320 **ಕಾಲ** : ಕ್ರಿ.ಶ. ೧೫೭೨

ಪದುಮರಸನ ಮಗ ಬುಕ್ಕರಸಪಂಡಿತ ಆಗಮಿಸಿ ಶ್ರೀರಂಗನಾಥದೇವರಿಗೆ ಪೂಜೆ ಸಲ್ಲಿಸಿದ ವಿವರ.

೨೩೨

೧೮. ಅದೇ ದೇವಾಲಯದ ಎರಡನೇ ಪ್ರಾಕಾರದ ದಕ್ಷಿಣಗೋಡೆಯಲ್ಲಿ

ರಾಜಮನೆತನ : ವಿಜಯನಗರ **ರಾಜ** : ಕೃಷ್ಣದೇವರಾಯ

ಆಕರ : *ARIE,* 1938-39, B 64; *SII,* Vol.XXIV, No.391 **ಕಾಲ** : ಕ್ರಿ.ಶ.ಸು. ೧೬ನೇ ಶತ.

ಕೃಷ್ಣದೇವರಾಯನ ಊಳಿಗದವನಾದ ಗಿಂಡಿಯಬಸವಯ್ಯನ ಭಕ್ತಿಯನ್ನು ದಾಖಲಿಸುತ್ತದೆ.

೨೩೩

೧೯. ಅದೇ ದೇವಾಲಯದ ಎರಡನೇ ಪ್ರಾಕಾರದ, ಸೇನೈಮುದಲಿಯಾರ್ ಗುಡಿಯ ದಕ್ಷಿಣದ ಕೊನೆ

ರಾಜಮನೆತನ : --- **ರಾಜ** : ---

ಆಕರ : *SII,* Vol. XXIV, No.161 **ಕಾಲ** : ಕ್ರಿ.ಶ.ಸು. ---

ಕುಮಾರ ಉಲಿರಾಯದೇವಗಳ ವಲ್ಲಭಯ್ಯನ ಸದಾಸೇವೆ ಎಂಬ ದಾಖಲೆ.

೨೩೪

೨೦. ಶ್ರೀರಂಗಂ

ರಾಜಮನೆತನ : ವಿಜಯನಗರ **ರಾಜ** : ಅಚ್ಯುತರಾಯ

ಆಕರ : *ARIE,* 1938-37, B 12 **ಕಾಲ** : ಕ್ರಿ.ಶ.ಸು. ೧೬ನೇ ಶತಮಾನ.

ಅಚ್ಯುತರಾಯನ ಆಜ್ಞೆಯ ಮೇರೆಗೆ ಪ್ರಾಯಶಃ ದೇವಾಲಯಕ್ಕೆ ಮೂರು ಗ್ರಾಮಗಳನ್ನು ದತ್ತಿಬಿಟ್ಟ ವಿವರ.

೨೩೫

೨೧. ಶಿವನಾಣ್ಣೈಕ್ಕಾವಲ್, ಶ್ರೀಅಯ್ಯಗಳ ಶ್ರೀಕಂಠದೀಕ್ಷಿತನ ವಶದಲ್ಲಿದ್ದದ್ದು

ರಾಜಮನೆತನ : ಮೈಸೂರು **ರಾಜ** : ಕೃಷ್ಣರಾಜ ಒಡೆಯ

ಆಕರ : *ARIE*, 1937-38, B 23 **ಕಾಲ** : ಕ್ರಿ.ಶ. ೧೭೫೨

ದೊಡ್ಡಯ್ಯನ ಪೌತ್ರ ವೀರರಾಜಯ್ಯನ ಪುತ್ರ ದಳವಾಯಿ ನಂಜರಾಜಯ್ಯನಿಂದ ಕೊಂಡಯನ್‌ಪೇಟೆ ಮತ್ತು ತಿಮ್ಮರಾಜಸಮುದ್ರಗಳ ಕೆಲವು ದ್ರವ್ಯರೂಪದ ಆದಾಯಗಳನ್ನು ದೇವರ ಪೂಜೆ ಮತ್ತು ನೈವೇದ್ಯಕ್ಕೆ ಮತ್ತು ಏಕವಿರಾಂಬಮಠದಲ್ಲಿ ಬ್ರಾಹ್ಮಣರ ಭೋಜನಕ್ಕೆ ದತ್ತಿಬಿಟ್ಟ ವಿವರ. ಈ ಧರ್ಮದ ಮೇಲ್ವಿಚಾರಣೆಯನ್ನು ಕೌಂಡಿನ್ಯಗೋತ್ರದ ವಾಜಪೇಯಾಜಿಯಾದ ಸದಾಶಿವದೀಕ್ಷಿತನ ಪೌತ್ರ ಶ್ರೀಕಂಠದೀಕ್ಷಿತನ ಪುತ್ರ ಚಂದ್ರಶೇಖರದೀಕ್ಷಿತನಿಗೆ ವಹಿಸಲಾಯಿತು.

ಲಾಲ್‌ಗುಡಿ ತಾಲೂಕು

೨೩೬

೧. ಸಮಯವರಂ, ಮುಕುಟೇಶ್ವರ ದೇವಾಲಯದ ಪಾಕಶಾಲೆಯ ಪಶ್ಚಿಮ ಗೋಡೆಯ ಮೇಲೆ

ರಾಜಮನೆತನ : ಹೊಯ್ಸಳ **ರಾಜ** : ರಾಮನಾಥ

ಆಕರ : *SII*, Vol. IX, No.348 **ಕಾಲ** : ಕ್ರಿ.ಶ. ೧೨೬೦

ಶ್ರೀ ರಾಮನಾಥದೇವರ ಮಯಿಗಾಹಿನ ಆಳು ಪದುಮಯ್ಯನಾಯಕನ ಮಗ ಹರತಿಯ ನಾಯಕನು ಬಾಣಗರ ಮನೆ ಮೂಡಲ ಹೊಲವನ್ನು ದಾನ ನೀಡಿದ್ದಿರಬಹುದಾದ ತ್ರುಟಿತ ಉಲ್ಲೇಖ.

ತಿರುನೆಲ್ವೆಲಿ ಜಿಲ್ಲೆ

ತಿರುನೆಲ್ವೆಲಿ ತಾಲೂಕು

೨೩೭

೧. ತಿರುನ್ವೆಲಿ, ನೆಲ್ಲಿಯಪ್ಪರ್ ದೇವಾಲಯದ ಮೂರನೆಯ ಪ್ರಾಕಾರದ ಪಶ್ಚಿಮ ಗೋಡೆಯ ಮೇಲೆ

ರಾಜಮನೆತನ : ಹೊಯ್ಸಳ **ರಾಜ** : ಸೋಮೇಶ್ವರ

ಆಕರ : *TLIMP*, 466-15/1912 **ಕಾಲ** : ಕ್ರಿ.ಶ.ಸು. ೧೩ನೇ ಶತಮಾನ.

ಹೊಯ್ಸಳ ವೀರ ಸೋಮೇಶ್ವರನ ಶ್ರೀಕರಣದವನಾದ ವರದಣ್ಣದಣ್ಣಾಯಕನ ಸೋದರ ಅಳಿಯ ವಾಮಣ್ಣನು ತಿರುನ್ವೆಲಿ ಒಡೆಯ ದೇವನ ಎರಡು ನಂದಾದೀಪಗಳಿಗೆ ಹಣದ ರೂಪದಲ್ಲಿ ದತ್ತಿ ಬಿಟ್ಟಿರುವ ವಿವರ.

ತಂಜಾವೂರು ಜಿಲ್ಲೆ

ತಂಜಾವೂರು ತಾಲೂಕು

೨೩೮

೧. ತಿರುಪ್ಪುನ್ದುರುತ್ತಿ, ಪುಷ್ಪವನೇಶ್ವರ ದೇವಾಲಯದ ದಕ್ಷಿಣಗೋಡೆಯ ಮಂಟಪದ ಕಲ್ಲಿನಲ್ಲಿ

ಆಕರ : *ARIE*, 1930-31, B 109 **ಕಾಲ** : ಕ್ರಿ.ಶ.ಸು. –––

ತ್ರುಟಿತ. ತಗಡೂರು ಮತ್ತು ಮಲ್ಲಿಕಾರ್ಜುನ ಎಂಬ ಉಲ್ಲೇಖಗಳಿವೆ.

ಕುಂಭಕೋಣಂ ತಾಲೂಕು

೨೩೯

೧. ಕುಂಭಕೋಣಂ, ವೀರಶೈವ ಮಠದ ಗೋಡೆಯಲ್ಲಿರುವ ಕಲ್ಲಿನಲ್ಲಿ

ರಾಜಮನೆತನ : ವಿಜಯನಗರ **ರಾಜ** : ನರಸಿಂಗರಾಯ

ಆಕರ : *ARIE*, 1955-56, B 318 **ಕಾಲ** : ಕ್ರಿ.ಶ. ೧೫೦೭

ರಾಜನಿಂದ ಸಾಳುವನಾಯಕನ ಸೀಮೆಯ ವೀರಮಂಗಲ ಹಾಗೂ ಅಪ್ಪರಪಿಳ್ಳೆಸೀಮೆಯ ಒಲಿಮಂಗಲಂ ಎಂಬ ಗ್ರಾಮಗಳನ್ನು ಹಿರಿಮಠದ ಸೋಮೇಶ್ವರ ಜಂಗಮ ಎಂಬುವರಿಗೆ ಸರ್ವಮಾನ್ಯವಾಗಿ ನೀಡಿರುವ ವಿವರ. ಇದು ಸೋಮೀದೇವರ ಭಕ್ತ ಚಿಕ್ಕ–ಬಸವಣ್ಣ ಒಡೆಯನ ಸೇವೆ ಎಂದು ಹೇಳಲಾಗಿದೆ.

೨೪೦

೨. ತಿರುವಲನ್ಜುಲಿ, ಕಪರ್ದೀಶ್ವರ ದೇವಾಲಯದ ಆವರಣದಲ್ಲಿ ಇರುವ ಶ್ವೇತವಿನಾಯಕ ದೇವಾಲಯದ ಬಾಗಿಲವಾಡದ ಮೇಲೆ

ಆಕರ : *ARIE*, 1927-28, B 213 **ಕಾಲ** : ಕ್ರಿ.ಶ.ಸು. –––

ಕೃಷ್ಣರಾಯನ ಊಳಿಗದವರಾದ ಬಸವಯ್ಯನು ವೆಳ್ಳಿಪಿಳ್ಳೆಯಾರಿಗೆ ತನ್ನ ನಮಸ್ಕಾರಗಳನ್ನು ತಿಳಿಸುತ್ತಾನೆ.

ನಾಗಪಟ್ಟಣ ಜಿಲ್ಲೆ

ನಾಗಪಟ್ಟಣ ತಾಲೂಕು

೨೪೧

೧. ತಿರುವರೂರು, ತ್ಯಾಗರಾಜಸ್ವಾಮಿ ದೇವಾಲಯದ ಪಶ್ಚಿಮಗೋಪುರಕ್ಕೆ ಹೋಗುವ ಹಾದಿಯ ಬಲಭಾಗದಲ್ಲಿ

ಆಕರ : *SII*, Vol.XVII, No.612 **ಕಾಲ** : ಕ್ರಿ.ಶ. ೧೪೪೦

ಮಹಾಪ್ರಧಾನ ಲಕ್ಕಣದಣ್ಣಾಯಕ ಒಡೆಯರ ಧರ್ಮದಲ್ಲಿ ಸಿದರಸರ ಮಕ್ಕಳು ನಾಗರಸರು ವಲ್ಮಿಕನಾಥ ದೇವರ ಪಾದ ಸೇವೆಗೆ ಮಾಡಿಸಿ ಸಮರ್ಪಿಸಿದ ಗೋಪುರ.

ರಾಮನಾಥಪುರಂ ಜಿಲ್ಲೆ

ರಾಮನಾಥಪುರಂ ತಾಲೂಕು

೨೪೨

೧. ರಾಮೇಶ್ವರಂ ರಾಮನಾಥ ದೇವಾಲಯದ ದ್ವಾರದ ಬಲಭಾಗದಲ್ಲಿ

ರಾಜಮನೆತನ : --- **ರಾಜ** : ---

ಆಕರ : *ARIE*, 1949-50, B 326 **ಕಾಲ** : ಕ್ರಿ.ಶ.ಸು. ---

ಬೊಮ್ಮರಸರ ಮಗ ಸಂಕೆಯದಣ್ಣಾಯಕ ಮತ್ತು ಕೊಪ್ಪೆವೆ ಎಂಬುವರು ರಾಮನಾಥದೇವರಿಗೆ ಒಂದು ಮರಕತ, ಒಂದು ಮಾಣಿಕ್ಯ ಮತ್ತು ೩೦೦ ವಜ್ರಗಳನ್ನೊಳಗೊಂಡ ಪದಕವೊಂದನ್ನು, ದತ್ತಿ ನೀಡಿರುವುದನ್ನು ದಾಖಲಿಸುತ್ತದೆ.

೨೪೩

೨. ಅದೇ ದೇವಾಲಯದ ಮಧ್ಯದ ಪ್ರವೇಶದ್ವಾರದಲ್ಲಿ

ರಾಜಮನೆತನ : --- **ರಾಜ** : ---

ಆಕರ : *TLIMP*, 101-8/1915 **ಕಾಲ** : ಕ್ರಿ.ಶ.ಸು. ---

ತ್ರುಟಿತ. ಶೋಭಕೃತ ಸಂವತ್ಸರ ಭಾದ್ರಪದ ಬ. ೧೨ರಂದು ಸವಣ್ಣನಾಯಕವೆಂಬುವನು ರಾಮನಾಥದೇವರಿಗೆ ರತ್ನಖಚಿತವಾದ ಕವಚವನ್ನು ನೀಡಿರುವ ದಾಖಲೆ.

೨೪೪

೩. ಪುಲಿವಾಯ್, ಮಹಾಮುನೀಶ್ವರ ದೇವಾಲಯದ ದ್ವಾರಬಂಧದ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE*, 1923, C 160 **ಕಾಲ** : ಕ್ರಿ.ಶ.ಸು. ---

ಮಹಾಪ್ರಧಾನ ಮಂಚಪ ದಣ್ಣಾನಾಯಕ ಒಡೆಯರ ಮಕ್ಕಳಾದ ಸಂಗಯ್ಯ ಮತ್ತು ತಾಯಪ್ಪ ಎಂಬುವರು ಮಹಾಮುನೀಶ್ವರ ದೇವರಿಗೆ ಮಂಟಪವನ್ನು ಪುನರ್‌ನಿರ್ಮಾಣ ಮಾಡಿಸಿದ ವಿವರವನ್ನು ದಾಖಲಿಸುತ್ತದೆ.

ಮದುರೈ ಜಿಲ್ಲೆ

ಮದುರೈ ತಾಲೂಕು

೨೪೫

೧. ಕೀಳ್‌ಕುಯಿಕುಡಿ (ಕೀಳ್‌ಕ್ಕುಡಿ), ಶಮಣರ ಮಲೆಯಲ್ಲಿ ಶಿಥಿಲವಾಗಿರುವ ಬಸದಿಯ ಹತ್ತಿರವಿರುವ ದೀಪದ ಕಂಬದ ಕಲ್ಲಿನ ಮೇಲೆ

ರಾಜಮನೆತನ : --- **ರಾಜ** : ---

ಆಕರ : *ARIE*, 1950-51, B 244 **ಕಾಲ** : ಕ್ರಿ.ಶ.ಸು. ೧೨ನೇ ಶತಮಾನ.

ಮೂಲಸಂಘಕ್ಕೆ ಸೇರಿದ ಬೆಳ್ಗೊಳದ ಜೈನಗುರುಗಳಾದ ಆರಿಯದೇವ, ಬಾಳಚಂದ್ರದೇವ ಹಾಗೂ ನೇಮಿದೇವ, ಅಜಿತಸೇನದೇವ ಮತ್ತು ಗೋವರ್ಧನದೇವ ಎಂಬುವರನ್ನು ಉಲ್ಲೇಖಿಸುತ್ತದೆ.

೨೪೬


೨. ಪೆರೈಯೂರು, ಶ್ರೀಪಪ್ಪುರಾಮನಾಥನ್ ಅವರಿಂದ ಬಂದ ತಾಮ್ರಪಟಗಳು

ರಾಜಮನೆತನ : --- **ರಾಜ** : ---

ಆಕರ : *ARIE*, 1960-61, A 25 **ಕಾಲ** : ಇತ್ತೀಚಿನ ಲಿಪಿ

ವೀರಶೈವ ಮಠದ ಕಲ್ಯಾಣ ದೇಶೀಕೇಂದ್ರಸ್ವಾಮಿಯವರು ತಮ್ಮ ಭಕ್ತರಿಂದ ಧನವನ್ನು ಸಂಗ್ರಹಿಸಲು ರಾಜನು ಹಕ್ಕು ನೀಡಿರುವುದನ್ನು ಉಲ್ಲೇಖಿಸುತ್ತದೆ.

ಈ ಶಾಸನದ ತಮಿಳು ಅವತರಣಿಕೆಯೂ ಲಭ್ಯ. ನೋಡಿ : *ARIE*, 1960-61 B 24





ಪೆರಿಯಮುಕ್ಕುಲಂ ಶಾಸನ

ಅನುಬಂಧ – ೨

ಆಧಾರ ಗ್ರಂಥಗಳು

ಶಾಸನ ವರದಿಗಳು, ಸಂಪುಟಗಳು, ಗ್ರಂಥಗಳು

Annural Reports on South Indian / Indian Epigraphy, 1897 onwards.

A Topographical List of the Inscriptions of Madras Presidency, Vols. 1 to 3 (Ed.,) V. Rangacharya, Madras, 1919.

Robert Sewell's *List of Antiquarian Remains in the Madras, Presidency*, Madras 1882.

EpigraphiaCarnatica, Vols. IX, X, XVII & 7 (Revised)

Epigraphia Indica, Vol., III, IV, X, XIV & XXVII.

Jaina Inscriptions in Tamil Nadu (Ed.,) Dr. A. Ekambaranathan, Dr. C.K.Shivaprakasham, Madras, 1987.

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ : ೪ (*ತಮಿಳುನಾಡಿನ ಕನ್ನಡ ಶಾಸನಗಳು*) ಸಂಪಾದಕರು: ಡಾ। ಬಾ.ರಾ. ಗೋಪಾಲ್, ಡಾ। ಎಚ್.ಎಸ್. ಗೋಪಾಲರಾವ್ ಮತ್ತು ಡಾ। ಪಿ.ವಿ. ಕೃಷ್ಣಮೂರ್ತಿ.

South Indian Inscriptions, Vols., VII, IX, XVII, XXIV.

Madras District Manuals, Salem, Vol. I & II Madras, 1894. North Arcot, Vol. I & II, Madras, 1894.

Prof. K.A.Neelakantasastry Felicitation Volume, Madras 1971.

Krishnamurthy M.S., *The Nolambas*, Mysore, 1980.

Sharma, I.K. *Temples of the Gangas of Karnataka*, New Delhi, 1992.

ಅಂತಪ್ಪ, ಸ್ವಾಮಿ, ಐ., *ಆನೇಕಲ್ ತಾಲೂಕು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಕ್ರೈಸ್ತಧರ್ಮ ಉಗಮ*, ಬೆಂಗಳೂರು, ೧೯೯೦.

ಅಣ್ಣಿಗೇರಿ, ಎ.ಎಂ., ಶೇಷಶಾಸ್ತ್ರಿ, ಆರ್., *ಶಾಸನ ಸಂಗ್ರಹ*, ಬೆಂಗಳೂರು, ೧೯೭೫.

ಕಲಬುರ್ಗಿ, ಎಂ.ಎಂ., *ಶಾಸನಗಳಲ್ಲಿ ಶಿವಶರಣರು*, ಗದಗ, ೧೯೭೦,

ಮಹಾರಾಷ್ಟ್ರದ ಕನ್ನಡ ಶಾಸನಗಳು, ಮುಂಬೈ, ೧೯೮೭.

ಕನ್ನಡ ನಾಮವಿಜ್ಞಾನ, ಬೆಂಗಳೂರು, ೧೯೮೯.

ಗಣೇಶ್, ಕೆ.ಆರ್., *ಆಂಧ್ರಪ್ರದೇಶದ ಕನ್ನಡ ಶಾಸನಗಳು*, ಬೆಂಗಳೂರು, ೧೯೯೬.

ಗೋಪಾಲರಾವ್, ಎಚ್.ಎಸ್. (ಸಂ.) *ನಾಗಾಭಿನಂದನ* (ಎಂ.ಜಿ. ನಾಗರಾಜ್ ಅಭಿನಂದನಾ ಗ್ರಂಥ) ಬೆಂಗಳೂರು, ೧೯೯೪.

ಗೋಪಾಲ, ಬಾ.ರಾ. *ಕರ್ನಾಟಕದ ಇತಿಹಾಸ*, ಮೈಸೂರು, ೧೯೮೬.
ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು, ೧೯೬೬.
ನರಸಿಂಹಾಚಾರ್ಯ, ಆರ್., *ಕರ್ಣಾಟಕ ಕವಿಚರಿತೆ*, ಸಂಪುಟ ೨, ಬೆಂಗಳೂರು, ೧೯೭೩.
ರಮೇಶ್, ಕೆ.ವಿ., *ಕರ್ಣಾಟಕ ಶಾಸನ ಸಮೀಕ್ಷೆ*, ಬೆಂಗಳೂರು. ೧೯೭೧.
ರಾಮಕೃಷ್ಣರಾವ್, ಬಿ., (ಸಂ.?) ಮುಮ್ಮಡಿಕೃಷ್ಣರಾಜ ಒಡೆಯ ವಿರಚಿತ *ಶ್ರೀಮನ್ಮಹಾರಾಜರ ವಂಶಾವಳಿ*, ಮೈಸೂರು, ೧೯೧೬.
ಲಕ್ಷ್ಮಣ್ ತೆಲಗಾವಿ (ಸಂ.) *ಸಂಶೋಧನ* (ಡಾ। ಎಂ.ಚಿದಾನಂದಮೂರ್ತಿ ಗೌರವ ಗ್ರಂಥ), ಬೆಂಗಳೂರು, ೧೯೯೧.
ಹರತಿಸಿರಿ (ಹೆಚ್.ವಿ. ವೀರನಾಯಕ 'ಹರತಿ' ನೆನಪಿನ ಸಂಪುಟ), ಹರ್ತಿಕೋಟೆ, ೧೯೮೭.
ವಾಸುದೇವರಾವ್, ಎಂ., *ರಾಜಕೇಸರಿ ಶ್ರೀಪುರುಷ*, ಬೆಂಗಳೂರು, ೧೯೭೫.
ಶಾನಭಾಗ, ಡಿ.ಎನ್., *ಗಂಗಾದೇವಿಯ ಮಧುರಾ ವಿಜಯ*, ಧಾರವಾಡ, ೧೯೮೪.
ಶಿವರುದ್ರಪ್ಪ, ಜಿ.ಎಸ್., (ಸಂ.) *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ*, ಸಂ.೩, ಬೆಂಗಳೂರು ೧೯೭೫.
ಶೇಷಶಾಸ್ತ್ರಿ, ಆರ್., *ಕರ್ನಾಟಕದ ವೀರಗಲ್ಲುಗಳು*, ಬೆಂಗಳೂರು, ೧೯೮೨.
ಸ್ವಾಮಿನಾಥನ್ ಎಸ್. *ರಾಷ್ಟ್ರಕೂಟರ ತಮಿಳು ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
ಸಾಲೆತ್ತೂರ್, ಬಿ.ಎ., *ಕನ್ನಡ ನಾಡಿನ ಚರಿತ್ರೆ* (ಮೊದಲ ಭಾಗ) ೬ನೇ ಮುದ್ರಣ, ಬೆಂಗಳೂರು, ೧೯೭೩.

ಪತ್ರಿಕೆಗಳು

ಇತಿಹಾಸ ದರ್ಶನ (ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಸಂಪುಟಗಳು)
ಕರ್ನಾಟಕ ಲೋಚನ (ಬಿ.ಎಂ.ಶ್ರೀ. ಪ್ರತಿಷ್ಠಾನದ ಅರ್ಧವಾರ್ಷಿಕ)
ಕನ್ನಡ ಪ್ರಭ (ದಿನಪತ್ರಿಕೆ)
ಪ್ರಜಾವಾಣಿ (ದಿನಪತ್ರಿಕೆ)
ಸ್ಟಾಂಗ್ ಇಂಡಿಯಾ (ಪಾಕ್ಷಿಕ)
ಶರಣ ಸಾಹಿತ್ಯ (ಮಾಸಿಕ)
ಸತ್ಯಶುದ್ಧ ಕಾಯಕ (ಚಿತ್ರದುರ್ಗದ ಬೃಹನ್ಮಠದ ತ್ರೈಮಾಸಿಕ)
Journal of the Epigraphical Society of India (ವಾರ್ಷಿಕ)
Quarterly Journal of the Mythic Society (ತ್ರೈಮಾಸಿಕ)